# ಅಧ್ಯಯನ – 6 Study - VI

# ‘ಸುಗ್ಗಿಯ ಕಾರ್ಯ’

# The Work of Harvest

**ಸುಗ್ಗಿಯ ಕಾರ್ಯದ ಲಕ್ಷಣಗಳು. ಗೋಧಿಯನ್ನು ಶೇಖರಿಸುವುದು. ಅದನ್ನು ಹೊರೆಯನ್ನಾಗಿ ಮಾಡಿ ಕಟ್ಟುವುದು ಮತ್ತು ಹಣಜಿಯನ್ನು ಸುಟ್ಟುಹಾಕುವುದು. ಅವುಗಳ ಮೂಲ ಮತ್ತು ಫಲಭರಿತವಾದ ಬೆಳೆಯುವಿಕೆ. ಅದನ್ನು ಯೆಹೂದ್ಯ ಸುಗ್ಗಿಯ ಹೊಟ್ಟು ಎಂಬಂತೆ ನಾಶಮಾಡುವುದು, ಕಾಲದ ಸರಿಹೊಂದುವಿಕೆಗಳು ಗಮನಾರ್ಹವಾಗಿವೆ. ಬಾಬೇಲಿನ ತಿರಸ್ಕರಿಸುವಿಕೆ, ಕ್ರಮೇಣವಾದ ಪತನ ಮತ್ತು ಅಂತಿಮ ನಾಶನ. ಬಾಬೇಲಿನ ಮೇಲೆ ಪಿಡುಗು ಬರುವ ಮೊದಲು ದೇವರ ಸೇವಕರಿಗೆ ಮುದ್ರೆ ಹಾಕುವಿಕೆ. ನ್ಯಾಯತೀರ್ಪು ಅಥವಾ ವಿಚಾರಣೆ, ಎರಡೂ ಪದ್ಧತಿಗಳಾಗಿ ಮತ್ತು ವ್ಯಕ್ತಿಗತವಾಗಿ. ಯೆಹೂದ್ಯರ ಸಾಂಕೇತಿಕ ಪದ್ಧತಿಯ ಪರೀಕ್ಷೆ. ಗೋಧಿಯ ಪರೀಕ್ಷೆ ಮತ್ತು ಸೋಸುವಿಕೆ. ಬುದ್ಧಿವಂತರಾದ ಕನ್ಯೆಯರನ್ನು ಬುದ್ಧಿಹೀನ ಕನ್ಯೆಯರಿಂದ ಪ್ರತ್ಯೇಕಿಸಿದ್ದು, ಔತಣಕ್ಕೆ ಹೋಗುವುದು. “ಮತ್ತು ಬಾಗಿಲು ಮುಚ್ಚಲ್ಪಟ್ಟಿತು”. ಮುಂದಣ ವಿಚಾರಣೆ, ಮತ್ತು ಕೆಲವರನ್ನು ಹೊರಹಾಕುವುದು. ಯಾಕೆ? ಮತ್ತು ಹೇಗೆ? “ಉನ್ನತ ಕರೆ”ಯ ಮುಕ್ತಾಯ. ಸಮಯವು ಸ್ವಲ್ಪವೇ ಇದೆ. “ನಿನ್ನ ಕಿರೀಟವನ್ನು ಬೇರೆ ಯಾರೂ ತೆಗೆದುಕೊಳ್ಳದಿರಲಿ”. ಹನ್ನೊಂದನೆಯ ಗಂಟೆಯ ಸೇವಕರು ಮತ್ತು ಜಯಶಾಲಿಗಳು.**

**“ಸು**ಗ್ಗಿ” ಎಂಬ ಪದವು 1874 ಮತ್ತು 1914 ನಡುವಿನ ಸಮಯದಲ್ಲಿ ಯಾವ ಕಾರ್ಯವು ಸಂಭವಿಸುವದೆಂದು ನಿರೀಕ್ಷಿಸುವ ಸಾಮಾನ್ಯ ಕಲ್ಪನೆಯನ್ನು ನೀಡುತ್ತದೆ. ಅದು ಬಿತ್ತುವುದಕ್ಕಿಂತ ನಿಜವಾಗಿಯೂ ಕಟಾವುಮಾಡುವ ಸಮಯವಾಗಿದೆ. ಪರೀಕ್ಷಿಸುವ ಸಮಯ, ಲೆಕ್ಕಮಾಡುವ ಸಮಯ, ಮತ್ತು ನಿರ್ಧರಿಸುವ ಹಾಗೂ ಬಹುಮಾನ ನೀಡುವ ಸಮಯವಾಗಿದೆ. ಯೆಹೂದ್ಯ ಕಾಲದ ಸುಗ್ಗಿಯು ಈ ಕಾಲದ ಸುಗ್ಗಿಯ ಛಾಯೆಯಂತೆಯೇ ಇತ್ತು. ಆ ಸುಗ್ಗಿಯ ವಿವಿಧ ಲಕ್ಷಣಗಳನ್ನು ಗಮನಿಸಿ ಮತ್ತು ಹೋಲಿಸಿ ನೋಡುವುದಾದರೆ ಪ್ರಸ್ತುತ ಸುಗ್ಗಿಯಲ್ಲಿ ನೆರವೇರಿಸಬೇಕಾಗಿರುವ ಕಾರ್ಯಗಳ ಬಗ್ಗೆ ಸ್ಪಷ್ಟವಾದ ಆಲೋಚನೆಗಳು ಒದಗಿಬರುತ್ತವೆ. ಆ ಸುಗ್ಗಿಯಲ್ಲಿ, ನಮ್ಮ ಕರ್ತನ ವಿಶೇಷ ಬೋಧನೆಗಳು ಅಂದರೆ, ಈಗಾಗಲೇ ಗೋಧಿಯಾಗಿ ಆಗಿರುವವರನ್ನು ಶೇಖರಿಸುವುದು ಮತ್ತು ಯೆಹೂದಿ ರಾಷ್ಟ್ರದಿಂದ ಹೊಟ್ಟನ್ನು ಗೋಧಿಯಿಂದ ಪ್ರತ್ಯೇಕಿಸುವುದು. ಆತನ ಉಪದೇಶಗಳು ಆಗಲೇ ನೂತನ ಹಂಚಿಕೆಯ (ಧಾರ್ಮಿಕ ವ್ಯವಸ್ಥೆಯ) ಬೀಜಗಳಾಗಿವೆ. ಅದು (ಯೆಹೂದ್ಯ ಜನಾಂಗವು ಹೊರಹಾಕಲ್ಪಟ್ಟ ಕೂಡಲೇ) ಪಂಚಾಶತ್ತಮದಂದು ತೆರೆದುಕೊಂಡಿತು.

ನಮ್ಮ ಕರ್ತನು ತನ್ನ ಸೇವಾಕಾಲದಲ್ಲಿ ಶಿಷ್ಯರನ್ನು ಸಭಾ–ರಾಷ್ಟ್ರಗಳಿಗೆ ಕಳುಹಿಸಿಕೊಡುವಾಗ, ಅವರ ವಿಶೇಷ ಕಾರ್ಯವು ಕಟಾವು ಮಾಡುವುದಾಗಿತ್ತು, ಬಿತ್ತುವುದಲ್ಲ ಎಂಬುದನ್ನು ವಿಶೇಷವಾಗಿ ನೆನಪುಮಾಡಿಕೊಳ್ಳತಕ್ಕದ್ದು. ಆತನು ಅವರಿಗೆ “ನೀವು ಕಣ್ಣೆತ್ತಿ ಹೊಲಗಳನ್ನು ನೋಡಿರಿ; ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ. ಕೊಯ್ಯುವವನಿಗೆ ಈಗಲೇ ಕೂಲಿ ದೊರೆಯುತ್ತದೆ. ಅವನು ನಿತ್ಯಜೀವಕ್ಕೆ ಫಲವನ್ನು ಕೂಡಿಸುತ್ತಾನೆ” (ಯೋಹಾನ 4:35–36). ಆ ಯೆಹೂದ್ಯ ಸುಗ್ಗಿಯಲ್ಲಿ, ಆತನ ಈ ಸುಗ್ಗಿಯಲ್ಲಿರುವಂತೆಯೂ ಸಹ ಆತನು ಒಬ್ಬ ಮುಖ್ಯ ಕೊಯ್ಲುಗಾರನಾಗಿ, ಕರ್ತನು ತನ್ನ ಕೈಕೆಳಗಿನ ಕೊಯ್ಲುಗಾರರಿಗೆ “ನೀವು ಕಷ್ಟಮಾಡದಂತ ಬೆಳೆಯನ್ನು ಕೊಯ್ಯುವುದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು. ಬೇರೊಬ್ಬರು ಕಷ್ಟಮಾಡಿದ್ದಾರೆ; ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ” (ಪೂರ್ವ ಕಾಲದ ಭಕ್ತರು, ಪ್ರವಾದಿಗಳು ಹಾಗೂ ಇತರ ಹಿರಿಯ ಪರಿಶುದ್ಧ ಪುರುಷರು) ಆ ಶತಮಾನದ ಪರಿಶ್ರಮದ ಫಲಗಳನ್ನು ಕೊಯ್ಯಲು ಎಂದಿದ್ದಾನೆ. “ಪರಲೋಕ ರಾಜ್ಯವು ಸಮೀಪವಾಗಿದೆ” ಮತ್ತು “ಇಗೋ, ನಿನ್ನ ಅರಸನು ನಿನ್ನ ಬಳಿಗೆ ಬರುತ್ತಾನೆ” (ಮತ್ತಾಯ 10:7, ಯೋಹಾನ 12;15; ಜೆಕರ್ಯ 9:9) ಎಂಬ ಸಂದೇಶದಿಂದ ಆ ಜನರನ್ನು ಪರೀಕ್ಷಿಸಲು ಎಂದಿದ್ದಾನೆ.

ನಿಜವಾಗಿ ಹೇಳುವುದಾದರೆ ಯೆಹೂದ್ಯರ ಸುಗ್ಗಿಯಲ್ಲಿ, ಕರ್ತನು ಆಡುಗಳನ್ನು ಕುರಿಗಳನ್ನಾಗಿ ಮಾಡುವ ಬದಲಾಗಿ ಕುರುಡಾಗಿರುವ, ಚದುರಿ ಹೋಗಿರುವ ಇಸ್ರಾಯೇಲ್ಯರ ಕುರಿಗಳನ್ನು ಹುಡುಕುತ್ತಾನೆ, ಈಗಾಗಲೇ ಆತನ ಕುರಿಗಳಾಗಿದ್ದವರನ್ನು ಅವರು ಆತನ ಸ್ವರವನ್ನು ಕೇಳಿ ಆತನನ್ನು ಹಿಂಬಾಲಿಸುವಂತೆ ಕರೆಯುತ್ತಾನೆ. ಈ ನಮೂನೆಯ ಮೇಲಣ ಗಮನಿಸುವಿಕೆಯು ಪ್ರಸ್ತುತ ಸುಗ್ಗಿ ಅಥವಾ ಕೊಯ್ಲುಗಾಲದಲ್ಲಿ ನೆರವೇರಬೇಕಾದ ಕಾರ್ಯದ ಲಕ್ಷಣವನ್ನು ಒದಗಿಸುತ್ತದೆ. ಸಹಸ್ರಮಾನದ ಯುಗದಲ್ಲಿ ಮತ್ತು ರಾಜ್ಯದಲ್ಲಿನ ಇನ್ನೂ ಅನುಕೂಲಕರ

ಪರಿಸ್ಥಿತಿಯಲ್ಲಿ ಮತ್ತೊಂದು ವ್ಯಾಪಕವಾದ ಬಿತ್ತುವಿಕೆಯು ಕೂಡಲೇ ಪ್ರಾರಂಭವಾಗುತ್ತದೆ. ವಾಸ್ತವವಾಗಿ, ಪುನರ್‌ವಶದ ಮೇಲಣ ಸತ್ಯ ಮುಂತಾದವುಗಳ ಬೀಜಗಳು ಆ ಬರಲಿರುವ ಬೆಳೆಯನ್ನು ಉತ್ಪತ್ತಿಮಾಡುವುದಾಗಿದ್ದು ಈಗಲೂ ಸಹ ಅಲ್ಲಿ ಇಲ್ಲಿ, ಬಯಕೆಯುಳ್ಳ, ನಿಜವಾದ ಹಸಿವೆಯುಳ್ಳವರ ಮಧ್ಯೆ ಉದುರಿಸಲ್ಪಡುವುದು. ಆದರೆ, ಇದು ಇಲ್ಲಿ ಈಗ ಒಂದು ಸಂಭವನೀಯ ಕಾರ್ಯವಾಗಿದೆ; ಯಾಕೆಂದರೆ, ಅದರ ಯೆಹೂದಿ ನಮೂನೆಯಂತೆ, ಪ್ರಸ್ತುತ ಸುಗ್ಗಿಯು ಸ್ಪಷ್ಟವಾಗಿ ಹೇಳಿಕೊಳ್ಳುವ, ತಮ್ಮನ್ನು ಕ್ರೈಸ್ತರಾಜ್ಯಗಳೆಂದು ಕರೆದುಕೊಳ್ಳುವವರುಗಳಿಂದ ಶೇಖರಿಸಿದ ಭಕ್ತಜನರನ್ನು ಉನ್ನತಿಗೊಳಿಸಿ, ಕರ್ತನೊಂದಿಗೆ ಸತ್ಯವನ್ನು ಬೋಧಿಸುವಂತೆ ಮಾತ್ರವಲ್ಲ, ಲೋಕದ ಪುನರ್‌ವಶ ಕಾರ್ಯವನ್ನು ಕಾರ್ಯಗತಗೊಳಿಸುವಂತೆ ಅವರನ್ನು ಸೇರಿಕೊಳ್ಳುವ, ಕೊಯ್ಲುಮಾಡುವ ಕಾಲವಾಗಿದೆ.

ಈ ಸುಗ್ಗಿಯಲ್ಲಿ, ಗೋಧಿ ಮತ್ತು ಹಣಜಿಯನ್ನು ಪ್ರತ್ಯೇಕಗೊಳಿಸಬೇಕಾಗುತ್ತದೆ. ಆದಾಗ್ಯೂ, ಈ ಎರಡೂ ವರ್ಗಗಳು, ಪ್ರತ್ಯೇಕವಾಗುವುದಕ್ಕೆ ಮೊದಲು ಹೆಸರುಮಾತ್ರದ ಸಭೆಯಾಗಿತ್ತು. ಗೋಧಿಯು ರಾಜ್ಯದ ನಿಜವಾದ ಮಕ್ಕಳು, ನಿಜವಾಗಿಯೂ ಪ್ರತಿಷ್ಠೆ ಹೊಂದಿದವರು, ಬಾಧ್ಯಸ್ತರು. ಆದರೆ ಹಣಜಿಯು ಹೆಸರುಮಾತ್ರವಾಗಿದ್ದು (ನಾಮಾಂಕಿತ ಕ್ರೈಸ್ತ ಸಭೆ), ನಿಜವಾದ ಕ್ರಿಸ್ತನ ಸಭೆ ಅಥವಾ ಪ್ರತೀಕ್ಷೆಯುಳ್ಳ ಕ್ರಿಸ್ತನ ಮದಲಗಿತ್ತಿಯಾಗಿರುವುದಿಲ್ಲ. ಹಣಜಿಯು ನಮ್ಮ ಕರ್ತನು ಹೇಳಿದಂತೆ ಆತನನ್ನು ಕರ್ತನು ಎಂದು ಕರೆದರೂ, ಆತನಿಗೆ ವಿಧೇಯರಾಗದ ವರ್ಗವಾಗಿದೆ. (ಲೂಕ 6:46). ಬಾಹ್ಯತೋರಿಕೆಯಲ್ಲಿ, ಈ ಎರಡೂ ವರ್ಗದವರೂ ಒಮ್ಮೊಮ್ಮೆ ಒಂದೇ ರೀತಿಯಾಗಿ ಕಾಣುತ್ತಾರೆ. ಅವರಲ್ಲಿನ ಬೇಧವನ್ನು ಗುರುತಿಸಲು ಸೂಕ್ಷ್ಮವಾದ ಪರಿಶೀಲನೆ ಬೇಕಾಗುತ್ತದೆ. ಈ ಸಾಮ್ಯದಲ್ಲಿ "ಹೊಲವೆಂದರೆ ಭೂಲೋಕ" ಮತ್ತು ಗೋಧಿ ಹಾಗೂ ಹಣಜಿಯು ಒಟ್ಟಾಗಿ (ಹಣಜಿಯು ಹೆಚ್ಚಾಗಿರುತ್ತವೆ) ಕೆಲವೊಮ್ಮೆ 'ಕ್ರೈಸ್ತ ಪ್ರಪಂಚ' ಅಥವಾ 'ಕ್ರೈಸ್ತ ರಾಜ್ಯ' ಎಂಬುದು ರಚಿತವಾಗುತ್ತದೆ. ಸಾಂದರ್ಭಿಕವಾಗಿ ಅಥವಾ ನಿಯಮಿತವಾಗಿ ಧಾರ್ಮಿಕ ಆರಾಧನೆಗಳಲ್ಲಿ ಭಾಗವಹಿಸಿ, ಕೆಲವೊಂದು ಸಂಸ್ಕಾರಗಳ ಮತ್ತು ಆಚರಣೆಗಳನ್ನು ಅನುಸರಿಸುವುದರ ಮೂಲಕ, ಕೆಲವೊಮ್ಮೆ ಧಾರ್ಮಿಕ ಪದ್ಧತಿಗಳ ಮೂಲಕ ತಮ್ಮನ್ನು ಗುರುತಿಸಿಕೊಂಡು ಕ್ರೈಸ್ತರೆಂದು ಕರೆದುಕೊಳ್ಳುವ ಈ ಹಣಜಿಗಳು ಕೆಲವೊಮ್ಮೆ ದೇವರ ಹೃದಯ ಪ್ರತಿಷ್ಠಿತರಾದ ಮಕ್ಕಳನ್ನು ಕೂಡ ದಾಟಿ ಹೋಗುತ್ತಾರೆ. ಕ್ರೈಸ್ತ ದೇಶಗಳೆಂದು ಕರೆಯಲ್ಪಡುವ ದೇಶಗಳಲ್ಲಿ ನಾಸ್ತಿಕರೆಂದು ಹೇಳಿಕೊಳ್ಳುವವರನ್ನು ಮತ್ತು ಯೆಹೂದ್ಯರನ್ನು ಹೊರತುಪಡಿಸಿ ಉಳಿದ ಎಲ್ಲರನ್ನೂ ಕ್ರೈಸ್ತರೆಂದು ಎಣಿಸಲಾಗಿದೆ. ಮತ್ತು ಕೆಲವು ಪೂರ್ಣ ಪ್ರತಿಷ್ಟೆಗೊಂಡವರೂ, ಭಕ್ತರೂ ಸೇರಿ ಅವರ ಸಂಖ್ಯೆಯು ಸುಮಾರು ನೂರಾ ಎಂಬತ್ತು ಮಿಲಿಯನ್ ಗ್ರೀಕ್ ಮತ್ತು ರೋಮನ್ ಕೈಥೋಲಿಕರೆಂದೂ, ಮತ್ತು ಸುಮಾರು ನೂರ ಇಪ್ಪತ್ತು ಮಿಲಿಯನ್ ಪ್ರೊತಸ್ತಾಂತರೆಂದೂ ಎಂದು ಅಂದಾಜಿಸಲಾಗಿದೆ.

ಸುವಾರ್ತಾ ಯುಗದಲ್ಲಿ ಕ್ರಿಸ್ತನ ಉಪದೇಶ ವೇನೆಂದರೆ ರಾಜ್ಯದ ಆ ಸತ್ಯದ ಮಕ್ಕಳನ್ನು ಅನುಕರಣೆಯ ಮಕ್ಕಳಿಂದ ಬೇರ್ಪಡಿಸಲು ಪ್ರಯತ್ನಿಸಬಾರದೆಂದಿದ್ದಾನೆ; ಯಾಕೆಂದರೆ ಪೂರ್ಣವಾದ ಪ್ರತ್ಯೇಕತೆಯನ್ನು ನೆರವೇರಿಸುವುದಕ್ಕಾಗಿ ಪ್ರಪಂಚವೆಂಬ ಹೊಲವನ್ನು ಸಂಪೂರ್ಣ ತಲೆಕೆಳಗಾಗಿ ತಿರುಗಿ ಹಾಕುವ ಸಂದರ್ಭ ಉಂಟಾಗುತ್ತದೆ – ಗೋಧಿ ಹಾಗೂ ಹಣಜಿಯು ಅವ್ಯವಸ್ಥೆ ಉಂಟಾಗಲು ಕಾರಣವಾಗುತ್ತದೆ. ಆದುದರಿಂದ ಆತನು "ಸುಗ್ಗಿಯ ಕಾಲದ ತನಕ ಎರಡೂ ಕೂಡ ಬೆಳೆಯಲಿ" ಎಂದಿದ್ದಾನೆ ಮತ್ತು ಅದಕ್ಕೆ "ಸುಗ್ಗಿಕಾಲದಲ್ಲಿ ನಾನು ಕೊಯ್ಯುವವರಿಗೆ (ದೇವದೂತರುಗಳಿಗೆ, ಸಂದೇಶವಾಹಕರುಗಳಿಗೆ) ಮೊದಲು ಹಣಜಿಯನ್ನು ಆರಿಸಿ ತೆಗೆದು ಅದನ್ನು ಸುಡುವುದಕ್ಕೆ ಹೊರೆಕಟ್ಟಿ ಹಾಕಿ, ಗೋಧಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು" (ಮತ್ತಾಯ 13:30) ಎಂಬ ಮಾತುಗಳನ್ನು ಕೂಡಿಸಿದ್ದಾನೆ. ಆದುದರಿಂದ, ಸುಗ್ಗಿಯ ಸಮಯದಲ್ಲಿ ಈ ಹಿಂದೆ ನಿಷೇಧಿಸಿದ್ದ ಸರ್ವಸಾಮಾನ್ಯವಾದ ಪ್ರತ್ಯೇಕಿಸುವ ಕಾರ್ಯವನ್ನು ನಾವು ನಿರೀಕ್ಷಿಸಬಹುದು. ಗೋಧಿಯಿಂದ ಸಾಂಕೇತಿಕವಾದವುಗಳು ಕ್ರಿಸ್ತನು ಒದಗಿಸಿದ ಬಿಡುಗಡೆಯಲ್ಲಿ ಗಟ್ಟಿಯಾಗಿ ನಿಂತುಕೊಳ್ಳಲು ಪ್ರೋತ್ಸಾಹ ಹೊಂದಿಕೊಳ್ಳುವಂತೆಯೂ ಮತ್ತು ಮುಕ್ತ ಆಕ್ರಮಣಕಾರರೊಂದಿಗೆ, ಕುರಿ ಚರ್ಮಹೊದ್ದ ತೋಳಗಳೊಂದಿಗೆ ಮೈತ್ರಿಮಾಡಿಕೊಳ್ಳುವದರಿಂದ ದೂರವಿರುವಂತೆ ಆದರೆ, ಅವರು ಪೂರ್ಣ ಪ್ರತಿಷ್ಠೆ ಹೊಂದಿದವರ ವರ್ಗ (ಗೋಧಿ, ಸಂತರು) ಮತ್ತು ಕ್ರಿಸ್ತನ ಹೆಸರನ್ನು ಮತ್ತು ಸಿದ್ಧಾಂತಗಳನ್ನು ಬಾಯಿಮಾತಿನಲ್ಲಿ ಹೇಳಿಕೊಳ್ಳುವ, ಮತ್ತು ಸ್ವಲ್ಪಮಟ್ಟಿಗೆ ಈ ಸಿದ್ಧಾಂತಗಳು ಅವರ ಬಾಹ್ಯ ನಡುವಳಿಕೆಯ ಮೇಲೆ ಪ್ರಭಾವ ಬೀರುವಂತೆ ಕಾಣಿಸುವ, ಆದರೆ ಅವರ ಹೃದಯಗಳು ಕರ್ತನಿಂದ ಮತ್ತು ಆತನ ಸೇವೆಯಿಂದ ದೂರವಿರುವುದನ್ನು ಅಪೇಕ್ಷಿಸುವ ಹಣಜಿಯ ನಡುವೆ ಯಾವುದೇ ಗೆರೆಯನ್ನು ಹಾಕಿಕೊಳ್ಳುವ ಪ್ರಯತ್ನ ಮಾಡಬಾರದೆಂಬುದಾಗಿದೆ. ಈ ರೀತಿಯಲ್ಲಿ

ಹೃದಯಗಳನ್ನು ಮತ್ತು ಉದ್ದೇಶ ಮುಂತಾದವುಗಳನ್ನು ನಿರ್ಣಯಿಸುವುದು ನಮ್ಮ ಶಕ್ತಿಗೆ ಮೀರಿದ್ದು ಮತ್ತು ಇದನ್ನು ನಾವು ಸಂಪೂರ್ಣವಾಗಿ ನಿವಾರಿಸಬೇಕೆಂದು ಕರ್ತನು ಆಜ್ಞಾಪಿಸಿದ್ದಾನೆ. ಈ ವಿಷಯವನ್ನು ಅನೇಕ ಪಂಥಗಳು ನೆರವೇರಿಸಲು, ಪ್ರತ್ಯೇಕಿಸುವ ಪ್ರಯತ್ನ ಮಾಡುತ್ತಾ, ಗೋಧಿಯನ್ನು ಪರೀಕ್ಷಿಸುತ್ತಾ, ಹಣಜಿಯಿಂದ ಬೇರೆಯಾಗಿರಲು, ಮನುಷ್ಯನಿರ್ಮಿತ ಅತಿ ಕಟ್ಟುನಿಟ್ಟಿನ ಪಂಥಗಳನ್ನು ಮಾಡಿಕೊಂಡು ಕ್ರೈಸ್ತಧರ್ಮ ಎಲ್ಲವನ್ನು ತೋರಿಕೆಯಲ್ಲಿ ಒಪ್ಪಿಕೊಳ್ಳುವ ಎಲ್ಲರ (Professors) ನಂಬಿಕೆಯು ಅವರ ಅನೇಕ ತಪ್ಪಾದ ಅಳತೆಯಿಂದಾಗಿ ಸರಿಹೊಂದಲಿಲ್ಲ. ಅದಾಗ್ಯೂ ಈ ಎಲ್ಲಾ ವರ್ಗದವರು ಎಷ್ಟರಮಟ್ಟಿಗೆ ಅಸಫಲರಾಗಿದ್ದಾರೆ! ಅವರು ತಪ್ಪಾದ, ಧರ್ಮಗ್ರಂಥದಲ್ಲಿ ಇಲ್ಲದ ಪ್ರಮಾಣಗಳು ಮತ್ತು ಸಿದ್ಧಾಂತಗಳು ನಿಜವಾಗಿಯೂ ವಿವಿಧ ಹಣಜಿಗಳನ್ನು ಅಭಿವೃದ್ಧಿ ಪಡಿಸಿವೆ ಮತ್ತು ಗೋಧಿಯನ್ನು ಗಂಟಲು ಹಿಸುಕುತ್ತಾ, ಪ್ರತ್ಯೇಕಿಸಿಕೊಂಡಿವೆ. ಉದಾಹರಣೆಗೆ, ಕ್ರೈಸ್ತ ಸಭೆಯ ಸದಸ್ಯರಲ್ಲದವರಿಗೆ ನಿತ್ಯಯಾತನೆಯ ಸಿದ್ಧಾಂತ. ಈಗ ಅದು ಹೆಚ್ಚುತ್ತಿರುವ ದಿನದ ಬೆಳಕಿನಲ್ಲಿ ಬಹಳವಾಗಿ ಸುಧಾರಿಸಿದ್ದರೂ ಈ ತಪ್ಪು ಎಂತಹ ಹಣಜಿಯ ಸಮೂಹವನ್ನೇ ಸೃಷ್ಟಿಸಿದೆ ಮತ್ತು ಯಾವ ರೀತಿಯಲ್ಲಿ ಗೋಧಿಯನ್ನು ಉಸಿರುಗಟ್ಟಿಸಿ, ಕುರುಡರನ್ನಾಗಿ ಮಾಡಿ, ದೇವರ ಗುಣಗಳನ್ನು ಮತ್ತು ಆತನ ಯೋಜನೆಯನ್ನು ಸರಿಯಾಗಿ ಗುರುತಿಸಲು ಅಡ್ಡಿಪಡಿಸುತ್ತಿವೆ. ಇಂದು ನಾವು ವಿವಿಧವರ್ಗಗಳು ದೇವರ ಸಮಾಲೋಚನೆಗಳನ್ನು ಅನುಸರಿಸದೆ, ಗೋಧಿ ಮತ್ತು ಹಣಜಿಯನ್ನು, ಭಕ್ತರನ್ನು ಸೋಗಿನವರನ್ನು (Professors) ಒಟ್ಟಿಗೆ ಬೆಳೆಯಲು ಬಿಟ್ಟು, ಪ್ರತ್ಯೇಕಿಸುವ ಪ್ರಯತ್ನ ಮಾಡದೆ ಇರುವ ತಪ್ಪನ್ನು ನಾವು ಕಾಣುತ್ತೇವೆ. ಎಲ್ಲಾ ವರ್ಗದಲ್ಲಿರುವ ಪ್ರಾಮಾಣಿಕ ವ್ಯಕ್ತಿಗಳು ತಮ್ಮ ವರ್ಗದಲ್ಲಿ ಅನೇಕ ಹಣಜಿಗಳಿವೆ, ಪ್ರಾಚಾರ್ಯರುಗಳು ತೋರಿಕೆಯುವರಿದ್ದಾರೆ (Professors) ಭಕ್ತರುಗಳಲ್ಲ, ತಮ್ಮ ವರ್ಗದ ಹೊರಗೆ ಅನೇಕ ಭಕ್ತರುಗಳು ಇದ್ದಾರೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಹೀಗಾಗಿ ಯಾವುದೇ ವರ್ಗವು ಇಂದು ತಮ್ಮ ವರ್ಗವು ಸಂಪೂರ್ಣ ಗೋಧಿಯಿಂದ ಕೂಡಿದೆ, ಹಣಜಿಯಿಂದ ಮುಕ್ತವಾಗಿದೆ ಎಂದು ಹೇಳಿ ಕೊಳ್ಳುವಂತಿಲ್ಲ. ಕ್ರಿಸ್ತಡೆಲ್ಫಿಯನ್ಸ್ ಮತ್ತು ಮೊರ್ಮನ್ಸ್ (Christadelphians ಮತ್ತು Mormonss)ರನ್ನು ಹೊರತುಪಡಿಸಿ ಬೇರೆ ಯಾವುದೇ ಭೂಲೋಕದ ಸಂಸ್ಥೆಗಳಿಗೆ ನಮ್ಮಲ್ಲಿ ಎಲ್ಲರೂ ಗೋಧಿಗಳಾಗಿದ್ದಾರೆ ಎಂದು ಹೇಳಿಕೊಳ್ಳುವ ಎದೆಗಾರಿಕೆ ಇಲ್ಲ. ಹೀಗಾಗಿ ಅವುಗಳಿಗೆ ತಮ್ಮ ಸಂಸ್ಥೆಗಳ, ವೇದಜ್ಞಾನದ ಬೇಲಿ ಮುಂತಾದವುಗಳಿಗೆ ಯಾವುದೇ ನೆಪವಿಲ್ಲ. ಅವರು ಹಣಜಿಯಿಂದ ಗೋಧಿಯನ್ನು ಪ್ರತ್ಯೇಕಿಸುವುದಿಲ್ಲ ಅಥವಾ ಕರ್ತನು ಗೊತ್ತುಪಡಿಸಿರುವ ವಿಧಾನದಂತೆ ಇದನ್ನು ಸುಗ್ಗಿಯ ಸಮಯದಲ್ಲಿ ಕಾರ್ಯಗತ ಗೊಳಿಸವದನ್ನು ಬಿಟ್ಟು ಬೇರೆ ಯಾವುದೂ ಸಂಪೂರ್ಣವಾಗಿ ಹಾಗೂ ಅಮೂಲಾಗ್ರವಾಗಿ ಈ ಹೃದಯಗಳ ಪ್ರತ್ಯೇಕತೆಯನ್ನು ಸಾಧ್ಯಂತವಾಗಿ ಜಾರಿಗೆ ತರಲು ಸಾಧ್ಯವಿಲ್ಲ. ಇದು ಕಾಲವು ಯಾವಾಗ ಸಮೀಪಿಸುತ್ತದೆ, ಪ್ರತ್ಯೇಕಿಸುವ ಸುಗ್ಗಿಯ ಸಮಯವು ಯಾವಾಗ ಬರುತ್ತದೆ ಎಂಬುದನ್ನು ತಿಳುಕೊಳ್ಳುವ ಅಗತ್ಯತೆಯನ್ನು ತೋರಿಸುತ್ತದೆ. ಮತ್ತು ನಮ್ಮ ಕರ್ತನು ತನ್ನ ವಾಗ್ದಾನಕ್ಕೆ ಖರೆಯಾಗಿ, ನಮ್ಮನ್ನು ಅಂಧಕಾರದಲ್ಲಿ ಬಿಟ್ಟಿಲ್ಲ, ಆದರೆ ಈಗ ಯುಕ್ತವಾದ ಜ್ಞಾನವನ್ನು ಅದನ್ನು ಸ್ವಿಕರಿಸಲು ಸಿದ್ಧರಾದವರಿಗೆ ನೀಡುತ್ತಿದ್ದಾನೆ – "ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದಲ್ಲ ನೀವು ಕತ್ತಲೆಯಲ್ಲಿರುವವರಲ್ಲ (ನಿದ್ರಿಸುವವರಲ್ಲ), ನೀವೆಲ್ಲರೂ ಬೆಳಕಿನವರೂ, ಹಗಲಿನವರೂ ಆಗಿದ್ದೀರಷ್ಟೆ" (1 ಥೆಸ. 5:4–5).

ಈಗ ಉಚಿತವಾದ ಸತ್ಯವೆಂದರೆ, ಯೆಹೂದ್ಯರ ಸುಗ್ಗಿಯಲ್ಲಿ ಕುಡುಗೋಲನ್ನು ಹಾಕಿದಂತೆ ಈ ಸುಗ್ಗಿಯಲ್ಲಿ ಕುಡುಗೋಲನ್ನು ಹಾಕಲಾಗಿದೆ. ಯೆಹೂದ್ಯರ ಸುಗ್ಗಿಯಲ್ಲಿದ್ದಂತಹ ಅಂತಹ ವರ್ಗದ ಕೊಯ್ಲುಗಾರರಿದ್ದಂತೆ ಈಗ ಕೊಯ್ಲುಗಾರರು, ದೇವದೂತರುಗಳು* ಅಥವಾ ಸಂದೇಶವಾಹಕರುಗಳು, ಕರ್ತನ ಅನುಯಾಯಿಗಳಾಗಿದ್ದಾರೆ. ಇತರರಿಗೆ ಗೋಧಿಯನ್ನು ಹಣಜಿಯಿಂದ ಪ್ರಯತ್ನವನ್ನು ಮಾಡಬಾರದೆಂದು ಕಾಲವೆಲ್ಲಾ ಹೇಳಿದ್ದಾಗ್ಯೂ, ಸಿದ್ಧರಾಗಿರುವವರು, ಅರ್ಹರು ಮತ್ತು ವಿಧೇಯರು ಇವರುಗಳಿಗೆ ದೇವರ ಯೋಜನೆಯನ್ನು ಮತ್ತು ವ್ಯವಸ್ಥೆಯನ್ನು ಸ್ಪಷ್ಟವಾಗಿ ತೋರಿಸಲಾಗುವುದು, ಅವರು ಕರ್ತನ ಸ್ವರವನ್ನು ಸುಗ್ಗಿಯ ಸೂಕ್ತಕಾಲದಲ್ಲಿ ಗ್ರಹಿಸುವರು ಮತ್ತು – ಪ್ರಸ್ತುತ ಸತ್ಯದ 'ಕುಡುಗೋಲನ್ನು ಹಾಕಿರಿ' ಎಂದೂ, "ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ" (ಕೀರ್ತನೆ 50:5) ಮತ್ತು "ನಾನು ಕಾರ್ಯಸಾಧಿಸುವ ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು; ಒಬ್ಬನು ತನ್ನನ್ನು ಸೇವಿಸುವ ಸ್ವಂತ ಮಗನನ್ನು ಕರುಣಿಸುವಂತೆ ನಾನು ಅವರನ್ನು ಕರುಣಿಸುವೆನು" (ಮಲಾಕಿ 3:17) ಎನ್ನುತ್ತಾನೆ.

* ದೇವದೂತರು ಎಂಬ ಶಬ್ದ ಸಂದೇಶವಾಹಕನನ್ನು ಸೂಚಿಸುತ್ತದೆ.

ಈ ಸಮಯವು ಸಂತರುಗಳನ್ನು ಸತ್ಯದಿಂದ ಒಟ್ಟುಗೂಡಿಸಿ ಅವರನ್ನು ಕರ್ತನೊಡನೆ ಮತ್ತು ಇತರರೊಡನೆ ಏಕತೆಗೊಳಿಸಿ, ಕೇವಲ ತೋರಿಕೆಯ ಕ್ರೈಸ್ತರುಗಳಿಂದ (Professors), ಹಣಜಿಗಳಿಂದ ಹೊರಹಾಕುವುದಲ್ಲದೆ, ಅದು ಹಣಜಿಯನ್ನು, ಅದರ ಕೂಳೆ, ಕಳೆ ಮುಂತಾದವುಗಳನ್ನೆಲ್ಲಾ ನಾಶಪಡಿಸಿ ಹೊಲವನ್ನು ಶುಚಿಗೊಳಿಸಿ ಅದನ್ನು ನೂತನ ಬಿತ್ತನೆಗೆ ಸಿದ್ಧಪಡಿಸುವ ಕಾಲವೂ ಆಗಿದೆ. ಒಂದು ಅರ್ಥದಲ್ಲಿ, "ಗೋಧಿ"ಯನ್ನು ಹಣಜಿಯಿಂದ ಶೇಖರಿಸಲಾಗುವುದು. ಯಾಕೆಂದರೆ ಹಣಜಿಯು ಹೆಚ್ಚಾಗಿ ಇರುವುದರಿಂದ – ಅದಕ್ಕಾಗಿ ಕರ್ತನು "ನನ್ನ ಪ್ರಜೆಗಳೇ, ಅವಳನ್ನು ಬಿಟ್ಟು ಬನ್ನಿರಿ" (ಪ್ರಕಟನೆ 18:4) ಎಂದು ಕರೆಯುತ್ತಾನೆ. ಆದಾಗ್ಯೂ ಮತ್ತೊಂದು ಅರ್ಥದಲ್ಲಿ, ಪ್ರತ್ಯೇಕತೆಯು ಯೋಗ್ಯ ರೀತಿಯಲ್ಲಿ ಗೋಧಿಯಿಂದ ಹಣಜಿಯನ್ನು ಪ್ರತ್ಯೇಕಿಸಲಾಗಿದೆ ಎಂದು ಪ್ರತಿನಿಧಿತ್ವಗೊಂಡಿದೆ. ನಿಜವಾಗಿಯೂ ಗೋಧಿಗೆ ಯಥೋಚಿತವಾದ ಸ್ಥಳವಿದೆ; ಅದು ಗೋಧಿಯ ಹೊಲವಾಗಿದೆ, ಹಣಜಿಯ ಹೊಲವಲ್ಲ. (ಮಾನವ ಕುಲದ ಪ್ರಪಂಚವನ್ನು ಗೋಧಿ ಮತ್ತು ಹಣಜಿಯು ಬೆಳೆಯುವ, ಅದನ್ನು ಅಭಿವೃದ್ಧಿಪಡಿಸುವ ನೆಲವೆಂದು ಎಣಿಸಲಾಗಿದೆ); ಆದುದರಿಂದ, ಹಣಜಿಯು ತನ್ನ ಸ್ಥಳದಿಂದ ಹೊರಗಿದೆ ಮತ್ತು ಅದನ್ನು ಕಿತ್ತುಹಾಕುವ ಅಗತ್ಯವಿದೆ. ದೇವರು ಗೋಧಿ ಹೊಲವನ್ನು ಪ್ರಾರಂಭಿಸಿದನು, ಮತ್ತು ಈ ಗೋಧಿಯು ಆತನ ರಾಜ್ಯದ ಮಕ್ಕಳನ್ನು ಪ್ರತಿನಿಧಿಸುತ್ತದೆ (ಮತ್ತಾಯ 13:38). ಮತ್ತು ಹೊಲ ಅಥವಾ ಪ್ರಪಂಚವು ಅವರುಗಳಿಗೆ ಕೊಡಬೇಕಾಗಿರುವುದರಿಂದ, ಮತ್ತು ಅದನ್ನು ಈಗಾಗಲೇ ವಾಗ್ದಾನ ಮಾಡಿರುವುದರಿಂದ, ಸಾಮ್ಯವು ನಿಜವಾಗಿ ಹಣಜಿಗಳನ್ನು ಕೂಡಿಸಿ ಅದನ್ನು ಸುಟ್ಟು ಹಾಕಲಾಗುವುದು ಮತ್ತು ಹೊಲವನ್ನು, ಅದರಲ್ಲಿರುವುದೆಲ್ಲವನ್ನೂ ಗೋಧಿಗೆ ಬಿಡಬೇಕು ಎಂದು ತೋರಿಸುತ್ತದೆ. ಹಣಜಿಯು ಅದು ಬಂದ ಭೂಮಿಗೆ (ಲೋಕಕ್ಕೆ) ಹಿಂತಿರುಗುತ್ತದೆ ಮತ್ತು ಗೋಧಿಯ ಪ್ರಥಮ ಫಲಗಳನ್ನು ಧಾನ್ಯಾಗಾರಕ್ಕೆ (ಕಣಜಕ್ಕೆ) ಶೇಖರಿಸಬೇಕು. ಹೀಗೆ ಭೂಮಿಯು ಮತ್ತೊಂದು ಬೆಳೆಯನ್ನು ಬೆಳೆಯಬಹುದು.

ಗೋಧಿಯನ್ನು ಕಂತೆ ಕಟ್ಟುವಂತಿಲ್ಲ. ಅದರ ಕಾಳುಗಳನ್ನು ಮೂಲತಃವಾಗಿ ಒಂದೇ ಆಗಿ ಭಾಗವಹಿಸುವಂತೆ ಅದೇ ಪರಿಸ್ಥಿತಿಗಳಲ್ಲಿ ಪ್ರತ್ಯೇಕ ವಾಗಿಯೂ ಅನಿರ್ಬಂಧವಾಗಿಯೂ ನೆಡಲಾಗುವುದು. ಅದರೆ, ಸಾಮ್ಯವು ಪ್ರಕಟಿಸುವುದೇನೆಂದರೆ ಸುಗ್ಗಿಯ ಒಂದು ಪರಿಣಾಮವು ಹಣಜಿಯನ್ನು ಶೇಖರಿಸಿ, ಸುಡುವ ಮೊದಲು ಅಥವಾ ಸಂಕಟ ಸಮಯಕ್ಕೆ ಮುನ್ನ ಕಟ್ಟುಗಳನ್ನಾಗಿ ಮಾಡುವುದು ಹಾಗೂ ಈ ಕಾರ್ಯವು ನಮ್ಮ ಸುತ್ತಲೂ ಪ್ರಗತಿಯಲ್ಲಿದೆ. ಕಾರ್ಮಿಕ ಸಂಘಗಳಿಗೆ, ಬಂಡವಾಳಶಾಹಿ ಸಮಿತಿಗಳಿಗೆ ಮತ್ತು ಎಲ್ಲಾ ರೀತಿಯ ಸಂರಕ್ಷಣಾ ಸಂಘಗಳಿಗೆ ಈ ಹಿಂದೆ ಯಾವತ್ತೂ ಇಂಥಾಃ ಸಮಯವಿದ್ದಿಲ್ಲ.

ನಾಗರೀಕ ಪ್ರಪಂಚವು ಸಾಮ್ಯದಲ್ಲಿನ ಹೊಲವಾಗಿದೆ. ಅದರಲ್ಲಿ, ಸುಧಾರಣಾ ಕಾಲದಲ್ಲಿ, ಸಿದ್ಧಾಂತಗಳ ಕಚ್ಚಾಟದ ಗಾಳಿಯು, ಒಂದೆಡೆಯಿಂದ ಮತ್ತೊಂದೆಡೆಗೆ ಗೋಧಿ ಮತ್ತು ಹಣಜಿ ಇವೆರಡನ್ನೂ ದೊಡ್ಡ ಗುಂಪುಗಳನ್ನಾಗಿ, ಪಂಗಡಗಳನ್ನಾಗಿ ಮಾಡಿ, ಒಂದನ್ನು ಒಂದು ಸಿದ್ಧಾಂತದ ಕಡೆಗೆ, ಮತ್ತೊಂದನ್ನು ಮತ್ತೊಂದು ಸಿದ್ಧಾಂತದ ಕಡೆಗೆ ಬಾಗುವಂತೆ ಒಗೆಯಿತು. ಅಡ್ಡಾದಿಡ್ಡಿಯಾಗಿ ಎಸೆಯಲ್ಪಟ್ಟ ಈ ಗೋಧಿ ಮತ್ತು ಹಣಜಿಯು ಬಹಳ ನಿಕಟವಾಗಿ ಅವ್ಯವಸ್ಥೆಯಾಗಿದ್ದು, ಎಲ್ಲಾದರ ಪ್ರತ್ಯೇಕ ಅಸ್ತಿತ್ವವನ್ನು ತೆಗೆದುಹಾಕಿತು. ಸಿದ್ಧಾಂತಗಳ ಬಿರುಗಾಳಿ ಬಹಳ ಹಿಂದೆ ಸರಿದಿದ್ದರೂ, ಅದರ ವಿಭಾಗಗಳು ಅಭ್ಯಾಸಬಲದಿಂದ ಮುಂದುವರೆಯಿತು. ಕೇವಲ ಅಲ್ಲಿ ಇಲ್ಲಿ ಗೋಧಿಯ ತಲೆಯು ತಾನಾಗಿಯೇ ಸಮೂಹ ಭಾರದಿಂದ ನೀತಿವಂತಿಕೆಗೆ ಏಳಲು ಪ್ರಯತ್ನಿಸಿತು.

ಆದರೆ ಸುಗ್ಗಿಯ ಕಾಲವು ಗೋದಿಯನ್ನು ಹಣಜಿಯ ಭಾರದಿಂದ, ಮತ್ತು ಅಡೆತಡೆಗಳಿಂದ ಬಿಡುಗಡೆಗೊಳಿಸಲು ಬಂತು. ಸತ್ಯವೆಂಬ ಕುಡುಗೋಲು ಈ ವರ್ಗವನ್ನು ಕ್ರಿಸ್ತನು ಮೂಲದಲ್ಲಿ ಉಂಟುಮಾಡಿದ್ದ ಸ್ವಾತಂತ್ರ್ಯತೆಗೆ ಸಿದ್ಧಪಡಿಸಿದಾಗ್ಯೂ, ಅದೇ ಕುಡುಗೋಲು ಹಣಜಿಯ ಮೇಲೆ ವಿರುದ್ಧ ಪ್ರಭಾವವನ್ನು ಬೀರುವುದಾಯಿತು. ಹಣಜಿಯ ಉತ್ಸಾಹವು ದೇವರ ಕಡೆಗೆ ವ್ಯಕ್ತಿಗತ ವಿಧೇಯತೆ ಮತ್ತು ಮೈತ್ರಿಯ ಬದಲಾಗಿ ಭಿನ್ನ ಪಂಥೀಯ ಹೆಚ್ಚುಗಾರಿಕೆ ಮತ್ತು ತೋರಿಕೆಯ ಕಡೆಗಿದೆ. ಹೀಗಾಗಿ ಪ್ರಸ್ತುತ ಸತ್ಯಗಳು, ಅದರ ಪ್ರವೃತ್ತಿಯು, ಅನ್ವೇಷಿಸಿ ಎಲ್ಲಾ ಭಿನ್ನಪಂಥೀಯರನ್ನು ಒಮ್ಮೆಲೇ ಖಂಡಿಸಿ, ಮತ್ತು ಅವರು ತಿರಸ್ಕರಿಸುವ ಮತ್ತು ಬಲವಾಗಿ ವಿರೋಧಿಸುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಪರೀಕ್ಷಿಸುವುದಾಗಿದೆ. ಒಬ್ಬರೊಡನೊಬ್ಬರು ಅನ್ಯೋನ್ಯವಾಗುವಂತೆ ಏರ್ಪಾಡು ಮಾಡಿದಾಗ್ಯೂ, ಎಲ್ಲಾ ಪಂಗಡಗಳು ಪ್ರಸ್ತುತ ಸತ್ಯದ ವಿಘಟನೆಯ ಪ್ರವೃತ್ತಿಯನ್ನು (ಪುಡಿ ಪುಡಿ ಮಾಡುವ) ವಿರೋಧಿಸುವಲ್ಲಿ ಒಂದಾಗುತ್ತವೆ. ಎಷ್ಟರಮಟ್ಟಿಗೆ ಎಂದರೆ, ಹಗ್ಗಗಳನ್ನು ನಿಧಾನವಾಗಿ, ಜಾಗರೂಕತೆ ಯಿಂದ, ಆದರೂ ಬಿಗಿಯಾಗಿ ಧಾರ್ಮಿಕ ವಿಷಯಗಳ

ಬಗ್ಗೆ, ಎಲ್ಲಾ ವೈಯುಕ್ತಿಕ ಆಲೋಚನೆಗಳು ಮತ್ತು ಅಧ್ಯಯನಗಳ ಮೇಲೆ ಬಿಗಿಯಾಗಿ ಎಳೆಯುವಷ್ಟರ ಮಟ್ಟಿಗೆ ಇಲ್ಲವಾದರೆ, ಅವರ ಸಂಘಟನೆಗಳಿಂದ ತುಂಡು ತುಂಡಾಗಿ ಬೀಳಬೇಕು, ಎಲ್ಲಾ ಗೋಧಿಯೂ ತಪ್ಪಿಸಿಕೊಂಡು ಹಣಜಿಯನ್ನು ಮಾತ್ರ ಉಳಿಸುವದು.

ವ್ಯಕ್ತಿಗತವಾಗಿ ಪರೀಕ್ಷಿಸುವುದಾದರೆ, ಯಜ್ಞದ ಕುರಿಯಾದಾತನ ಹಿಂಬಾಲಕರಿಗೆ ವಾಗ್ದಾನ ಮಾಡಿದ ರಾಜ್ಯದಲ್ಲಿ ತಮಗೆ ಯಾವುದೇ ಹಕ್ಕು ಇಲ್ಲವೆಂದು ಹಣಜಿಯ ಪ್ರತಿಯೊಂದು ವರ್ಗಕ್ಕೂ ಅರಿವಿದ್ದಂತೆ ತೋರಿಬರುತ್ತದೆ. ಹಣಜಿಗಳು ಒಂದಕ್ಕೊಂದು ಸಹಾನುಭೂತಿಯುಳ್ಳ ಅನೇಕ ಸಂಸ್ಥೆಗಳಾಗಿ ನಿರ್ಣಯಿಸಿರುವ ಪಂಥಗಳಲ್ಲಿ ಹೊಂದಿಕೊಳ್ಳಲು ಇಷ್ಟಪಡುತ್ತಾರೆ. ಆ ರೀತಿಯಲ್ಲಿ ಅವರು ಗೋಧಿಯ ಒಡನಾಟದಲ್ಲಿರುವವು ಎಂಬ ಅರ್ಹತೆಯ ಮೇಲೆ ಆತುಕೊಂಡು ಮಹಿಮಾ ರಾಜ್ಯದೊಳಗೆ ನುಸುಳಿ ಕೊಂಡು ಹೋಗುವ ನಿರೀಕ್ಷೆಯಲ್ಲಿದ್ದಾರೆ, ಆದರೆ, ಇದನ್ನು ಅವರು ಮಾಡಲಾರರು. ರಾಜ್ಯದ ಗೌರವಗಳಿಗೆ ಪಾತ್ರರಾಗುವ ಅರ್ಹತೆಯು ಪರೀಕ್ಷೆಯು ವ್ಯಕ್ತಿಗತವಾದುದು. ಅವರಿಗೆ ದೇವರ ಬಗ್ಗೆ, ಆತನ ಸತ್ಯದ ಬಗ್ಗೆ ವ್ಯಕ್ತಿಗತವಾದ ನಿಷ್ಠೆ ಇರಬೇಕು. ಅಂದರೆ ಪಂಗಡಗಳಲ್ಲಿ ಶೋಧನೆಯಲ್ಲ. ಅವರಲ್ಲಿ ಯಾವ ಒಬ್ಬ ವ್ಯಕ್ತಿ ಸತ್ಯಪರನಾಗಿರುವನು ಎಂಬ ಪರೀಕ್ಷೆಯಲ್ಲ. ಪ್ರತಿಯೊಂದು ಪಂಗಡವೂ ಈ ದಿನಗಳ ಹೆಚ್ಚಿನ ಬೆಳಕಿನಲ್ಲಿ ಧರ್ಮಾಂಧತೆ ಮತ್ತು ಮೂಢನಂಬಿಕೆಗಳ ಮಂಜು ಚದುರಿಹೋಗಿದೆಯೆಂದು ಗ್ರಹಿಸಿಕೊಂಡು, ಇತರ ಪಂಥಗಳಿಗೂ ತಾನು ಹಕ್ಕು ಸಾಧಿಸುವಂತೆ ಸತ್ಯಸಭೆ ಎನಿಸಿಕೊಳ್ಳಲು ಹಕ್ಕು ಇದೆ ಎಂದು ಖಚಿತಪಡಿಸಿಕೊಳ್ಳುತ್ತೇದೆ. ಬಲವಂತವಾಗಿ ಒಪ್ಪಿಕೊಳ್ಳ ಬೇಕಾಗಿರುವುದೇನೆಂದರೆ, ರಕ್ಷಣೆ ಹೊಂದಲು ಅವರು ತಮ್ಮ ಪಂಗಡಗಳಲ್ಲಿ (ಅದು ಯಾವುದೂ ಎಂಬುದು ಮುಖ್ಯವಲ್ಲ) ಸೇರಲು ಅಗತ್ಯತೆಯುಂಟೆಂಬ ಭಾವನೆಯಿಂದ ಜನರನ್ನೂ ಬಂಧಿಸಲು ಬಯಸುತ್ತಾರೆ. ಈ ರೀತಿಯಲ್ಲಿ ಅವರು ವ್ಯಕ್ತಿಗತ ಜವಾಬ್ದಾರಿಯ ಕಲ್ಪನೆಯನ್ನು ಪಂಥೀಯ ಬಂಧನದೊಂದಿಗೆ ಒಂದುಗೂಡಿಸುತ್ತಾರೆ.

ಇದಕ್ಕೆ ಉದಾಹರಣೆಯಾಗಿ, ಇತ್ತೀಚೆಗೆ ಭಿನ್ನಪಂಥೀಯರು ತನ್ನ ಉಪಾಸಕರಿಗೆ ಗಟ್ಟಿಯಾಗಿ ಹಾಕಿದ ಜನಪ್ರಿಯ ಹಗ್ಗವು ತೊಂದರೆ ಮಾಡುವುದಾಗಿರಲಿಲ್ಲ ಮತ್ತು ಅನೇಕರಿಗೆ ಅನುಕೂಲಕವಾಗಿದೆ ಎಂಬುದಾಗಿ ನಮಗೆ ಕಂಡುಬರುತ್ತದೆ. ಅದು ಯಾವುದೆಂದರೆ, ಅಂತರಾಷ್ಟ್ರೀಯ ಸಬ್ಬತ್ತಿನ ಶಾಲೆಯ ಪಾಠಗಳು (International Sunday Lessons). ಇದು ಕ್ರೈಸ್ತರಲ್ಲಿನ ಸತ್ಯವೇದಾಧ್ಯಯನದಲ್ಲಿ ಪಂಥೀಯರಲ್ಲದವರ ಸಹಕಾರದಿಂದ ಆಯಿತು ಎಂಬ ಅಭಿಪ್ರಾಯ ಮೂಡಿ ಬಂತು. ಈ ರೀತಿಯಲ್ಲಿ ಅವರು ಸತ್ಯವೇದದ ಅಧ್ಯಯನದ ಹಳೆಯ ಭಿನ್ನಪಂಥೀಯ ಪ್ರಶ್ನೋತ್ತರ ರೂಪದಿಂದ ಮುಂದುವರೆದು ಒಂದು ಭವ್ಯವಾದ ಹೆಜ್ಜೆಯನ್ನು ಹೊರ ಇಟ್ಟಿದ್ದಾರೆ. ಈ ಸಮಾನವಾದ ಪಾಠಗಳಲ್ಲಿ ಭಿನ್ನಪಂಥವನ್ನು ತೊರೆದುಬಿಟ್ಟಂತೆ ತೋರುತ್ತದೆ. ಎಲ್ಲಾ ಕ್ರೈಸ್ತರೂ ಸತ್ಯವೇದಾಧ್ಯಯನಕ್ಕಾಗಿ ಅದರ ಬೆಳಕಿನಲ್ಲಿ ಒಂದುಗೂಡಿ ಬರುವುದೇ ಸರಿಯಾದುದು; ಆದರೆ ಎಲ್ಲಾ ಭಿನ್ನಪಂಥೀಯರೂ ನಿಜವಾಗಿ ಇದನ್ನು ಮಾಡಲು ತಿರಸ್ಕರಿಸುತ್ತಾರೆ. ಗಮನಿಸಿ ನೋಡಿದರೆ ಈ ಸತ್ಯವೇದ ಶಾಲೆಯ ಪಾಠಗಳು (International Sunday Lessons) ಹೊರನೋಟಕ್ಕೆ ಮಾತ್ರ ಭಿನ್ನಪಂಥೀಯವಾದವುಗಳಾಗಿ ಕಂಡು ಬರುವುದಿಲ್ಲ. ಅವು ಹೊರನೋಟಕ್ಕೆ ಮಾತ್ರವೇ ಸತ್ಯವೇದಾಧ್ಯಯನದಲ್ಲಿ ಭವ್ಯವಾದ ಸ್ವಾತಂತ್ರ್ಯ ಕೊಡುವಂತೆ ತೋರಿಬರುತ್ತದೆ. ನಿಜವಾಗಿಯೂ, ಪ್ರತಿಯೊಂದು ಪಂಗಡವೂ ಈ ಪಾಠಗಳಲ್ಲಿರುವ ಪರಿಶುದ್ಧ ಗ್ರಂಥಗಳ ಬಗ್ಗೆ ತನ್ನದೇ ಸ್ವಂತ ವಿಮರ್ಶೆಗಳನ್ನು ಸಿದ್ಧಪಡಿಸುತ್ತವೆ. ಈ ಪಾಠಗಳನ್ನು ಆಯ್ಕೆ ಮಾಡುವ ಸಮಿತಿಯವರು ಸಾಮರಸ್ಯ ಮತ್ತು ಅನ್ಯೋನ್ಯತೆಯ ಬಾಹ್ಯ ತೋರಿಕೆಯನ್ನು ಗುರಿ ಮಾಡಿಕೊಂಡು ಕಡಿಮೆ ಭಿನ್ನಾಭಿಪ್ರಾಯಗಳುಳ್ಳ ಪಾಠಗಳನ್ನೇ ಆಯ್ಕೆಮಾಡುತ್ತಾರೆ. ಬಹಳವಾಗಿ ಚರ್ಚಿಸಬೇಕಾಗಿರುವ ಪರಿಚ್ಛೇದ ಮತ್ತು ಸಿದ್ಧಾಂತಗಳನ್ನು ಚರ್ಚಿಸದೇ ಹೋಗುತ್ತಾರೆ. ಏಕೆಂದರೆ ಪ್ರತಿ ಪಂಥಗಳ ಸರಿ ಮತ್ತು ತಪ್ಪುಗಳು ಪ್ರಕಟವಾಗುವದೆಂದು ಮತ್ತು "ಒಬ್ಬನೇ ಕರ್ತ, ಒಂದೇ ವಿಶ್ವಾಸ ಮತ್ತು ಒಂದೇ ದೀಕ್ಷಾಸ್ನಾನ" ಎಂಬ ಆಧಾರದಲ್ಲಿ ಎಲ್ಲರೂ ಒಂದೇ ಅನ್ಯೋನ್ಯತೆಗೆ ಬರಬೇಕಾಗಿರುವದೆಂದು ತಿಳಿದು – ಇವುಗಳನ್ನು ಪಾಠದಲ್ಲಿ ಗಣನೆಗೆ ತಂದುಕೊಳ್ಳುವುದಿಲ್ಲ. ಆದರೆ ಅವುಗಳು ಪ್ರತಿಯೊಂದು ಪಂಗಡಗಳಲ್ಲಿಯೂ ಮುಂಚಿನಂತೆಯೇ ಭದ್ರವಾಗಿ ಹಿಡಿಯಲ್ಪಟ್ಟಿರುತ್ತವೆ.

ಇದರ ಮತ್ತು ಇದೇ ರೀತಿಯ ಇನ್ನಿತರ ಕೆಲವು 'ಸಂಘಟನೆ'ಯ ಪದ್ಧತಿಗಳು ಪ್ರೊತಸ್ತಾಂತ ಕ್ರೈಸ್ತತ್ವವನ್ನು ತೋರಿಕೆಯಲ್ಲಿ ಬಹಳ ಭವ್ಯವನ್ನಾಗಿ ಮಾಡುವುದು ಮತ್ತು ಜನರಿಗೆ ಮಾತುಗಳಿಲ್ಲದಿದ್ದರೂ ವಾಸ್ತವವಾಗಿ ತಿಳಿಸುವುದೇನೆಂದರೆ – ನೀವು ಇವುಗಳಲ್ಲಿ ಯಾವುದಾದರೂ ಒಂದು ಪಂಗಡಕ್ಕೆ ಸೇರಿಕೊಳ್ಳಬೇಕು,

ಇಲ್ಲವಾದಲ್ಲಿ ನೀವು ದೇವರ ಮಕ್ಕಳೇ ಅಲ್ಲ ಎಂದು ಹೇಳುವುದು. ನಿಜವಾಗಿಯೂ ಇದು ಒಂದು ಸಭೆಯಾಗಿ ಅನ್ಯೋನ್ಯತೆ ಅಲ್ಲ, ಅದರೆ ವಿವಿಧ ಮತ್ತು ನಿರ್ದಿಷ್ಟವಾದ ಸಂಸ್ಥೆಗಳ ಸಂಯೋಜನೆ ಆಗಿದೆ. ಪ್ರತಿಯೊಂದೂ ಸಂಸ್ಥೆಯೂ ತನ್ನ ಪಂಗಡ ಅಥವಾ ಕಂತೆಯಾಗಿ ಉಳಿಸಿಕೊಳ್ಳುವ ಸತತವಾಗಿ ಕಾತುರದಲ್ಲಿದೆ. ಆದರೆ ಪ್ರತಿಯೊಬ್ಬರು ಬೇರೆಯುವರೊಂದಿಗೆ ಕೂಡಿಕೊಂಡು ತಮ್ಮ ದೊಡ್ಡದಾದ ಮತ್ತು ಹೆಚ್ಚು ಭವ್ಯವಾದ ಬಾಹ್ಯ ತೋರಿಕೆಯನ್ನು ಪ್ರಪಂಚದವರಿಗೆ ತೋರಿಸುವ ಇಚ್ಛೆಹೊಂದಿದ್ದಾರೆ. ಇದು ಸೂಡುಗಳನ್ನು ಒಟ್ಟಾಗಿ ಒಂದು ಬಣವೆಯಲ್ಲಿ ಕುಪ್ಪೆಹಾಕಿದಂತೆ. ಪ್ರತಿಯೊಂದು ಸೂಡು ತನ್ನದೇ ಆದ ಕಟ್ಟನ್ನು ಅಥವಾ ಸ್ವಂತಿಕೆಯನ್ನು ಉಳಿಸಿಕೊಳ್ಳುತ್ತದೆ ಮತ್ತು ಇನ್ನೂ ಹೆಚ್ಚು ಬಿಗಿಯಾಗಿ ಇತರೆ ಕಟ್ಟುಗಳೊಡನೆ ಬೆನೆಗೋಟದಂತಾಗಿ ಭವ್ಯವಾಗಿ ಕಾಣುವ ಬಣವೆ (ಮೆದೆಯಂತೆ)ಯಂತೆ ಭದ್ರಗೊಳ್ಳುತ್ತದೆ.

ಸಬ್ಬತ್ತಿನ ಶಾಲೆಗಳನ್ನು ಆಧುನಿಕ ಪದ್ಧತಿಯಲ್ಲಿ ನಡೆಸುವ ಅಂತರರಾಷ್ಟ್ರೀಯ ಕಲಿಕೆಯ ಪದ್ಧತಿಯು ಪಂಥೀಯತೆಗಾಗಿ ಬಹುಮಟ್ಟಿನ ನೆರವು ಮಾಡುತ್ತಿದೆ ಮತ್ತು ಸತ್ಯ ಜ್ಞಾನದ ಬೆಳವಣಿಗೆಗೆ ಇನ್ನೂ ಬೇರೆ ವಿಧದಲ್ಲಿ ಅಡ್ಡಿಪಡಿಸುತ್ತಿದೆ. ಶಾಲೆಯ ಕಾರ್ಯಚಾರಣೆಯ ಸಂಬಂಧದಲ್ಲಿ ಒಂದು ಪಾಠವನ್ನು ಸರ್ವಸಾಮಾನ್ಯವಾಗಿ ಸಿದ್ಧಪಡಿಸಲಾಗುತ್ತದೆ. ಸುರಕ್ಷತೆಗೊಳಿಸಿದ, ಸಿದ್ಧಪಡಿಸಿದ ಉತ್ತರದೊಂದಿಗೆ ಮುದ್ರಿತ ಪ್ರಶ್ನೆಗಳನ್ನು ಪರಿಗಣಿಸಲು ಸಮಯವಿರುವುದಿಲ್ಲ. ಸತ್ಯದ ಹಸಿವಿರುವ, ಸತ್ಯವೇದ ವಿದ್ಯಾರ್ಥಿಗಳಿಗೆ ಅಥವಾ ಒಮ್ಮೊಮ್ಮೆ ಬರುವ ಶ್ರದ್ಧಾವಂತ ಉಪಾಧ್ಯಾಯರುಗಳ ಆಲೋಚನೆಗೆ ಆಹಾರ ನೀಡುವ ಮತ್ತು ಉಪಯೋಗಕರ ಚರ್ಚೆಗೆ ಆಸ್ಪದ ನೀಡುವ ಹೆಚ್ಚು ಮುಖ್ಯವಾದ ಪ್ರಶ್ನೆಗಳನ್ನು ತರಲು ಯಾವುದೇ ಸಮಯ ಉಳಿದಿರುವುದಿಲ್ಲ. ಈ ಹಿಂದೆ, ಸಬ್ಬತ್ತಿನ ಶಾಲೆಯು ಅವರು ಆರಿಸುವ ಭಾಗಗಳನ್ನು ಅಧ್ಯಯನ ಮಾಡುವಂತೆ ಕೂಡಿಬರುತ್ತಿತ್ತು ಮತ್ತು ಸತ್ಯವನ್ನು ಪಡಕೊಳ್ಳುವುದಕ್ಕೆ ಅವರ ಸ್ವಂತ ಪೂರ್ವಕಲ್ಪಿತ ಅಭಿಪ್ರಾಯ ಮತ್ತು ಮೂಢನಂಬಿಕೆಗಳನ್ನು ಮಾತ್ರವೇ ಅಡ್ಡಿಪಡಿಸಲಾಗುತ್ತಿತ್ತು. ಮತ್ತು ಪ್ರಾಮಾಣಿಕ ಮತ್ತು ಸತ್ಯದ ಹಸಿವುಳ್ಳವರು ಯಾವಾಗಲೂ ಸ್ವಲ್ಪ ಪ್ರಗತಿಯನ್ನು ಮಾಡಲು ಶಕ್ತರಾಗಿರುತ್ತಿದ್ದರು. ಆದರೆ ಈಗ, ಹೆಚ್ಚುತ್ತಿರುವ ಬೆಳಕು ಎಲ್ಲಾ ವಿಷಯುಗಳನ್ನು ಸ್ಪಷ್ಟಪಡಿಸುತ್ತಿರುವಾಗ ಮತ್ತು ಮೂಢನಂಬಿಕೆ, ಮತ್ತು ಪೂರ್ವಕಲ್ಪಿತ ಅಭಿಪ್ರಾಯಗಳೆಂಬ ಮಂಜನ್ನು ತೊಲಗಿಸುತ್ತಿರುವಾಗ, ಅದು ಅವರಿಗೆ ಸಹಾಯ ಮಾಡುವುದಾಗಿ ಹೇಳಿಕೊಳ್ಳುತ್ತಿರುವ ಅಂತರರಾಷ್ಟ್ರೀಯ ಸಬ್ಬತ್ತಿನ ಶಾಲೆಯವರಿಂದ ಆ ಬೆಳಕಿಗೆ ಮಾಡುತ್ತಿದೆ. ಒಬ್ಬನ ಸತ್ಯವೇದಾಭ್ಯಾಸವನ್ನು ನಿಪುಣತೆಯಿಂದ ನಿರ್ದೇಶಿಸಲಾಗಿದೆ, ಹಾಗಾಗಿ ಆತನಿಗೆ ಹೊಸ ವಿಚಾರಗಳು ಅರಿವಿಗೆ ಬಾರದಂತೆ ನಿರುತ್ತರವಾಗಿ "ವಾಕ್ಯದ ಹಾಲು" ಮನುಷ್ಯ ಸಂಪ್ರದಾಯಗಳನ್ನು ಬೆರೆಸಿ ಸಾರಗುಂದಿಸಿದ ಹಾಲು (diluted). ಇದು ಬಲವಾದ ಸುಧಾರಿತ ಸತ್ಯವೆಂಬ "ಗಟ್ಟಿಯಾದ ಆಹಾರದ" ಬಗೆಗಿನ ಎಲ್ಲಾ ಹಸಿವೆಯನ್ನೂ ತೆಗೆದು ಹಾಕುವುದಾಗಿದೆ (ಇಬ್ರಿಯ 5:14). ಇಂತಹ ತರಗತಿಗಳಲ್ಲಿ, "ಗಟ್ಟಿ ಆಹಾರವನ್ನು ರುಚಿಸುವ, ಮೆಚ್ಚುಗೆ ವ್ಯಕ್ತಪಡಿಸಲು ಕಲಿಯುವ ಸಮಯ ಮತ್ತು ಅವಕಾಶವನ್ನು ತ್ಯಾಗ ಮಾಡಲಾಗಿದೆ. ವಾಕ್ಯಗಳಿಗೆ ವಿಧೇಯರಾಗಿ ನಾವು ನಮ್ಮ ಪಾಠಗಳಿಗೆ ಅಂಟಿಕೊಳ್ಳತಕ್ಕದ್ದು. ಯಾಕೆಂದರೆ ಶೀಘ್ರವೇ ಅವಧಿ ಮುಗಿದುಹೋಗುತ್ತದೆ". ಅಪೋಸ್ತಲರು, ಹಾಗೂ ಪ್ರವಾದಿಗಳು ಸ್ಪಷ್ಟಪಡಿಸುವುದೇನೆಂದರೆ ಕೃಪೆಯಲ್ಲಿ, ಜ್ಞಾನದಲ್ಲಿ ಮತ್ತು ದೇವರ ಪ್ರೀತಿಯಲ್ಲಿ ಬೆಳೆಯುವುದಕ್ಕೆ ನಮಗೆ ಅಗತ್ಯವಾದ ದೇವರ ಸಿದ್ಧಾಂತಗಳನ್ನು ಮೆಚ್ಚಿಕೊಳ್ಳುವಂತೆ ನಾವು ಮೊದಲ ತತ್ವವಿಧಿಗಳನ್ನು ಬಿಟ್ಟುಬಿಟ್ಟು ಪರಿಪೂರ್ಣತೆಯತ್ತ ಸಾಗಬೇಕೆಂದು – "ಮೊಲೆ ಬಿಟ್ಟ ಕೂಸುಗಳಿಗೋ? ಎದೆಬಿಟ್ಟ ಮಕ್ಕಳಿಗೋ?" ಎಂದು ಹೇಳಿರುವುದು ಒಳ್ಳೆಯ ದಾಗಿಯೇ ಅದೆ (ಯೆಶಾಯ 28:9; ಇಬ್ರಿಯ 6:1).

ಸಬ್ಬತ್ತಿನ ಶಾಲೆಯ ಪದ್ಧತಿಗಳು ಇತ್ತೀಚೆಗೆ ಬಹಳಷ್ಟು ಸುಧಾರಿಸಿರುವಾಗಲೂ, ಅವು ಇನ್ನೂ ಹೆಚ್ಚು ಅಪೇಕ್ಷೆಗಳನ್ನು ಬಿಟ್ಟುಬಿಟ್ಟಿವೆ. ಅವರಲ್ಲಿ ಯೇಸುವಿನ ಸೇವೆಮಾಡುವ ಕಾತರವುಳ್ಳ ಕರ್ತನ ಅತ್ಯುತ್ತಮ ಜನರಿದ್ದಾರೆ. ಅವರುಗಳು ಕರ್ತನ ಕಾರ್ಯಗಳ ಸಂಖ್ಯೆ ಮತ್ತು ತೋರಿಕೆಗಳಿಂದ ಹೆಚ್ಚು ಕಡಿಮೆ ದಿಗ್ಭ್ರಮೆಗೊಂಡಿದ್ದಾರೆ. ಕೆಲವು ಒಳ್ಳೆಯ ಸಂಗತಿಗಳು ನೆರವೇರಿವೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಅವುಗಳಿಗೆ ಅದರದೇ ಚಿಗುರುಗಳೊಡೆದಿವೆ. ನಿಷ್ಠಾವಂತರು ತಮ್ಮ ವೈಯುಕ್ತಿಕ ಕರ್ತವ್ಯಗಳು ಮತ್ತು ಪ್ರಗತಿಯನ್ನು ಹೊಂದಲು ತಂದೆತಾಯಿಗಳಿಗೆ ದೇವರು ಒಪ್ಪಿಸಿರುವ ಕಾರ್ಯಗಳನ್ನು ಮಾಡದೆ ಇರುವವರಿಂದ ಅಡಚಣೆಗೊಂಡಿದ್ದಾರೆ. ಅದರ ನಿರ್ಲಕ್ಷ್ಯವು ತಂದೆತಾಯಿಗಳಿಗೆ, ಮಕ್ಕಳಿಗೆ ಹಾನಿಕಾರಿಯಾಗಿದೆ. ಪಕ್ವತೆ ಇಲ್ಲದವರು ಸಂಕ್ಷಿಪ್ತವಾದ ಅಧಿವೇಶನ ಸಭೆಗಳು ಮತ್ತು ತರಬೇತುಗಳಲ್ಲಿ ಹಾಜರಿದ್ದರೆ ಸಾಕು ಸತ್ಯವೇದಾಧ್ಯಯನಕ್ಕಿಂತ ಇದು ಹೆಚ್ಚು ಒಪ್ಪಿಗೆ ಯಾದವುಗಳು ಎಂದು ತಿಳಿಯುತ್ತಾರೆ. ಅವರುಗಳು

ತಾವು ತಮ್ಮ ಕರ್ತವ್ಯವನ್ನು ಮಾಡಿದ್ದೇವೆ ಎಂಬ ಭಾವನೆಗೆ ನಡೆಸಲ್ಪಡುತ್ತಾರೆ. ಮತ್ತು ಅವರು ಹೀಗೆ ತ್ಯಾಗ ಮಾಡಿದ ಕೆಲವು ಸಮಯವನ್ನು ಸಾಮಾಜಿಕ ಹರಟೆ ಮಾತುಗಳಿಂದ ಮತ್ತು ಅವುಗಳು ನೀಡುವ ಪರಸ್ಪರ ವಿಚಾರ ವಿನಿಮಯದಿಂದ ಸಂದಾಯವಾಗುತ್ತದೆ ಎಂದುಕೊಂಡಿದ್ದಾರೆ. ಚಿಕ್ಕವರು ಸಹಾ ಅಭ್ಯಾಸ ಕ್ರಮಗಳನ್ನು, ಹಾಡುಗಳನ್ನು, ಕಥೆಪುಸ್ತಕಗಳನ್ನು, ವಿನೋದವಿಹಾರಗಳನ್ನು, ಆದರ ಸತ್ಕಾರಗಳನ್ನು, ಮತ್ತು ಸರ್ವಸಾಮಾನ್ಯವಾದ ಮನರಂಜನೆಗಳನ್ನು ಅತ್ಯುತ್ತಮವಾದವುಗಳೆಂದು ಇಷ್ಟಪಡುತ್ತಾರೆ. ಅವರು ಮತ್ತು ಅವರ ತಾಯಂದಿರು ತಾವು ಉಡುಪು ತೊಡಿಸಲು ಮತ್ತು ಅವರ ಉತ್ತಮ ವಸ್ತ್ರಗಳನ್ನು ತೋರ್ಪಡಿಸುವ ಶ್ರಮಕ್ಕೆ ಇದು ಪುನಃಸಂದಾಯವೆಂದೇ ಭಾವಿಸುತ್ತಾರೆ. ಮನೆಯಲ್ಲಿ ಧಾರ್ಮಿಕ ಶಿಕ್ಷಣವನ್ನು ನೀಡುವ ತಂದೆತಾಯಿಗಳ ಜವಾಬ್ದಾರಿಯು ಬಹಳ ಹೆಚ್ಚಾಗಿ ಸಬ್ಬತ್ತಿನ ಶಾಲೆಯ ಸೋಗು ಮತ್ತು ಯಾಂತ್ರೀಕೃತ ಸಂಘಟನೆಗೆ ಬಿಟ್ಟುಕೊಡಲಾಗಿದೆ. ಸಬ್ಬತ್ತಿನ ಶಾಲೆಯನ್ನು ದೇವಾಲಯದ ಶಿಶುವಿಹಾರವೆಂದು ಸರಿಯಾಗಿ ಹೆಸರಿಡಲಾಗಿದೆ ಮತ್ತು ಹೀಗೆ ಚಿಕ್ಕಮಕ್ಕಳನ್ನು ಈ ಲೋಕದ ಉತ್ಸಾಹದಲ್ಲಿ ಬುದ್ಧಿಮಾತುಗಳಲ್ಲಿ ಪೋಷಿಸಲಾಗುತ್ತಿದೆ. ಅವರುಗಳು ಆ ಹಣಜಿಯ ಮಹಾಪೈರಿನ ಎಳೆಯ ಬೆಳೆಯಾಗಿ ಮೊಳಕೆಯೊಡೆಯುತ್ತಿದ್ದಾರೆ, ಅವುಗಳಿಂದಲೇ ಬಾಬೇಲ್ ಆಕ್ರಮಿಸಲ್ಪಟ್ಟಿತ್ತು.

ಅಲ್ಲಿ, ಇಲ್ಲಿ ಎಲ್ಲೆಲ್ಲೆಯೋ ಹಿರಿಯರ ಸತ್ಯವೇದ ತರಗತಿಗಳು ಅವೆ. ಅದರ ಬೋಧಕರು ನಿರ್ಭೀತನೂ, ಸ್ವತಂತ್ರನೂ ಆಗಿ ನಿಗದಿಪಡಿಸಿದ ಪಾಠವನ್ನು ತ್ಯಜಿಸಿ, ಹೆಚ್ಚು ಮುಖ್ಯವಾದ ವಿಷಯಗಳನ್ನು ಅನುಸರಿಸುವುದಕ್ಕೆ, ಸತ್ಯಕ್ಕೆ ಬಿಡುಗಡೆ ನೀಡುವುದಕ್ಕೆ, ಅದನ್ನು ಮುಂತರಲು, ಅದು ಅವರ ಪಂಗಡದ ಸೂತ್ರಕ್ಕೆ ಅನುಕೂಲಕರವೋ, ಅನಾನುಕೂಲಕರವೋ ಎಂಬುದನ್ನು ಎಣಿಸದಂತೆ ಸ್ವತಂತ್ರನೂ ಆಗಿರುತ್ತಾನೆ. ಆತನನ್ನು ಲೋಕಪರರಾದ ಪಾಸ್ಟರ್ ಅಥವಾ ಮೇಲ್ವಿಚಾರಕರು ಸುರಕ್ಷಿತನಲ್ಲವೆಂದು ಗುರುತಿಸುತ್ತಾರೆ. ಅಂಥಾಃ ಉಪಾಧ್ಯಾಯರುಗಳು ನಿಜವಾಗಿಯೂ ಭಿನ್ನವರ್ಗಾವಲಂಬಿಗಳಿಗೆ ಗಂಡಾಂತರ ಕಾರಿಗಳೂ ಆಗಿರುತ್ತಾರೆ. ಮತ್ತು ಬಲು ಬೇಗನೇ ತರಗತಿಗಳಿಲ್ಲದವರಾಗುತ್ತಾರೆ. ಅಂಥಾಃ ಶಿಕ್ಷಕರು ಮತ್ತು ಸತ್ಯವನ್ನು ನೇರ ತನಿಖೆಗೆ ಒಪ್ಪಿಕೊಳ್ಳುತ್ತಾರೆ. ಅಂತಹ ಬೋಧಕರು ಬಲುಬೇಗನೇ ಹಗ್ಗವನ್ನು ತುಂಡರಿಸಿ ಭಿನ್ನವರ್ಗಾವಲಂಬಿಗಳ ಕಟ್ಟನ್ನು ಚದುರಿಸಿಬಿಡುತ್ತದೆ. ಹೀಗಾಗಿ ಅವರುಗಳು ಬಹಳ ಕಾಲ ಬೇಕಾಗುವುದಿಲ್ಲ. ಆದುದರಿಂದ ತಮ್ಮ ತರಗತಿಯ ಆಲೋಚನೆಗಳನ್ನು ಹಿಡಿದುಕೊಳ್ಳಬಹುದಾದ, 'ಗಟ್ಟಿಯಾದ ಆಹಾರದಿಂದ' (strong meat) ಬೇರೆಡೆಗೆ ತಿರುಗಿಸಬಲ್ಲ ಇತರರನ್ನು ಆಯ್ದುಕೊಳ್ಳಲಾಗುತ್ತದೆ ಮತ್ತು ಅವರನ್ನು ಅಜ್ಞಾತ ಶಿಶುಗಳಂತೆ, ತಾವಾಗಿಯೂ ನಿಂತುಕೊಳ್ಳಲಾಗದಂತೆ ಶಕ್ತಿಹೀನರನ್ನಾಗಿ ಇರಿಸಿಕೊಳ್ಳಲಾಗುತ್ತದೆ ಮತ್ತು ಅವರನ್ನು ತಮ್ಮ ಪದ್ಧತಿಗಳನ್ನು ಕಲಿಯಲು ಪ್ರೀತಿಸುವಂತೆ ಕಟ್ಟಲಾಗುತ್ತದೆ ಮತ್ತು ಅದಿಲ್ಲದಿದ್ದರೆ ಅವರು ಸಾಯುತ್ತಾರೆಂದು ನಂಬುವಂತೆ ಮಾಡಲಾಗುತ್ತದೆ. ನಿಜವಾದ ಉಪಾಧ್ಯಾಯನ ಸ್ಥಳವು ಮತ್ತು ನಿಜವಾದ ಸತ್ಯವೇದ ವಿದ್ಯಾರ್ಥಿಯ ಸ್ಥಳವು ಎಲ್ಲಾ ಮಾನವ ಬಂಧನಗಳ ಹೊರಗೆ ಇದೆ. ದೇವರ ಒಳ್ಳೆಯ ವಾಕ್ಯಗಳನ್ನೆಲ್ಲಾ ಅವರಿಗೆ ಪರೀಕ್ಷಿಸಲು ಮತ್ತು ಉಣಿಸಲು ಮುಕ್ತವಾಗಿವೆ. ಮತ್ತು ಕುರಿಮರಿಯು ಹೋದ ಕಡೆಗಳಲ್ಲೆಲ್ಲಾ ಅದನ್ನು ಅನುಸರಿಸುವಂತೆ ಅನಿಯಂತ್ರಿತಗೊಳಿಸಲಾಗುವುದು (ಯೋಹಾನ 8:36 ; ಗಲಾತ್ಯ 5:1).

ವ್ಯಕ್ತಿಗತ ಸ್ವಾತಂತ್ರ್ಯವನ್ನು ಹಿಂದೆ ಎಂದೂ ಇಲ್ಲದಂತೆ ಬಾಹ್ಯವಾಗಿ ಮಾನ್ಯ ಮಾಡುವುದಾದರೂ ಈ ಹಿಂದೇ ಯಾವಾಗಲೂ ಇಷ್ಟೊಂದು ಸಂಪೂರ್ಣವಾಗಿ ಎಲ್ಲಾ ಗೋಧಿ ಮತ್ತು ಹಣಜಿಯನ್ನು ಕಟ್ಟುಗಳನ್ನಾಗಿ ಮಾಡುವಂತೆ ಪಟ್ಟಿಗಳನ್ನು ಹಾಕಿರಲಿಲ್ಲ. ಏರ್ಪಾಡುಗಳು ಇಷ್ಟರಮಟ್ಟಿಗೆ ನಿಕಟವಾಗಿದ್ದ, ಇಷ್ಟರ ಮಟ್ಟಿಗೆ ಎಲ್ಲಾ ವ್ಯಕ್ತಿಗತ ಸ್ವಾತಂತ್ರಗಳನ್ನು ನಿರ್ಬಂಧಿಸಬಹುದಾದ ಸಂದರ್ಭಗಳು ಇಂದಿನಂತೆ ಈ ಹಿಂದೆ ಎಂದೂ ಇದ್ದಿಲ್ಲ. ಮತಾಭಿಮಾನಿ ಪಂಥದವರ ಪ್ರತಿಯೊಂದು ಬಿಡುವಿನ ಸಮಯವು ಅನೇಕ ಕೂಟಗಳಲ್ಲಿ, ಯೋಜನೆಗಳಲ್ಲಿ ಯಾವುದಾದರೂ ಒಂದರಿಂದ ದೊರೆಯುವ ಮನರಂಜನೆಯಿಂದ ತುಂಬಿರುತ್ತದೆ. ಹೀಗಾಗಿ ಸ್ವಚ್ಛಂದವಾಗಿ ಆಲೋಚಿಸಲು ಮತ್ತು ಸತ್ಯವೇದಾಧ್ಯಯನ ಮಾಡಲು ಅವರಿಗೆ ಸಮಯವಿರುವುದಿಲ್ಲ. ಈ ಕೂಟಗಳ, ಮನರಂಜನೆಗಳು ಮುಂತಾದವು ಇದು ಮತಪಂಥಧವರ ಬೆಳವಣಿಗೆ ಮತ್ತು ಶಕ್ತಿಯಾಗಿದೆ. ಮತ್ತು ಪರಿಣಾಮವು ತಿಳಿಸಿದಂತೆ ದಾಸತ್ವವಾಗಿದೆ. ಇದು ದೇವರ ಪ್ರತಿಷ್ಠೆಗೊಂಡ ಮಕ್ಕಳ, ಗೋಧಿಯ ನಿಜವಾದ ಬೆಳವಣಿಗೆಗೆ ಎಷ್ಟೋ ಬಾಧಕವಾಗಿದೆ. ಕಟ್ಟುಗಳನ್ನು ಪ್ರವಾದಿಯು ಹೇಳುವಂತೆ ಈ ತಂಡಗಳು ಇನ್ನಷ್ಟು ಬಿಗಿಯುಳ್ಳದ್ದಾಗಿ ಮಾಡಲಾಗುತ್ತದೆ (ಯೆಶಾಯ 28:22). ಕೆಲವು ಗೋಧಿ ಮತ್ತು ಅನೇಕ ಹಣಜಿಗಳಿಂದ ಈ ಕಟ್ಟುಗಳನ್ನು

ಮಾಡಲಾಗುವುದು. ಹೀಗಾಗಿ ಅದು ಮುಕ್ತವಾಗಲು ಪ್ರತಿನಿತ್ಯವೂ ಬಹಳ ಹೆಚ್ಚಾಗಿ ಕಷ್ಟಪಡುತ್ತಿರುತ್ತವೆ.

ನಾವು ನೋಡಿದಂತೆ ಸಣ್ಣ ಪ್ರಮಾಣದಲ್ಲಿ ಸತ್ಯವಾಗಿ ಪ್ರತಿಷ್ಠೆ ಹೊಂದಿದ ಗೋಧಿಯಿಂದ ಮತ್ತು "ಬ್ಯಾಪ್ಟೈಸ್ಡ್ ಪ್ರೊಫೆಶನ್" ಎಂದು ಮೆಥೋಡಿಸ್ಟ್ ಬಿಷೋಪರು ಹಣಜಿ ವರ್ಗದವರನ್ನು ತೀವ್ರವಾಗಿ ವಿವರಿಸಿ ಹೇಳಿರುವ ದೊಡ್ಡ ಸಮೂಹದ ಹಣಜಿಯನ್ನು ಸುಡುವುದು ಕ್ಷಣಮಾತ್ರದ ಘಟನೆಯಾಗಿದೆ. ಆದಾಗ್ಯೂ ಅನೇಕರು ಮಾಡುವ ತಪ್ಪೇನೆಂದರೆ, ಹಣಜಿಯನ್ನು ಬೆಂಕಿಯ ಕೊಂಡದಲ್ಲಿ ಸುಡುವುದು, ಅಲ್ಲಿ ಗೋಳಾಟವೂ, ಕಟಕಟನೇ ಹಲ್ಲುಕಡಿಯೋಣವೂ ಇರುವುದು (ಮತ್ತಾಯ 13:42) ಎಂಬುದು ಅಕ್ಷರಶಃವಾದ ಬೆಂಕಿಗೆ ಅಥವಾ ಪ್ರಸ್ತುತ ಜೀವನಕ್ಕೆ ಮೀರಿದ ತೊಂದರೆಯನ್ನು ಸೂಚಿಸುವುದಾಗಿದೆ ಎಂಬುದು ತಪ್ಪು ಊಹೆಯಾಗಿದೆ. ಈ ಸಂಪೂರ್ಣವಾದ ಸಾಮ್ಯವು ಪ್ರಸ್ತುತ ಯುಗದ್ದಾಗಿದೆ. ಈ ಬೆಂಕಿಯು, ಸಾಂಕೇತಿಕವಾದದ್ದು ಮಾತ್ರವಲ್ಲ, ಗೋಧಿ ಮತ್ತು ಹಣಜಿಯು ಒಂದು ಸಂಕೇತವೇ, ಅದು ಸಂಕಟದ ಸಮಯದಲ್ಲಿ ಉಂಟಾಗಲಿರುವ ಹಣಜಿಯು ನಾಶನವನ್ನೂ ಸಂಕೇತಿಸುತ್ತದೆ ಮತ್ತು ಇದರೊಂದಿಗೆ ಈ ಕಾಲವು ಮುಕ್ತಾಯವಾಗುತ್ತದೆ ಮತ್ತು ಇದರಿಂದ ಗೋಧಿವರ್ಗದವರಿಗೆ ತಪ್ಪಿಸಿಕೊಳ್ಳುವುದನ್ನು ವಾಗ್ದಾನ ಮಾಡಲಾಗಿದೆ. (ಮಲಾಕಿ 3:17; ಲೂಕ 21:36), ಬೆಂಕಿಯ ದೊಡ್ಡ ಕೊಂಡವು ಕ್ರೈಸ್ತ ಪ್ರಪಂಚದ ಅನರ್ಹ ಹಣಜಿ ವರ್ಗದವರ ಮೇಲೆ ಸುಗ್ಗಿಯ ಕೊನೆಯಲ್ಲಿ ಎರಗಿ ಬರಲಿರುವ 'ಮಹಾ ಸಂಕಟದ ಸಮಯ'ವನ್ನು ಸಂಕೇತಿಸುತ್ತದೆ.

ಹಣಜಿಯ ನಾಶನವು ಪ್ರಸ್ತುತ ಅಥವಾ ಭವಿಷ್ಯದಲ್ಲಿನ ಎಲ್ಲಾ ಹಣಜಿವರ್ಗದ ವ್ಯಕ್ತಿಗಳ ನಾಶನದ ಅರ್ಥವನ್ನು ಸೂಚಿಸುವುದಿಲ್ಲ. ಅದು ನಿಜವಾಗಿಯೂ ಈ ವರ್ಗದ ದೋಷಪೂರಿತ ತೋರಿಕೆಯ ಬಡಾಯಿಗಳ ನಾಶನವನ್ನು ಸೂಚಿಸುತ್ತದೆ. ಅವರ ಹಕ್ಕೇಳಿಕೆ ಅಥವಾ ಶ್ರದ್ಧಾ ಘೋಷಣೆಯ ಮಾತುಗಳು ಅವರು ಕ್ರೈಸ್ತರು ಎಂಬುದಾಗಿದೆ. ಆದರೆ, ಅವರಿನ್ನೂ ಈ ಲೋಕದ ಮಕ್ಕಳಾಗಿದ್ದಾರೆ. ಹಣಜಿಯಂತೆ ಸುಟ್ಟು ಇಲ್ಲವೆ ನಾಶಮಾಡುವಾಗ ಅವರುಗಳನ್ನು ಅವರ ನಿಜವಾದ ಗುಣಲಕ್ಷಣದಲ್ಲಿ ಅಂದರೆ ಪ್ರಪಂಚದ ಸದಸ್ಯರು ಎಂಬುದನ್ನು ಗ್ರಹಿಸಬಹುದು. ಮತ್ತು ಇನ್ನು ಮುಂದೆಯೂ ಅವರನ್ನು ಕ್ರೈಸ್ತರನ್ನಾಗಿ, ಕ್ರಿಸ್ತನ ಸಭೆಯ ಹೆಸರುಮಾತ್ರದ ಸದಸ್ಯರನ್ನಾಗಿ ಅನುಕರಿಸುವುದಿಲ್ಲ.

ನಮ್ಮ ಕರ್ತನು ತಾನು ರಾಜ್ಯದ ಉತ್ತಮ ಬೀಜಗಳನ್ನು, ಸತ್ಯವನ್ನು ಬಿತ್ತಿದ್ದೇನೆಂದು ವಿವರಿಸುತ್ತಾನೆ. ಅದರಿಂದ ಸತ್ಯದ ಆತ್ಮನು ಪಡಕೊಂಡ ಎಲ್ಲಾ ಸತ್ಯವಾದ ಗೋದಿಯು ಉತ್ಪನ್ನವಾಗುತ್ತದೆ. ನಂತರ, ರಾತ್ರಿಯ ಸಮಯ ಕತ್ತಲಿನ ಯುಗದಲ್ಲಿ (dark ages) ಸೈತಾನನು ಬಂದು ಅವುಗಳ ನಡುವೆ ಹಣಜಿಯನ್ನು ಬಿತ್ತಿದನು. ಈ ಹಣಜಿಯನ್ನು ಗೋಧಿಯನ್ನು ಬಿತ್ತಿದ ರೀತಿಯಲ್ಲಿ ಬಿತ್ತಲಾಯಿತು ಎಂಬುದು ನಿಸ್ಸಂಶಯ. ಅವುಗಳು ತಪ್ಪು ಬೋಧನೆಗಳ ಸಂತತಿಯಾಗಿವೆ. ಮಹಾ ವಿರೋಧಿ ಮತ್ತು ಆತನ ಕುರುಡು ಸೇವಕರಿಂದ ಘೋರವಾದ ರೀತಿಯಲ್ಲಿ ಪವಿತ್ರಾಲಯ ಮತ್ತು ಸಮೂಹವು ಮೈಲಿಗೆಯಾಯಿತೆಂಬುದನ್ನು ನಾವು ನೋಡಿದ್ದೇವೆ. ಅಮೂಲ್ಯವಾದ ಪಾತ್ರೆಗಳು ಪೋಪನ ಅಧಿಕಾರದಿಂದ ಯಾವ ರೀತಿಯಲ್ಲಿ ಅಶುದ್ಧಗೊಂಡಿತು ಮತ್ತು ತಪ್ಪಾಗಿ ಅನ್ವಯಗೊಂಡಿತು ಎಂಬುದನ್ನೂ ನೋಡಿದ್ದೇವೆ. ಇದು ಅದೇ ಸಂಗತಿಗಳ ಮತ್ತೊಂದು ತೋರಿಕೆಯಾಗಿದೆ. ತಪ್ಪಾದ ಸಿದ್ಧಾಂತಗಳು ಕರ್ತನ ಗೋಧಿಯ ಹೊಲದಲ್ಲಿ ತಪ್ಪಾದ ಗುರಿಯನ್ನು ಮತ್ತು ಆಕಾಂಕ್ಷೆಗಳನ್ನು ಉತ್ಪಾದಿಸಿತು ಮತ್ತು ಮತ್ತು ಬಹಳ ಮಂದಿಯನ್ನು ತಪ್ಪು ಸಿದ್ಧಾಂತಗಳನ್ನು ಮತ್ತು ಆಚರಣೆಗಳನ್ನು ಬಿತ್ತುತ್ತಾ ಸೈತಾನನ ಸೇವೆಗೆ ನಡೆಯಿಸಿತು ಮತ್ತು ಅವುಗಳು ಹಣಜಿಯನ್ನು ಸಮೃದ್ಧಿಯಗಿ ಉಂಟುಮಾಡಿತು.

ಆ ಹೊಲದ ಪೈರನ್ನು ನೂರಾರು ಮಿಲಿಯಗಳಾಗಿ ಲೆಕ್ಕಮಾಡುವುದರಿಂದ ಸುಂದರವಾಗಿಯೂ, ಅಭಿವೃದ್ಧಿ ಹೊಂದಿದಂತೆಯೂ ಅನೇಕರಿಗೆ ತೋರಿಬರುತ್ತದೆ. ಆಗ ನಿಜವಾಗಿಯೂ ಗೋಧಿಯ ಪ್ರಮಾಣವು ಬಹಳ ಕಡಿಮೆಯಾಗಿರುತ್ತದೆ. ಹಣಜಿಗಳಿಂದ ಉಸುರಿಕಟ್ಟಿ ಹೆಚ್ಚಾಗಿ ಅಭಿವೃದ್ಧಿ ಹೊಂದಲಾಗದ ಗೋಧಿಗೆ ಈ ಲೌಕಿಕ ಉತ್ಸಾಹವುಳ್ಳ ಹಣಜಿಗಳು ಸಭೆಯಲ್ಲಿಲ್ಲದಿದ್ದರೆ ಹೆಚ್ಚು ಒಳ್ಳೆಯದಾಗಿರುತ್ತಿತ್ತು. ಈ ಹಣಜಿಗಳು ಲೋಕದಲ್ಲಿ ಅದರ ಸ್ವಂತ ಸ್ಥಳದಲ್ಲಿರಬೇಕಿತ್ತು. ಕ್ರಿಸ್ತನ ಆತ್ಮನ ಮತ್ತು ಸಿದ್ಧಾಂತಗಳ ಒಂದೇ ಪ್ರತಿನಿಧಿಯಾಗಿರುವ ಪ್ರತಿಷ್ಠೆ ಹೊಂದಿದ ಚಿಕ್ಕ ಹಿಂಡನ್ನು ಹೊಲದಲ್ಲಿ ಬಿಡಬೇಕಿತ್ತು. ಆಗ ಸಭೆ ಮತ್ತು ಲೋಕದ ವ್ಯತ್ಯಾಸವು ಗುರುತಿಸಲ್ಪಡುತ್ತಿತ್ತು ಮತ್ತು ಅದರ ಬೆಳವಣಿಗೆಯು ಸುವ್ಯಕ್ತವಾಗಿ ಕಡಿಮೆ ತ್ವರಿತವಾಗುತ್ತಿದ್ದರೂ ಅದು ಆರೋಗ್ಯಕರವಾಗಿರುತ್ತಿತ್ತು. ಹೆಚ್ಚಾಗಿ ಕಾಣುವ ಜಯವು ಸಂಖ್ಯೆ ಮತ್ತು ಸಂಪತ್ತಿನಿಂದ ಹಾಗೂ ಸಾಮಾಜಿಕ ನಿಲುವಿನಿಂದ ಪ್ರಕಟವಾಗುತ್ತದೆ. ಅದರಲ್ಲಿ ಬಹಳಷ್ಟು ಕೀರ್ತಿಹೊಂದಿದ ಅನೇಕರು ನಿಜವಾಗಿಯೂ ದೊಡ್ಡ ನಷ್ಟವಾಗಿದ್ದಾರೆ, ಯಾವುದೇ ಅರ್ಥದಲ್ಲಿ ಅವರು ಸಭೆಗಾಗಲೀ, ಲೋಕಕ್ಕಾಗಲೀ ಆಶೀರ್ವಾದಕರವಲ್ಲ.

ಈ ಪ್ರಸ್ತಾಪವನ್ನು ಪರೀಕ್ಷಿಸುವಾಗ, ಅನೇಕ ಹಣಜಿಗಳು ಅನುಕರಣ ಗೋಧಿಗಳು ಎಂಬ ಸುಳ್ಳು ಸ್ಥಾನಕ್ಕೆ ಕಡಿಮೆ ಕಾರಣರೆಂದು ನಾವು ಹೇಳಬಹುದು. ಅವರು ಪ್ರತಿಷ್ಠೆ ಹೊಂದಿದ ಚಿಕ್ಕ ಹಿಂಡನ್ನು ಉಗ್ರಗಾಮಿಗಳು ಮತ್ತು ಧರ್ಮಾಂಧರು ಎಂದು ಪರಿಗಣಿಸುವುದರಿಂದ ಹಣಜಿಗಳು ನಿಜವಾದ ಕ್ರೈಸ್ತ ಸಭೆಯಲ್ಲವೆಂದು ಅವರಲ್ಲಿ ಅನೇಕರಿಗೆ ಗೊತ್ತಿಲ್ಲ. ಮತ್ತು ಹಣಜಿಯ ಜನಸ್ತೋಮದೊಂದಿಗೆ ಹೋಲಿಸುವಾಗ. ಹಣಜಿಯು ಹೆಚ್ಚಿನ ಸಂಖ್ಯೆಯಲ್ಲಿ ಸರಿಯಾಗಿ ಇರುವುದಾದರೆ, ನಮ್ಮ ಕರ್ತನು, ಅಪೋಸ್ತಲರು ಮತ್ತು ಎಲ್ಲಾ ಗೋಧಿಯು ನಿಜವಾಗಿಯೂ ಅತಿರೇಖಿಗಳು, ಧರ್ಮಾಂಧರು ಎಂಬುದಾಗಿ ಅವರಿಗೆ ಕಂಡುಬರುತ್ತದೆ.

ಹಣಜಿಗಳು ಎಷ್ಟೋ ಸಾಧ್ಯಂತವಾಗಿ ಮತ್ತು ಹಲವೊಮ್ಮೆ ಅವರುಗಳು ನಿಜವಾದ ಕ್ರೈಸ್ತರೆಂದು ಭರವಸೆ ಹೊಂದಿದ್ದಾರೆ. ಯೆಹೂದ್ಯರು, ನಾಸ್ತಿಕರು ಮತ್ತು ಅನ್ಯಜನಾಂಗದವರನ್ನು ಇದಕ್ಕೆ ವಿರೋಧವೆಂದು ನಿರೀಕ್ಷಿಸುತ್ತಾರೆ. ತಪ್ಪಾದ ಸಿದ್ಧಾಂತಗಳು ಅವರಿಗೆ ಎರಡು ವರ್ಗಗಳಿವೆ. ಅದರಲ್ಲಿ ಯಾರು ನಿತ್ಯಯಾತನೆಯಿಂದ ತಪ್ಪಿಸಿಕೊಳ್ಳುತ್ತಾರೋ ಅವರು ಕ್ರಿಸ್ತನೊಂದಿಗೆ ಜೊತೆ ಬಾಧ್ಯಸ್ತರು ಎಂಬ ಭರವಸೆ ನೀಡುತ್ತವೆ. ಶೋಚನೀಯುವಾದ ನೀತಿಭ್ರಷ್ಟರೂ ಮತ್ತು ಮುಚ್ಚುಮರೆಯಿಲ್ಲದಿರುವ ಕೇಡಿಗರು ಮತ್ತು ಅನೀತಿವಂತರನ್ನು ಪ್ರಸಂಗದಲ್ಲಿ ಹೊರತುಪಡಿಸಿ ಪ್ರತಿಯೊಂದು ಶವಸಂಸ್ಕಾರ ಪ್ರವಚನದಲ್ಲಿ ಶಾಂತಿ ಆನಂದ ಮತ್ತು ಪರಲೋಕದಲ್ಲಿ ಮಹಿಮೆಯನ್ನು ಸ್ನೇಹಿತರಿಗೆ ದೃಢಪಡಿಸಲಾಗುತ್ತದೆ ಮತ್ತು ಇದನ್ನು ಸಾಬೀತುಪಡಿಸುವಂತೆ, ಪ್ರತಿಷ್ಠೆಗೊಂಡವರಿಗೆ ಮತ್ತು ಭಕ್ತರುಗಳಿಗೆ ಮಾತ್ರವೇ ಅನ್ವಯವಾಗುವ ಸತ್ಯವೇದದ ಭಾಗಗಳನ್ನು ಉಲ್ಲೇಖಿಸಲಾಗುವುದು.

ಸ್ವಾಭಾವಿಕವಾಗಿ ತಮ್ಮನ್ನು ತಾವೇ ದೂಷಿಸಿ ಕೊಳ್ಳುವಂತವರು, ಆತ್ಮಸಾಕ್ಷಿಯಾಗಿ ತಾವುಗಳು ಸಂತರಲ್ಲವೆಂಬುದನ್ನು ಹೇಳಿಕೊಳ್ಳುವವರು ಮತ್ತು ಅಂಥವರಿಗೆ ದೊರೆಯುವ ಸಿರಿವಂತ ವಾಗ್ದಾನಗಳನ್ನು ತಮ್ಮದೆಂದು ಹೇಳಿಕೊಳ್ಳದಿರುವವರಿಗೆ ಅವುಗಳನ್ನು ಪಡಕೊಳ್ಳಲು ಅವರು ಸಾಧಿಸಬಹುದೆಂದು ವೇದಿಕೆಗಳಿಂದಲೂ, ಬೋಧಕ ಪೀಠದಿಂದಲೂ ಸರಿಯಾದ ವಿಷಯ ತಿಳಿಯದ – ಜೊತೆ ಹಣಜಿಗಳು ಮನವೊಲಿಸುತ್ತಿದ್ದಾರೆ. ಅವರುಗಳ ಮನಸಾಕ್ಷಿಯಲ್ಲಿ – ನಿಜವಾಗಿಯೂ ಅವರು ಖಚಿತವಾಗಿ – ಅವರು ನಿತ್ಯವಾದ ಯಾತನೆಯನ್ನು ಅರ್ಹಗೊಳಿಸುವ ಯಾವುದನ್ನೂ ಮಾಡಿಲ್ಲ ಎಂದು ಭಾವಿಸುತ್ತಾರೆ. ಮತ್ತು ಕ್ರೈಸ್ತ ಪ್ರಪಂಚದಲ್ಲಿರುವ ತಪ್ಪಾದ ಸಿದ್ಧಾಂತಗಳ ಬಗ್ಗೆ ಇರುವ ಅವರ ನಂಬಿಕೆಯು ಅವರನ್ನು ನಿರೀಕ್ಷೆಗೆ ನಡೆಸುತ್ತದೆ ಮತ್ತು ತಾವು ಮತ್ತು ಸಭೆಯ ಎಲ್ಲಾ ನೀತಿವಂತ ಜನರೂ ಆ ಶ್ರೀಮಂತ ಆಶೀರ್ವಾದವಿರುವ ಸಭೆಗೆ ಸೇರಿದವರು ಎಂಬ ಹಕ್ಕೇಳಿಕೆಗೆ ನಡೆಸುತ್ತದೆ. ಹೀಗಾಗಿ ಅವರುಗಳು ತಪ್ಪು ಸಿದ್ಧಾಂತದ ಒತ್ತಡದಿಂದ ಹಣಜಿಗಳಾಗಿದ್ದಾರೆ. ಅವರುಗಳು ತಾವಾಗಿ ತಪ್ಪಾದ ಸ್ಥಾನಗಳನ್ನು ಆಕ್ರಮಿಸಿಕೊಂಡಿರುವುದಲ್ಲದೆ, ನಿಜವಾಗಿಯೂ ಉನ್ನತ ಮಟ್ಟದ ಸಂತತ್ವವನ್ನು ತಪ್ಪಾಗಿ ಪ್ರತಿನಿಧಿಸುತ್ತಾರೆ. ತಪ್ಪುತಿಳುವಳಿಕೆಯ ಭ್ರಮೆಯಲ್ಲಿ ಅವರುಗಳು ಸುರಕ್ಷೆ ಮತ್ತು ತೃಪ್ತಿಯ ಜ್ಞಾನವನ್ನು ಅನುಭವಿಸುತ್ತಾರೆ. ತಮ್ಮ ಮತ್ತು ತಮ್ಮ ಜೀವನವನ್ನು ಹೆಸರುಮಾತ್ರದ ಸಭೆಯ ಇತರರೊಂದಿಗೆ ಮತ್ತು ಇತರರ ಮರಣದೊಂದಿಗೆ ಹೋಲಿಸಿಕೊಂಡು ಸ್ನೇಹಿತರ ಶವಸಂಸ್ಕಾರದಲ್ಲಿ ಸ್ತುತಿಪದಗಳನ್ನು ಆಲಿಸಿದವರಾದ ಅವರು ತಮ್ಮನ್ನು ಕನಿಷ್ಠ ಸರಾಸರಿಯವರು ಮತ್ತು ಗಟ್ಟಿಯಾಗಿ ಶ್ರದ್ಧಾಭಕ್ತಿಯನ್ನು ಹೇಳಿಕೊಳ್ಳುವವರಿಗಿಂತ ಇನ್ನೂ ಹೆಚ್ಚು ಸ್ಥಿರವಾದವರು ಎಂದು ಕಂಡುಕೊಳ್ಳುತ್ತಾರೆ. ಆದಾಗ್ಯೂ, ತಾವು ಹೃದಯದ ಮತ್ತು ಜೀವನದ, ಸಮಯ ಮತ್ತು ಸಾಧನಗಳನ್ನು, ತಲಾಂತುಗಳು ಮತ್ತು ಅವಕಾಶಗಳನ್ನು ದೇವರಿಗೆ ಮತ್ತು ಆತನ ಸೇವೆಗೆ ಎಂದೂ, ಯಾವುದೇ ರೀತಿಯಲ್ಲಿಯೂ ಪ್ರತಿಷ್ಠೆಯನ್ನು ಮಾಡಿಲ್ಲ ಎಂಬ ಬಗ್ಗೆ ಅವರಿಗೆ ತಿಳುವಳಿಕೆ ಇದೆ.

ಆದರೆ, ಯೆಹೂದ್ಯ ರಾಷ್ಟ್ರದ "ಹೊಟ್ಟು" ವರ್ಗದವರಾಗಿ ಅವರು ಸುಗ್ಗಿಯ ಅಂತ್ಯದಲ್ಲಿ 'ಆರದ ಬೆಂಕಿಯಲ್ಲಿ ಸುಡಲ್ಪಟ್ಟಂತೆಯೇ' (ಲೂಕ 3: 17). ಈ 'ಹಣಜಿ' ವರ್ಗವು ಈ ಸುಗ್ಗಿಯಲ್ಲಿ ನಾಶವಾಗುವುದು. ದೇವರ ರಾಜ್ಯದ ವಿಜಯದಲ್ಲಿ ದೊರೆಯುವ ದೈವಿಕ ಭಾಗ್ಯದ ಬಗ್ಗೆ ಹೊಟ್ಟಿನ ಎಲ್ಲಾ ಪೊಳ್ಳು ಹಕ್ಕೇಳಿಕೆಗಳು ಆ ಸುಗ್ಗಿಯು ಅಂತ್ಯವಾಗುವ ಮೊದಲು ಧಾರ್ಮಿಕ ಮತ್ತು ರಾಜಕೀಯ ಹೋರಾಟವೆಂಬ ಬೆಂಕಿಯಲ್ಲಿ ಮುಗಿದು ಹೋಗಿರುವುದರಿಂದ, ಅದು ಆ ಪದ್ಧತಿಯನ್ನು ನಾಶಮಾಡಿರುವಂತೆ ಅದು ಕ್ರೈಸ್ತ ಪ್ರಪಂಚವೆಂದು ಹೇಳಿಕೊಳ್ಳುವ ಆ ಹಣಜಿಯ ವರ್ಗಕ್ಕೂ ಹಾಗೆಯೇ ಆಗುವುದು. ಅದು ನಾಶಗೊಳ್ಳುವುದು, ಹೀಗಾಗಿ ಅವುಗಳು ಹಣಜಿಗಳಾಗಿರುವುದು ಮುಗಿದು ಹೋಗುವುದು. ಅವರು ತಮ್ಮನ್ನೂ, ಇತರರನ್ನು ಮೋಸಗೊಳಿಸುವುದೂ ಮುಗಿದುಹೋಗುತ್ತದೆ. ವಿಜಯಿಗಳಾಗುವ ಸಂತವರ್ಗಕ್ಕೆ ಮೀಸಲಾಗಿರುವ ಅಮೂಲ್ಯವೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳು ತಮ್ಮದೆಂದು ಅವರು ಅನ್ವಯ

ಮಾಡಿಕೊಳ್ಳುವುದೂ ಮುಗಿದುಹೋಗುತ್ತದೆ. ಅವರ ವಿವಿಧವಾದ ಕ್ರೈಸ್ತ ಸಾಮ್ರಾಜ್ಯಗಳು ಹೇಳಿ ಕೊಳ್ಳುವವುಗಳು ಮತ್ತು ಹೆಚ್ಚಾದ ಸತ್ಯದ ಬೆಳಕಿನಲ್ಲಿ ಅದರ ಅಪಶೃತಿಯು ಹರಿದು ಹೋಗಿ, ಈಗಾಗಲೇ ಹತ್ತಿಕೊಂಡಿರುವ ಅವರ ವಿವಿಧ ಧಾರ್ಮಿಕ ಸಂಘಟನೆಗಳು 'ದೇವರ ರೋಷಾಗ್ನಿ'ಯಿಂದ ನಾಶವಾಗುತ್ತವೆ. ಮಹಾಸಂಕಟದ ಈ ಸಮಯದಲ್ಲಿ ಈ ಯುಗವು ಮುಕ್ತಾಯಗೊಳ್ಳುವದು (ಚೆಫನ್ಯ 3:8). ಅವರ ಭೂಲೋಕದ ಪದ್ಧತಿಯನ್ನು 'ಕ್ರೈಸ್ತ ಪ್ರಪಂಚ'ವೆಂದು ಸಾಧಿಸುವ ಹೆಸರೂ ಮುಕ್ತಾಯವಾಗುತ್ತದೆ.

ಹಣಜಿಯ ಸುಡುವಿಕೆಯ ಬಗ್ಗೆ ಹೇಳಿದ ನಂತರದಲ್ಲಿ, ಆ ಸಾಮ್ಯವು ಮುಂದೆ "ಆಗ ನೀತಿವಂತರು (ಗೋದಿಯು) ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು" (ಮತ್ತಾಯ 13:43) ಎಂದು ತಿಳಿಸುತ್ತದೆ. ನಿಜವಾದ ಸಭೆಯು ಇನ್ನೂ ಅಧಿಕಾರಯುತವಾಗಿ ದೇವರ ರಾಜ್ಯವಾಗಿ ಸಿದ್ಧಗೊಂಡಿಲ್ಲ ಮತ್ತು ಅದು ಸುಗ್ಗಿಯು ಅಂತ್ಯವಾಗುವವರೆಗೆ ಆ ರೀತಿಯಾಗಿ ಉನ್ನತಿ ಹೊಂದುವುದಿಲ್ಲ ಎಂಬುದಕ್ಕೆ ಇದಕ್ಕಿಂದ ಉತ್ತಮವಾದ ಯಾವ ಸಾಕ್ಷಿಯನ್ನು ನಾವು ಪಡಕೊಳ್ಳಬಹುದು? ಆಗ ಈ ನೀತಿ ಸೂರ್ಯನಾದ ಕ್ರಿಸ್ತೇಸುವು, ಗುಣಪಡಿಸುವ ಕಿರಣಗಳೊಂದಿಗೆ ಆಶೀರ್ವದಿಸು ವುದಕ್ಕೂ, ಪುನರ್ ವಶಪಡಿಸುವುದಕ್ಕೂ ಶುದ್ಧೀಕರಿಸು ವುದಕ್ಕೂ, ಪಾಪದ ಮತ್ತು ತಪ್ಪಿನ ಸೋಂಕು ಮಾನವಜಾತಿಯು ಈ ಸಮಸ್ತ ಪ್ರಪಂಚಕ್ಕೆ, ತಗುಲದಂತೆಯೂ ಉದಯಿಸುತ್ತಾನೆ. ಮೊಂಡರನ್ನು ಎರಡನೆಯ ಮರಣದಲ್ಲಿ ನಾಶಗೊಳಿಸುತ್ತಾನೆ.

ಸಾಂಕೇತಿಕ ಯೆಹೂದ್ಯ ಸುಗ್ಗಿಯಲ್ಲಿ ನಿಜವಾದ ಇಸ್ರಾಯೇಲ್ಯರು ಮತ್ತು ಅನುಕರಣೆ ಮಾಡಲ್ಪಟ್ಟ ಇಸ್ರಾಯೇಲ್ಯರು ಯೆಹೂದ್ಯ ಅಥವಾ ಇಸ್ರಾಯೇಲ್ಯರ ಶಾರೀರಿಕ ಮನೆಯನ್ನು ರಚಿಸಲ್ಪಟ್ಟಿದ್ದಾರೆಂಬ ಸತ್ಯವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ; ನಿಜವಾದ ಇಸ್ರಾಯೇಲ್ಯರು ಮಾತ್ರವೇ ಆರಿಸಲ್ಪಟ್ಟು ಸುವಾರ್ತಾ ಯುಗದಲ್ಲಿ ಶೇಖರಿಸಲ್ಪಟ್ಟರು ಮತ್ತು ಸುವಾರ್ತಯುಗಕ್ಕೆ ಸೇರಿದ ಸತ್ಯಗಳಿಂದ ಕೂಡಿದ ಗೌರವಗಳನ್ನು ಹೊಂದಿದರು. ಆ ದೇಶದ ಉಳಿದವರೆಲ್ಲರೂ 'ಹೊಟ್ಟು' ಆಗಿದ್ದು ದೈಹಿಕವಾಗಿ ನಾಶವಾಗದಿದ್ದರೂ (ಅನೇಕ ಜೀವಗಳು ಅವರ ತೊಂದರೆಯ ನಿಮಿತ್ತ ಮರಣಹೊಂದಿದರು), ಆದರೆ ಅದುವರೆಗೆ ಅವರು ನಂಬಿ ಬೀಗುತ್ತಿದ್ದ ರಾಜ್ಯದ ಅವರ ಎಲ್ಲಾ ಸವಲತ್ತುಗಳನ್ನು ಕತ್ತರಿಸಿಹಾಕಲಾಯಿತು. ನಂತರ ಪ್ರಸ್ತುತ ಸುಡುವ ಸಮಯದಲ್ಲಿ ಹಣಜಿಯನ್ನು ನಡೆಸಿಕೊಳ್ಳುವವರ ಸಮನಾಂತರವನ್ನೂ ಮತ್ತು ಪ್ರತಿರೂಪವನ್ನೂ ಪತ್ತೆಹಚ್ಚಲಾಯಿತು.

ಈ ಸುಗ್ಗಿಯಲ್ಲಿ ಏನನ್ನು ನಿರೀಕ್ಷಿಸಬಹುದೆಂದು ಮತ್ತು ಅದರಲ್ಲಿ ನಮ್ಮ ಪಾಲು ಏನೆಂದು ಕರ್ತನು ನಮಗೆ ತೋರಿಸಿಕೊಟ್ಟಿರುವುದಲ್ಲದೆ, ನಮ್ಮನ್ನು ನಾವು ಇದರಿಂದ ಪ್ರತ್ಯೇಕಿಸಿಕೊಂಡಿದ್ದೇವೆ ಮತ್ತು ಕೊಯ್ಲುಗಾರರಾಗಿ, ಇತರರಿಗೆ ಕ್ರಿಸ್ತನಲ್ಲಿ ಬಿಡುಗಡೆಹೊಂದಲು ಸಹಾಯವಾಗುವಂತೆ ಸತ್ಯದ ಕುಡುಗೋಲಾಗಿ ಉಪಯೋಗಿಸುವುದರಿಂದ, ಮತ್ತು ತಪ್ಪಾದ ಮಾನವ ಪದ್ಧತಿಯಿಂದಲೂ ಬಂಧನಗಳಿಂದಲೂ ಪ್ರತ್ಯೇಕಿಸಿ ಕೊಂಡಿದ್ದೇವೆ, ಆದರೆ ನಾವು ಸರಿಯಾಗಿದ್ದೇವೆ ಎಂದು ಎರಡು ಪಟ್ಟು ಖಚಿತವಾಗುವಂತೆ ಮತ್ತು ಪ್ರತ್ಯೇಕಿಸುವ ಸುಗ್ಗಿಯ ಸಮಯವು ಬಂದಿದೆ ಮತ್ತು ಆತನು ನಮಗೆ ಸುಗ್ಗಿಯ ವರ್ಷವು ಪ್ರಾರಂಭ, ಅದರ ಉದ್ದ ಮತ್ತು ಅದು ಯಾವಾಗ ಮುಕ್ತಾಯವಾಗುತ್ತದೆ ಎಂಬವುಗಳ ರುಜುವಾತುಗಳನ್ನು ಒದಗಿಸಿದ್ದಾನೆ. ಇವುಗಳನ್ನು ಈಗಾಗಲೇ ಪರೀಕ್ಷಿಸಿದ್ದೇವೆ ಮತ್ತು ಕ್ರಿ.ಶ. 1874 ಪ್ರಾರಂಭದ ವರ್ಷವಾಗಿಯೂ 1914 ಮುಕ್ತಾಯದ – 40 ವರ್ಷಗಳ ಸುಗ್ಗಿಯ ಮುಕ್ತಾಯವಾಗಿ ಗುರುತಿಸಲ್ಪಟ್ಟಿದೆ. ಅದೇ ಸಮಯದಲ್ಲಿ ಈ ಸುಗ್ಗಿಯ ಕ್ರಮದ ಮತ್ತು ಕಾರ್ಯದ ಸೂಕ್ಷ್ಮ ಸಂಗತಿಗಳು ಯೆಹೂದ್ಯ ಕಾಲದ ನಮೂನೆಯಂತಿದೆ ಎಂದು ವರ್ಣಿಸಲ್ಪಟ್ಟಿವೆ. ಸಾಂಕೇತಿಕ ಸುಗ್ಗಿಯ ಕೆಲವೊಂದು ಗುರುತಿಸಲ್ಪಟ್ಟ ಕಾಲ–ವೈಶಿಷ್ಟ್ಯಗಳನ್ನು ನಾವೀಗ ಪರೀಕ್ಷಿಸೋಣ ಮತ್ತು ಇಂದು ನಮಗೆ ಅನ್ವಯ ವಾಗುವಂತೆ ಬೋಧಿಸುವ, ಕ್ರಿಸ್ತನು ಸ್ಪಷ್ಟವಾಗಿ ಈ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಿರುವ ಪಾಠಗಳನ್ನು ನಮಗೆ ಯಾವುದೇ ಅನುಮಾನ ಅಥವಾ ಅನಿಶ್ಚಿತತೆ ಉಂಟಾಗದಂತೆ ಮತ್ತು ಆತನ ಯೋಜನೆಗಳನ್ನು ಅರ್ಥಮಾಡಿಕೊಳ್ಳುವಂತೆ ಗಮನಿಸೋಣ ಮತ್ತು ಅದರಂತೆ ಬಲದಿಂದ ಆತನ ಜೊತೆ ಸೇವಕರಂತೆ ಆತನು ಬಹಿರಂಗಪಡಿಸಿದ ಚಿತ್ತವನ್ನು ನೆರವೇರಿಸಲು ಕಾರ್ಯಪ್ರವರ್ತರಾಗೋಣ.

ಯೆಹೂದ್ಯ ಸುಗ್ಗಿಯ ಎಲ್ಲಾ ಕಾಲಕ್ಕೆ ಸಂಬಂಧಿಸಿದ ವೈಶಿಷ್ಟ್ಯಗಳು ನಂಬಿಗಸ್ತರಿಗೆ ಸಂಬಂಧಿಸಿದರೂ ಹೆಸರುಮಾತ್ರದ ಸಮೂಹದ ಮೇಲೆ, ಅವುಗಳ ಗುರುತುಪಡಿಸಿದ ಪರೀಕ್ಷೆ, ನಿರಾಕರಣೆ, ಪರಾಭವ ಮತ್ತು ಒಂದು ಪದ್ಧತಿಯಾಗಿ ಅಥವಾ ಕ್ರೈಸ್ತಸಭಾ ರಾಷ್ಟ್ರವಾಗಿ ಅದರ ನಾಶನ ಇವುಗಳ ಕಾಲಗಳೊಂದಿಗೆ ನೇರವಾದ ಸಂಬಂಧ ಹೊಂದಿದೆ. ಹೀಗೆ, ಕರ್ತನು ಒಬ್ಬ

ಮದಲಿಂಗನಾಗಿ, ಕೊಯ್ಲುಗಾರನಾಗಿ ಕ್ರಿ.ಶ. 29ರಲ್ಲಿ ಬಂದದ್ದು ನಿಜವಾದ ಇಸ್ರಾಯೇಲ್ಯರಿಗಾಗಿ ಅಷ್ಟೇ ಮಾತ್ರವಲ್ಲ, ಇಡೀ ಸಮೂಹಕ್ಕಾಗಿ ಬಂದನು (ಯೋಹಾನ 1:11). ಸುಗ್ಗಿಯ ಕಾರ್ಯದ ಪ್ರಗತಿಯು ಅಲ್ಲಿ ಗೋಧಿಯ ಕಾಳು ಸ್ವಲ್ಪವಾಗಿದ್ದವು ಉಗ್ರಾಣಕ್ಕೆ ಸೂಕ್ತವಾಗಿದೆ ಎಂಬ ಸತ್ಯವನ್ನು ಬಹಿರಂಗ ಪಡಿಸಿತು. ಸುವಾರ್ತಾ ಹಂಚಿಕೆ ಆ ದೊಡ್ಡಗುಂಪು ನೋಡುವುದಕ್ಕೆ ಮಾತ್ರವೇ ಗೋಧಿಯಂತಿತ್ತು – ಆದರೆ ನಿಜವಾಗಿಯೂ ಅದು ಹೊಟ್ಟು ಮಾತ್ರವಾಗಿತ್ತು. ಅದರಲ್ಲಿ ನಿಜವಾದ ಗೋಧಿಯ ನೀತಿಸೂತ್ರವು ಇಲ್ಲವಾಗಿತ್ತು. ಮೂರೂವರೆ ವರ್ಷಗಳ ನಂತರ ಅಂದರೆ ಕ್ರಿ.ಶ. 33ರಲ್ಲಿ ನಮ್ಮ ಕರ್ತನು ಅರಸನ ಅಧಿಕಾರಸ್ಥಾನವನ್ನು ಅಲಂಕರಿಸಿದನು. ಆತನು ಈ ಹಿಂದೆ ನಿರಾಕರಿಸಿದ್ದನ್ನು (ಯೋಹಾನ 6:15) ಈಗ ಸ್ವೀಕರಿಸಿ ಜನರು ತನ್ನನ್ನು ಕತ್ತೆಯ ಮೇಲೆ ಸವಾರಿ ಮಾಡಿಸುವಂತೆ, ಅರಸನಂತೆ ಜಯಘೋಷ ಮಾಡುವಂತೆ ಮಾಡಿದನು. ಇದು ಈ ಪ್ರತಿಸಂಕೇತ ಸುವಾರ್ತಾ ಸುಗ್ಗಿಯಲ್ಲಿ ಒಂದು ಅಂಶವಾಗಿ ಗುರುತಿಸಲ್ಪಟ್ಟಿತು. ಅದು ಆ ಸಂಕೇತಕ್ಕಿಂತಲೂ ಬಹಳಷ್ಟು ಮುಖ್ಯವಾಗಿದ್ದಿತು. ಇದಕ್ಕೆ ಸಮಾನಾಂತರವಾದುದ್ದನ್ನು ನಾವು 1874ರಲ್ಲಿ ನಮ್ಮ ಕರ್ತನು ಮದಲಿಂಗನಾಗಿ, ಕೊಯ್ಲುಗಾರನಾಗಿ ತನ್ನ ಎರಡನೆಯ ಬರೋಣದಲ್ಲಿ ಬಂದುದನ್ನು ಕಂಡಿದ್ದೇವೆ. ಮತ್ತು 1878ರಲ್ಲಿ ಆತನು ಅದೇ ಸಂಗತಿಯಲ್ಲಿ ಅಂದರೆ ಅರಸರ ಅರಸನಾಗಿ, ಕರ್ತರ ಕರ್ತನಾಗಿ ಕಾರ್ಯಾರಂಭ ಮಾಡಿದ್ದಾನೆ. ಈ ಸಮಯದಲ್ಲಿ ಆತ್ಮೀಕ ಅರಸನು ತನ್ನೆಲ್ಲಾ ಅಧಿಕಾರದೊಂದಿಗೆ ಪ್ರಸ್ತುತಿಗೊಂಡಿದ್ದಾನೆ. ಆದರೆ ಆತನು ಜನರ ಕಣ್ಣಿಗೆ ಅದೃಶ್ಯನಾಗಿದ್ದಾನೆ.

ನಮ್ಮ ಕರ್ತನು ನಿರ್ವಹಿಸಿದ ಕಾರ್ಯಗಳು, ಕೆಲವು ತಾಸುಗಳ ಕಾಲ ಸಾಂಕೇತಿಕವಾಗಿ ಇಸ್ರಾಯೇಲ್ಯರ ಅರಸನಂತೆ ಅಭಿನಯಿಸುವುದಾಗಿದ್ದರೂ ಇವು ನಮಗೆ ಆಳವಾಗಿ ಮಹತ್ವವುಳ್ಳದ್ದು. ಯಾಕೆಂದರೆ, ಅದು ಪ್ರಶ್ನಾತೀತವಾಗಿ ಇಲ್ಲಿ ಏನನ್ನು ನಿರೀಕ್ಷಿಸಬೇಕು ಎಂಬುದನ್ನು ಪ್ರತಿಬಿಂಬಿಸುತ್ತಿದೆ. ಜನರು ಆ ಸಮಯದಲ್ಲಿ ಆತನು ಏನು ಮಾಡುವುದನ್ನು ನೋಡಿದರೋ ಅಂದರೆ, ಕತ್ತೆಯ ಮೇಲೆ ಅರಸನಂತೆ ಯೆರೂಸಲೇಮಿಗೆ ಸವಾರಿ ಮಾಡಿ ಹಣ ವಹಿವಾಟು ಮಾಡುವವರನ್ನು (ಚಿನಿವಾರರನ್ನು) ಕೊರಡೆಗಳ ಸಹಾಯದಿಂದ ದೇವಾಲಯದಿಂದ ಹೊರಡಿಸಿಬಿಟ್ಟದ್ದು ಇವುಗಳನ್ನು ಇಲ್ಲಿ ಹೆಚ್ಚಿನ ಮಟ್ಟದಲ್ಲಿ ಮಾಡುವುದನ್ನು ನಾವು ಸಾಂಕೇತಿಕವೆಂದು ಗ್ರಹಿಸುತ್ತೇವೆ, ಅರಸ ಮತ್ತು ಕೊರಡೆಯ ಹಗ್ಗಗಳು ಮತ್ತು ಅರಸನ ಅಧಿಕಾರದ ಘೋಷಣೆ ಇವುಗಳು ಈಗ ಬೇರೆ ವಿಧವಾಗಿ ನಂಬಿಗಸ್ತರ ಕಣ್ಣುಗಳಿಗೆ ಮಾತ್ರವೇ ಪ್ರಕಟಗೊಂಡಿವೆ. ಆದರೆ ಯೆಹೂದ್ಯ ಸಂಕೇತವು ಈ ನೆರವೇರಿಕೆಗೆ ಗಮನವನ್ನು ಸೆಳೆಯುವುದಾಗಿದೆ, ಇಲ್ಲವಾದರೆ ನಾವು ಇದನ್ನು ಮೆಚ್ಚಿಕೊಳ್ಳಲು ಸಾಧ್ಯವಾಗದು. ಸಾಂಕೇತಿಕ ಅರಸನ ಮೊದಲನೆಯ ಕಾರ್ಯವು ಇಸ್ರಾಯೇಲಿನ ಸಮಗ್ರ ಸಭಾ ರಾಷ್ಟ್ರಗಳನ್ನು ರಾಜ್ಯವಾಗಲು ಅನರ್ಹವೆಂದು ತಿರಸ್ಕರಿಸುವುದು ಮತ್ತು ಅದನ್ನು ಇನ್ನು ಮುಂದೆ ಆತನ ವಿಶೇಷ ಪಾರಂಪರಿಕವಾಗಿ ನಡೆಸಿಕೊಳ್ಳದಿರುವುದು. ಇದನ್ನು ಈ ರೀತಿಯಾಗಿ ವ್ಯಕ್ತಪಡಿಸಲಾಗಿದೆ – "ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿ ಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿ ಕೊಳ್ಳುವುದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. ನೋಡಿರಿ ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ. ಈಗಿನಿಂದ – ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವುದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು" (ಮತ್ತಾಯ 23: 37–39).

ಇದನ್ನು ಪ್ರಸ್ತುತ ಸುಗ್ಗಿಗೆ ಅನ್ವಯಿಸುವಾಗ, ನಮಗೆ ಕಲಿಸಿಕೊಡುವುದೇನೆಂದರೆ, ಕ್ರಿ.ಶ. 33 ಸಾಂಕೇತಿಕ ಇಸ್ರಾಯೇಲ್ಯರಲ್ಲಿರುವಂತೆ, 1845 ವರ್ಷಗಳ ಕಾಲ ಸವಲತ್ತುಗಳು, ದಂಡನೆಗಳು ಮುಂತಾದವುಗಳ ಮೂಲಕ ದೇವರ ಜನರೆಂದು ಮಾನ್ಯತೆ ಹೊಂದಿದವರು ಮೂರುವರೆ ವರ್ಷಗಳ ಕಾಲದ ಪರೀಕ್ಷೆ ಮತ್ತು ತಪಾಸಣೆಯ ನಂತರದಲ್ಲಿ ಅವರನ್ನು ಅನರ್ಹರೆಂದು ಹೊರಹಾಕಲಾಯಿತು, ಅರಸನಿಂದ ತಿರಸ್ಕರಿಸಲಾಯಿತು. ಅದರಂತೆ ಈ ಪ್ರಸ್ತುತ ಸುಗ್ಗಿಯಲ್ಲಿ, ಅದೇ ರೀತಿಯ ಮೂರುವರೆ ವರ್ಷಗಳ ತಪಾಸಣೆಯ ನಂತರ, ಮತ್ತು ಅದೇ ರೀತಿಯ 1845 ವರ್ಷಗಳ ಸವಲತ್ತುಗಳು, ದಂಡನೆಗಳು ಮುಂತಾದವುಗಳ ಅಂತ್ಯದಲ್ಲಿ ನಾಮಾಂಕಿತ ಕ್ರೈಸ್ತ ಪ್ರಪಂಚವು ಅವರು ಇನ್ನು ಮುಂದೆ ಯಾವುದೇ ಭಾಗ್ಯವನ್ನು ಆತನಿಂದ ಹೊಂದಿಕೊಳ್ಳಲು ಅಥವಾ ಆತನಿಂದ ಯಾವುದೇ ರೀತಿಯಲ್ಲಿ ಮಾನ್ಯ ಮಾಡಲು ಅವರು ಅನರ್ಹರೆಂದು ಅವರನ್ನು ತಿರಸ್ಕರಿಸಲಾಗುವುದು.

ಆದರೆ, ಹೆಸರುಮಾತ್ರದ ಶಾರೀರಿಕ ಇಸ್ರಾಯೇಲ್ಯರ ತಿರಸ್ಕಾರವು ಯಾವುದೇ ಒಬ್ಬ

ಇಸ್ರಾಯೇಲ್ಯನನ್ನು ಸೂಚಿಸುವುದಿಲ್ಲವಾದರೂ, 'ನಿಜವಾದ ಇಸ್ರಾಯೇಲ್ಯ'ರಲ್ಲಿ (Israelite Indeed) ಯಾವುದೇ ವಂಚನೆ ಇಲ್ಲದಿರುವುದಾದರೆ, ಆಗ ಅದು (ನಿಜವಾಗಿಯೂ ಕುರುಡು ಮಾರ್ಗದರ್ಶಿಗಳಿಂದ ಬಿಡುಗಡೆ ಹೊಂದಿದವನಿಗೆ ಮತ್ತು ನೇರವಾಗಿ ಮತ್ತು ಪೂರ್ಣವಾಗಿ ನೂತನ ಆತ್ಮೀಕ ನಾಲೆಗಳ ಮೂಲಕ, ಅಪೋಸ್ತಲರಿಂದ ಬೋಧಿಸಲ್ಪಟ್ಟವನಿಗೆ) ಇನ್ನೂ ಹೆಚ್ಚಿನ ಭಾಗ್ಯವು ದೊರೆಯುವುದರಿಂದ ನಾವು ಅದನ್ನು ಇಲ್ಲೂ ನಿರೀಕ್ಷಿಸಬಹುದಾಗಿದೆ. ಈ ಹಿಂದೆ ಹೆಸರು ಮಾತ್ರದ ಗುಂಪಿನವರಿಗೆ ದಯಪಾಲಿಸಿದ ಆತ್ಮೀಕ ಸೌಭಾಗ್ಯಗಳು ಇನ್ನು ಮುಂದೆ ನಂಬಿಗಸ್ತರಿಗೆ ಮತ್ತು ವಿಧೇಯರಿಗೆ ಮಾತ್ರವೇ ದೊರೆಯುವುದಾಗಿವೆ. ಇನ್ನು ಮುಂದೆ, ಬೆಳಕು ತಕ್ಕ ಸಮಯದಲ್ಲಿ "ನಂಬಿಗಸ್ತ ಮನೆಯವರಿಗೆ ಉಚಿತ ಕಾಲದಲ್ಲಿ ಆಹಾರವು ದೊರೆಯುವುದು" ಎಂಬುದನ್ನು ನಿರೀಕ್ಷಿಸಬೇಕು, ಯಾವುದೇ ಮಟ್ಟದಲ್ಲಿ ಹಿಂದಿನ ನಾಲೆಗಳ ಮೂಲಕವಲ್ಲ, ಆದರೆ ಪತನಗೊಂಡವರ, ತಿರಸ್ಕರಿಸಲ್ಪಟ್ಟ ವ್ಯವಸ್ಥೆಯ ಹೊರಗೆ ಇರುವ ಪ್ರಾಮಾಣಿಕ ವ್ಯಕ್ತಿಗಳ ಮೂಲಕ ದೊರಕುತ್ತದೆ.

ನಮ್ಮ ಕರ್ತನು ತನ್ನ ಸೇವಾಕಾಲದಲ್ಲಿ, ಮತ್ತು ಒಬ್ಬ ಅರಸನಾಗಿ ಆತನು ಯೆಹೂದಿ ಪದ್ಧತಿಯನ್ನು ತೆಗೆದುಹಾಕುವವರೆಗೆ ಶಾಸ್ತ್ರಿ ಫರಿಸಾಯರುಗಳನ್ನು ಕೆಲವೊಮ್ಮೆ ಆತನು ಅವರನ್ನು ಜನರಿಗೆ ಮೋಸಮಾಡುವ ಕಪಟಿಗಳೆಂದು ಗದರಿಸಿದರೂ, ಅವರು ಜನರ ನ್ಯಾಯಬದ್ಧ ಶಿಕ್ಷಕರು ಎಂಬುದಾಗಿಯೂ ಮಾನ್ಯ ಮಾಡುವವನಾಗಿದ್ದನು. ಇದು ಕರ್ತನ ಮಾತುಗಳಾದ "ಶಾಸ್ತ್ರಿಗಳೂ, ಫರಿಸಾಯರೂ ಮೋಶೆಯ ಪೀಠದಲ್ಲಿ ಕುಳಿತುಕೊಂಡಿದ್ದಾರೆ; ಆದುದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ" (ಮತ್ತಾಯ 23:2,3) ಎಂಬ ಮಾತುಗಳಿಂದ ವೇದ್ಯವಾಗುತ್ತದೆ. ಹೀಗಾಗಿ, ಅದರಂತೆ ಕೆಲವು ಸಮಯಕ್ಕೆ ಈ ಕ್ರೈಸ್ತ ಪ್ರಪಂಚದ ಮಹಾಧಾರ್ಮಿಕ ನಾಯಕರುಗಳು ಸಿನೋಡ್‌ಗಳಲ್ಲಿ, ಸಮ್ಮೇಳನಗಳಲ್ಲಿ, ಮಹಾ ಕೂಟಗಳು ಮುಂತಾದವುಗಳಲ್ಲಿ ಕ್ರಿಸ್ತನ ಆಸನದಲ್ಲಿ ಜನರಿಗೆ ಬೋಧಕರಾಗಿ ಕೂತುಕೊಂಡರು, ಹೇಗೆ ಒಮ್ಮೆ ಯೆಹೂದಿ ಸನ್ಹೆಡ್ರಿನ್‌ನಲ್ಲಿ ಒಮ್ಮೆ ಮೋಶೆಯ ಆಸನವನ್ನು ಅಕ್ರಮಿಸಿದಂತೆ ಕುಳಿತುಕೊಳ್ಳುವರು. ಆದರೆ, ಕ್ರಿ.ಶ.33ರ ನಂತರ, ಶಾಸ್ತ್ರಿಗಳು ಮತ್ತು ಫರಿಸಾಯರು ಮುಂದೆಂದೂ ಕರ್ತನಿಂದ ಯಾವುದೇ ಅರ್ಥದಲ್ಲಿ ಮಾನ್ಯತೆ ಪಡೆಯಲಿಲ್ಲ ಮತ್ತು ನಿಜವಾದ ಇಸ್ರಾಯೇಲ್ಯರು ದೇವರಿಂದ ಹೊರತೂ, ಎಂದಿಗೂ ಇವರಿಂದ ಶಿಕ್ಷಣ ಪಡೆಕೊಳ್ಳಲಿಲ್ಲ. ಆದರೆ ಜನರಿಂದ ಕೂಡಿಸಿದ ಮತ್ತು ವಿಶೇಷವಾಗಿ ದೇವರಿಂದ ಬೋಧಿಸಲ್ಪಟ್ಟ ಇನ್ನಿತರ ನಮ್ರ, ಬಿರುದುಗಳಿಲ್ಲದ ಮತ್ತು ಹೆಚ್ಚು ಅರ್ಹ ಸಾಧನಗಳ ಮೂಲಕ ಶಿಕ್ಷಣ ನೀಡುವವನಾದನು. ಆದುದರಿಂದ ನಾವು ಇದನ್ನು ನಿರೀಕ್ಷಿಸಿ ಈ ಸಮಾನಾಂತರ ಸುಗ್ಗಿಯಲ್ಲಿ ಅಂಥವರನ್ನು ಕಂಡುಕೊಳ್ಳಬೇಕು.

ಕ್ರಿ.ಶ.33ರಲ್ಲಿ ನಮ್ಮ ಕರ್ತನು ಅರಸನ ಅಧಿಕಾರವನ್ನು ವಹಿಸಿಕೊಂಡದ್ದು ಮತ್ತು ಆತನ ಮೊಟ್ಟಮೊದಲ ಕಾರ್ಯ ಶಾರೀರಿಕ ಇಸ್ರಾಯೇಲಿನ ರಾಷ್ಟ್ರೀಯ ಸಭೆಯನ್ನು ತಿರಸ್ಕರಿಸಿದ್ದು. ಇದನ್ನು ಎರಡು ಯುಗಗಳ ಎದ್ದುಕಾಣುವ ಸಮಾನಾಂತರದಲ್ಲಿ ತೆಗೆದುಕೊಳ್ಳಲಾಗಿದ್ದು, ಪ್ರಸ್ತುತ ಸುಗ್ಗಿಯ ಸಮಾನಾಂತರ ಸಮಯದ ಅಂಶವನ್ನು ಪ್ರಸ್ತುತ ಸುಗ್ಗಿ 1878ರಲ್ಲಿ ಸಂಕೇತಗರ್ಭಿತವಾದ ಬಾಬೇಲ್, ಬೇರೆ ರೀತಿಯಲ್ಲಿ ಕರೆಯಲ್ಪಡುವ ಕ್ರೈಸ್ತ ಪ್ರಪಂಚ, ಯೆಹೂದಿ ಧರ್ಮದ ಸಂಕೇತ, ಇದರಲ್ಲಿ ಮುರಿದುಬಿದ್ದದನ್ನು ಸೂಚಿಸುತ್ತದೆ. ಆಗ "ಬಿದ್ದಳು, ಬಿದ್ದಳು, ಬಾಬೇಲೆಂಬ ಮಹಾ ನಗರಿಯು ಬಿದ್ದಳು; ದೆವ್ವಗಳ ವಾಸಸ್ಥಾನವೂ, ಅಶುದ್ಧಾತ್ಮಗಳ ಆಶ್ರಯವೂ, ಅಪವಿತ್ರವಾಗಿಯೂ, ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಆಶ್ರಯವೂ ಆದಳು" ಎಂಬ ಸಂದೇಶವು ಹೊರಡುತ್ತದೆ (ಪ್ರಕಟನೆ 18:2).

ಪತನ, ಪಿಡುಗುಗಳು ಮತ್ತು ನಾಶನ ಮುಂತಾದವುಗಳು ಸಾಂಕೇತಿಕ ಬಾಬೇಲಿನ ಮೇಲೆ ಬರುವುದೆಂದು ಮುಂತಿಳಿಸಲಾಗಿದೆ. ಯಾವುದರಲ್ಲಿ ಆಪತ್ತು ಮತ್ತು ರಾಷ್ಟ್ರೀಯ ನಾಶನಗಳು ಶಾರೀರಿಕ ಇಸ್ರಾಯೇಲ್ಯರ ಮೇಲೆ ಬಂತೋ ಅದು ಆ ದೇಶದ ಸಂಪೂರ್ಣ ಪರಾಭವದೊಡನೆ ಕ್ರಿ.ಶ. 70ರಲ್ಲಿ ಮುಕ್ತಾಯಗೊಂಡಿದೆ. ಮತ್ತು ಪತನದ ಅವಧಿಯು ಕೂಡಾ ಅನುಗುಣವಾಗಿದೆ. ನಮ್ಮ ಕರ್ತನು ಆ ಸಮಯದಿಂದ, ಕ್ರಿ.ಶ. 33ರಿಂದ ಕ್ರಿ.ಶ. 70ರವರೆಗೆ 36½ ವರ್ಷದವರೆಗೆ "ನಿಮ್ಮ ಆಲಯವು ನಿಮಗೆ ಬರಿದಾಗಿಬಿಟ್ಟದೆ" (ಮತ್ತಾಯ 23:38) ಎಂದು ಹೇಳುತ್ತಾನೆ. ಅದರಂತೆ 1878ನೇ ಏಪ್ರಿಲ್‌ನಿಂದ 1914ರ ಅಕ್ಟೋಬರ್ ವರೆಗೆ 36½ ವರ್ಷಗಳು ದೇವರು ಬಾಬೇಲ್ ಎಂದು ಕರೆಯುವ, ಜನರು ಕ್ರೈಸ್ತ ಪ್ರಪಂಚ ಎಂದು ಕರೆಯುವುದು ಅಳಿದು ಹೋಗಲು ಪ್ರಾರಂಭಿಸುತ್ತದೆ ಎಂದು ಈಗಾಗಲೇ ಪ್ರವಾದನೆಯಿಂದ ತೋರಿಸಲಾಗಿದೆ.

ಯೆಹೂದಿ ಧರ್ಮವು (ಜೂಡಾಯಿಸಂ) ದೇವರಿಂದ ನೇಮಿತವಾದ ಸಹಸ್ರಮಾನದ ದೇವರ

ರಾಜ್ಯದ ನಮೂನೆಯಾಗಿದ್ದು ಎಲ್ಲಾ ಸಂಗತಿಗಳನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಂಡು ಅದನ್ನು ಕ್ರಮಪಡಿಸುತ್ತದೆ. ಹೀಗಾಗಿ ಯೆಹೂದಿ ಧರ್ಮವು ಯೋಗ್ಯರೀತಿಯಲ್ಲಿ ಸಭೆ ಮತ್ತು ರಾಜ್ಯದ ಸಂಯೋಗವಾಗಿದೆ. ಆದರೆ, ನಾವಾಗಲೇ ತೋರಿಸಿದಂತೆ ಸುವಾರ್ತಾ ಸಭೆಯು ಯಾವುದೇ ಅರ್ಥದಲ್ಲಿ ಅದರೊಂದಿಗೆ ಭಾಗಿಯಾಗುವುದಿಲ್ಲ, ಅಥವಾ ಅದರೊಂದಿಗೆ, ಕ್ರಿಸ್ತನು, ರಾಜಾಧಿರಾಜನಾಗಿ ಬಂದು ತನ್ನ ನಿಯಂತ್ರಣದಲ್ಲಿರಿಸಿಕೊಂಡು ಅದನ್ನು ತನ್ನ ಮದಲಗಿತ್ತಿಯಾಗಿಸಿ ಆ ನೀತಿವಂತಿಕೆಯ ಆಳ್ವಿಕೆಯಲ್ಲಿ ಪಾಲುದಾರರಾಗುವಂತೆ ಉನ್ನತಕ್ಕೆ ಏರಿಸುವವರೆಗೆ ಈ ಲೋಕದ ಸರಕಾರದೊಂದಿಗೆ ಏನನ್ನೂ ಮಾಡುವುದೂ ಇಲ್ಲ. ಆದರೆ ಕ್ರೈಸ್ತ ಪ್ರಪಂಚವೆಂದು ಕರೆದುಕೊಳ್ಳುವ ಮಹಾವ್ಯವಸ್ಥೆಯು, ದೇವರ ಮಾತುಗಳನ್ನು ಅಲಕ್ಷಿಸಿ, ಮಾನವ ಜ್ಞಾನವನ್ನು, ವಿಚಾರಣಾ ಸರಣಿಗಳನ್ನು ಮತ್ತು ಯೋಜನೆಗಳನ್ನು, ಎಲ್ಲಾ ಸರ್ಕಾರಗಳನ್ನೂ ಅವರ ಮತಾಭಿಪ್ರಾಯಗಳನ್ನು ಆಲಂಗಿಸುವವರಾಗಿ, ಕ್ರಿಸ್ತನದೆಂದು ಹೇಳಿಕೊಳ್ಳುವುದು. ಆದರೆ ನಿಜವಾದ ಕ್ರಿಸ್ತನ ರಾಜ್ಯದ ತಿರಸ್ಕರಣೀಯವಾಗಿ ನಕಲಿಯಾಗಿರುವ ಹಾಗೂ ಸಮಯಕ್ಕೆ ಮೊದಲೇ ಕರ್ತನಿಲ್ಲದೆ ಸಂಘಟಿಸಲ್ಪಟ್ಟ ಮತ್ತು ಪೂರ್ಣವಾಗಿ ಅಯೋಗ್ಯವಾದ ಎಲ್ಲಾ ಮತಾಭಿಪ್ರಾಯ ಗಳನ್ನೂ ಆಲಂಗಿಸಿಕೊಳ್ಳುತ್ತದೆ. ಆದುದರಿಂದ, ಬಾಬೇಲಿನ ಪತನವನ್ನು ಒಂದು ಅನರ್ಹ ಸಭೆ–ಸರ್ಕಾರದ ಪದ್ದತಿಯಾಗಿ ಮತ್ತು ಗೋಧಿಯ ಅರ್ಹತೆಯ ಹೊರಗೆ ಶೇಖರಿಸಲ್ಪಟ್ಟದ್ದಾಗಿ ಯೆಹೂದಿ ಧರ್ಮದ ಪತನದಿಂದ ಉತ್ತಮವಾಗಿ ನಿರೂಪಿಸ ಬಹುದಾಗಿದೆ.

ಬಾಬೇಲ್ ಎಂಬ ಹೆಸರು ಮೂಲದಲ್ಲಿ 'ದೇವರ ಹೆಬ್ಬಾಗಿಲನ್ನು' ಸಂಕೇತಿಸುವುದಾಗಿತ್ತು; ನಂತರದಲ್ಲಿ ಪರಿಹಾಸ್ಯಮಾಡುವಂತೆ ಅದನ್ನು 'ತಾರುಮಾರು' (mixture or confusion) ಎಂದು ಕರೆಯಲಾಯಿತು. ಪ್ರಕಟನೆಯ ಪುಸ್ತಕದಲ್ಲಿ ಈ ಹೆಸರನ್ನು ವಿಶಿಷ್ಟವಾಗಿ ಹೆಸರುಮಾತ್ರದ ಸಭೆಗೆ ಅನ್ವಯಿಸಲಾಗುತ್ತದೆ. ಅದು 'ಮಹಿಮೆಯ ಹೆಬ್ಬಾಗಿಲಾಗಿದ್ದರೂ, ತಪ್ಪುಗಳಿಗೂ ಮತ್ತು ಗೊಂದಲಗಳಿಗೂ ಹೆಬ್ಬಾಗಿಲಾಯಿತು. ಇದೊಂದು ದುಃಖಕರವಾದ ಮಿಶ್ರಣವಾಗಿದ್ದು ಮುಖ್ಯವಾಗಿ ಹಣಜಿಗಳು ಮತ್ತು ಕಪಟಿಗಳ ಮಿಶ್ರಣದಿಂದ ರಚಿತವಾದ ಲೌಕಿಕ ಉದ್ಯೋಗದ ಗೊಂದಲಮಯ ಸಮೂಹವಾಗಿದ್ದು ಇದರಲ್ಲಿ ಕರ್ತನ ಆಭರಣಗಳು ಹೂಣಲ್ಪಡುತ್ತಿವೆ ಮತ್ತು ಅದರ ನಿಜವಾದ ಸೌಂದರ್ಯ ಮತ್ತು ಹೊಳಪು ಮುಚ್ಚಿಹೋಗಿದೆ. ಸಾಂಕೇತಿಕ ಪ್ರವಾದನೆಯಲ್ಲಿ, ಬಾಬೇಲ್ ಎಂಬ ಪದವು ಕೆಲವೊಮ್ಮೆ "ಮಹಾ ಬಾಬೇಲ್" "ವೇಶ್ಯೆಯರ ತಾಯಿ" ಎಂದು ಕರೆಯಲ್ಪಡುವ ರೋಮಿನ ಸಭೆಗೆ ಮಾತ್ರವೇ ಅನ್ವಯವಾಗುತ್ತದೆ. ಈ ಹೆಸರು ಅದಕ್ಕೆ ಮಾತ್ರವೇ ಶತಮಾನ ಕಾಲಗಳಿಂದ ಅದೊಂದು ಮಿಶ್ರಣ ವ್ಯವಸ್ಥೆಯಾಗಿರುವವರೆಗೆ ಅನ್ವಯವಾಗುತ್ತಿದೆ. ಅದು ಯಾರನ್ನೂ ಸಹಿಸುವುದಿಲ್ಲ. ಆದರೆ, ಇತರೆ ಕ್ರೈಸ್ತಸಭಾ ವ್ಯವಸ್ಥೆಗಳು –, ತಾಯಿಯಷ್ಟು ಹೆಚ್ಚಲ್ಲವಾದರೂ, ಇನ್ನೂ ಅಷ್ಟೊಂದು ಕೆಟ್ಟುಹೋಗಿಲ್ಲವಾದರೂ ಅಥವಾ ಮಹತ್ವವಾಗಿ ತಪ್ಪಾಗಿಲ್ಲವಾದರೂ, ವಿವಿಧ ಅಸಮರ್ಪಕವಾದ ಸುಧಾರಣಾ ಪ್ರಯತ್ನಗಳಿಂದ ಆಕೆಯಿಂದ ಹೊರಹೊಮ್ಮಿದೆ. ಇವುಗಳಲ್ಲಿ ತಪ್ಪುಗಳು, ಹಣಜಿಗಳು ಮತ್ತು ಲೌಕಿಕತೆಗಳು ಹೆಚ್ಚಾಗಿ ಪ್ರಬಲಗೊಳ್ಳುತ್ತಿವೆ. ಬಾಬೇಲ್ ಎಂಬ ಹೆಸರು ಸಾಮಾನ್ಯವಾಗಿ ಅಥವಾ ಕುಟುಂಬದ ಹೆಸರಾಗಿ ಎಲ್ಲಾ ನಾಮಾಂಕಿತ ಕ್ರೈಸ್ತ ವ್ಯವಸ್ಥೆಗಳಿಗೂ ಉಪಯೋಗಿಸಿದೆ. ಈಗ ಅದು ರೋಮಿನ ಸಭೆಯನ್ನು ಮಾತ್ರವಲ್ಲ ಎಲ್ಲಾ ಪ್ರೊತಸ್ತಾಂತ ಪಂಗಡಗಳನ್ನೂ ಒಳಗೊಂಡಿದೆ. ಪೋಪನ ಅಧಿಕಾರವನ್ನು 'ಮಾತೃ ಪದ್ದತಿ' ಎಂದು ಹೆಸರಿಸಿದೆ. ಆದ್ದರಿಂದ, ನಾವು ಆಕೆಯಿಂದ ಉತ್ಪನ್ನಗೊಂಡ ವಿವಿಧ ಪ್ರೊತಸ್ತಾಂತ ಪದ್ಧತಿಗಳನ್ನು ಆಕೆಯ ಪುತ್ರಿಯರು ಎಂಬುದಾಗಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ – ಈ ಸತ್ಯವನ್ನು ಪ್ರೊತಸ್ತಾಂತ ಸಭೆಗಳು ಸಾಮಾನ್ಯವಾಗಿ, ಕೆಲವೊಮ್ಮೆ ಹೆಮ್ಮೆಯಿಂದ ಒಪ್ಪಿಕೊಳ್ಳುತ್ತಾರೆ.

ಸುಗ್ಗಿಯ ಸಮಯದ ಹಿಂದೆ, ಅನೇಕ ದೇವ ಜನರು, ಗಮನೀಯವಾಗಿ The Waldenses, The Huguenots ಮತ್ತು ಹದಿನಾರನೆಯ ಶತಮಾನದ ಸುಧಾರಕರುಗಳು ಆಕೆಯನ್ನು ಮಹಾ ಬಾಬೇಲಿನಲ್ಲಿ ಸಾಂದ್ರತೆಯಿಂದೊಡಗೂಡಿದ ಕ್ರಿಸ್ತವಿರೋಧಿಗಳು ಎಂಬ ಆಕೆಯ ನಿಜವಾದ ಪ್ರಧಾನ ಗುಣವನ್ನು ಕಂಡುಹಿಡಿದರು. ಈ ಸತ್ಯಕ್ಕೆ ಗಮನ ಸೆಳೆಯುವಂತೆ, ಅವರು ಮಾತೃವ್ಯವಸ್ಥೆಯಿಂದ ಪ್ರತ್ಯೇಕಿಸಲ್ಪಟ್ಟರು ಮತ್ತು ಅವರೊಂದಿಗೆ ಇತರರನ್ನೂ ಮುನ್ನಡೆಸಿದರು. ಪ್ರವಾದಿಯು "ಆ ಮೇಲೆ ಬಹಳ ಮಂದಿ ನಯವಾದ ನುಡಿಗಳನ್ನಾಡುತ್ತಾ ಅವರನ್ನು ಸೇರಿಕೊಳ್ಳುವರು" (ದಾನಿ. 11:34) ಎಂದು ಮುಂತಿಳಿಸಿದಂತೆ, ಅವರಲ್ಲಿ ಅನೇಕ ಹಣಜಿಗಳೂ ಇದ್ದರು. ಇಲ್ಲಿ ಸುಗ್ಗಿಯ ಮೊದಲು ರಾಜಕೀಯ–ಸಿದ್ಧಾಂತಗಳ ಕ್ಷೋಭೆಯ (Politico doctrinal storms) ಬೇರ್ಪಡಿಸುವಿಕೆಯೂ ಇತ್ತು. ಇವುಗಳಲ್ಲಿ ಹಣಜಿಯು ಇನ್ನೂ ಪ್ರಧಾನವಾಗಿದ್ದು ಆದರೆ ಕಡಿಮೆ ಆಕ್ಷೇಪಣೆಗಳುಳ್ಳ ಬಾಬಿಲಿನ ಮತ್ತೊಂದು ಪದ್ಧತಿಯನ್ನು ರೂಪಿಸಿತು.

ಈ ರೀತಿಯಲ್ಲಿ ಗೋದಿಯು ಕಾಲಕಾಲಕ್ಕೆ ಹಣಜಿಯ ದುಃಸ್ವಪ್ನದಿಂದ, (ವಿಶೇಷವಾಗಿ ಅದು ಬೆಳೆಸುವ ಸಾಂದ್ರವುಳ್ಳ ತಪ್ಪುಗಳನ್ನು ಆದರಿಸಿ ಹಣಜಿಗಳನ್ನು ಉತ್ಪಾದಿಸಿದವುಗಳಿಂದ) ಬಿಡುಗಡೆ ಹೊಂದಲು ಶ್ರಮಿಸುತ್ತಿದ್ದರೂ ಅದರ ಪ್ರಯತ್ನಕ್ಕೆ ಆಶೀರ್ವಾದ ಸಿಕ್ಕಿದರೂ, ಅವರು ಇನ್ನೂ ಸಹ ವಿಶಾಲವಾಗಿ ಪ್ರಬಲವಾಗಿರುವ ಹಣಜಿ ಮೂಲವಸ್ತುವಿನ ಪ್ರಭಾವದಲ್ಲೇ ಸಿಲುಕಿಕೊಂಡಿದ್ದರು. ಆದರೆ, ಗೋಧಿಯ ಸಲುವಾಗಿ, ದೇವರ ಕೃಪೆಯು ಈ ಮಿಶ್ರಿತ ಗೊಂಚಲುಗಳಿಗೆ ಅಥವಾ ಬಾಬೇಲಿನ ಪದ್ಧತಿಗಳಿಗೆ ವಿಸ್ತರಿಸಿತು. ಆದರೆ, ಅದು 1878ರ ಸುಗ್ಗಿ ಸಮಯದಲ್ಲಿ ದೇವರು ಪೂರ್ಣವಾದ ಮತ್ತು ಅಂತಿಮ ಪ್ರತ್ಯೇಕತೆಯನ್ನು ತರುವ ತನಕ ಪರಿಣಾಮ ಬೀರಲಿಲ್ಲ. ಆಗ ಆ ಪದ್ಧತಿಗಳು ಪೂರ್ಣವಾಗಿ ಸದಾಕಾಲಕ್ಕೆ ಎಲ್ಲಾ ಕೃಪೆಯಿಂದ ಹೊರಹಾಕಲ್ಪಟ್ಟಿತು ಮತ್ತು ತೀವ್ರತರವಾದ ನಾಶನದ ಶಿಕ್ಷೆಹೊಂದಿತು. ಮತ್ತು ದೇವಜನರು ಸ್ಪಷ್ಟವಾಗಿ ಮತ್ತು ಅತ್ಯಗತ್ಯವಾಗಿ ಅವರಿಂದ ಹೊರಬಂದರು. ಯುಗದ ಪ್ರಾರಂಭದಲ್ಲಿಯೇ, ದೇವಜನರನ್ನು ಕ್ರಿಸ್ತವಿರೋಧಿಯ ವಂಚನೆಗಳ ಬಗ್ಗೆ ಎಚ್ಚರಿಸಲಾಗಿದ್ದು ಅವರಿಂದ ಪ್ರತ್ಯೇಕವಾಗುವಂತೆ ಕಲಿಸಿಕೊಡಲಾಗಿತ್ತು. ಆದಾಗ್ಯೂ, ಅವರ ಪರೀಕ್ಷೆ ಮತ್ತು ಶೋಧನೆಗಳಿಗೆ ಅವರುಗಳು ಮೋಸ ಹೋಗುವ ಮಟ್ಟದಲ್ಲಿ ಮತ್ತು ಹೆಚ್ಚು ಕಡಿಮೆ ಅದರಲ್ಲಿ ಮಿಶ್ರವಾಗುವಂತೆ ಅನುಮತಿಸಲಾಗಿತ್ತು. ಕ್ರಿಸ್ತೀಯವಲ್ಲದ ವಿಚಾರಸರಣಿಗಳು ಮತ್ತು ಸಿದ್ಧಾಂತಗಳ ಗ್ರಹಿಕೆಯ ಬಗ್ಗೆ ಮಾಡಿದ ಪ್ರತಿಯೊಂದು ಎಚ್ಚರಿಕೆಯೂ ಸುಧಾರಣಾ ಮಟ್ಟಕ್ಕೆ ನಡೆಸಿದವು ಮತ್ತು ಗೋಧಿ ವರ್ಗದವರನ್ನು ಪರೀಕ್ಷಿಸಿ ರುಜುವಾತುಪಡಿಸಿದವು ಮತ್ತು ತಮ್ಮನ್ನು ಹೆಚ್ಚು ಹೆಚ್ಚಾಗಿ ಕ್ರಿಸ್ತವಿರೋಧಿಯಿಂದ ಶುದ್ಧೀಕರಿಸಿಕೊಳ್ಳುವಂತೆ ಸಹಾಯಮಾಡಿತು. ಆದರೆ ಈ ಕಡೆಯ ಪರೀಕ್ಷೆ ಮತ್ತು ಸಕಾರಾತ್ಮಕ ಕರೆಯು ಆ ವ್ಯವಸ್ಥೆಯು ಸ್ಪಷ್ಟವಾದ ನಿರಾಕರಣೆಯೊಂದಿಗೆ ಜೊತೆಗೂಡಿದ್ದು ಅವರೊಂದಿಗೆ ಗೋಧಿ ಇದ್ದಾಗ ಪಡಕೊಳ್ಳುತ್ತಿದ್ದ ದೇವರ ಕೃಪೆಯನ್ನು ಇನ್ನು ಮುಂದೆ ಹೊಂದಿಕೊಳ್ಳುವ ಹಾಗಿರಲಿಲ್ಲ. ಮತ್ತು ಇದು ಎಲ್ಲಾ ಕ್ರೈಸ್ತವಿರೋಧಿ ಪದ್ಧತಿಗಳಿಂದ ಮತ್ತು ವಿಚಾರ ಸರಣಿಗಳಿಂದ ಅಂತಿಮ ಪ್ರತ್ಯೇಕತೆಯಾಗಿತ್ತು. ಆ ಹಳೆಯ ಪದ್ಧತಿಗಳು ಈ ಹಿಂದೆ ಹೊಂದಿಕೊಂಡಿದ್ದ ಸತ್ಯಗಳನ್ನು ಈಗ ತ್ವರಿತವಾಗಿ ಅವರಿಂದ ಗುಡಿಸಿಹಾಕಲಾಯಿತು, ಮಾನವನ ವಿಚಾರಸರಣಿಗಳಿಂದ ಸ್ಥಳಾಂತರಿಸಲ್ಪಟ್ಟಿತು. ಅವು ದೈವಿಕ ಸತ್ಯದ ಎಲ್ಲಾ ಅಂಶಗಳನ್ನೂ ಬುಡಮೇಲು ಮಾಡುವುದಾಗಿತ್ತು ಮತ್ತು ಮಹತ್ವವಾದ ದೈವತ್ವ ಮತ್ತು ದೈವಭಕ್ತಿಯು ತ್ವರಿತವಾಗಿ ಈ ಲೋಕದ ಸಂತೋಷ ಮತ್ತು ಉತ್ಸಾಹಗಳಿಂದ ಸ್ಥಳಾಂತರಗೊಳ್ಳುವುದಾಗಿತ್ತು.

"ಬಾಬೇಲ್ ಬಿದ್ದುಹೋಯಿತು" ಎಂಬ ಘೋಷಣೆಯೊಡನೆ ಆಕೆಯಲ್ಲಿ ಇನ್ನೂ ಇರುವ ದೇವಜನರಿಗೆ ಹೊರಬರುವಂತೆ ಒಂದು ಆಜ್ಞೆ ಸಹಾ ಬರುತ್ತದೆ – ಪರಲೋಕದಿಂದ ಬಂದ ಮತ್ತೊಂದು ಶಬ್ದವನ್ನು ಕೇಳಿದೆನು – "ನನ್ನ ಪ್ರಜೆಗಳೇ ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪದಲ್ಲಿ ಪಾಲುಗಾರ ರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು" (ಪ್ರಕಟನೆ 18:4). "ಬಾಬೇಲ್ ಬಿದ್ದಿತು, ನನ್ನ ಪ್ರಜೆಗಳೇ ಆಕೆಯನ್ನು ಬಿಟ್ಟುಬನ್ನಿರಿ" ಎಂಬ ಹೇಳಿಕೆಯು ನಿಜವಾಗಿ ಎರಡು ಆಲೋಚನೆಗಳನ್ನು ಗುರುತಿಸುತ್ತದೆ ಮತ್ತು ಅವುಗಳನ್ನು ಸುಸ್ಪಷ್ಟವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಅದು ಸೂಚಿಸುವುದೇನೆಂದರೆ, ಒಂದು ಸಮಯದಲ್ಲಿ ಬಾಬೇಲ್ ದೇವರ ಕೃಪೆಯಿಂದ ಬಿದ್ದುಹೋಗಿರಲಿಲ್ಲ; ಕೆಲವು ಸಮಯದವರೆಗೆ ಆಕೆಯು ಕೃಪೆಯ ಒಂದು ಮಟ್ಟವನ್ನು ಕಾಪಾಡಿಕೊಂಡಿದ್ದಳು. ಆದಾಗ್ಯೂ, ಆಕೆಯ ಮಿಶ್ರಗುಣವನ್ನು ತಡೆದುಕೊಳ್ಳಲಾಗದಿದ್ದರೂ, ಆಕೆಯು ಹಿಡಿದಿದ್ದ ತಪ್ಪಿನ ಪ್ರಮಾಣವು ಎಷ್ಟೇ ದೊಡ್ಡದಾಗಿದ್ದರೂ, ಕ್ರಿಸ್ತನ ಕೃಪೆಯು ಸ್ವಲ್ಪಮಟ್ಟಿಗೆ ಮಾತ್ರವೇ ಪ್ರಕಟಗೊಂಡಾಗ್ಯೂ ಆಕೆಯನ್ನು ಸುಗ್ಗಿಯ ಪ್ರತ್ಯೇಕತಾ ಕಾಲ ಬರುವವರೆಗೆ ದೇವರ ಕೃಪೆಯಿಂದ ಸಂಪೂರ್ಣವಾಗಿ ಹೊರ ಹಾಕಿರಲಿಲ್ಲ. ಒಂದು ಸಮಯದಲ್ಲಿ ಎಲ್ಲಾ ಕೃಪೆಗಳೂ ಸದಾಕಾಲಕ್ಕೂ ನಿಂತುಹೋಗುವಾಗ ಫಕ್ಕನೇ ಮತ್ತು ತೀವ್ರತರವಾದ ತಿರಸ್ಕಾರವು ಬಾಬೇಲಿನ ಮೇಲೆ ಬರುವುದಾಗಿದೆ ಎಂದು ಅದು ಸೂಚಿಸುತ್ತದೆ. ಮತ್ತು ನ್ಯಾಯತೀರ್ಪುಗಳು ಅದನ್ನು ಅನುಸರಿಸುವಾಗ, ನಾವು ತೋರಿಸಿದಂತೆ ಒಂದು ನಿರಾಕರಣೆ 1878ರಲ್ಲಿ ಬರುವುದು ಯುಕ್ತವಾಗಿದೆ. ಅದು ಮತ್ತೂ ಸೂಚಿಸುವುದೇನೆಂದರೆ, ಬಾಬೇಲಿನ ನಿರಾಕರಣೆಯ ಸಮಯದಲ್ಲಿ ಅನೇಕ ದೇವರ ಜನರು ಬಾಬೇಲಿನೊಂದಿಗೆ ಜೊತೆಗೂಡಿರುತ್ತಾರೆ; ಆದರೆ ಬಾಬೇಲಿನ ನಿರಾಕರಣೇಯ ನಂತರದಲ್ಲಿ, ಅಥವಾ ಕೃಪೆಯಿಂದ ಬಿದ್ದುಹೋದ ನಂತರದಲ್ಲಿ ಅವರಿಗೆ "ನನ್ನ ಜನರೇ, ಬಾಬೇಲನ್ನು ಬಿಟ್ಟು ಬನ್ನಿರಿ" ಎಂಬ ಕರೆಬರುತ್ತದೆ.

ಕಳೆದ ನಾನೂರು ವರ್ಷಗಳಲ್ಲಾದ ಅನೇಕ ಹಂತಹಂತವಾದ ಸುಧಾರಣಾ ಚಳುವಳಿ ಮತ್ತು ಈಗಿನ ಅಂತಿಮವಾದ ಸಂಪೂರ್ಣ ಬೇರ್ಪಡಿಸುವಿಕೆ ಇವುಗಳ ವ್ಯತ್ಯಾಸವನ್ನು ಸ್ಪಷ್ಟವಾಗಿ ಗ್ರಹಿಸಿಕೊಳ್ಳತಕ್ಕದ್ದು. ಅವರುಗಳು ಬಾಬೇಲನ್ನು ಸುಧಾರಿಸುವ ಪ್ರಯತ್ನಗಳಿಗೆ

ಅನುಮತಿಸಲಾಗಿತ್ತು. ಆದರೆ, ಆಕೆಯು ಈ ಎಲ್ಲಾ ಸುಧಾರಣಾ ನಿರೀಕ್ಷೆಗಳಿಗೆ ಮೀರಿದವಳಾಗಿದ್ದಳು ಎಂಬುದು ಗ್ರಹಿಕೆಯಾದಾಗ "ಬಾಬೇಲು ಯೆಹೋವನ ಕೈಯಲ್ಲಿನ ಹೊನ್ನಿನ ಪಾತ್ರೆ. ಲೋಕದವರೆಲ್ಲರೂ ಅದರಲ್ಲಿ ಕುಡಿದು ಮತ್ತರಾದರು (ಆಕೆ ತಪ್ಪುಗಳಲ್ಲಿ ಮತ್ತರಾದರು); ಜನಾಂಗಗಳು ಅದರಲ್ಲಿನ ದ್ರಾಕ್ಷಾರಸವನ್ನು ಕುಡಿದು ಹುಚ್ಚಾದವು. ಬಾಬೇಲ್ ತಟ್ಟನೇ ಬಿದ್ದು ಹಾಳಾಯಿತು!. ಅದಕ್ಕಾಗಿ ಅರಚಿರಿ; ಅದರ ನೋವನ್ನು ನೀಗಿಸುವುದಕ್ಕೆ ಔಷಧವನ್ನು ಸಂಪಾದಿಸಿರಿ, ಗುಣವಾದೀತು. ಬಾಬೇಲನ್ನು ಸ್ವಸ್ಥಮಾಡುವುದಕ್ಕೆ ನಾವು ಪ್ರಯತ್ನಪಟ್ಟರೂ ಅದು ಸ್ವಸ್ಥವಾಗಲಿಲ್ಲ; ಬಾಬೇಲನ್ನು ಬಿಟ್ಟು ನಾವೆಲ್ಲರೂ ನಮ್ಮ ನಮ್ಮ ದೇಶಗಳಿಗೆ ಹೋಗೋಣ. (ಸತ್ಯ ಸಭೆಗೆ ಅಥವಾ ಲೋಕಕ್ಕೆ ಸಂದರ್ಭಕ್ಕೆ ತಕ್ಕಂತೆ, ಪ್ರತಿಯೊಬ್ಬ ವ್ಯಕ್ತಿಯ ಪ್ರಕಾರ ಗೋಧಿಯೋ, ಹಣಜಿಯೋ ಎಂದು ನಿರ್ಧಾರವಾಗುವುದು). ಅದು ಹೊಂದಬೇಕಾದ ದಂಡನೆಯು ಆಕಾಶವನ್ನು ಮುಟ್ಟುವಷ್ಟು ದೊಡ್ಡದಾಗಿದೆ, ಹೌದು ಗಗನದವರೆಗೂ ಬೆಳೆದಿದೆ" (ಯೆರೆಮೀಯ 51 : 7–9. ಇದನ್ನು ಪ್ರಕಟನೆ 17:4; 14:8; 18;2,3,5,19ರೊಂದಿಗೆ ಹೋಲಿಸಿರಿ).

ಗುಣವಾಗದ ಬಾಬೇಲು ನಾಶನದ ತೀರ್ಪನ್ನು ಹೊಂದಿಕೊಂಡಿತು; ಇಡೀ ವ್ಯವಸ್ಥೆಯು ವ್ಯವಸ್ಥೆಗಳ ರಚನೆಯು ತಿರಸ್ಕಾರಗೊಂಡಿತು. ದೇವಜನರೆಲ್ಲರೂ ಆಕೆಯ ತಪ್ಪಾದ ಸಿದ್ಧಾಂತಗಳೊಡನೆ ಮತ್ತು ಅವರ ಅಭ್ಯಾಸಕ್ರಮಗಳೊಡನೆ ಸಹಾನುಭೂತಿ ಹೊಂದಿರಲಿಲ್ಲ. ಅವರನ್ನು ಆಕೆಯಿಂದ ಪ್ರತ್ಯೇಕಗೊಳ್ಳುವಂತೆ ಮಾಡಿತು. ಪ್ರವಾದಿಯು ಈ ತಿರಸ್ಕರಣಾ ತೀರ್ಪಿಗೆ, ಮತ್ತು ಅದನ್ನು ಗ್ರಹಿಸಿಕೊಳ್ಳುವುದಕ್ಕೆ ಕೆಲವರು ಸೋತುಹೋದ ಬಗ್ಗೆ ಕಾರಣಗಳನ್ನು ನೀಡುತ್ತಾ ಹೀಗೆ ಹೇಳುತ್ತಾನೆ – "ಅಕಾಶದಲ್ಲಿ ಹಾರುವ ಬಕವೂ ತನ್ನ ನಿಯಮಿತ ಕಾಲಗಳನ್ನು ತಿಳಿದುಕೊಂಡಿದೆ, ಬೆಳವಕ್ಕಿಯೂ, ಬಾನಕ್ಕಿಯೂ, ಕೊಕ್ಕರೆಯೂ ತನ್ನ ಗಮನಾಗಮನ ಸಮಯಗಳನ್ನು ಗಮನಿಸುತ್ತವೆ; ನನ್ನ ಜನರಾದರೋ ಯೆಹೋವನ ನಿಯಮವನ್ನು ತಿಳಿಯರು. (ಅವರು ಗೋದಿಯನ್ನು ಹಣಜಿಗಳಿಂದ ಸಂಪೂರ್ಣವಾಗಿ ಮತ್ತು ಸಾದ್ಯಂತವಾಗಿ ಪ್ರತ್ಯೇಕಿಸುವ ಸುಗ್ಗಿಯ ಒಂದು ಕಾಲವೊಂದು ಬರಲಿದೆ ಎಂಬುದನ್ನು ಗ್ರಹಿಸರು. ಇದರಲ್ಲಿ ವಲಸೆ ಬರುವ ಹಕ್ಕಿಗಳಿಗಿರುವಷ್ಟು ಸೂಕ್ಷ್ಮ ದೃಷ್ಟಿಯೂ ಇವರಿಗಿಲ್ಲ). ಹೀಗಿರಲು ನಾವು ಜ್ಞಾನಿಗಳು ಯೆಹೋವನ ಧರ್ಮಶಾಸ್ತ್ರವು ನಮ್ಮಲ್ಲಿಯೇ ಇದೆ ಎಂದು (ನೀವು ಸುಗ್ಗಿಯ ಕಾಲವನ್ನು ಮತ್ತು ಈಗ ಯುಕ್ತವಾಗಿರುವ ಹಂಚಿಕೆಯ ಬದಲಾವಣೆಗಳನ್ನು ಅರಿತುಕೊಳ್ಳದಿದ್ದರೆ ) ನೀವು ಅಂದುಕೊಳ್ಳುವುದು ಹೇಗೆ? ಆಹಾ, ಶಾಸ್ತ್ರಿಗಳ ಸುಳ್ಳು ಲೇಖಣಿಗಳು ಅದನ್ನು ಸುಳ್ಳಾಗಿ ಮಾಡಿದೆ. (ಯಾಕೆಂದರೆ, ಆತನ ಪ್ರವಾದಿಗಳಿಂದ, ಅಪೋಸ್ತಲರುಗಳಿಂದ ಬಂದ ದೇವರ ಮಾತುಗಳನ್ನು ನಿರರ್ಥಕಗೊಳಿಸಲಾಗಿದೆ ಮತ್ತು ಅವುಗಳನ್ನು ಗಮನಿಸದೆ ಪಕ್ಕಕ್ಕೆ ಇಡಲಾಗಿದೆ, ಮತ್ತು ಹಿಂದಿನ "ಕತ್ತಲಯುಗ"ದಲ್ಲಿ ಮಾಡಿದ ಮತಾಭಿಪ್ರಾಯಗಳು ಕತ್ತಲಲ್ಲಿ ನಡೆಯುವ ಜನರಿಗೆ ಬೆಳಕಿಲ್ಲದ ಲಾಟೀನುಗಳಂತಿವೆ) ಜ್ಞಾನಿಗಳು (ಪಾಂಡಿತ್ಯವುಳ್ಳವರು) ಆಶಾಭಂಗಪಟ್ಟು (ಅವರು ಪ್ರೇಮದಿಂದ ಪಾಲಿಸಿಕೊಂಡು ಬಂದ ಮಾನವ ವ್ಯವಸ್ಥೆಯ ವಿಫಲತೆಯ ಕಾರಣ) ಎದೆಗುಂದಿ ಸಿಲುಕಿಕೊಂಡಿದ್ದಾರೆ; ಇಗೋ ಯೆಹೋವನ ಮಾತನ್ನು ನಿರಾಕರಿಸಿದರು; ಅವರ ಜ್ಞಾನವು ಎಷ್ಟರದು? (ಈಗ) [ಯೆಶಾಯ 29:10ರೊಡನೆ ಹೋಲಿಸಿರಿ]. ಆದುದರಿಂದ ನಾನು ಇವರ ಹೆಂಡರನ್ನು (ಸಭೆಗಳನ್ನು) ಅನ್ಯರಿಗೂ ಇವರ ಹೊಲಗದ್ದೆಗಳನ್ನು (ಶ್ರಮದ ಫಲವನ್ನು) ಆಕ್ರಮಿಸುವವರಿಗೂ ಕೊಟ್ಟುಬಿಡುವೆನು; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ (ಪ್ರತಿಯೊಬ್ಬರೂ) ಬಾಚಿಕೊಳ್ಳುತ್ತಲೇ ಇದ್ದಾರೆ; ಪ್ರವಾದಿಗಳು (ವಕ್ತಾರ) ಮೊದಲಾಗಿ ಯಾಜಕರವರೆಗೆ (ಆಡಳಿತಗಾರ) ಸಕಲರೂ ಮೋಸಮಾಡುತ್ತಾರೆ (ಯೆಶಾಯ 56:10–12; 28: 14–20ರೊಂದಿಗೆ ಹೋಲಿಸಿರಿ). ಮೇಲಾಗದಿದ್ದರೂ ಮೇಲು ಮೇಲು ಎಂದು ಹೇಳಿ (ಅವರ ಸಮಸ್ತ ವ್ಯವಸ್ಥೆಯು ದುರವಸ್ಥೆಯುಳ್ಳದ್ದಾಗಿರುವಾಗ, ಅದರ ಸಾಧ್ಯಂತವಾದ ಶುದ್ಧೀಕರಣವು ದೇವರ ವಾಕ್ಯ ಮತ್ತು ಸತ್ಯದಿಂದ ಆಗಬೇಕಾಗಿರುವಾಗ) ನನ್ನ ಪ್ರಜೆಯೆಂಬಾಕೆಯ (ಹೆಸರು ಮಾತ್ರದ ಚಿಯೋನ್, ಬಾಬೇಲ್) ಗಾಯವನ್ನು ಮೇಲೆ ಮೇಲೆ ವಾಸಿಮಾಡಿದ್ದಾರೆ. ಅಸಹ್ಯ ಕಾರ್ಯಗಳನ್ನು ಮಾಡಿ ಅವಮಾನಕ್ಕೆ ಗುರಿಯಾದರೂ ಎಳ್ಳಷ್ಟೂ ನಾಚಿಕೆಪಡಲಿಲ್ಲ, ಲಜ್ಜೆಯ ಗಂಧವನ್ನೂ ತಿಳಿಯಲಿಲ್ಲ; ಆದಕಾರಣ ನಾನು ದಂಡಿಸುವ ಸಮಯದಲ್ಲಿ (ದಂಡಿಸುವ ಸಮಯ–ಸುಗ್ಗಿಯಲ್ಲಿ, Time of Visitation) (ಅವರು (ಬೋಧಕರುಗಳು) ಮುಗ್ಗರಿಸುವರು, ಬೀಳುವವರ ಸಂಗಡ ಬಿದ್ದೇ ಹೋಗುವರು ಎಂದು ಯೆಹೋವನು ಅನ್ನುತ್ತಾನೆ. ನಾನು ಇವರನ್ನು ನಿರ್ಮೂಲ ಮಾಡಿಯೇ ಬಿಡುವೆನು. ದ್ರಾಕ್ಷೆಯ ಬಳ್ಳಿಯಲ್ಲೂ ಅಂಜೂರದ ಮರದಲ್ಲಿಯೂ ಹಣ್ಣಿರುವುದಿಲ್ಲ, ಎಲೆಯು ಬಾಡುವುದು; ನಾನು ಹಾಳು ಮಾಡುವವರನ್ನು ಅವರಿಗೆ ನೇಮಿಸುವೆನು (ಎಲ್ಲಾ ಕೃಪೆಗಳೂ, ಸವಲತ್ತುಗಳೂ ಇಲ್ಲವಾಗುವುವು). ಇದು ಯೆಹೋವನ ನುಡಿ" (ಯೆರೆಮೀಯ 8: 7–13).

ಮುಂದೆ ಬರುವ ವಚನವು ನಿರಾಕರಣೆ ಹೊಂದಿದ ಅನೇಕರು ಬರುವ ತೊಂದರೆಗಳನ್ನು ಗ್ರಹಿಸಿಕೊಳ್ಳುತ್ತಾರೆ, ಆದಾಗ್ಯೂ ತಮ್ಮ ನಿಜವಾದ ಕಾರಣಕ್ಕೆ ಕುರುಡರಾಗಿತ್ತಾರೆ ಎಂಬುದನ್ನು ತೋರಿಸುತ್ತದೆ. "ನಾವು ನಮ್ಮಷ್ಟಕ್ಕೇ ಒಗ್ಗಟಾಗಿರೋಣ ಮತ್ತು ನಮ್ಮನ್ನು ಬಲವಾದ ನಗರಗಳಲ್ಲಿ (ಸರ್ಕಾರಗಳಲ್ಲಿ) ಭದ್ರಪಡಿಸಿಕೊಂಡು ಮೌನವಾಗಿರೋಣ" ಎಂದು ಹೇಳುತ್ತಾರೆ. ಅವರು ತಮ್ಮ ಕಾರಣ ಅಥವಾ ದೇವರ ಪರಿಶುದ್ಧ ಗ್ರಂಥವು ತಮ್ಮ ಸುಳ್ಳು ಸಿದ್ಧಾಂತಗಳನ್ನು ಬೆಂಬಲಿಸುವುದಿಲ್ಲ ಎಂಬುದನ್ನೂ ಮತ್ತು ಹಳೆಯ ಮೂಢನಂಬಿಕೆಗಳ ಅಡಿಯಲ್ಲಿ ಮತ್ತು ಕ್ರೈಸ್ತ ಸರ್ಕಾರಗಳು ಎಂದು ಹೇಳಿಕೊಳ್ಳುವ ಸರ್ಕಾರಗಳ ಅಡಿಯಲ್ಲಿ ಸುಮ್ಮನಿರುವುದು ಅತ್ಯಂತ ಜಾಣತನವೆಂದು ಎಂದು ಹೇಗೋ ತಿಳಿದಿರುತ್ತಾರೆ. ಇಲ್ಲಿ ಅವರು ಬಹಳ ಸತ್ಯವಾಗಿ "ದೇವರು ನಮ್ಮನ್ನು ನಮ್ಮನ್ನು ಮೌನವಾಗಿರಿಸಿದ್ದಾನೆ, ಮತ್ತು ಕಹಿಯಾದ ವಿಷಪೂರಿತ ನೀರನ್ನು ಕುಡಿಯುವುದಕ್ಕೆ ಕೊಟ್ಟಿದ್ದಾನೆ" ಎಂದು ಹೇಳುವಂತೆ ಪ್ರತಿನಿಧಿಸಲ್ಪಟ್ಟಿದ್ದಾರೆ. ಅವರು ಹೊಂದಿರುವ ಒಂದೇ ಅಲ್ಪಾಹಾರವೆಂದರೆ, ಜೀವಕರವಾದ ಶುದ್ಧನೀರಿನಿಂದ, ದೇವರ ವಾಕ್ಯದ ಸತ್ಯದೊಡನೆ ಬೆರೆಸಿದ ಕಹಿಯಾದ ವಿಷಮಿಶ್ರಿತವಾದ ತಪ್ಪುಗಳು ಅಂದರೆ 'ದೆವ್ವಗಳ ಸಿದ್ಧಾಂತಗಳನ್ನೊಳಗೊಂಡ ಪಾತ್ರೆ', 'ಬಾಬೇಲನ್ನು ಪ್ರೀತಿಸುವವರಾಗಿರುವ ಕಾರಣ, ಆಕೆಯಿಂದ ಹೊರಬನ್ನಿ' ಎಂಬ ಆಜ್ಞೆಯನ್ನೂ ಪಾಲಿಸಲು ಸಿದ್ಧವಿಲ್ಲದಿರುವ ಅಂಥವರನ್ನು ತಮ್ಮ ಸ್ವಂತದ್ದೇ ಆದ ಮಿಶ್ರಣವನ್ನು ಕುಡಿಯಲು ಒತ್ತಾಯಿಸಬಾರದೇ? ಅಂಥವರನ್ನು ಅವರ ಸಿದ್ಧಾಂತಗಳ ತಪ್ಪುಗಳನ್ನು ಒಪ್ಪಿಕೊಳ್ಳುವಂತೆ ಒತ್ತಾಯ ಮಾಡಬಾರದೇ? ಅವರನ್ನು ಖಂಡಿತವಾಗಿಯೂ ಹಾಗೆಯೇ ಮಾಡುವರು. ಮತ್ತು ಅವರು ಇದರಿಂದ ಸಾಧ್ಯಂತವಾಗಿ ಹೇಸಿಕೆಪಟ್ಟುಕೊಂಡವರಾಗಿದ್ದಾರೆ. ಮುಂದಿನ ವಾಕ್ಯವು ಅವರ ನಿರೀಕ್ಷೆಯ ಬಗ್ಗೆ ಉಂಟಾಗುವ ನಿರಾಶೆಯನ್ನು ತಿಳಿಸುತ್ತದೆ. ಅವುಗಳು ಅವರ ಕಹಿಯಾದ (ವಿಷಪೂರಿತವಾದ ನೀರು) ಸಿದ್ಧಾಂತಗಳಾಗಿದ್ದು ಪ್ರಪಂಚವನ್ನೇ ಪರಿವರ್ತಿಸಿ ಸಹಸ್ರಮಾನವನ್ನುಂಟು ಮಾಡುತ್ತದೆ. ಅವರು "ನಾವು ಶಾಂತಿಯನ್ನು ಹುಡುಕುತ್ತೇವೆ, ಆದರೆ ಯಾವ ಒಳ್ಳೆಯವುಗಳೂ ಬರುತ್ತಿಲ್ಲ ಮತ್ತು ಆರೋಗ್ಯದ ಸಮಯಕ್ಕಾಗಿ ಹುಡುಕುತ್ತೇವೆ", ಆದರೆ, "ಇಗೋ, ಆಪತ್ತು!", ಹೆಸರು ಮಾತ್ರದ (ನಾಮಾಂಕಿತ) ಚಿಯೋನಿನ ರೋಗವು ತ್ವರಿತವಾಗಿ ಹೆಚ್ಚುತ್ತಿದೆ , ಆಕೆಯು ದಂಡಿಸುವ ಸಮಯ ಮತ್ತು ತಿರಸ್ಕಾರಗೊಂಡ ಸಮಯಕ್ಕಿಂದ ಬಹಳ ಕೆಟ್ಟದಾಗಿದೆ ಎಂದು ಹೇಳುತ್ತಾರೆ, ಆಗ 'ನಿಜವಾಗಿ ಇಸ್ರಾಯೇಲ್ಯರು' ದೇವರ ಕರೆಗೆ ವಿಧೇಯರಾಗಿ ನಾಮಾಂಕಿತ ಪದ್ಧತಿಗಳಿಂದ ಹೊರಬರಲು ಪ್ರಾರಂಭಿಸುತ್ತಾರೆ.

ಕೆಲವರು, ದೇವರು ಯಾಕೆ ನಿಷ್ಪ್ರಯೋಜನ ಗೊಂಡ, ಅಲ್ಪಕಾಲ ಜೀವಿಸಿದ್ದ ಹಿಂದಿನ ಸುಧಾರಣೆಗಿಂತ ಇನ್ನೂ ದೊಡ್ಡ ಸುಧಾರಣೆಯನ್ನು ಸ್ಥಾಪಿಸುತ್ತಿಲ್ಲ? ಎಂದು ಆಶ್ಚರ್ಯಪಡುತ್ತಾರೆ. "ಆತನು ಯಾಕೆ ಎಲ್ಲಾ ದೊಡ್ಡ ಪಂಗಡಗಳವರಿಗೂ ಆಶೀರ್ವಾದ ನೀಡಬಾರದು ಮತ್ತು ಅವರುಗಳನ್ನು ಯಾಕೆ ಒಂದುಗೂಡಿಸಬಾರದು?" ಇಲ್ಲವಾದರೆ, ಬೇರೆ ಯಾರಿಗಾದರೂ ಆಶೀರ್ವದಿಸಿ ಮತ್ತು ಅವರ ಕಲ್ಮಶಗಳನ್ನು ಶುದ್ಧೀಕರಿಸಿ ಎಲ್ಲರನ್ನೂ ಅದರೊಳಗೆ ಎಳೆಯಬಾರದು? ಎಂದು ಪ್ರಶ್ನಿಸುತ್ತಾರೆ. ಆದರೆ, ನಾವು ಯಾಕೆ ಲೋಕದ ಎಲ್ಲಾ ರಾಜ್ಯಗಳನ್ನೂ ಒಂದುಗೂಡಿಸಿ ಅವುಗಳನ್ನು ಶುದ್ಧೀಕರಿಸಬಾರದು? ಎಂದು ಪ್ರಶ್ನಿಸುತ್ತೇವೆ.

ದೇವರ ಮಕ್ಕಳೆಲ್ಲರೂ ತಿಳುಕೊಳ್ಳಬೇಕಾಗಿರು ವುದೇನೆಂದರೆ ದೇವರು ತನ್ನ ಯೋಜನೆಯಲ್ಲಿ ಬಹಿರಂಗಪಡಿಸಬೇಕಾಗಿರುವದು ಈ ರೀತಿಯಾಗಿ ಅಲ್ಲ. ದೇವರ ವಾಕ್ಯದ ದೃಷ್ಟಿಕೋನದ ಅಂಶದಿಂದ ಸ್ವಲ್ಪ ಮುಂದಿನ ಪ್ರತಿಫಲನವು ನಮಗೆ ಅಂಥಾಃ ಸಲಹೆಯ ಅಸಮಂಜಸತೆಯನ್ನು ತೋರಿಸುತ್ತದೆ. ಬಹಿರಂಗವಾಗಿ ಹೇಳುಕೊಳ್ಳುವ ಸಭೆಗಳನ್ನು ಪರಿಗಣಿಸಿದರೆ ಅದು ನಾನೂರು ಮಿಲಿಯನ್ ಆಗಿದೆ. ಇದರಲ್ಲಿ ಎಷ್ಟು ಸಭೆಗಳು ತಾವು ಮನಸ್ಸಿನಲ್ಲಿಯೂ ದೇಹದಲ್ಲಿಯೂ ಕರ್ತನಿಗೆ ಮತ್ತು ಆತನ ಯೋಜನೆಯ ಸೇವೆಗೆ ಪೂರ್ಣವಾಗಿ ಪ್ರತಿಷ್ಠೆಹೊಂದಿದ್ದೇವೆ ಎಂದು ತಾವಾಗಿಯೇ ಹೇಳಿಕೊಳ್ಳಬಹುದು ಎಂದು ನಿಮ್ಮನ್ನು ನೀವೇ ವಿಚಾರಿಸಿಕೊಳ್ಳಿ. ಗೋಧಿಯನ್ನು ಹಣಜಿಯಿಂದ ಪ್ರತ್ಯೇಕಿಸುವುದಕ್ಕೆ ತೊಡಗಿದರೆ, ಹಣಜಿಯನ್ನು ತೆಗೆದುಹಾಕುವುದರಿಂದ ಬಹಳಮಟ್ಟಿಗೆ ಎಲ್ಲಾ ಸಂದರ್ಭಗಳಲ್ಲಿಯೂ ಅತಿ ದೊಡ್ಡ ದೇವಾಲಯವಾದ ಕ್ಯಾಥೆಡ್ರಲ್‌ಗಳಲ್ಲಿಯೂ ಮೊದಲುಗೊಂಡು ಸ್ವಲ್ಪ ಕೈಮುಷ್ಟಿಯಷ್ಟು ಮಾತ್ರ ಗೋಧಿ ಉಳಿದು ಹೋಗುತ್ತದೆ ಎಂಬ ತೀರ್ಮಾನಕ್ಕೆ ನಿಮ್ಮ ಸ್ವಂತ ಅವಲೋಕನವು ನಿಮ್ಮನ್ನು ನಡೆಸುತ್ತದೆ.

ಹೆಸರುಮಾತ್ರದ (ನಾಮಾಂಕಿತ) ವ್ಯವಸ್ಥೆಗಳನ್ನು ಶುದ್ಧೀಕರಿಸುವ ಪ್ರಯತ್ನ ಮಾಡದಿರುವುದಕ್ಕೆ ಕಾರಣವೆಂದರೆ, ಕ್ರೈಸ್ತ ಪ್ರಪಂಚದ ಪ್ರತಿಷ್ಠಿತರಲ್ಲದ ಸಮೂಹವನ್ನು ಮತ್ತು ಅವುಗಳ ನಾಗರೀಕ ಹಾಗೂ

ಕ್ರೈಸ್ತಸಭಾ ಸಂಸ್ಥೆಗಳನ್ನು ಈಗ ಭೂಲೋಕದಲ್ಲಿ ಪ್ರಾರಂಭವಾಗಬೇಕಾಗಿರುವ ಕರ್ತನ ಸೇವೆಗೆ ಯೋಗ್ಯವಾಗುವಂತೆ ಯಾವುದೇ ಮಟ್ಟದಲ್ಲಿ ಶುದ್ಧತೆಯನ್ನು ಮಾಡಲಾರದು. ಕಳೆದ ಹದಿನೆಂಟು ಶತಮಾನಗಳಲ್ಲಿ ಆತನು ನಿಜವಾಗಿ ಪ್ರತಿಷ್ಠೆ ಹೊಂದಿದವರನ್ನು, ಅರ್ಹರನ್ನು ಆಯ್ಕೆಮಾಡುತ್ತಿದ್ದಾನೆ. ಈಗ ಮಾಡಲು ಉಳಿದಿರುವುದೇನೆಂದರೆ ಈ ವರ್ಗದಲ್ಲಿ ಉಳಿದಿರುವ ಜೀವಿತರನ್ನು ಆಯ್ಕೆಮಾಡುವುದು, ಆದರೆ ಅಂಥವರು ಬಹಳ ಕಡಿಮೆ ಮಂದಿ, ಕೆಲವರು ಮಾತ್ರವೇ ಮೊದಲೇ ಗೊತ್ತುಪಡಿಸಿದ ಸಂಖ್ಯೆಯಲ್ಲಿನ ಕ್ರಿಸ್ತನ ದೇಹದ ಅಂಗಗಳಾಗುವುದನ್ನು ಪೂರ್ಣಗೊಳಿಸಲು ಕೊರತೆಯಲ್ಲಿದ್ದಾರೆ.

ಎಲ್ಲಾ ಮಾನವ ಸಂಸ್ಥೆಗಳನ್ನು ತ್ಯಜಿಸುವ ಕಾರಣ ಮತ್ತು ಕನಿಷ್ಠ ಆಕ್ಷೇಪಣೆ ಮಾಡಬಹುದಾದವರನ್ನು ಸುಧಾರಣೆ ಮಾಡದಿರುವುದರ ಕಾರಣ ಮತ್ತು ಬೇರೆ ಇತರರನ್ನು ಕರೆ ನೀಡುವ ಕಾರಣವು ಈಗ ವಿವಿಧ ಯೆಹೂದಿ ಪಂಗಡಗಳೊಡನೆ ನಮ್ಮ ಕರ್ತನು ಈ ಸುಗ್ಗಿಯಲ್ಲಿ ಅಥವಾ ಅದರ ಹಂಚಿಕೆಯ ಅಂತ್ಯದಲ್ಲಿ ನಡೆದುಕೊಳ್ಳುವ ರೀತಿಯಲ್ಲಿ ಕಂಡುಬರುತ್ತದೆ; ಯಾಕೆಂದರೆ ಆಗ, ಮತ್ತು ಈಗ ಎಲ್ಲರೂ ತಿರಸ್ಕರಿಸಲ್ಪಟ್ಟಿದ್ದಾರೆ ಮತ್ತು 'ನಿಜವಾದ ಇಸ್ರಾಯೇಲ್ಯ'ರನ್ನು ಎಲ್ಲದರಿಂದ ಹೊರಕ್ಕೆ ಸ್ವಾತಂತ್ರ್ಯಕ್ಕೆ ಕರೆಯಲ್ಪಟ್ಟಿದ್ದಾರೆ ಮತ್ತು ದೇವರು ತಾನೇ ಆರಿಸಿಕೊಂಡ ವಿವಿಧ ಪಾತ್ರೆಗಳ ಮೂಲಕ ತನ್ನ ಚಿತ್ತ ಮತ್ತು ಯೋಜನೆಯ ಬಗ್ಗೆ ಅವರಿಗೆ ಕಲಿಸುವವನಾಗಿದ್ದಾನೆ.

ಈ ಪ್ರಸ್ತಾಪವನ್ನು ಯೆಹೂದ್ಯರಿಗೆ ನಿರೂಪಿಸುತ್ತಾ, ಯೇಸು ಎರಡು ಸಾಮ್ಯಗಳಲ್ಲಿ ತನ್ನ ವಿವೇಕದ ಕ್ರಮದಂತೆ ವಿವರಿಸುತ್ತಾನೆ; ಮೊದಲಿಗೆ ಹೊಸ ಬಟ್ಟೆಯನ್ನು ಹರಿದ ಬಹಳ ಹಳೆಯ ಬಟ್ಟೆಗೆ ತೇಪೆ ಹಾಕುವುದರಿಂದ ಅದು ಮತ್ತಷ್ಟು ಹಿಂಜುವುದು ಕಂಡುಬರುತ್ತದೆ ಮತ್ತು ಅದರ ಬಲದ ಅಸಮಾನತೆಯಿಂದ ಹರಕು ಹೆಚ್ಚಾಗುತ್ತದೆ; ಎರಡನೆಯದಾಗಿ, ಹೊಸ ದ್ರಾಕ್ಷಾರಸವನ್ನು ಹಳೆಯ ಬುದ್ದಲಿಗೆ ಹಾಕುವುದರಿಂದ ಅದು ಒಡೆದು ದ್ರಾಕ್ಷಾರಸವು ಚೆಲ್ಲಿಹೋಗುವುದು, ಬುದ್ದಲಿಯ ಹಿಗ್ಗುವಿಕೆ ಮತ್ತು ಚೈತನ್ಯಶಕ್ತಿ ನಷ್ಟವಾಗಿರುವುದರಿಂದಾಗಿ (Stretch & Elasticity) ಬುದ್ದಲಿಗಳು ಹಾನಿಯಾಗುವವು. ಇದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು. ಯಾಕೆಂದರೆ, ಇದರ ಪರಿಣಾಮ ತ್ವರಿತವಾಗಿ ಒಡೆದುಹೋಗಿ ಹಳೆಯ ಬುದ್ದಲಿಗಳನ್ನು ನಾಶಪಡಿಸುವುದು ಮಾತ್ರವಲ್ಲ, ಬೆಲೆ ಬಾಳುವ ಹೊಸ ದ್ರಾಕ್ಷಾರಸವನ್ನು ಕಳಕೊಳ್ಳುವುದೂ ಆಗಿದೆ.

ನಮ್ಮ ಕರ್ತನ ಹೊಸ ಉಪದೇಶಗಳು ಹೊಸ ದ್ರಾಕ್ಷಾರಸವಾಗಿತ್ತು, ಹಾಗೆಯೇ ಯೆಹೂದಿ ಪಂಗಡಗಳು ಹಳೆಯ ಬುದ್ದಲಿಗಳಾಗಿದ್ದವು. ಒಂದು ವೇಳೆ ನಮ್ಮ ಕರ್ತನು ಈ ಪಂಗಡಗಳಲ್ಲಿ ಒಂದನ್ನು ಸೇರಿಕೊಂಡು ಅದನ್ನು ಸುಧಾರಣೆಮಾಡ ಹೊರಟಿದ್ದರೆ ಅದರ ಫಲಿತಾಂಶ ಏನಾಗುತ್ತಿತ್ತು? ಹೊಸ ಸತ್ಯಗಳು ಸ್ವೀಕಾರವಾಗಿದ್ದರೆ, ಅದು ಹಳೆಯ ಪಂಗಡವನ್ನು ಸಂಪೂರ್ಣವಾಗಿ ಒಡೆದುಹಾಕುತ್ತಿತ್ತು. ಅದರ ಸಂಸ್ಥೆಯ ಕಾರ್ಯಶಕ್ತಿಯು ಪಂಗಡದ ಹೆಮ್ಮೆಯ ಮೇಲೆ ಹೆಚ್ಚಾಗಿ ಕಟ್ಟಲ್ಪಟ್ಟಿದೆ ಮತ್ತು ಅದು ದೋಷಗಳೆಂಬ, ಮೂಢನಂಬಿಕೆಗಳೆಂಬ ಮತ್ತು ಮಾನವ ಸಂಪ್ರದಾಯಗಳೆಂಬ ಸಿಮೆಂಟಿನಿಂದ ಅಂಟಿಸಲ್ಪಟ್ಟಿದೆ ಮತ್ತು ಆ ಕೂಡಲೇ ನಾಶಗೊಳ್ಳುತ್ತದೆ, ಮತ್ತು ಸಾಮಾನ್ಯವಾಗಿ ಈ ಲೋಕಕ್ಕೆ ಸಂಬಂಧಿಸಿದ ಅದರ ಹಿಂದಿನ ದಾಖಲೆಗಳಿಗೆ ಜವಾಬ್ದಾರಿಯಾಗಿದ್ದ ಆ ಪಂಗಡದ ಎಲ್ಲಾ ಹಳೆಯ ದೋಷಗಳಿಂದ ಮತ್ತು ಸಂಪ್ರದಾಯಗಳಿಂದಾಗಿ ನೂತನ ಸಿದ್ಧಾಂತಗಳು ಕಷ್ಟಕ್ಕೆ ಸಿಲುಕಿಕೊಳ್ಳುತ್ತಿದ್ದವು ಮತ್ತು ಅವುಗಳಿಗೆ ಅಡಚಣೆ ಯುಂಟಾಗುತ್ತಿತ್ತು.

ಅದೇ ಕಾರಣಗಳಿಗೆ, ಕರ್ತನು, ಪ್ರಸ್ತುತ ಸುಗ್ಗಿಯಲ್ಲಿ ಸತ್ಯದ ಪೂರ್ಣ ಬೆಳಕನ್ನು ಸಹಸ್ರಮಾನದ ಉದಯದಲ್ಲಿ ಪರಿಚಯಿಸುವಲ್ಲಿ ಅದನ್ನು ಯಾವುದೇ ಹಳೆಯ ಪದ್ಧತಿಯ ಮೇಲೆ ಒಂದು ತೇಪೆಯಾಗಿ ಹಚ್ಚುವುದಿಲ್ಲ ಅಥವಾ ಹಳೆ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನಾಗಲೀ ಹಾಕುವುದಿಲ್ಲ. ಮೊದಲಿಗೆ, ಅವುಗಳಲ್ಲಿ ಯಾವುದೂ ತೇಪೆ ಹಾಕಬಹುದಾದ ಸರಿಯಾದ ಸ್ಥಿತಿಯಲ್ಲಿ ಅಥವಾ ನೂತನ ಸಿದ್ಧಾಂತಗಳನ್ನು ಸ್ವೀಕರಿಸುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಎರಡನೆಯದಾಗಿ, ಹೊಸ ಸತ್ಯಗಳನ್ನು ಒಂದು ವೇಳೆ ಸ್ವೀಕರಿಸುವುದಾದರೆ, ಕೂಡಲೇ ಕಾರ್ಯಗತಗೊಳ್ಳಲು ಪ್ರಾರಂಭಿಸುತ್ತವೆ ಮತ್ತು ಯಾವುದೇ ಪಂಗಡವನ್ನು ಅದು ಎಷ್ಟೇ ಸಾಧ್ಯಂತವಾಗಿ ಸಂಘಟಿಸಲ್ಪಟ್ಟು ಕಟ್ಟಿದ್ದರೂ ಅದನ್ನು ಸ್ಫೋಟ ಗೊಳಿಸುವಷ್ಟು ಶಕ್ತಿಯನ್ನು ಪಡಕೊಳ್ಳುತ್ತದೆ. ಒಂದರ ನಂತರ ಒಂದನ್ನು ಪ್ರಯತ್ನಿಸಿದರೆ, ಫಲಿತಾಂಶವು ಅದೇ ಆಗಿರುತ್ತದೆ ಮತ್ತು ಅಂತ್ಯದಲ್ಲಿ ನೂತನ ದ್ರಾಕ್ಷಾರಸಗಳನ್ನು (ನೂತನ ಬೋಧನೆ) ಅಂತರ್ಗತಪಡಿಸಿಕೊಂಡು ಕಾಪಾಡುವುದಕ್ಕೆ ಯಾವುದೂ ಇರುವುದಿಲ್ಲ.

ನಮ್ಮ ಕರ್ತನು ತನ್ನ ಪ್ರಥಮ ಆಗಮನದಲ್ಲಿ ಸರಿಯಾದ ಮತ್ತು ಅತ್ಯುತ್ತಮವಾದ ಕ್ರಮವನ್ನು ಅನುಸರಿಸಿದನು. ಆತನು ಪೂರ್ತಿಯಾಗಿ ಹೊಸ

ಉಡುಪುಗಳನ್ನು ಹೊಸ ಸರಕುಗಳಿಂದಲೇ ಸಿದ್ಧಪಡಿಸಿದನು ಮತ್ತು ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಿಗೇ ಹಾಕಿದನು. ಅಂದರೆ, ಆತನು 'ನಿಜ ಇಸ್ರಾಯೇಲ್ಯರನ್ನೇ' ಕರೆದನು (ಪಂಥಕ್ಕೆ ಸೇರದವರು) ಮತ್ತು ಆಗ ಯುಕ್ತವಾಗಿದ್ದ ಸತ್ಯವನ್ನು ಅವರಿಗೆ ಒಪ್ಪಿಸಿಕೊಟ್ಟನು. ಹಾಗೆ ಈಗಲೂ, ಆತನು ಹೆಸರು ಮಾತ್ರದ ಆತ್ಮೀಕ ಇಸ್ರಾಯೇಲ್ಯರಿಂದ ಸತ್ಯದ ಹಸಿವಿದ್ದವರನ್ನು ಮಾತ್ರವೇ ಕರೆಯುತ್ತಿದ್ದಾನೆ. ಅವರು ಕರ್ತನ ಸ್ವಂತ ವಿಧದಲ್ಲಿ ಸತ್ಯವನ್ನು ಒಪ್ಪಿಕೊಳ್ಳುವಂತೆ ಮತ್ತು ಆತನೊಂದಿಗೆ ಆತನ ಯೋಜನೆಯಲ್ಲಿ ಹೃತ್ಪೂರ್ವಕವಾಗಿ ಸಹಕರಿಸುವಂತೆ ಮಾಡುತ್ತದೆ. ಏನಾದರೂ ಆಗಲಿ ಮತ್ತು ಎಷ್ಟು ಹಳೆಯ ಬುದ್ದಲಿಗಳು ಹತ್ತಿರದಲ್ಲಿ ಹಾದುಹೋದರೂ ಮತ್ತು ಅವುಗಳನ್ನು ತುಂಬಿಸಿಕೊಳ್ಳಲು ಅನರ್ಹವೆಂದು ತಿರಸ್ಕರಿಸಲ್ಪಟ್ಟಿದೆ. ಇನ್ನೂ ಹೆಚ್ಚಾಗಿ, ಹರ್ಷಿಸಿರಿ, ನೀವುಗಳು ನಿಮ್ಮನ್ನು ಪರೀಕ್ಷಿಸಿದ ಪ್ರಸ್ತುತ ಸತ್ಯವೆಂಬ ಈ ಹೊಸ ದ್ರಾಕ್ಷಾರಸವನ್ನು ಹೊಂದಿಕೊಳ್ಳಲು ಯೋಗ್ಯರನ್ನಾಗಿ ಎಣಿಸಿರುವುದಕ್ಕಾಗಿ ಸಂತೋಷಪಡಿರಿ ಮತ್ತು ಆದಷ್ಟು ಬೇಗನೇ ಅದು ರುಜುವಾತಾದ ಕೂಡಲೇ ಅದನ್ನು ಸ್ವೀಕರಿಸಿರಿ ಮತ್ತು ಸಂತೋಷದಿಂದಲೇ ಅದರಲ್ಲಿ ಕಾರ್ಯನಿರತರಾಗಿರಿ.

ಯಾರ್ಯಾರು ಆತನ ಪ್ರಥಮ ಅಗಮನದಲ್ಲಿ, ಪ್ರಮುಖ ಭಿನ್ನವರ್ಗಾವಲಂಬಿಗಳನ್ನು ಅನುಸರಿಸಿದರೋ ಅವರ ಅಭಿಪ್ರಾಯವನ್ನು ಕಲಿಯಲು ಕಾದಿದ್ದರೋ ಮತ್ತು "ಯಾವ ಶಾಸ್ತ್ರಿಗಳಾಗಲೀ ಅಥವಾ ಫರಿಸಾಯರುಗಳಾಗಲೀ ಆತನನ್ನು ನಂಬಿದರೋ?" ಎಂದು ವಿಚಾರಿಸಿದರೋ ಅವರು ಸತ್ಯವನ್ನು ಹೊಂದಿಕೊಳ್ಳಲಿಲ್ಲ. ಏಕೆಂದರೆ ಅವರುಗಳು ಮನುಷ್ಯರ ಅನುಯಾಯಿಗಳಾಗಿದ್ದರೇ ಹೊರತು ದೇವರ ಅನುಯಾಯಿಗಳಾಗಿರಲಿಲ್ಲ. ಏಕೆಂದರೆ ಪ್ರಮುಖ ಭಿನ್ನವರ್ಗಾವಲಂಬಿಗಳು ಆಗ ಕ್ರಿಸ್ತನ ಬೋಧನೆಗಳನ್ನು ಒಪ್ಪಿಕೊಳ್ಳಲಿಲ್ಲ, ಆ ವರ್ಗದವರೂ ಯಾವಾಗಲೂ, ಇರುತ್ತಾರೆ, ಈಗಲೂ ಇದ್ದಾರೆ. ಕುರುಡರುಗಳ ಅತ್ಯಂತ ಕುರುಡ ನಾಯಕರುಗಳಾಗಿದ್ದಾರೆ. ಸತ್ಯವನ್ನು ಸ್ವೀಕರಿಸಿ ಆಶೀರ್ವಾದಪಡಕೊಳ್ಳುವ ಬದಲಾಗಿ, ಅವರುಗಳು ಶೋಧನೆಯ ಸಮಯದಲ್ಲಿ ಬಿದ್ದುಹೋಗುತ್ತಾರೆ. ಹಳೆಯ ವಸ್ತ್ರಗಳು ಮತ್ತು ಹಳೆಯ ಬುದ್ದಲಿಗಳು ಸ್ಥಿತಿಮೀರಿದವುಗಳಾಗಿದ್ದು ಮುಂದಿನ ಉಪಯೋಗಕ್ಕೆ ಅಯೋಗ್ಯವಾಗಿವೆ.

ಕರ್ತನು ಆತನ ಜನರನ್ನು ಬಾಬೇಲಿನಿಂದ ಹೊರಬರಲು ಕರೆಯುತ್ತಿರುವುದರಿಂದ ನಾವು ಅದನ್ನು ಅನುಮಾನಿಸಲು ಸಾಧ್ಯವಿಲ್ಲ, ಈ ಕರೆಯನ್ನು ನೀಡುವ ಆತನ ಕಾರ್ಯಕರ್ತರು ಯಾರಾದರೂ ಇರಲಿ, ಆತನ ಸತ್ಯಪರರಾದ ಜನರೆಲ್ಲರೂ ಅದನ್ನು ಕೇಳಿಸಿಕೊಳ್ಳುವರು; ಕರೆಯಿಂದ ಅವರ ವಿಧೇಯತೆಯನ್ನು ಪರೀಕ್ಷಿಸ ಲಾಗುವುದಲ್ಲದೆ, ಬಾಬೇಲಿನ ಬಗ್ಗೆ ಅವರ ಪ್ರೀತಿಯನ್ನು ಮತ್ತು ಅದರ ದೋಷಗಳ ಬಗ್ಗೆ ಇರುವ ಅವರ ಮೈತ್ರಿಯನ್ನು ಸಹ ಪರೀಕ್ಷಿಸಲಾಗುವುದು. ಅವರುಗಳು ಆಕೆಯ ಸಿದ್ಧಾಂತಗಳನ್ನು, ಪದ್ಧತಿ ಮುಂತಾದವುಗಳನ್ನು ಒಪ್ಪುವವರಾದರೆ, ಹೀಗಾಗಿ ಆಕೆಯನ್ನು ಬಿಡಲು ಇಚ್ಛೆ ಇಲ್ಲದವರಾಗಿದ್ದರೆ, ಅವರು ತಮ್ಮನ್ನು ಪ್ರಸ್ತುತ ಸತ್ಯಕ್ಕೆ ಅಯೋಗ್ಯರನ್ನಾಗಿ ಸಾಬೀತುಪಡಿಸಿಕೊಳ್ಳುತ್ತಾರೆ ಮತ್ತು ಆಕೆಯ ಬರಲಿರುವ ಪಿಡುಗುಗಳಿಗೆ ಅರ್ಹರಾಗಿ ಕಂಡುಬರುತ್ತಾರೆ. ಆದರೆ ಕರೆಯ ಮಾತುಗಳು ಬಾಬೇಲಿನಲ್ಲಿರುವ ದೇವರ ಸತ್ಯಜನರನ್ನು ಆಕೆಯ ಲೌಕಿಕವಾದ ಪಾಪಗಳಲ್ಲಿ ತಮ್ಮನ್ನು ತೊಡಗಿಸಿದ್ದಾರೆಂದು ಮತ್ತು ದೈವಿಕ ಸತ್ಯವನ್ನು ಕಡೆಗಣಿಸುತ್ತಿದ್ದಾರೆಂದು ನೆನಸಬಾರದು, ಇದುವರೆಗೆ ಅವರು ಬಾಬೇಲ್ ಪತನಗೊಂಡಿದೆ, ತೆಗೆದುಹಾಕಲ್ಪಟ್ಟಿದೆ ಎಂಬುದನ್ನು ಕಲಿತುಕೊಂಡಿರುತ್ತಾರೆ. ಹೀಗಾಗಿ, ಅವರು ಆಕೆಯಲ್ಲೇ ಇನ್ನೂ ಇರುವುದಾದಲ್ಲಿ, ಅವರುಗಳು ಆಕೆಯ ಹಿಂದಿನ ಮತ್ತು ಇಂದಿನ ದೋಷಗಳನ್ನು ಮತ್ತು ತಪ್ಪು ಸಿದ್ಧಾಂತಗಳನ್ನು ಒಪ್ಪಿಕೊಂಡಿರುವ ಅರ್ಥದಲ್ಲಿ ಆಕೆಯವರಾಗಿರಲು ಪರಿಗಣಿಸಿಕೊಂಡಿದ್ದಾರೆ ಮತ್ತು ಆಕೆಯ ಪಾಪಗಳಲ್ಲಿ ಪಾಲುದಾರರಾಗಿದ್ದಾರೆ. ಆದುದರಿಂದ ಅವರ ಶಿಕ್ಷೆಗಳಿಗೂ ಬರಲಿರುವ ಉಪದ್ರವಗಳಿಗೆ ಗುರಿಯಾಗಲು ಅರ್ಹರಾಗಿದ್ದಾರೆ – ಪ್ರಕಟನೆ 18:4 ನೋಡಿರಿ.

"ಆಕೆಯು ದೆವ್ವಗಳ ವಾಸಸ್ಥಾನವೂ, ಅಶುದ್ಧಾತ್ಮಗಳ ಆಶ್ರಯವೂ ಅಪವಿತ್ರವಾಗಿಯೂ ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಆಶ್ರಯವೂ ಆದಳು" ಎಂಬ ಹೇಳಿಕೆಯ ಮಾತುಗಳು ಎಷ್ಟೋ ಪ್ರಬಲವಾಗಿವೆ. ಬಾಬೇಲಿನ ಬೇರೆ ಬೇರೆ ಕಡೆಗಳಲ್ಲಿ ಮತ್ತು ಸಮಾಜದಲ್ಲಿರುವ ಅತ್ಯಂತ ಅಸಹ್ಯವಾದವರೂ ಕೂಡ ಕ್ರೈಸ್ತ ವೃತ್ತಿಗಳನ್ನು ಹಿಡಿದಿರುತ್ತಾರೆ ಸಂಸ್ಕಾರ ಸಂಬಂಧವನ್ನು ಮತ್ತು ಧರಿಸಿಕೊಂಡಿರುತ್ತಾರೆ ಎಂಬುದು ಎಷ್ಟೋ ಸತ್ಯವಾಗಿದೆಯಲ್ಲವೇ?. ಪ್ರತಿಯೊಂದು ಅಶುದ್ಧವಾದ ವಿಚಾರಸರಣಿ ಮತ್ತು ಸಿದ್ಧಾಂತವು ಹೇಗೋ, ಎಲ್ಲಿಯೋ ಆಕೆಯಲ್ಲಿ ಪ್ರತಿನಿಧಿತ್ವವನ್ನು ಕಂಡುಕೊಳ್ಳುತ್ತವೆ. ಆಕೆಯು ಒಂದು ಪಂಜರದಂತಿದ್ದು ಅದರಲ್ಲಿ ಕರ್ತನ ಸಾಧುಸ್ವಭಾವದ ಮತ್ತು ಸಭ್ಯವಾದ ಪಾರಿವಾಳಗಳನ್ನು ಹಿಡಿದಿಟ್ಟುಕೊಳ್ಳುವರು ಮಾತ್ರವಲ್ಲದೆ

ಅದರೊಂದಿಗೆ ಹಲವು ಅಶುದ್ಧವಾದ ಮತ್ತು ಅಸಹ್ಯವಾದ ಪಕ್ಷಿಗಳನ್ನೂ ಭದ್ರವಾಗಿ ಹಿಡು ಕೊಂಡಿರುತ್ತಾಳೆ. ಎಲ್ಲಾ ತಪ್ಪುಗಾರರು ಮತ್ತು ಮೋಸಗಾರರಾದ (ಪುರುಷ ಮತ್ತು ಸ್ತ್ರೀಯರಲ್ಲಿ) ಎಷ್ಟು ಮಂದಿ ತಾವು ಕ್ರಿಸ್ತನ ಸಭೆಯವರು ಎಂದು ಹೇಳಿಕೊಳ್ಳುವುದಿಲ್ಲ! ಎಷ್ಟು ಮಂದಿ ತಮ್ಮ ಕ್ರೈಸ್ತರೆಂದು ಸೋಗಿನಂತೆ ಬಳಸಿಕೊಂಡು ಅವರ ಕೆಟ್ಟ ಒಳಸಂಚುಗಳಿಗೆ ಒತ್ತಾಸೆ ನೀಡಲು ಉಪಯೋಗಿಸುತ್ತಿಲ್ಲ! ಅತಿ ಕ್ರೂರರಾದ ಬಹಳ ಮಂದಿ ಅಪರಾಧಿಗಳು ರೋಮನ್ ಕೈಥೋಲಿಕ್ ಸಭೆಯಿಂದ ಹತ್ಯೆಗೊಂಡು ರೋಮಿನಲ್ಲಿ ಸತ್ತದ್ದು ಎಲ್ಲರಿಗೂ ತಿಳಿದದೆ.

ಬಾಬೇಲು ನಾಗರೀಕ ಪ್ರಪಂಚದ ಅತ್ಯುತ್ತಮ ಹಾಗೂ ಅತಿ ಕೆಟ್ಟದ್ದಾಗಿರುವ ತಿರುಳು ಮತ್ತು ಮಡ್ಡಿ ಎರಡನ್ನೂ ಹೊಂದಿದೆ. ತಿರುಳು ನಿಜವಾಗಿ ಪ್ರತಿಷ್ಟೆ ಹೊಂದಿದ ಸಣ್ಣ ವರ್ಗವಾಗಿದೆ. ಆದರೆ ಅದು ದುಃಖಕರವಾಗಿ ತೋರಿಕೆಯವರ ಮತ್ತು ಕೊಳಕಾದ ದೊಡ್ಡ ಗುಂಪಿನೊಂದಿಗೆ, ಅಪರಾಧಿ ಮಡ್ಡಿಯೊಂದಿಗೆ ಮಿಶ್ರಣಗೊಂಡಿದೆ. ಆದರೆ ಅನುಕೂಲಕರ ಪರಿಸ್ಥಿತಿಯಲ್ಲಿ ತಿರುಳು ವರ್ಗವು ಪ್ರಸ್ತುತ ಸುಗ್ಗಿಯುಲ್ಲಿ ಪ್ರತ್ಯೇಕಿಸಲ್ಪಡುವುದು. ಮಹಿಮೆ ಹೊಂದಲು ಸಿದ್ಧತೆಗಳನ್ನು ಮಾಡಿಕೊಳ್ಳುವುದು.

ಬಾಬೇಲಿನ ಒಳಗೂ ಹೊರಗೂ ಇರುವ ಅಶುದ್ಧ ಹಾಗೂ ಅಸಹ್ಯಕರ ಪಕ್ಷಿಗಳ ಅನುಪಾತಕ್ಕೆ ದೃಷ್ಟಾಂತವಾಗಿ ಸಮಾಜದ ಒಂದು ಭಾಗದಲ್ಲಿರುವ ಗೋಧಿಯ ಹೊಲದ ಪರಿಸ್ಥಿತಿಯ ಬಗ್ಗೆ ಮುಂದಿನ ಅಧಿಕೃತವಾದ ವರದಿಯೊಂದನ್ನು ಗಮನಿಸಿರಿ. ಅಲ್ಲಿ ಸಂಪ್ರದಾಯ ಬದ್ಧತೆಯು ಶತಮಾನಗಳ ಕಾಲದಿಂದ ಅದರ ಗೋಧಿಯ ಅಪ್ಪಟವಾದ ಮತ್ತು ಶುದ್ಧವಾದ ಗುಣದ ಬಗ್ಗೆ, ಹಣಜಿಗಳು ಕಡಿಮೆ ಇರುವ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದು 'ಕ್ರೈಸ್ತ ಸಭೆ'ಯೆಂದು ಕರೆದು ಕೊಳ್ಳುತ್ತಿದ್ದದ್ದು ಜನರನ್ನಾಳುವ ನಿಯಮಗಳನ್ನೂ ಕಾನೂನುಗಳನ್ನೂ ರಚಿಸುವಲ್ಲಿ ಸರ್ಕಾರದೊಂದಿಗೆ ಜೊತೆಗೂಡಿತ್ತು :–

**ಇಂಗ್ಲೇಂಡ್ ಮತ್ತು ವೇಲ್ಸ್‌ನಲ್ಲಿ ಸಮಾಜದ ಸ್ಥಾನ ಮಾನ**

**1873ರಲ್ಲಿ ಮಾಡಿದ ಸಂಸದೀಯ ವರದಿ**

**ಧಾರ್ಮಿಕ ಉದ್ಯೋಗಗಳಿಂದ ಜನಸಂಖ್ಯೆ**

| | |
|---|---|
| ರೋಮನ್ ಕೈಥೋಲಿಕರು ...... | 1,500,000 |
| ಚರ್ಚ್ ಆಫ್ ಇಂಗ್ಲೇಂಡ್ ...... | 6,933,935 |
| ಭಿನ್ನ ಮತಾವಲಂಬಿಗಳು (ನಾನ್–ಎಪಿಸ್ಕೋಪಿಯನ್ಸ್ ಮತ್ತು ಪ್ರೊತಸ್ತಾಂತರು) ...... | 7,234,158 |
| ನಾಸ್ತಿಕರು ...... | 7,000,000 |
| ಯೆಹೂದ್ಯರು ...... | 57,000 |

**ಸೆರೆಮನೆಗಳಲ್ಲಿರುವ ಅಪರಾಧಿಗಳ ಒಟ್ಟು ಸಂಖ್ಯೆ**

| | |
|---|---|
| ರೋಮನ್ ಕೈಥೋಲಿಕರು ...... | 37,300 |
| ಚರ್ಚ್ ಆಫ್ ಇಂಗ್ಲೇಂಡ್ ...... | 96,600 |
| ಭಿನ್ನ ಮತಾವಲಂಬಿಗಳು ...... | 10,800 |
| ನಾಸ್ತಿಕರು ...... | 350 |
| ಯೆಹೂದ್ಯರು ...... | 0 |
| ಒಟ್ಟು | 145,050 |

**ಪ್ರತಿ 1,00,000 ಜನಸಂಖ್ಯೆಯಲ್ಲಿರುವ ಅಪರಾಧಿಗಳು**

| | |
|---|---|
| ರೋಮನ್ ಕೈಥೋಲಿಕರು ...... | 2,500 |
| ಚರ್ಚ್ ಆಫ್ ಇಂಗ್ಲೇಂಡ್ ...... | 1,400 |
| ಭಿನ್ನ ಮತಾವಲಂಬಿಗಳು ...... | 150 |
| ನಾಸ್ತಿಕರು ...... | 5 |
| ಯೆಹೂದ್ಯರು ...... | 0 |

**ಅಪರಾಧಿಗಳ ಅನುಪಾತ**

| | |
|---|---|
| ರೋಮನ್ ಕೈಥೋಲಿಕರು ...... | 40 ರಲ್ಲಿ 1 |
| ಚರ್ಚ್ ಆಫ್ ಇಂಗ್ಲೇಂಡ್ ...... | 72 ರಲ್ಲಿ 1 |
| ಭಿನ್ನ ಮತಾವಲಂಬಿಗಳು ...... | 666 ರಲ್ಲಿ 1 |
| ನಾಸ್ತಿಕರು ...... | 20,000 ದಲ್ಲಿ 1 |

ಈ ಮಿಶ್ರಿತ ಪರಿಸ್ಥಿತಿಗೆ ಕಾರಣವನ್ನು ನೀಡಲಾಗಿದೆ: ಬಾಬೇಲ್ ಎಲ್ಲಾ ದೇಶದವರನ್ನು ಆಕೆಯ ಅತಿಜಾರತ್ವವೆಂಬ ದ್ರಾಕ್ಷಾರಸವನ್ನು (ಉತ್ಸಾಹ ಮತ್ತು ಪ್ರಭಾವ) ಕುಡಿಯುವಂತೆ ಮಾಡಿದೆ. ಲೌಕಿಕವಾಗಿ ಸೇರಿಕೊಳ್ಳುವಿಕೆ (ಪ್ರಕಟನೆ 18:3). ಸಭೆಯ ಗುಣಲಕ್ಷಣಗಳು ಮತ್ತು ನಿಯೋಗದ ಬಗ್ಗೆ ತಪ್ಪಾದ ಬೋಧನೆಗಳು ಮತ್ತು ಉನ್ನತಿಯ ಮತ್ತು ಆಳುವ ಕಾಲದ ಹಕ್ಕೇಳಿಕೆಯ ಸಮಯವು ಬಂದಿದೆ (ನಿರ್ದಿಷ್ಟವಾಗಿ ಕಾನ್ಸ್ಟಾಂಟೈನನ ಸಮಯದ ವಿಜಯದ ಮಹಾಸಪ್ಪಳದ ನಂತರ ಕಾನ್ಸ್ಟಾಂಟೈನನ ಸಮಯದಲ್ಲಿ ದೊರೆತ ಆಕೆಯ ಲೌಕಿಕ ಮಹತ್ವಾಕಾಂಕ್ಷೆಯು, ಆಕೆಯು ದೇವರಿಂದ ಸಿದ್ಧಗೊಂಡ ರಾಜ್ಯದಲ್ಲಿ ಶಕ್ತಿ ಮತ್ತು ಮಹಾಮಹಿಮೆಯೊಡನೆ ರಾಜ್ಯಭಾರವಮಾಡುವ ಹಕ್ಕೇಳಿಕೆ) ಅನೇಕರನ್ನು ಬಾಬೇಲಿಗೆ ನಡೆಸಿತು. ಬಾಬೇಲ್ ಏನಾದರೂ ತ್ಯಾಗದ ಇಕ್ಕಟ್ಟಾದ ದಾರಿಯಲ್ಲಿ ಮುಂದುವರೆದಿದ್ದರೂ ಅವರುಗಳು ಎಂದೂ ಆಕೆಯೊಂದಿಗೆ ಕೂಡಿಕೊಳ್ಳುತ್ತಿರಲಿಲ್ಲ. ಹೆಮ್ಮೆ ಮತ್ತು ಆಕಾಂಕ್ಷೆ ಇವುಗಳು ಲೋಕದ ಸಭೆಯನ್ನು ಲೌಕಿಕ ಅಧಿಕಾರವನ್ನು ಗ್ರಹಿಸುವುದಕ್ಕೆ ನಡೆಸಿತು. ಅಧಿಕಾರದ ಶಕ್ತಿ ಪಡೆಯುವುದಕ್ಕೆ ಸಂಖ್ಯೆ ಮತ್ತು ಈ ಲೋಕದ ಪ್ರಭಾವಗಳು ಅಗತ್ಯ. ಸಂಖ್ಯೆಯನ್ನು ಪಡಕೊಳ್ಳುವುದಕ್ಕೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಸತ್ಯವನ್ನು ಸೆಳೆಯಲ್ಪಡ ಲಾಗುತ್ತಿದ್ದಿಲ್ಲ, ತಪ್ಪಾದ ಸಿದ್ಧಾಂತಗಳು ಪ್ರಸ್ತಾಪಿಸಲ್ಪಟ್ಟಿತು ಮತ್ತು ಅಂತಿಮವಾಗಿ ಎಲ್ಲರ ಮೇಲೆ ಪ್ರಬಲತೆಯನ್ನು ಹೊಂದಿಕೊಂಡಿತು ಮತ್ತು ಇನ್ನೂ ಉಳಿಸಿಕೊಂಡಿದ್ದು ಸತ್ಯವನ್ನು ವಿರೂಪಗೊಳಿಸಲಾಯಿತು ಮತ್ತು ವಿಕಾರಗೊಳಿಸಲಾಯಿತು. ಈ ಬಹುಸಂಖ್ಯೆಯು ನೂರಾರು ಮಿಲಿಯನ್‌ವರೆಗೂ ಬಂತು ಮತ್ತು ನಿಜವಾಯಿತು. ಸಭೆಯಾದ ಗೋಧಿಯು ಇನ್ನು ಚಿಕ್ಕಹಿಂಡಾಗಿದ್ದು ಮಿಲಿಯಾಂತರ ಹಣಜಿಗಳ ಮಧ್ಯದಲ್ಲಿ ಮುಚ್ಚಿ ಹೋಗಿತ್ತು. ಇಲ್ಲಿ ಕಬಳಿಸುವ ತೋಳಗಳ ಮಧ್ಯೆ ದೇವರ ರಾಜ್ಯದ ನಿಜವಾದ ಭ್ರೂಣಾವಸ್ಥೆ ಕುರಿಯು ಹಿಂಸೆಯನ್ನು ಅನುಭವಿಸಿತು ಮತ್ತು ಹಿಂಸೆಯು ಅದನ್ನು ಬಲವಂತವಾಗಿ ಕೊಂಡೊಯ್ಯಿತು. ಯೇಸುವಿನ ಹೆಜ್ಜೆಯ ಜಾಡನ್ನು ಅನುಸರಿಸಿದ ಅವರು, ಆತನಂತೆ ಜನರಿಂದ ಧಿಕ್ಕರಿಸಲ್ಪಟ್ಟವರು, ಮನುಷ್ಯರು ಸೇರಿಸಿಕೊಳ್ಳದವರು, ಸಂಕಷ್ಟಕ್ಕೊಳಗಾದವರು, ವ್ಯಾಧಿಪೀಡಿತರೂ ಆಗಿದ್ದರು.

ಆದರೆ, ಈಗ, ಸಹಸ್ರಮಾನದ ಮುಂಜಾನೆ ಉದಯಿಸುತ್ತಿರುವಾಗ, ಹಾಗೂ ಕಳೆದ ಅಂಧಕಾರದ ರಾತ್ರಿಯಲ್ಲಿನ ಸಿದ್ಧಾಂತಗಳ ದೋಷಗಳು ಕಂಡು ಹಿಡಿಯಲ್ಪಟ್ಟಿರುವಾಗ, ಮತ್ತು ಸತ್ಯದ ನಿಜವಾದ ರತ್ನಗಳು ಬೆಳಗುತ್ತಿರುವಾಗ, ಅದರ ಪರಿಣಾಮವು, ವಿನ್ಯಾಸಗೊಂಡಿರುವಂತೆ, ಗೋಧಿಯನ್ನು ಹಣಜಿಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸುವುದಾಗಿದೆ. ದೋಷಪೂರಿತ ಸಿದ್ಧಾಂತಗಳು ಅನುಚಿತವಾದ ಬೆಳವಣಿಗೆಗಳನ್ನುಂಟು ಮಾಡಿದ್ದು ಅದರಂತೆ ಸುಗ್ಗಿಯ ಬೆಳಕಿನಲ್ಲಿ ಸತ್ಯದ ಬಿಚ್ಚುವಿಕೆಯು ಪ್ರತ್ಯೇಕತೆಯನ್ನು ಉಂಟುಮಾಡುತ್ತದೆ. ಎಲ್ಲಾ ಹಣಜಿಗಳು ಮತ್ತು ಕೆಲವು ಗೋಧಿಯು ಹೇಗಾದರೂ ಭಯಭೀತರಾಗಿರುವರು. ಅವರಿಗೆ, ಬಾಬೇಲಿನ ಅಪಜಯವು ದೇವರ ಕಾರ್ಯವನ್ನು ತೆಗೆದುಹಾಕುವುದಾಗಿ ಮತ್ತು ಆತನ ಉದ್ದೇಶದ ಸೋಲಾಗಿದೆ ಎಂದು ಕಂಡುಬರುತ್ತದೆ ಎಂದೆನಿಸಿದೆ. ಆದರೆ, ಹಾಗಲ್ಲ. ಹಣಜಿಗಳು ಎಂದೆಂದಿಗೂ ಗೋಧಿಯಲ್ಲ, ಮತ್ತು ದೇವರು ಅವನ್ನು ಗೋಧಿಯೆಂದು ಗುರುತಿಸಲು ಸೂಚಿಸಲಿಲ್ಲ. ಆತನು 'ಸುಗ್ಗಿಯವರೆಗೆ ಅವು ಸಹಾ ಒಟ್ಟಾಗಿ ಬೆಳೆಯಲಿ' ಎಂದು ಕೇವಲ ಅನುಮತಿಸಿದ್ದಾನೆ. ಬಾಬೇಲಿನ ಅಶುದ್ಧ ಪಕ್ಷಿಗಳ 'ಪಂಜರದಿಂದ' ಹೊರಬರುವಂತೆ ದೇವಜನರನ್ನು ಕರೆಯಲಾಗಿದೆ. ಅವರುಗಳು ಬಿಡುಗಡೆಯನ್ನನುಭವಿಸಲಿ ಮತ್ತು ಸುಗ್ಗಿಯ ಬೆಳಕನ್ನು ಮತ್ತು ಕಾರ್ಯವನ್ನು ಹಂಚಿಕೊಳ್ಳಲಿ ಮತ್ತು ತಮ್ಮನ್ನು ಆಕೆಯ (ಬಾಬೇಲಿನ) ದೋಷಪೂರಿತವಾದ ಸಿದ್ಧಾಂತಗಳೊಡನೆ, ಅಭ್ಯಾಸ ಗಳೊಡನೆ ಸಾಮರಸ್ಯವಿಲ್ಲದವರಾಗಿ ರುಜುವಾತು ಪಡಿಸಲಿ, ಮತ್ತು ಈ ರೀತಿಯಲ್ಲಿ ಅವುಗಳಿಂದ, ಅವುಗಳ ಬಹುಮಾನಗಳಿಂದ, ಮತ್ತು – ಆಕೆಯಲ್ಲಿ ಉಳಿದಿರುವ ಎಲ್ಲಾ ಪಿಡುಗುಗಳು ತಮ್ಮ ಮೇಲೆ ಬರುವುದರಿಂದ ತಪ್ಪಿಸಿಕೊಳ್ಳಲಿ ಎಂದು ಕರೆಯಲಾಯಿತು.

ಈ ಪಿಡುಗುಗಳು ಅಥವಾ ಬವಣೆಗಳು ತಿರಸ್ಕೃತ ಯೆಹೂದ್ಯ ಮನೆಯವರ ಮೇಲೆ ಬರಲಿರುವ ವಿಪತ್ತಿನ ಮುಂಛಾಯೆಯಾಗಿ ಕಂಡುಬಂದಿದ್ದು ಅವುಗಳು ಪ್ರಕಟನೆಯಲ್ಲಿ ಭೀಕರ ಸಂಕೇತಗಳಾಗಿ ಚಿತ್ರಿತಗೊಂಡಿವೆ. ಇದರಿಂದ ಅನೇಕ ವಿದ್ಯಾರ್ಥಿಗಳು ಬಹಳಷ್ಟು ಉತ್ತೇಕ್ಷಿಸಲ್ಪಟ್ಟಿದ್ದಾರೆ ಮತ್ತು ಈ ವಿಷಯದಲ್ಲಿ ಕ್ರೂರವಾದ ಆಲೋಚನೆಗಳನ್ನು ಹೊಂದಿದ್ದಾರೆ. ಆದುದರಿಂದ ಅವರು ಈಗ ನಿಕಟವಾಗಿ ಸಮೀಪಿಸುತ್ತಿರುವ ಅಪಾಯಗಳ ಸತ್ಯತೆಗೆ ಸಿದ್ಧರಿಲ್ಲ. ಅವರು ಆಗಾಗ್ಯೆ ಚಿನ್ಹೆಗಳನ್ನು ಅಕ್ಷರಶಃವಾಗಿ ಅರ್ಥೈಸುತ್ತಾರೆ. ಆದುದರಿಂದ ಅವರು ಅವುಗಳ ನೆರವೇರಿಕೆಯ, ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಅಡಚಣೆಗಳು, ವಾಗ್ಯುದ್ಧಗಳು, ಕ್ರಾಂತಿಗಳು ಪ್ರತಿವರ್ತನೆಗಳು, ವಿಪ್ಲವಗಳು (upheavals) ಇತ್ಯಾದಿಗಳ ಮೂಲಕ ಅದು ಪೂರ್ಣಗೊಳ್ಳುವುದನ್ನು ಕಾಣಲು ಸಿದ್ಧರಾಗಿರುವುದಿಲ್ಲ.

ಆದರೆ, ಇಲ್ಲಿ ಮತ್ತೊಂದು ಸಂಗತಿಯನ್ನು ಗಮನಿಸಿರಿ. ಬಾಬೇಲ್ ತಳ್ಳಲ್ಪಟ್ಟು, ಕೃಪೆಯಿಂದ ಬಿದ್ದುಹೋದ 1878ರ ಸಮಯದಿಂದ ಮತ್ತು ಯಾವಾಗ ಪಿಡುಗುಗಳು ಅಥವಾ ಸಂಕಷ್ಟಗಳು ಆಕೆಯ ಮೇಲೆ ಬಂದವೋ ಆ ಕಾಲದ ನಡುವೆ ಒಂದು ಚಿಕ್ಕ ವಿರಾಮವಿತ್ತು. ಆ ಸಮಯದಲ್ಲಿ ಕರ್ತನ ಜನರಲ್ಲಿ ಪ್ರಾಮಾಣಿಕರುಗಳೆಲ್ಲರಿಗೂ ಈ ಪ್ರಸ್ತಾಪದ ಬಗ್ಗೆ ತಿಳಿಸಬೇಕಾಯಿತು. ಅವರನ್ನು ಬಾಬೇಲಿನ ಹೊರಗೆ ಕೂಡಿಸಲಾಯಿತು. ಇದನ್ನು "ಬಿದ್ದಳು, ಬಿದ್ದಳು, ಬಾಬೇಲ್ ಎಂಬ ಮಹಾನಗರಿಯು ಬಿದ್ದಳು" ಎಂಬ ಸಂದೇಶದ ನಂತರ ಕೇಳಿಬಂದ ಮತ್ತೊಂದು ಶಬ್ದದಲ್ಲಿ – "ನನ್ನ ಪ್ರಜೆಗಳೇ, ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು, ಅವಳಿಗಾಗುವ ಉಪದ್ರವಗಳಿಗೆ (ಬರುವ) ಗುರಿಯಾಗಬಾರದು" (ಪ್ರಕಟನೆ 18:4) ಎಂಬ ವಾಕ್ಯದಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ. ಈ ವಿರಾಮದ ಸಮಯವು, ಮತ್ತು ಅದರಲ್ಲಿ ನೆರವೇರಬೇಕಾದ ಕಾರ್ಯವನ್ನು ಉಲ್ಲೇಖಿಸಲಾಗಿದೆ. "ಕೆಡಿಸುವುದಕ್ಕೆ ಅಧಿಕಾರ ಹೊಂದಿದ ಆ ನಾಲ್ಕು ಮಂದಿ ದೇವದೂತರುಗಳಿಗೆ – ನಾವು ನಮ್ಮ ದೇವರ ದಾಸರಿಗೆ ಹಣೆಯ ಮೇಲೆ ಮುದ್ರೆ ಒತ್ತುವ ತನಕ ಭೂಮಿಯನ್ನಾಗಲೀ, ಸಮುದ್ರವನ್ನಾಗಲೀ, ಮರಗಳನ್ನಾಗಲೀ ಕೆಡಿಸಬೇಡಿರಿ" (ಪ್ರಕಟನೆ 7 :3) ಎಂದು ಸಾಂಕೇತಿಕವಾಗಿ ಹೇಳುವುದನ್ನು ನೋಡುತ್ತೇವೆ. ಹಣೆಯ ಮೇಲೆ ಮುದ್ರೆಹಾಕುವುದು ಸತ್ಯದ ಮಾನಸಿಕ ಧಾರಣಶಕ್ತಿಯು ಒಂದು ಗುರುತು ಅಥವಾ ಮುದ್ರೆಯಾಗಿದೆ ಮತ್ತು ಅದು ದೇವರ ಸೇವಕರನ್ನು ಬಾಬೇಲಿನ ಸೇವಕರು ಮತ್ತು ಉಪಾಸಕರುಗಳಿಂದ ಪ್ರತೇಕಿಸುತ್ತದೆ ಮತ್ತು ಗುರುತಿಸುತ್ತದೆ. ಇದು ದಾನಿಯೇಲನ ಈ ಸಾಕ್ಷ್ಯದಿಂದ ದೃಢಪಡುತ್ತದೆ – "ಅನೇಕರು ತಮ್ಮನ್ನು ಶುದ್ಧೀಕರಿಸಿ ಶುಭ್ರಮಾಡಿಕೊಂಡು ಶೋಧಿತರಾಗುವರು; ದುಷ್ಟರು ದುಷ್ಟರಾಗಿಯೇ ನಡೆಯುವರು (ಒಡಂಬಡಿಕೆಯಲ್ಲಿ ನಂಬಿಕೆಯಿಲ್ಲ ದವರು), ಅವರಲ್ಲಿ ಯಾರಿಗೂ ವಿವೇಕವಿರದು, ಜ್ಞಾನಿಗಳಿಗೆ ವಿವೇಕವಿರುವುದು (ನಿನ್ನ ಜನರು)" (ದಾನಿ. 12: 8–10). ತಿರಸ್ಕೃತರ ಮೇಲೆ ಬಾಬೇಲಿನಿಂದ ತ್ಯಜಿಸಲ್ಪಟ್ಟವರ ಮೇಲೆ ಪಿಡುಗುಗಳು ಬರುವ ಮೊದಲು ಈ ರೀತಿಯಲ್ಲಿ ವರ್ಗಗಳನ್ನು ಗುರುತಿಸಬೇಕಾಗುವುದು.

ಈ ಜ್ಞಾನವು ಮುದ್ರಿಸುವ ಮತ್ತು ಪ್ರತ್ಯೇಕಿಸುವ ಪಾರುಪತ್ಯವಾಗಬೇಕು ಎಂಬುದನ್ನು ಈ ಹಿಂದೆ ಪರಿಗಣಿಸಿದ ವಾಕ್ಯಕ್ಕಿಂತ ಮೊದಲೇ ಸೂಚನೆ ನೀಡುತ್ತದೆ. ಯಾಕೆಂದರೆ 'ಬಾಬೇಲ್ ಬಿದ್ದಿತು', ಕೆಲವೊಂದು ಉಪದ್ರವಗಳು ಮತ್ತು ಶಿಕ್ಷೆಗಳು ಆಕೆಯ ಮೇಲೆ ಬರಲಿವೆ, ಅದಕ್ಕೂ ಮೊದಲೇ ದೇವರ ಜನರು 'ಆ ಜ್ಞಾನದ ಮೇಲೆ ಆತುಕೊಂಡು ಹೊರಬನ್ನಿರಿ' ಎಂಬ ಆಜ್ಞೆಗೆ ವಿಧೇಯರಾಗಬೇಕಾಗಿದೆ ಎಂಬ ಘೋಷಣೆಯನ್ನು ಮಾಡಲಾಯಿತು. ಖಂಡಿತವಾಗಿಯೂ, ಎಲ್ಲರೂ 'ತಮ್ಮ ಹಣೆಯ ಮೇಲೆ ಮುದ್ರೆಹಾಕಿಸಿಕೊಳ್ಳಬೇಕಾಗಿದೆ' ಎಂಬುದು ನಮಗೆ ತಿಳಿದದೆ. ದೇವರ ಯೋಜನೆಯ ಬಗ್ಗೆ ಇದನ್ನು ಅವರು ಬುದ್ಧಿವಂತಿಕೆಯಿಂದ ದೇವರ ಆಜ್ಞೆಯನ್ನು ಮೆಚ್ಚಿಕೊಂಡು ಅದಕ್ಕೆ ವಿಧೇಯರಾಗುವ ಮೊದಲೇ ತಿಳಿಸಲಾಗಿದೆ.

ದೇವರ ಸೇವಕರನ್ನು ಮುದ್ರಿಸುವ ಈ ಕಾರ್ಯವು ಈಗ ಪ್ರಗತಿಯಲ್ಲಿರುವುದು ಸುವ್ಯಕ್ತವಲ್ಲವೆ? ನಾವು ನಮ್ಮ ಹಣೆಯ ಮೇಲೆ ಮುದ್ರೆ ಹಾಕಿಸಿಕೊಳ್ಳುತ್ತಿಲ್ಲವೆ?, ಅದೂ ಸರಿಯಾದ ಸಮಯದಲ್ಲಿ? ನಾವು ಹೆಜ್ಜೆ ಹೆಜ್ಜೆಯಾಗಿ ದೇವರ ಸ್ವಂತ ಕೈಗಳಿಂದ, – ಆತನ ವಾಕ್ಯದಿಂದ – ಸತ್ಯವನ್ನು ಮತ್ತು ಇತರ ಸಾಮಾನ್ಯವಾದ ವಿಷಯಗಳನ್ನು ಆತನ ದೃಷ್ಟಿಯಲ್ಲಿ ಮೆಚ್ಚಿಕೊಳ್ಳುವಂತೆ ಮತ್ತು ಇತರ ಮೂಲದಿಂದ ಬಂದ ಅನೇಕ ಅಭಿಪ್ರಾಯಗಳನ್ನು ಮತ್ತು ವಿಷಯಗಳನ್ನು ರದ್ದು ಮಾಡುವಂತೆ ನಡೆಸಲ್ಪಡುತ್ತಿಲ್ಲವೆ? ನಮ್ಮನ್ನು ಮುದ್ರಿಸುತ್ತಿರುವುದು ಬಾಬೇಲಿನ ವಿವಿಧ ಭಾಗಗಳು ಅಥವಾ ಪಂಗಡಗಳಿಂದ ಬಂದ ನಾಲೆಗಳಲ್ಲ ಎಂಬುದು, ಬದಲಿಗೆ (ಬಾಬೇಲಿನ) ಅವುಗಳು ಅದರ (ಮುದ್ರಿಸುವ) ವೇಗವಾದ ನೆರವೇರಿಕೆಗೆ ಅಡ್ಡಿಯಾಗಿದೆ ಎಂಬುದು ಸತ್ಯವಲ್ಲವೆ? ನಾವು ಅವುಗಳ ಔಚಿತ್ಯವನ್ನು ಮತ್ತು ಸುಗ್ಗಿಯಲ್ಲಿ ಗೋಧಿ ಮತ್ತು ಹಣಜಿಗಳ ಪ್ರತ್ಯೇಕತೆ ಆಗಬೇಕು ಎಂಬ ಕರ್ತನ ಪ್ರಕಟನೆಯನ್ನು ನಾವು ಕಾಣುತ್ತಿಲ್ಲವೆ? ಅದು ಸತ್ಯತೆಗಳನ್ನು ಆತನ ನಂಬಿಗಸ್ತರಿಗೆ ತೋರಿಸುವ ಆತನ ಯೋಜನೆಯಾಗಿದೆ ಮತ್ತು ಒಡನೆಯೇ ಅವರುಗಳು ತಮ್ಮ ವಿಧೇಯತೆಯನ್ನು ಹೃತ್ಪೂರ್ವಕವಾದ ಸಹಾನುಭೂತಿಯನ್ನು ಈ ಯೋಜನೆಗೆ ತೋರಿಸು ವುದನ್ನು ನಿರೀಕ್ಷಿಸುವುದಾಗಿದೆ ಎಂಬುದಾಗಿ ನಮಗೆ ಕಂಡುಬರುತ್ತಿಲ್ಲವೆ? ನಾವು ವಿಧೇಯರಾಗಿ ಹೊರಗೆ ಬರುವುದಾದರೆ ಜನರ ಮೆಚ್ಚುಗೆಯನ್ನು, ಅನುಕೂಲಕರ ಸಂಬಳ, ದೇವರ ಸೇವಕರ ಮನೆ, ಆರ್ಥಿಕ ಸಹಾಯಗಳು, ಗೃಹಶಾಂತಿ ಅಥವಾ ಎಲ್ಲವುಗಳನ್ನೂ ಹಿಂದಕ್ಕೆ ಬಿಡುವಂತಾದರೆ ಏನು ಅಥವಾ ಏನಲ್ಲ? ಆದಾಗ್ಯೂ ನಾವು ಹೆದರದೆ ಇರೋಣ. "ಬನ್ನಿರಿ" ಎಂದು ಹೇಳುವಾತನು ಸಮುದ್ರದ ಮೇಲೆ ನಡೆಯುವಾಗ ಪೇತ್ರನಿಗೆ ಬಾ ಎಂದು ಹೇಳಿದಾತನೇ ಆಗಿದ್ದಾನೆ. ಅದಕ್ಕೆ ವಿಧೇಯನಾಗಿದ್ದ ಪೇತ್ರನು ಕರ್ತನು ಆತನ ಕಡೆಗೆ

ಕೈಚಾಚಿ ಆತನ ತೋಳುಗಳ ಮೂಲಕ ಎಳೆಯದೇ ಹೋಗಿದ್ದರೆ ಪೇತ್ರನು ಮುಣುಗಿ ಹೋಗಬಹುದಿತ್ತು. ಈಗ ಅದೇ ತೋಳುಗಳು ಆತನ ಅಧೀನತೆಯಲ್ಲಿರುವವರನ್ನು ಬಾಬೇಲಿನಿಂದ ಹೊರ ಬರುವವರನ್ನು ಬೆಂಬಲಿಸುತ್ತದೆ. ನಡುವೆ ಕಷ್ಟಗಳೆಂಬ ಭೋರ್ಗರೆಯುವ ಸಮುದ್ರವನ್ನು ನೋಡದೇ ನೇರವಾಗಿ ಕರ್ತನನ್ನು ದೃಷ್ಟಿಸು, ಒಳ್ಳೆಯ ಧೈರ್ಯವುಳ್ಳವನಾಗಿರು.

ಆಜ್ಞೆಯು 'ಬಾ' ಎಂಬುದು, 'ಹೋಗು' ಎನ್ನುವುದಲ್ಲ. ಯಾಕೆಂದರೆ ದಾಸತ್ವದಿಂದ ಮಾನವ ಸಂಪ್ರದಾಯಗಳ ಬಂಧನದಿಂದ, ಮತಾಭಿಪ್ರಾಯಗಳಿಂದ, ವ್ಯವಸ್ಥೆ ಮತ್ತು ದೋಷಗಳಿಂದ ಹೊರಬರುವಾಗ, ನಾವು ನಮ್ಮ ಕರ್ತನ ಕಡೆಗೆ ತಿರುಗಿ ಆತನಿಂದ ಕಲಿತುಕೊಳ್ಳಲು, ಉಣಿಸಿಕೊಳ್ಳಲು, ಬಲಹೊಂದಿ ಸಮರ್ಪಕಗೊಂಡು ಆತನಿಗೆ ಸಂತೋಷವನ್ನುಂಟು ಮಾಡುವ ಎಲ್ಲವುಗಳನ್ನು ಮಾಡುವಂತೆ ನೇರವಾಗಿ ಬರುತ್ತೇವೆ ಮತ್ತು ನಿಂತುಕೊಳ್ಳುದಕ್ಕಾಗಿಯೇ ಹೊರತು ಬಾಬೇಲಿನೊಂದಿಗೆ ಬೀಳುವುದಕ್ಕಾಗಿ ಅಲ್ಲ.

ದೇವರ ಮಾತು ತಿಳಿಸುವುದೇನೆಂದರೆ, ನಾಮಾಂಕಿತ ಸಭೆಯು ಆತನ ಕೃಪೆಯಿಂದ, ಆತನ ಮುಖವಾಣಿಯಾಗುವುದರಿಂದ ಬಿದ್ದುಹೋದ ಮೇಲೆ (ಪ್ರಕಟನೆ 3:16) ಕ್ರಮೇಣವಾಗಿ ಅಪನಂಬಿಕೆಯ ಸ್ಥಿತಿಯಲ್ಲಿ ನೆಲೆಗೊಳ್ಳಬೇಕಾಗುತ್ತದೆ. ಅದರಲ್ಲಿ ಸತ್ಯವೇದವನ್ನು ಹೆಸರು ಮಾತ್ರಕ್ಕೆ ಉಳಿಸಿಕೊಂಡರೂ ಅದನ್ನು ವಾಸ್ತವದಲ್ಲಿ ಅಂತ್ಯತಃ ಪೂರ್ತಿಯಾಗಿ ಅಲಕ್ಷಿಸಲಾಗುವುದು. ಅದರಲ್ಲಿ ವಿವಿಧ ಛಾಯೆಗಳುಳ್ಳ ತತ್ವಜ್ಞಾನದ ಊಹಾಪೋಹಗಳು ನಿಜವಾದ ಮತಭಿಪ್ರಾಯಗಳಾಗಿರುತ್ತವೆ. ಈ ಪತನದಿಂದ ಮುದ್ರೆಹೊಂದಿದ ನಂಬಿಗಸ್ತರು ತಪ್ಪಿಸಿಕೊಳ್ಳುತ್ತಾರೆ; ಯಾಕೆಂದರೆ ಅವರುಗಳು "ಬರುವುದಕ್ಕಿರುವ ಇವೆಲ್ಲವುಗಳಿಂದ ತಪ್ಪಿಸಿಕೊಳ್ಳುವುದಕ್ಕೂ ಮನುಷ್ಯ ಕುಮಾರನ ಮುಂದೆ ನಿಂತುಕೊಳ್ಳುವುದಕ್ಕೂ" ಬಿದ್ದುಹೋಗದೆ ಎದ್ದೇಳುವಂತೆ ಅರ್ಹರಾಗಿರುತ್ತಾರೆಂದು ಎಣಿಸಲ್ಪಟ್ಟಿದ್ದಾರೆ (ಲೂಕ 21:36). ವಾಸ್ತವವಾಗಿ, ಈಗಾಗಲೇ ಹಲವರು ಆ ರೀತಿಯಲ್ಲಿ ನೆಲೆಗೊಂಡಿದ್ದಾರೆ. ಆರಾಧನೆಯ ರೂಪಗಳನ್ನು ಮತ್ತು ಸೃಷ್ಟಿಕರ್ತನ ಮೇಲೆ ಹಾಗೂ ಭವಿಷ್ಯದ ಜೀವನದ ಮೇಲೆ ನಂಬಿಕೆಯನ್ನು ಉಳಿಸಿಕೊಂಡಿದ್ದಾರೆ. ಆದರೆ ಅವುಗಳನ್ನು ಮುಖ್ಯವಾಗಿ ಅವರ ಅಥವಾ ಇತರರ ವೇದಾಂತಗಳಿಂದ, ವಿಚಾರಸರಣಿಗಳಿಂದ ನೋಡುವುದನ್ನು ಮತ್ತು ಸತ್ಯವೇದವು ದೇವರ ಉದ್ದೇಶಗಳನ್ನು ತಿಳಿಸುವ ಖಂಡಿತವಾದ ಬೋಧಕನೆಂಬುದನ್ನು ನಿರ್ಲಕ್ಷಿಸಿದ್ದಾರೆ. ಇವರುಗಳು, ಸತ್ಯವೇದವನ್ನು ಉಳಿಸಿಕೊಂಡಿರುವುದಾದರೂ, ಅದರ ನಿರೂಪಣೆಯನ್ನು ವಿಶೇಷವಾಗಿ ಏದೇನ್ ಮತ್ತು ಅಲ್ಲಿನ ಪತನ ಇವುಗಳನ್ನು ನಂಬದೆ ಹೋಗಿದ್ದಾರೆ. ಯೇಸುವಿನ ಹೆಸರನ್ನು ಉಳಿಸಿಕೊಂಡು ಮತ್ತು ಆತನನ್ನು ಕ್ರಿಸ್ತನು, ರಕ್ಷಕನು ಎಂದು ಕರೆಯುತ್ತಾ ಅವರು ಆತನನ್ನು ಒಬ್ಬ ಉತ್ಕೃಷ್ಟನಾದರೂ ದೋಷರಹಿತ ಆದರ್ಶಪ್ರಾಯನಲ್ಲವೆಂದು ಎಣಿಸಿ, ಆತನ ಶಿಲುಬೆಯಲ್ಲಿನ ಈಡುಬಲಿಯನ್ನು ಪೂರ್ಣವಾಗಿ ತಿರಸ್ಕರಿಸಿದ್ದಾರೆ. ದೇವರ ಪಿತೃತ್ವವನ್ನು ಪಾಪಿಗಳಿಗೂ ವಿಸ್ತರಿಸುವ ಹೇಳಿಕೆಯನ್ನು ಸಾಧಿಸಿ (ಮೂಲಕ) ಅವರುಗಳು ಶಾಪವನ್ನೂ ಮತ್ತು ವಿಮೋಚಕನನ್ನೂ ನಿರಾಕರಿಸುತ್ತಾರೆ.

ನಮ್ಮ ಕರ್ತನ ಮೂರುವರೆ ವರ್ಷಗಳ ಸೇವೆಯ ಪ್ರಥಮ ಆಗಮನದಲ್ಲಿ ಮತ್ತು ಯೆಹೂದ್ಯ ರಾಷ್ಟ್ರವನ್ನು ತ್ಯಜಿಸುವವರೆಗೆ ಅವರ ಸಭೆ ಮತ್ತು ರಾಷ್ಟ್ರವು ಒಂದೇ ಆಗಿತ್ತು. ಒಟ್ಟಾರೆಯಾಗಿ ಅದರ ಆಡಳಿತ ಪದ್ಧತಿಯನ್ನು ಅಥವಾ ವ್ಯವಸ್ಥೆಯನ್ನು ಶೋಧಿಸುವ ಅಥವಾ ಪರೀಕ್ಷಿಸುವುದಾಗಿತ್ತೇ ವಿನಃ ಪ್ರತಿ ಸದಸ್ಯರ ಪರೀಕ್ಷೆಯಲ್ಲ. ಇದನ್ನು ಸಾಮಾನ್ಯವಾಗಿ ಗಮನಿಸಿರಲಿಲ್ಲ. ಅದರ ಪುರೋಹಿತವರ್ಗದವರು – ಯಾಜಕರುಗಳು, ಶಾಸ್ತ್ರಿಗಳು ಮತ್ತು ಫರಿಸಾಯರುಗಳು – ಆ ಪದ್ಧತಿಯನ್ನು ಸಮಗ್ರವಾಗಿ ಪ್ರತಿನಿಧಿಸುವವರಾಗಿದ್ದರು. ತಾವು ಯೆಹೂದಿ ಧರ್ಮವನ್ನು ಪ್ರತಿನಿಧಿಸುವವರಾಗಿದ್ದೇವೆಂದು ಅವರೇ ಹೇಳಿದ್ದಾರೆ (ಯೋಹಾನ 7: 48,49) ಮತ್ತು ಜನರು ಸಹ ಅವರನ್ನು ಹಾಗೆಯೇ ಆದರಿಸುತ್ತಿದ್ದರು. ಹೀಗಾಗಿ ವಿಚಾರಣೆಯ ಪ್ರಾಬಲ್ಯವು, ಅಧಿಕಾರಿಗಳಲ್ಲಿ ಅಥವಾ ಫರಿಸಾಯರಲ್ಲಿ ಯಾರಾದರೂ ಆತನನ್ನು ನಂಬಿದ್ದರೋ? ನಮ್ಮ ಕರ್ತನು ಅವರನ್ನು ಆ ರೀತಿಯಾಗಿ ಗ್ರಹಿಸಿದನು; ಜನರು ತನ್ನನ್ನು ಸ್ವೀಕರಿಸಲು ವಿಫಲರಾಗಿರುವುದಕ್ಕಾಗಿ ಆತನು ಅವರನ್ನು ಗದರಿಸಿದ್ದು ತೀರಾ ವಿರಳ. ಅವರುಗಳು ತಾವಾಗಿ ದೇವರ ರಾಜ್ಯವನ್ನು ಸೇರುವುದೇ ಇಲ್ಲ, ಅಥವಾ ಇತರ ಜನರಿಗೂ ಅನುಮತಿ ನೀಡುವುದಿಲ್ಲ ಎಂಬ ಕಾರಣಕ್ಕೆ ಅವರ 'ಕುರುಡ ನಾಯಕರುಗಳನ್ನು' ಬಾರಿ ಬಾರಿಗೂ ಜವಬ್ದಾರರನ್ನಾಗಿ ಮಾಡಿದನು. ಇಲ್ಲವಾದಲ್ಲಿ ಅವರುಗಳು ಹಾಗೆ ಮಾಡಿರುತ್ತಿದ್ದರೆ ಯೇಸುಕ್ರಿಸ್ತನನ್ನು ಮೆಸ್ಸೀಯ ಅಥವಾ ಅರಸನು ಎಂಬುದಾಗಿ ಸ್ವೀಕರಿಸುತ್ತಿದ್ದರು

ನಮ್ಮ ಕರ್ತನ ನಿರಂತರವಾದ ಪ್ರಯತ್ನವು ಸಾರ್ವಜನಿಕರ ಗಮನ ಸೆಳೆಯುವುದನ್ನು ತಡೆಗಟ್ಟುವುದಾಗಿತ್ತು. ತನ್ನ ಅದ್ಭುತ ಕಾರ್ಯಗಳು ಮತ್ತು

ಬೋಧನೆಗಳು ಜನರನ್ನು ಪ್ರಚೋದಿಸದಂತೆ ಮಾಡುವುದಾಗಿತ್ತು. ಹಾಗಾಗದಿದ್ದಲ್ಲಿ ಅವರು ಆತನನ್ನು ಬಲತ್ಕಾರವಾಗಿ ಕರಕೊಂಡು ಹೋಗಿ ತಮ್ಮ ಅರಸನನ್ನಾಗಿ ಮಾಡಿಕೊಳ್ಳುತ್ತಿದ್ದರು (ಯೋಹಾನ 6:15). ಆದಾಗ್ಯೂ ಆತನು ತನ್ನ ಮೆಸ್ಸೀಯತ್ವದ ಅಧಿಕಾರದ ಈ ಸಾಕ್ಷ್ಯಗಳನ್ನು ಅಥವಾ ಪುರಾವೆಗಳನ್ನು ನಿರಂತರವಾಗಿ ಯೆಹೂದ್ಯ ಯಾಜಕರುಗಳ ಗಮನಕ್ಕೆ ತರುತ್ತಲೇ ಇದ್ದನು. ಅವರ ಸಭಾರಾಷ್ಟ್ರವು ಮುಗಿಯುವವರೆಗೆ, ಅವರ ಮನೆ ಅಥವಾ ಪದ್ಧತಿಯು ತೆಗೆದುಹಾಕಲ್ಪಟ್ಟು ಅವರು ಆಲಯವು ಅವರಿಗೆ ಬರಿದಾಗುವತನಕವಾಗಿತ್ತು. ನಂತರದಲ್ಲಿ ಇದನ್ನು ಆತನ ನಿರ್ದೇಶನದಲ್ಲಿ ಮತ್ತು ಅಪೋಸ್ತಲರ ಬೋಧನೆಗಳ ಅಡಿಯಲ್ಲಿ, ಎಲ್ಲಾ ಪ್ರಯತ್ನಗಳನ್ನು ಜನರಿಗೆ ವ್ಯಕ್ತಿಗತವಾಗಿ ನಿರ್ದೇಶಿಸಲಾಯಿತು; ಮತ್ತು ತ್ಯಜಿಸಲ್ಪಟ್ಟ ಸಭಾಸಂಸ್ಥೆಯ ಮತ್ತು ಅದರ ಅಧಿಕಾರಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು.

ಕರ್ತನು ಆತನ ಸೇವಾಕಾಲದಲ್ಲಿನ ಸಾಕ್ಷಿಯಾಗಿ, ಮತ್ತು ಅವರ ಪದ್ಧತಿಯು ನಿರಾಕರಿಸಲ್ಪಡುವವರೆಗೆ, ಬೋಧಕರುಗಳು ಮತ್ತು ಯಾಜಕರುಗಳು ಅದನ್ನು ಪ್ರತಿನಿಧಿಸುತ್ತಿದ್ದರು, ಕರ್ತನು ಶುದ್ಧಿಹೊಂದಿದ ಕುಷ್ಠರೋಗಿಯ ವಿಷಯದಲ್ಲಿ ಅನುಸರಿಸಿದ ಕ್ರಮವನ್ನು ಮತ್ತಾಯ 8:4ರಲ್ಲಿರುವಂತೆ ನೋಡಿರಿ. – ಯೇಸು ಅವನಿಗೆ – "ಯಾರಿಗೂ ಹೇಳಬೇಡ ನೋಡು; ಆದರೆ ಹೋಗಿ ಯಾಜಕನಿಗೆ ನಿನ್ನ ಮೈ ತೋರಿಸಿ ಮೋಶೆ ನೇಮಿಸಿದ ಕಾಣಿಕೆಯನ್ನು ಕೊಡು; ಅದು ಜನರಿಗೆ ಸಾಕ್ಷಿಯಾಗಲಿ ಎಂದು ಹೇಳಿದನು". ಸಾಕ್ಷಿ ಅಥವಾ ಪುರಾವೆಯನ್ನು ಜನರಿಂದ ಕೆಲವು ಕಾಲಗಳವರೆಗೆ ಮುಚ್ಚಿಡಬೇಕಾಗುತ್ತದೆ, ಅದರೆ ಅವುಗಳನ್ನು ಯೆಹೂದ್ಯ ಸಭೆಯನ್ನು ಪ್ರತಿನಿಧಿಸುವ ಅಧಿಕಾರಿಗಳಿಗೆ ಆಗ ಪ್ರಗತಿಯಲ್ಲಿರುವ ವಿಚಾರಣೆಯ ಸಮಯದಲ್ಲಿ ತಡವಿಲ್ಲದೆ ಒಪ್ಪಿಸಲೇಬೇಕು.

ನಾವಿಲ್ಲಿ ವಿಶಿಷ್ಟವಾಗಿ ಅಂದಿನ ಯೆಹೂದಿ ಸಭೆಯ ಪದ್ಧತಿಯಾಗಿರುವ ವಿಚಾರಣೆಯ ಉದ್ದೇಶವನ್ನು ಮತ್ತು ಅದರ ಫಲಿತಾಂಶವನ್ನು ಗಮನಿಸಬೇಕು. ಏಕೆಂದರೆ ಅದು ಸುವಾರ್ತಾಸಭೆಯ ಪ್ರಸ್ತುತ ವಿಚಾರಣೆಯ ಬಗ್ಗೆ ಅದರ ಸಾಂಕೇತಿಕ ವರ್ತನೆಯನ್ನು ಮತ್ತು ದೇವರ ಸಮಗ್ರ ಯೋಜನೆಯ ಸಲುವಾಗಿ ಅದರ ಸಂಬಂಧವನ್ನು ತೋರುತ್ತದೆ. ಅವರು, ದೇವರ ವಾಗ್ದಾನಗಳ ಬಗ್ಗೆ ಸಾಮರಸ್ಯದಿಂದ ಕರ್ತನ ಆಗಮನಕ್ಕೆ ಸಿದ್ಧವಾಗಿದ್ದ ಜನರಾಗಿರುತ್ತೇವೆಂದು ಬಹಿರಂಗ ಹೇಳಿಕೆ ನೀಡಿದ್ದರು. ಬರುವ ಮೆಸ್ಸೀಯನು ಜನರನ್ನು ಆತನೇ ಸಂಘಟಿಸುತ್ತಾನೆ, ಬಲಗೊಳಿಸುತ್ತಾನೆ, ನಿರ್ದೇಶಿಸುತ್ತಾನೆ ಮತ್ತು ಲೋಕದ ಇತರೆ ರಾಷ್ಟ್ರಗಳನ್ನು ಆಶೀರ್ವದಿಸಲು ಅವರನ್ನು ತನ್ನ ಸ್ವಂತ ಜನರನ್ನಾಗಿ ಉಪಯೋಗಿಸುತ್ತಾನೆ ಹಾಗೂ ಎಲ್ಲರನ್ನೂ ದೇವರ ಸಂಪೂರ್ಣ ತಿಳುವಳಿಕೆಗೆ ಮತ್ತು ಆತನ ನೀತಿಯುಳ್ಳ ನಿಯಮಗಳೊಂದಿಗೆ ಸಾಮರಸ್ಯವುಳ್ಳವರಾಗುವಂತೆ ಅವರನ್ನು ಕರೆತರುತ್ತಾನೆ ಎಂಬುದಾಗಿ ಹೇಳಿಕೆ ಕೊಟ್ಟಿದ್ದರು. ದೇವರು ತನ್ನ ಮುನ್ನರಿವಿನಿಂದ, ಶಾರೀರಿಕ ಇಸ್ರಾಯೇಲ್ಯರು ಮಹಾಕಾರ್ಯದ ಮುಖ್ಯ ಸ್ಥಾನದಲ್ಲಿರಲು ಅನರ್ಹರು ಎಂಬುದು ತಿಳಿದಿದ್ದರೂ, ಪರಂತು, ತಾನು ಅದರ ಫಲಿತಾಂಶಗಳ ಬಗ್ಗೆ ಅರಿವಿಲ್ಲವೆಂಬಂತೆ ಅವರಿಗೆ ಪ್ರತಿಯೊಂದು ಅವಕಾಶ ಮತ್ತು ಸವಲತ್ತುಗಳನ್ನು ಒದಗಿಸಿಕೊಡುತ್ತಾನೆ. ಅದೇ ಸಮಯದಲ್ಲಿ ಆತನು ತನ್ನ ಮುನ್ನರಿವಿನಿಂದ, ಪ್ರವಾದನೀಯ ಹೇಳಿಕೆಗಳಲ್ಲಿ ತಿಳಿಯಪಡಿಸಿದ್ದರೂ ಅವರುಗಳು ಅದನ್ನು ಗ್ರಹಿಸದಾದರು, ಇಲ್ಲದಿದ್ದರೆ, ನಾವು ಆತನು ಯೆಹೂದ್ಯ ಜನರೊಂದಿಗಿನ ತನ್ನ ವ್ಯವಹಾರಗಳಲ್ಲಿ ಪ್ರಯೋಗ ಮಾಡುತ್ತಿದ್ದು ಅದರಲ್ಲಿ ಆತನು ಸೋತು ಹೋಗಿದ್ದಾನೆಂದು ನಾವು ಭಾವಿಸಬಾರದು.

ಇಸ್ರಾಯೇಲ್ ಒಂದು ಸಭಾ ರಾಷ್ಟ್ರವಾಗಿದ್ದು ಕಾರ್ಯಕ್ರಮದ ತಮ್ಮ ಭಾಗವನ್ನು ನಿರ್ವಹಿಸಲು ತವಕಯುಳ್ಳವರಾಗಿ ಕಾಯುತ್ತಿದ್ದರು. ಆದರೆ ಅವರುಗಳು ದೇವರ ಮುಂದಿನ ಯೋಜನೆಯು ಚಾಲನೆ ಯಾಗುವವರೆಗೆ ಪರೀಕ್ಷೆ/ಶೋಧನೆಗೊಳಗಾಗುವುದು ಯುಕ್ತವಾಗಿತ್ತು. ಮುಂದಿನ ಯೋಜನೆಯು, ಅಬ್ರಹಾಮನ ಸ್ವಾಭಾವಿಕ ಸಂತಾನವು ಅವರ ಶೋಧನೆಗಳಿಂದ ವಾಗ್ದಾನಪಡಿಸಿದ ಮತ್ತು ಬಯಸಿದ ಮುಖ್ಯ ಗೌರವಕ್ಕೆ ಅನರ್ಹರೆಂದು ಸಾಬೀತಾದರೆ, ಆಗ ಸುವಾರ್ತಾಯುಗದಲ್ಲಿ ಆಯ್ಕೆ ಅಥವಾ ಆದುಕೊಳ್ಳುವದನ್ನು ಮಾಡಬೇಕಾಗಿತ್ತು. ವ್ಯಕ್ತಿಗಳು ಅಬ್ರಹಾಮನ ವಾಗ್ದಾನದ ಸಂತತಿಯೆಂದು ಉತ್ತಮ ಘನತೆಯನ್ನು ಹೊಂದಿ, ಮತ್ತು ಕರ್ತನೊಂದಿಗೆ ಆತನ ವಾಗ್ದತ್ತ ರಾಜ್ಯದಲ್ಲಿ ಸಹಬಾಧ್ಯಸ್ತರಾಗುವಂತೆ ಮಾಡಬೇಕಾಗುತ್ತದೆ. ಅವರುಗಳು ಲೋಕದ ಎಲ್ಲಾ ಕುಟುಂಬಗಳನ್ನು ಮೇಲೆ ಎತ್ತಿ ಆಶೀರ್ವದಿಸುವರು (ಗಲಾತ್ಯ 3:16, 27–29, 14).

ಯೆಹೂದ್ಯರಿಗೆ ವಾಗ್ದಾನಪಡಿಸಿದ್ದ ದೇವರ ಕೃಪೆಯ ಎಪ್ಪತ್ತು ವಾರಗಳು ಅಂದರೆ 490 ದಿನಗಳು ನೆರವೇರಲು ವಿಫಲವಾಗುವುದಿಲ್ಲ; ಆದುದರಿಂದ ಯಾವುದೇ ಅರ್ಥದಲ್ಲಿ ಅನ್ಯಜನಗಳು ಅಥವಾ ಸಮಾರ್ಯದವರು ಕೂಡಾ ಶಿಷ್ಯರಾಗುವುದಕ್ಕಾಗಲೀ ಅಥವಾ ಯಾವುದೇ

ಅರ್ಥದಲ್ಲಿ ಕ್ರಿಸ್ತನು ಮತ್ತು ಅಪೋಸ್ತಲರುಗಳು ಬೋಧಿಸಿದ ರಾಜ್ಯದೊಂದಿಗೆ ಭಾಗಿಯಾಗುವುದಕ್ಕಾಗಲೀ ಸಾಧ್ಯವಾಗದು (ಅ.ಕೃ. 3:26).

"ದೇವರ ವಾಕ್ಯವನ್ನು ಮೊದಲು ನಿಮಗೇ ಹೇಳುವುದು ಅವಶ್ಯವಾಗಿತ್ತು. (ದೇವರ ರಾಜ್ಯದಲ್ಲಿ ಪಾಲುದಾರರಾಗಲು ಆಮಂತ್ರಣ) ಎಂದು ಪೌಲನು ಯೆಹೂದ್ಯರಿಗೆ ಸಂಬೋಧಿಸಿ ಹೇಳಿದ್ದಾನೆ (ಅ.ಕೃ 13:46–47). "ಅನ್ಯಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ. ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ್ಯನ ಮನೆತನದವರ ಬಳಿಗೆ ಹೋಗಿರಿ" (ಮತ್ತಾಯ 10:6) ಎಂತಲೂ, ಪುನಃ "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" (ಮತ್ತಾಯ 15:24) ಎಂದು ಪ್ರಭುವಾದ ಯೇಸುವು ತನ್ನ ಶಿಷ್ಯರನ್ನು ಕಳುಹಿಸಿಕೊಡುವಾಗ ಹೇಳಿದ್ದಾನೆ.

ಪೂರ್ತಿಯಾಗಿ "ಎಪ್ಪತ್ತನೆಯ ವಾರವು", (ಇದರ ಮಧ್ಯದಲ್ಲಿ ಕ್ರಿಸ್ತನು ಮರಣಹೊಂದಿದನು) ನಮ್ಮ ಕರ್ತನ ಸೇವೆಯು ಪ್ರಾರಂಭವಾದಂದಿನಿಂದ ಮೊದಲುಗೊಂಡು ಆತನು ಪೇತ್ರನನ್ನು ಮೊದಲನೆಯ ಪರಿವರ್ತಿತ ಅನ್ಯಜನವಾದ ಕೊರ್ನೇಲನಿಗೆ ಬೋಧಿಸಲು ಕಳುಹಿಸುವವರೆಗಿನ ಏಳು ವರ್ಷಗಳ ಅವಧಿಯನ್ನು ಯೆಹೂದ್ಯರ ವಿಚಾರಣೆಯ ಸಲುವಾಗಿ ದೇವರ ಸಿದ್ಧತೆಗಳಿಗಾಗಿಯೇ ಪ್ರತ್ಯೇಕಿಸಲ್ಪಟ್ಟಿತ್ತು. ಆದರೆ ಅವರನ್ನು ಒಟ್ಟಾಗಿ, ಒಂದು ಸಭಾರಾಷ್ಟ್ರವಾಗಿ ಪರೀಕ್ಷಿಸದೆ, ಆ ಎಲ್ಲಾ ಏಳು ವರ್ಷಗಳ ಪರೀಕ್ಷೆಯನ್ನು "ನೀತಿವಂತಿಕೆಯಲ್ಲಿ ಮೊಟಕುಗೊಳಿಸಲಾಯಿತು". ಅದು ಅವರ ಅನಾನುಕೂಲತೆಗಾಗಿ ಅಲ್ಲ, ಅನುಕೂಲತೆಗಾಗಿಯೇ. ಆದುದರಿಂದ ಫರಿಸಾಯರು, ಯಾಜಕರು ಮತ್ತು ಶಾಸ್ತ್ರಿಗಳು ಯೇಸುವನ್ನು ತಿರಸ್ಕರಿಸಿದ್ದಲ್ಲದೆ, ಅಂತ್ಯದಲ್ಲಿ ಆತನನ್ನು ಹಗೆ ಮಾಡಿದರು, ಆತನನ್ನು ಕೊಲ್ಲ ಬಯಸಿದರು ಎಂಬುದು ದೇವರಿಗೆ ಮಾತ್ರವಲ್ಲ, ಮನುಷ್ಯರಿಗೆ ಸಹಾ ಸ್ಪಷ್ಟವಾಗಿದೆ. ಆದುದರಿಂದ ಆತನಿಗೆ ತನ್ನನ್ನು ಅರ್ಪಿಸಿಕೊಡುವ ಕಾಲ ಬಂದಿದೆ ಎಂದು ಎಂದು ತಿಳಿದಾಗ, ಆತನು ಜನಗಳ ಮುಂದೆ ಅರಸನಂತೆ ಅವರ ಬಳಿಗೆ ಕತ್ತೆಯ ಮೇಲೆ ಸವಾರಿ ಮಾಡಿಹೋದಾಗ, ಸಭಾ ರಾಷ್ಟ್ರದ ಸದಸ್ಯರು ಆತನನ್ನು ಸ್ವೀಕರಿಸಲಿಲ್ಲ, ಸಾಮಾನ್ಯ ಜನರು ಆತನನ್ನು ಸಂತೋಷದಿಂದ ಸ್ವೀಕರಿಸಿದರಾದರೂ ಹಾಗೂ ಆತನನ್ನು ಅರಸನೆಂದು ಗುರುತಿಸಲು ಆಗ್ರಹಪಡಿಸಿದರೂ ಅರಸನು ಆ ಪದ್ಧತಿಯನ್ನು ತನ್ನದಲ್ಲವೆಂದು ಹೇಳಿದನು (ಮಾರ್ಕ 12:37). ಹೀಗಾಗಿ ನಮ್ಮ ಕರ್ತನು ನೂತನ ಹಂಚಿಕೆಯ ಸೇವಕರುಗಳು ಎಲ್ಲಾ ದೇಶಗಳಿಗೆ ಹಂಚಲ್ಪಡುವ ಮೊದಲು ಆ ತ್ಯಜಿಸಲ್ಪಟ್ಟ ಪದ್ಧತಿಯ ವ್ಯಕ್ತಿಗಳೊಂದಿಗೆ ಆ ಎಪ್ಪತ್ತನೆಯ ವಾರವನ್ನು ವಿಶೇಷವಾಗಿ ಮತ್ತು ಪ್ರತ್ಯೇಕವಾಗಿ ಕಳೆಯುವ ಸಲುವಾಗಿ ಆ ಅಪ್ರಯೋಜಕ ವಿಚಾರಣೆಯನ್ನು ಮೊಟಕುಗೊಳಿಸಿದನು. ಮತ್ತು ಅದು ಹಾಗೆಯೇ ಆಯಿತು; ನಮ್ಮ ಕರ್ತನು ಪುನರುತ್ಥಾನದ ನಂತರ, ತನ್ನ ಶಿಷ್ಯರಿಗೆ ಅವರ ಪ್ರಯತ್ನಗಳು ಇನ್ನು ಮುಂದೆ ಯೆಹೂದ್ಯರಿಗೆ ಮಾತ್ರವೇ ಮೀಸಲಾಗಿರದೆ, ಅದನ್ನು ಎಲ್ಲಾ ದೇಶಗಳಿಗೆ ವಿಸ್ತರಿಸಬೇಕಾಗಿದೆ ಎಂಬ ಮಾತುಗಳಿಗೆ "ಯೆರೂಸಲೇಮು ಮೊದಲುಗೊಂಡು" ಎಂಬ ಪದವನ್ನು ವಿಶಿಷ್ಟವಾಗಿ ಕೂಡಿಸುತ್ತಾನೆ (ಲೂಕ 24:47). ಆತನು ತಕ್ಕ ಸಮಯದಲ್ಲಿ ದಾರಿಯನ್ನು ತೆರೆಯುವ ತನಕ, ಅವರ ಯೆಹೂದಿ ಅಭಿಪ್ರಾಯಗಳು ಅವರನ್ನು ಯೆಹೂದ್ಯರಿಂದ ಆಚೆಗೆ ಹೋಗುವುದಕ್ಕೆ ಅಡ್ಡಿಮಾಡುತ್ತಿದೆ ಎಂಬುದು ಆತನಿಗೆ ತಿಳಿದಿತ್ತು. ಅದನ್ನು ಆತನು ಅವರ (ಯೆಹೂದ್ಯರ) ಕೃಪೆಯ ಅಂತ್ಯದಲ್ಲಿ ಪೇತ್ರನನ್ನು ಕೊರ್ನೇಲ್ಯನ ಬಳಿಗೆ ಕಳಿಸುವಾಗ ಮಾಡಿದನು. ಆ ಸಮಯದಿಂದ, ವ್ಯಕ್ತಿಗತ ಯೆಹೂದ್ಯರು ಮತ್ತು ಅನ್ಯಜನರು ದೇವರ ಕೃಪೆಯನ್ನು ಸಮಾನವಾಗಿ ಹಂಚಿಕೊಂಡರು, ಇಬ್ಬರೂ ಒಂದೇ ರೀತಿಯಲ್ಲಿ ಕ್ರಿಸ್ತನಲ್ಲಿ ಮತ್ತು ಕ್ರಿಸ್ತನ ಮೂಲಕ ಸ್ವೀಕಾರಾರ್ಹರಾದರು. ಯಾಕೆಂದರೆ, ಪ್ರಸ್ತುತ ಕರೆಯಲ್ಲಿ ದೇವರಿಗೆ ಸಂಬಂಧಿಸಿದಂತೆ "ಯಾವುದೇ ವ್ಯತ್ಯಾಸವಿರುವುದಿಲ್ಲ", ಯೆಹೂದ್ಯನಿಗೆ ಅನಾನುಕೂಲವಾದ ವ್ಯತ್ಯಾಸವು ಯಾವುದೆಂದರೆ ಆತನ ಪೂರ್ವಕಲ್ಪಿತ ಅಭಿಪ್ರಾಯಗಳೇ, ಒಮ್ಮೆ ನೀಡಲ್ಪಟ್ಟ ಆಶೀರ್ವಾದಗಳನ್ನು ದೇವರ ವಿಧಿನಿಬಂಧನೆಯ ಚೇತನದೊಡನೆ ಅವನಿಗೆ ಕ್ರಿಸ್ತನ ಮೂಲಕ ಬಹುಮಾನವಾಗಿ ನೀಡಲ್ಪಟ್ಟಿದ್ದನ್ನು ಹೊಂದಿಕೊಳ್ಳದೇ ಅದನ್ನು ವಿರೋಧಿಸುವುದೇ ಆಗಿದೆ. ಈಗ ಬಿದ್ದುಹೋದ ಸ್ಥಿತಿಯಲ್ಲಿ ಯಾರೂ ಅದನ್ನು ಭರ್ತಿ ಮಾಡಲಾರರು.

ಆ 'ಎಪ್ಪತ್ತನೆಯ ವಾರವು', ಶಾರೀರಿಕ ಇಸ್ರಾಯೇಲ್ಯರ ಪರೀಕ್ಷೆಯ ಎಲ್ಲಾ ವಿಶೇಷ ವಿವರಣೆಗಳೊಂದಿಗೆ, ಆ ಕಾಲವು ಸಾಂಕೇತಿಕ ಪರೀಕ್ಷಾ ಪದ್ಧತಿಯನ್ನು ನೇರವೇರಿಸುವುದು ಮಾತ್ರವಲ್ಲ, ವಿಶೇಷವಾಗಿ ಅದೇ ರೀತಿಯ ಹೆಸರು ಮಾತ್ರದ ಸುವಾರ್ತಾಸಭೆಯ ಅಥವಾ ಕ್ರೈಸ್ತ ಸಮುದಾಯ ಅಥವಾ ಬಾಬೇಲ್ ಎಂದು ಕರೆಯಲ್ಪಡುವ ಆತ್ಮೀಕ ಇಸ್ರಾಯೇಲ್ಯರ ಪರೀಕ್ಷೆಯ ಏಳು ಅನುರೂಪವಾದ ವರ್ಷಗಳು ಒಂದು ಸಾಂಕೇತಿಕ ಪ್ರತಿನಿಧತ್ವವನ್ನು ಒದಗಿಸಿದೆ. ಅದು 1874 ಅಕ್ಟೋಬರ್‌ನಿಂದ 1881ರ

ಅಕ್ಟೋಬರ್‌ವರೆಗಿನ ಆ ಏಳು ವರ್ಷಗಳು ಸುವಾರ್ತಾಯುಗದ ಸುಗ್ಗಿಯ ಪ್ರಾರಂಭವಾಗಿತ್ತು. "ಕ್ರೈಸ್ತ ಪ್ರಪಂಚ" 'ಬಾಬೇಲ್' ಇವುಗಳು ಅದರ ಮೂಲಸ್ವರೂಪವು, ಶಾರೀರಿಕ ಇಸ್ರಾಯೇಲ್ ವಿಫಲವಾಗುವುದನ್ನು ಒಪ್ಪಿಕೊಳ್ಳುತ್ತವೆ ಮತ್ತು ತಾನು ಅಬ್ರಹಾಮನ ನಿಜವಾದ ಸಂತತಿ ಎಂಬುವ ಹಕ್ಕೇಳಿಕೆ ನೀಡುತ್ತದೆ. ಮತ್ತು ಕಾಯುತ್ತಾ ಸಿದ್ಧವಾಗಿದ್ದು ಅನ್ಯಜನರ ಪ್ರಪಂಚವನ್ನು ಪರಿವರ್ತಿಸುವುದಕ್ಕೂ ತವಕವುಳ್ಳದ್ದಾಗಿದೆ ಮತ್ತು ಯೆಹೂದ್ಯ ಪದ್ಧತಿಯು ಹೇಳಿಕೊಳ್ಳುವಂತೆ ನೀತಿಯಿಂದ ಆಳುವುದಕ್ಕೂ, ಬೋಧಿಸುವುದಕ್ಕೂ ಮತ್ತು ಎಲ್ಲಾ ದೇಶಗಳಿಗೆ ಆಶೀರ್ವಾದವನ್ನುಂಟು ಮಾಡುವುದಕ್ಕೂ ತವಕವುಳ್ಳದ್ದಾಗಿದೆ. ಪ್ರಸ್ತುತ ಕಾಲವು ಸಾಂಕೇತಿಕ ಯುಗದಂತಿದೆ, ಮಾತ್ರವಲ್ಲದೆ ಆಗ ನಾಯಕರುಗಳು ಸಾಮಾನ್ಯವಾಗಿ ಬರಲಿರುವ ಮೆಸ್ಸೀಯನ ವಾಗ್ದಾನಗಳನ್ನು ಅಲಂಕಾರಿಕ ಹೇಳಿಕೆಗಳು ಎಂಬಂತೆ ಪರಿಗಣಿಸುತ್ತಾರೆ. ಜನರಲ್ಲಿನ ಕೇವಲ ಸಾಮಾನ್ಯ ವರ್ಗದವರು ಮಾತ್ರವೇ ವ್ಯಕ್ತಿಗತ ಮೆಸ್ಸೀಯನನ್ನು ನಿರೀಕ್ಷಿಸಿದ್ದರು. ಆದರೆ, ಅವರಲ್ಲಿ ವಿದ್ಯಾವಂತರು ಆಗ ವ್ಯಕ್ತಿಗತ ಮೆಸ್ಸೀಯನನ್ನು ನಿರ್ಲಕ್ಷಿಸಿದರು ಮತ್ತು ಅವರ ಸಭಾರಾಷ್ಟ್ರವು ತಮ್ಮ ಉತ್ತಮ ಆಜ್ಞೆಗಳ (ಕಾನೂನುಗಳ) ಕಾರಣ ಬೇರೆಯವರ ಮೇಲೆ ವಿಜಯ ಸಾಧಿಸುತ್ತದೆಂದೂ ಮತ್ತು ಆ ರೀತಿಯಲ್ಲಿ ಸಾಮಾನ್ಯ ಜನರ ವ್ಯಕ್ತಿಗತ ಮೆಸ್ಸೀಯನ ನಿರೀಕ್ಷೆಯು ಈಡೇರುತ್ತದೆಂದು ಭಾವಿಸಿದರು (ಈ ದೃಷ್ಟಿಕೋನವನ್ನು ವಿದ್ಯಾವಂತ ಯೆಹೂದಿ ಪಂಡಿತರುಗಳು ಅಥವಾ ರಬ್ಬಿಗಳು ಇನ್ನೂ ಹೊಂದಿದ್ದಾರೆ. ಅವರುಗಳು ಮೆಸ್ಸೀಯನ ಬಗೆಗಿನ ಪ್ರವಾದನೆಗಳು ಅವರ ಸಭಾ–ರಾಷ್ಟಕ್ಕೆ ಅನ್ವಯ ವಾಗುತ್ತದೆಯೇ ಹೊರತು ಜಗತ್ತಿನ ಒಬ್ಬ ವ್ಯಕ್ತಿಗತ ರಕ್ಷಕನಿಗೆ ಅನ್ವಯವಾಗದು ಎಂದು ಅರ್ಥೈಸುತ್ತಾರೆ. ಕ್ರಿಸ್ತನ ಶ್ರಮೆಯ ಬಗ್ಗೆ ಇರುವ ಪ್ರವಾದನೆಗಳನ್ನು ಕೂಡಾ ಅವರು ಒಂದು ಜನವಾಗಿ ಪಡುವ ಶ್ರಮೆಗೆ ಅನ್ವಯಿಸುತ್ತಾರೆ). ಅವರ ವಿಚಾರ ಸರಣಿಯನ್ನು ಸಾಗಿಸುತ್ತಾ, ಅವರು ತಮ್ಮ ನಿಯೋಗಿಗಳನ್ನು ಪ್ರಪಂಚದಾದ್ಯಂತದ ಜನರನ್ನು ಮೋಶೆಯ ಧರ್ಮಶಾಸ್ತ್ರಕ್ಕೆ ಪರಿವರ್ತಿಸುವಂತೆ ಕಳುಹಿಸಿಕೊಡುತ್ತಾರೆ ಮತ್ತು ಈ ರೀತಿಯಲ್ಲಿ ಅವರು ಪ್ರಪಂಚದ ಎಲ್ಲಾ ಕುಟುಂಬಗಳನ್ನು ಸಂಧಿಸಿ ಅವರಿಗೆ ವ್ಯಕ್ತಿಗತ ಮೆಸ್ಸೀಯನ ಆಶೀರ್ವಾದಗಳ ಒತ್ತಟ್ಟಿಗೆ ಇನ್ನೂ ಹೆಚ್ಚಿನ ಆಶೀರ್ವಾದವನ್ನುಂಟು ಮಾಡುವುದನ್ನು ನಿರೀಕ್ಷಿಸುತ್ತಾರೆ. ಈ ಪ್ರಕರಣವು ಈ ಮಟ್ಟಕ್ಕಿರುವಾಗ ನಮ್ಮ ಕರ್ತನು ಅದನ್ನು ಟೀಕಿಸುವವನಾಗಿ "ನೀವು ಒಬ್ಬನನ್ನು ನಿಮ್ಮ ಮತದಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಭೂಮಿಯನ್ನೂ, ಸಮುದ್ರವನ್ನೂ ಸುತ್ತಿಕೊಂಡು ಬರುತ್ತೀರಿ" (ಮತ್ತಾಯ 23: 15) ಎಂದು ಹೇಳುತ್ತಾನೆ.

ಇದು ಇಂದು ಹೆಸರುಮಾತ್ರದ ಕ್ರೈಸ್ತ ಪ್ರಪಂಚದವರ ವಿಚಾರ ಸರಣಿಗೆ ಎಷ್ಟು ಸಮಾನರೂಪವಾಗಿದೆ ಅಲ್ಲವೇ? ಸಾಮಾನ್ಯ ಜನರಿಗೆ ಕ್ರಿಸ್ತನು ತಿರುಗಿ ಬರುತ್ತಾನೆಂಬ ವಾಗ್ದಾನದ ಬಗ್ಗೆ ಗಮನವನ್ನು ಸೆಳೆಯುವಾಗ ಮತ್ತು ಅಪೋಸ್ತಲರುಗಳೂ ಹಾಗೂ ಪ್ರವಾದಿಗಳೂ ಕ್ರಿಸ್ತನ ಎರಡನೆಯ ಆಗಮನದಲ್ಲಿ ಸಹಸ್ರವಾನವೂ, ಪುನಃವಶದ ಕಾಲವೂ ಫಲಿಸುತ್ತದೆ ಎಂಬುದಾಗಿ ಭವಿಷ್ಯವಾಣಿಯನ್ನು ನುಡಿದಿದ್ದಾರೆ (ಅ.ಕೃ. 3:19–21) ಎಂದು ತಿಳಿಸುವಾಗ ಕ್ರಿಸ್ತನ ಪ್ರಥಮ ಆಗಮನದಲ್ಲಿ ಅದೇ ವರ್ಗದವರು ಮಾಡಿದಂತೆ ಅವರು ಸತ್ಯವನ್ನು ಒಪ್ಪಿಕೊಳ್ಳುವಂತೆ ಮತ್ತು ಅದರಲ್ಲಿ ಉಲ್ಲಾಸಿಸುವಂತೆ ಬಾಗುತ್ತಾರೆ. ಆದರೆ ಇಂದು, ಹದಿನೆಂಟು ನೂರು ವರ್ಷಗಳ ಹಿಂದೆ ಮಹಾಯಾಜಕರೂ, ಆಳುವವರಿಗಿದ್ದಂತೆ ಬಹಳ ಮುಂದುವರೆದ (?) ಕಲ್ಪನೆಗಳಿವೆ. "ಲೋಕದಲ್ಲಿ ಶಾಂತಿ ಮತ್ತು ಮನುಷ್ಯರೊಳಗೆ ಸಮಾಧಾನ" ಎಂಬ ಸಹಸ್ರಮಾನದ ವಾಗ್ದಾನಗಳನ್ನು ಕರ್ತನ ವ್ಯಕ್ತಿಗತ ಆಗಮನವಿಲ್ಲದೇ ತಮ್ಮ ಸ್ವಂತ ಪ್ರಯತ್ನ, ನಿಯೋಗ ಮುಂತಾದವುಗಳಿಂದ ತಂದುಕೊಳ್ಳಬೇಕಾಗಿದೆ ಎನ್ನುತ್ತಾರೆ; ಈ ರೀತಿಯಾಗಿ ಅವರು ದ್ವಿತೀಯಾಗಮನದ ವಾಗ್ದಾನಗಳನ್ನು ಮತ್ತು ಬರಲಿರುವ ರಾಜ್ಯದ ವಿಷಯಗಳನ್ನು ನಿರರ್ಥಕಗೊಳಿಸುತ್ತಾರೆ.

ಪ್ರಸ್ತುತ ಮಹಾಯಾಜಕರುಗಳು ಮತ್ತು ಆಡಳಿತಗಾರರು, 'ಕ್ರೈಸ್ತ ಪ್ರಪಂಚ'ದ ಪಾದ್ರಿಗಳು ತಮ್ಮನ್ನು ಮೋಸಪಡಿಸಿಕೊಂಡು ಮತ್ತು ಜನರನ್ನೂ ಮೋಸಪಡಿಸುತ್ತಾ, ಅವರ ನಿಯೋಗ ಸೇವಾ ಪ್ರಯತ್ನಗಳು ಇನ್ನೇನು ಜಯಹೊಂದಲಿವೆ ಮತ್ತು ಅದೂ ಕರ್ತನಿಲ್ಲದೆ ಎಂದೂ, ಈಗ ಅವರು ಪ್ರಪಂಚಕ್ಕೆ ಪವಿತ್ರಗ್ರಂಥದಲ್ಲಿ ವರ್ಣಿಸಿರುವ ಸಹಸ್ರಮಾನದ ಎಲ್ಲಾ ಆಶೀರ್ವಾದಗಳನ್ನೂ ಪರಿಚಯಿಸುತ್ತಿದ್ದೇವೆ ಎಂಬ ಹಕ್ಕೇಳಿಕೆ ನೀಡುತ್ತಾರೆ ಮತ್ತು ಅವರುಗಳು ಅದನ್ನೇ ನಂಬಿರುವವರಂತೆ ಕಂಡುಬರುತ್ತಾರೆ.

ಈ ಭ್ರಮೆಯ ಬುನಾದಿಯು ಜ್ಞಾನದಲ್ಲಿ ಹೆಚ್ಚಳವುಂಟಾಗಿ ಅದು ಈ ಲೋಕದಲ್ಲಿ ಅತ್ತಿತ್ತ ಚಲಿಸುತ್ತಿದೆ ಎಂಬ ಸತ್ಯದ ಮೇಲೆ ನಿಂತಿದೆ. "ಆತನ ಸಿದ್ಧತೆಯ ದಿನ" ಈ ಘಟನೆಯು ನಾಗರೀಕ ದೇಶಗಳ

ವಾಣಿಜ್ಯ ವ್ಯವಹಾರಗಳು ಹರಡಲು ಮತ್ತು ಅದರ ಪರಿಣಾಮವಾಗಿ ಲೌಕಿಕ ಅಭ್ಯುದಯವು ಹೆಚ್ಚಾಗಲು ಅನುಕೂಲಕರವಾಗಿದೆ. ಈ ಎಲ್ಲವುಗಳ ಖ್ಯಾತಿಯು ಶಾಂತರೀತಿಯಲ್ಲಿ ಬಾಬೇಲು ತನಗೆ ಸಲ್ಲುತ್ತದೆ ಎಂದು ಅನ್ವಯಿಸಿಕೊಳ್ಳುತ್ತದೆ. ಈ ಎಲ್ಲಾ ಅನುಕೂಲತೆಗಳು ಆಕೆಯ ಪ್ರಭಾವಗಳ ಕ್ರಿಸ್ತೀಕರಣ ಮತ್ತು ಶಕ್ತಿಗೊಳಿಸುವಿಕೆಯ ಫಲವಾಗಿದೆ ಎಂದು ಸೂಚಿಸುತ್ತದೆ. ಆಕೆಯು ಹೆಮ್ಮೆಯಿಂದ ಗ್ರೇಟ್ ಬ್ರಿಟನ್ನಿನ "ಕ್ರೈಸ್ತ ರಾಷ್ಟ್ರ"ವನ್ನು ಸೂಚಿಸುತ್ತಾ ಆಕೆಯ ಸಂಪತ್ತು ಮತ್ತು ಅಭಿವೃದ್ಧಿಯು ಆಕೆಯ ಕ್ರೈಸ್ತ ತತ್ವವಿಧಿಗಳ ಫಲವಾಗಿದೆ ಎಂದು ಸೂಚಿಸುತ್ತಾಳೆ. ಆದರೆ ಸತ್ಯಾಂಶವೇನು? ಆ ದೇಶ ಅಥವಾ ಬೇರೆ ದೇಶವು ಸಾಧಿಸಿದ ಅಭಿವೃದ್ಧಿಯ ಪ್ರತಿಯೊಂದು ಹೆಜ್ಜೆಯೂ ಬಾಬೇಲಿನ ದಬ್ಬಾಳಿಕೆಯ ನೊಗವನ್ನು ಕಳಚಿಹಾಕುವ ಪ್ರಯತ್ನದ ವಿಸ್ತಾರತೆಯಿಂದೊಡಗೂಡಿದೆ. ಗ್ರೇಟ್ ಬ್ರಿಟನ್ ಪೋಪನ ದಬ್ಬಾಳಿಕೆಯ ನಿರ್ಬಂಧಗಳನ್ನು ಬಿಸಾಡಿದ ಅನುಪಾತದಲ್ಲಿ ಆಕೆಯು ಅಭಿವೃದ್ಧಿ ಹೊಂದಿದಳು; ದೇವರಿಂದ ನೇಮಿತವಾದ ಅರಸ ಮತ್ತು ಯಾಜಕನ ಅಧಿಕಾರದಲ್ಲಿ ಮತ್ತು ದಬ್ಬಾಳಿಕೆಯಲ್ಲಿ ಸಭೆ ಮತ್ತು ರಾಜ್ಯದ ಒಕ್ಕೂಟದ ಬಗೆಗಿನ ಪೋಪನ ಸಿದ್ಧಾಂತಗಳನ್ನು ಇಟ್ಟುಕೊಂಡು ಅದರಿಂದ ಪ್ರಭಾವ ಹೊಂದಿದ ಅನುಪಾತದಲ್ಲಿ ಮತ್ತು ಬಲಾತ್ಕಾರವಾದ ದುರಾಸೆ ಮತ್ತು ಸ್ವಾರ್ಥತೆಯ ವಿಸ್ತಾರತೆಯಲ್ಲಿ ಆಕೆಯು ತನ್ನನ್ನು ಇನ್ನೂ ಕೆಳಮಟ್ಟಕ್ಕೆ ತಂದುಕೊಂಡಿದ್ದಾಳೆ.

ಕ್ರೈಸ್ತ ದೇಶಗಳೆಂದು ಹೇಳಿಕೊಳ್ಳುವವರು, ಚಿನ್ನ ಮತ್ತು ಅಧಿಕಾರ ಮಹತ್ವಾಕಾಂಕ್ಷೆಯ ದುರಾಸೆಗಳಿಂದಾಗಿ ಇಷ್ಟವಿಲ್ಲದೆಯೇ ಅನ್ಯಜನಾಂಗಗಳ ದೇಶದಲ್ಲಿರುವ ಬಂದರುಗಳನ್ನು ತಮ್ಮ ವಾಣಿಜ್ಯ ಚಟುವಟಿಕೆಗಳಿಗೆ, ಇಂಗ್ಲೀಷ್ ಮತ್ತು ಜರ್ಮನ್ ರಮ್ ಮತ್ತು ಓಪಿಯಂಗಳಿಗೆ ಮತ್ತು ಅಮೆರಿಕಾದ ವಿಸ್ಕಿ ಮತ್ತು ಹೊಗೆಸೊಪ್ಪಿಗೆ ಮನಸ್ಸಿಲ್ಲದೇ ತೆಗೆದವು. ದೇವರ ಮೇಲಣ ಪ್ರೀತಿ ಮತ್ತು ಅನ್ಯಜನರ ದೇಶಗಳ ಆಶೀರ್ವಾದ ಇವುಗಳಿಗೆ ಈ ಪ್ರಯತ್ನದಲ್ಲಿ ಯಾವುದೇ ಸ್ಥಾನವಿರಲಿಲ್ಲ. ಇಲ್ಲಿ ಒಂದು ಸುವ್ಯಕ್ತವಾದ ಪ್ರಸ್ತುತ ಚರಿತ್ರೆಯ ಸಣ್ಣ ಸಂಗತಿಯೊಂದಿದೆ. ಅದು ಕ್ರೈಸ್ತ ದೇಶಗಳೆಂದು ಹೇಳಿಕೊಳ್ಳುವವರಿಗೆ ಏನಾದರೂ ಆತ್ಮಸಾಕ್ಷಿ ಇರುವುದಾದರೆ ಅದನ್ನು ಬೆಚ್ಚಿಬೀಳಿಸುತ್ತದೆ. ಪೂರ್ವ ಆಫ್ರಿಕಾದ ನೂಪಿನ ಮೊಹಮ್ಮಡನ್ ಎಮೀರ್ (Mohammedan Emir) ಎಂಬಾತನು ನೈಗರ್ ಮಿಷನ್ನಿನ ಬಿಷೋಪ್ ಕ್ರೌದರ್ (Crowther) ಎಂಬುವವರಿಗೆ ಮುಂದಣ ಸಂದೇಶವನ್ನು ಕಳುಹಿಸಿದನು :

"ಇದೊಂದು ದೀರ್ಘವಾದ ವಿಷಯವಲ್ಲ; ಅದು ಬರಸ (BARASA Rum)ದ ಬಗ್ಗೆಯಾಗಿದೆ! ಬರಸ, ಬರಸ, ಬರಸ! (Barasa, Barasa, Barasa!) ಅದು ನಮ್ಮ ದೇಶವನ್ನು ನಾಶಪಡಿಸುತ್ತಿದೆ; ಅದು ನಮ್ಮ ಜನರನ್ನು ಬಹಳವಾಗಿ ನಾಶಪಡಿಸಿದೆ; ಅದು ನಮ್ಮ ಜನರನ್ನು ಹುಚ್ಚರನ್ನಾಗಿ ಮಾಡಿದೆ, ಮಲಾಮ್ ಕಿಪ್ (Malaam Kip)ರವರೇ, ನಾನು ಈ ಬರಹವನ್ನು ಮರೆಯದಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ; ಯಾಕೆಂದರೆ, ನಾವೆಲ್ಲರೂ ಆತನು ಕ್ರೌದರ್ (Crowther) ಮಹಾಯಾಜಕರುಗಳನ್ನು (ಆಂಗ್ಲಿಕನ್ ಚರ್ಚ್ ಮಿಷನ್ ಸೊಸೈಟಿಯವರ ಸಮಿತಿ) ಅವರು ಆಂಗ್ಲ ರಾಣಿಯನ್ನು (ಚರ್ಚ್ ಆಫ್ ಇಂಗ್ಲೇಂಡಿನ ಮುಖ್ಯಸ್ಥರು) ಈ ದೇಶಕ್ಕೆ ಬರಸ ತರುವುದನ್ನು ನಿಲ್ಲಿಸುವಂತೆ ಬೇಡಿಕೊಳ್ಳಬೇಕೆಂದು ಹೇಳುವಂತೆ ಕೇಳಿಕೊಳ್ಳುತ್ತೇವೆ".

"ದೇವರ ಮತ್ತು ಪ್ರವಾದಿಗಳ ಸಲುವಾಗಿ ! ದೇವರ ಮತ್ತು ಪ್ರವಾದಿಗಳ, ಆತನ ಸಂದೇಶಕರ ನಿಮಿತ್ತ ಆತನು ಈ ಸಂಗತಿಯ ಬಗ್ಗೆ – ಬರಸದ ಬಗ್ಗೆ ನಮಗೆ ಸಹಾಯ ಮಾಡಲೇಬೇಕು. ಈ ಕಾರ್ಯದಲ್ಲಿ ದೇವರು ಆತನನ್ನು ಆಶೀರ್ವದಿಸುವನು ಎಂದು ಆತನಿಗೆ ಹೇಳಿರಿ. ಇದು ಮಲಿಕೆ, ನೂಪದ ಎಮೀರ (Malike, Emir of Nupe)ನ ಬಾಯಿಯ ಮಾತುಗಳಾಗಿವೆ".

ಈ ಬಗ್ಗೆ ಬ್ಯಾಪ್ಟಿಸ್ಟ್ ಜರ್ನಲ್ ಒಂದು ವ್ಯಾಖ್ಯಾನಿಸುತ್ತಾ:– "ಈ ವಿನಯಶೀಲ ನಿಗ್ರೋ ಅರಸನು ಈ ಪತ್ರದಲ್ಲಿ ಆತನ ಪ್ರಜೆಗಳ ಬಗ್ಗೆ ಆತನಿಗಿರುವ ಚಿಂತೆಯನ್ನು ಪ್ರಕಟಿಸಿದ್ದಾನೆ. ಇದು ಕ್ರೈಸ್ತ ಚಕ್ರವರ್ತಿಗಳು ಮತ್ತು ಸರ್ಕಾರಗಳಿಗೆ ಇನ್ನೂ ತಲುಪಿರುವುದಿಲ್ಲ. ಯಾಕೆಂದರೆ, ಯಾವುದೇ ಯೂರೋಪಿಯನ್ ಕ್ರೈಸ್ತ ಆಡಳಿತಗಾರನು ಮತ್ತು ಸಂಯುಕ್ತ ಸಂಸ್ಥಾನದ ಯಾವುದೇ ಅಧ್ಯಕ್ಷನೂ ಜನರ ಪರವಾಗಿ ಇದುವರೆಗೂ ಅಂತಹ ಅರಿಕೆಯನ್ನು ಮಾಡಿರುವುದಿಲ್ಲ. ಸಂಸತ್ತಿನಲ್ಲಿ ಮಾಡುವ ಅವರ ಎಲ್ಲಾ ಆರಂಭ ಭಾಷಣಗಳಲ್ಲಿ, ಎಲ್ಲಾ ಅಧ್ಯಕ್ಷೀಯ ಸಂದೇಶಗಳಲ್ಲಿ ಇಂತಹ ಯಾವುದೇ ಸಂದೇಶಗಳು ಎಂದೂ ಕಂಡುಬಂದಿಲ್ಲ. ನಮ್ಮ ಕ್ರೈಸ್ತ ಪ್ರಭುಗಳಿಗೆ ನಾಚಿಕೆಯಾಗಬೇಕು!" "ಚಿನ್ನಕ್ಕಾಗಿ ಶಪಿತವಾದ ಹಸಿವೆಯನ್ನು ಪಡಕೊಳ್ಳಿರಿ (Gain the accursed hunger for Gold) ಎಂಬುದು ವ್ಯಾಪಾರಿಗಳ ಗಾದೆಯಾಗಿದೆ; ಇಂಥವರು ಸರ್ಕಾರದ ಅಚ್ಚುಮೆಚ್ಚಿನವರು ಮತ್ತು ಪ್ರಭುಗಳು"!

ಹಾಗಿದ್ದರೆ, ಸತ್ಯದ ಹೆಸರಿನಲ್ಲಿ, ನಾವು ಇವುಗಳನ್ನು ಕ್ರೈಸ್ತ ಸರ್ಕಾರಗಳೆಂದು ಯಾಕೆ ಕರೆಯಬೇಕು? ಎಂದು ಕೇಳುತ್ತೇವೆ. ಸಂಯುಕ್ತ ಸಂಸ್ಥಾನದ ಸರ್ಕಾರವನ್ನು ಅನೇಕ ಕ್ರೈಸ್ತ ಸರ್ಕಾರವೆಂದು ಕರೆಯಲ್ಪಟ್ಟರೂ ಆ ಸರ್ಕಾರವೂ ಇದಕ್ಕೆ ಹೊರತಾದುದ್ದಲ್ಲ. ಆಸಕ್ತ ಭಿನ್ನವರ್ಗಾವಲಂಬಿಗಳು ಈ ಬಿರುದು ಕ್ರೈಸ್ತ ಸರ್ಕಾರಕ್ಕೆ ಅನರ್ಹವೆಂದು ಒತ್ತಾಯಪಡಿಸಿದರೂ ಅದು ಗ್ರಹಿಸುವುದಿಲ್ಲ. ಬೋಸ್ಟನಿನಿಂದ (Boston)ನಿಂದ, ಅಗಾಧವಾದ ಸರಕುಸಾಗಾಣಿಕೆಯ ವಾಹನಗಳ ತುಂಬಾ ರಮ್ ಅನ್ನು ಆಫ್ರಿಕಾಕ್ಕೆ ನಿರಂತರವಾಗಿ ರವಾನಿಸ ಲಾಗುತ್ತಿದೆ. ಇದನ್ನು ಸರ್ಕಾರಗಳು ನಿಗ್ರಹಿಸುತ್ತಿಲ್ಲ. ಅವರ ಪೂರ್ಣ ಅನುಮತಿಯೊಂದಿಗೆ ಅವುಗಳು ಹತ್ತಾರು ಸಾವಿರ ಉತ್ಪಾದಕರಿಗೆ ಅಪ್ಪಣೆ ಚೀಟಿಗಳನ್ನು ನೀಡುವುದರಿಂದ ಅವರ ಸ್ವಂತ ಪ್ರಜೆಗಳಿಗಾಗಿ ಈ 'ಬೆಂಕಿ ನೀರಿ'ನ (ಮದ್ಯಪಾನದ) ವ್ಯಾಪಾರ ನಡೆಸುತ್ತಾ ದುಪ್ಪಟ್ಟು ಹಾನಿಕರ ಮತ್ತು ಭ್ರಷ್ಟಗೊಳಿಸುವಿಕೆಯ ಕಾರ್ಯವನ್ನು ಕ್ರಮಪಡಿಸುವಿಕೆ ಎಂದು ಕರೆಯುವ ಅಂದರೆ ಹೆಚ್ಚಿನ ಶ್ರೇಣಿಯ ವಿಷಕರ ಮಿಶ್ರಣವನ್ನು (weeds) ನ್ಯಾಯಸಮ್ಮತವನ್ನಾಗಿ ಮಾಡುತ್ತಾರೆ. ಇವೆಲ್ಲವೂ ಮತ್ತು ಇನ್ನೂ ಹೆಚ್ಚಾದದುದನ್ನು "ಕ್ರೈಸ್ತ" ರಾಜ್ಯಗಳು ಮತ್ತು ಕ್ರೈಸ್ತ ರಾಷ್ಟ್ರಗಳೆಂದು ಹೇಳಿಕೊಳ್ಳುವುದನ್ನು ಆಳ್ವಿಕೆ ಮಾಡುವವರು ಆದಾಯವೆಂದು ಕರೆದು ಸಮರ್ಥಿಸಿಕೊಳ್ಳುತ್ತಾರೆ ಮತ್ತು ಪ್ರತಿಪಾದಿಸಿಕೊಳ್ಳುತ್ತಾರೆ. ಇದು ಸರ್ಕಾರದ ಖರ್ಚುವೆಚ್ಚಗಳಿಗೆ ಬೇಕಾದ ಹಣದ ಪಾಲನ್ನು ಜನಗಳಿಂದ ವಸೂಲಿ ಮಾಡುವ ಸುಲಭ ವಿಧಾನವಾಗಿದೆ. ನಿಜವಾಗಿ ಇದು ಕೀಳುಮಟ್ಟದ ಅತ್ಯಂತ ಕೆಟ್ಟ ನಮೂನೆಯ ವ್ಯಭಿಚಾರಕ್ಕೆ ಸಮವಾಗಿದೆ. ಆಲೋಚಿಸುವ ಎಲ್ಲಾ ಜನರೂ ಕ್ರೈಸ್ತ ಎಂಬ ಹೆಸರನ್ನು ಇಂದಿನ ಉತ್ತಮ ಸರ್ಕಾರಗಳಿಗೆ ಅನ್ವಯಿಸುವುದು ಸಹಾ ಎಷ್ಟರಮಟ್ಟಿಗೆ ಅನುಚಿತವಾಗಿದೆ ಎಂಬುದನ್ನು ನೋಡಬೇಕು. ಈ ಲೋಕದ ಅರಸನಾದ ಸೈತಾನನಿಂದ ಆಳಲ್ಪಡುತ್ತಿರುವ ಮತ್ತು ಲೌಕಿಕ ಉತ್ಸಾಹದ ಬಣ್ಣತುಂಬಿರುವ ರಾಜ್ಯಗಳ ಗುಣಲಕ್ಷಣಗಳಿಗೆ ಕ್ರೈಸ್ತ ಹೆಸರನ್ನು ಹೊಂದಿಕೆ ಮಾಡುವ ಪ್ರಯತ್ನವು ಎಲ್ಲಾ ನಿಜವಾದ ಕ್ರೈಸ್ತರ ಹೃದಯಗಳನ್ನು ಕಳವಳಗೊಳಿಸಿದೆ ಮತ್ತು ಈ ಲೋಕದ ಪ್ರಸ್ತುತ ಸರ್ಕಾರಗಳು ಯಾವುದೇ ಅರ್ಥದಲ್ಲಿ ಕ್ರಿಸ್ತನ ರಾಜ್ಯವೆಂದು ಊಹಿಸುವ ತಪ್ಪಿನಿಂದ ಮೋಸಹೊಂದಿವೆ.

ಕ್ಯಾನನ್ ಫರಾರ್ (Canon Farrar) ಎಂಬಾತನು ಕಾಂಟೆಂಪೊರರಿ ರಿವ್ಯೂ (Contemporary Review)ನಲ್ಲಿ ಹೀಗೆ ಹೇಳಿದ್ದಾನೆ – "ಗುಲಾಮರ ವ್ಯಾಪಾರ" ಎಂಬ ಹಳೆಯ ಸುಲಿಗೆಯನ್ನು ಅತ್ಯಂತ ದುರಾಸೆಯುಳ್ಳ ಅಪಾಯಕಾರಿ ಲೋಭಿಗಳು ಇಂಥಾಃ ಮದ್ಯ ಮಾರಾಟದ ಮೂಲಕ ಈಗ ಅನುಸರಿಸುತ್ತಿದ್ದಾರೆ. ನಮ್ಮ ಪಿತೃಗಳು ಆಫ್ರಿಕಾದ ಚಾವಟಿಗಳ ನೊಗದಿಂದ ಬಿಡಿಸಿಕೊಂಡರು: ನಾವು ನಮ್ಮ ಸ್ಥಳೀಯ ಜನಾಂಗಗಳನ್ನು ಚೇಳುಗಳ ನೊಗಕ್ಕೆ ವಶಪಡಿಸಿದ್ದೇವೆ. ನಾವು ಆಫ್ರಿಕಾದ ನದಿಗಳನ್ನು ವಾಣಿಜ್ಯಕ್ಕಾಗಿ, ಉಗ್ರವಾದ ಮದ್ಯದ ಸುರಿಯುವಿಕೆಗೆ ತೆರೆದಿದ್ದೇವೆ. ಇದಕ್ಕಿಂತ ಅತಿ ಘೋರವಾದ ಸ್ಥಳದ ಯಾವ ನದಿಯ ನೀರೂ ಅಷ್ಟೊಂದು ರಕ್ತ ಕೆಂಪು ಅಥವಾ ಶಾಪಗ್ರಸ್ತವಾಗಿಲ್ಲ. ರಾಷ್ಟ್ರದ ಮನಸ್ಸಾಕ್ಷಿಯು ಸತ್ತುಹೋಗಿದೆಯೋ?"

ನಾವು 'ಇಲ್ಲ' ಎಂದು ಉತ್ತರಿಸುತ್ತೇವೆ. ಆ ರಾಷ್ಟ್ರವು ಎಂದೂ ಕ್ರೈಸ್ತರದ್ದಾಗಿರಲಿಲ್ಲ. ಇದರ ಪರಿಣಾಮವಾಗಿ ಕ್ರೈಸ್ತ ಮನಸ್ಸಾಕ್ಷಿಯನ್ನು ಕ್ರೈಸ್ತ ಉತ್ಸಾಹವನ್ನು ಎಂದೂ ಹೊಂದಿರಲಿಲ್ಲ. ಅದರ ಬಗ್ಗೆ ಬಹಳ ಹೆಚ್ಚಾಗಿ ಹೇಳಬಹುದಾದುದೆಂದರೆ, ದೇವರ ನಿಜವಾದ ಬೆಳಕು ಪ್ರತಿಷ್ಠೆ ಹೊಂದಿದ ಮಕ್ಕಳಲ್ಲಿ ಜ್ಞಾನೋದಯ ಗೊಂಡಿದೆ, ಸಂಸ್ಕರಿಸಲ್ಪಟ್ಟಿದೆ ಮತ್ತು ಅವರನ್ನು ನಾಚಿಕೆಗೊಳಿಸಿ, ಆ ರಾಷ್ಟ್ರಗಳ ಸಾರ್ವಜನಿಕ ಮನೋಭಾವದ ನೈತಿಕ ನೀತಿಯನ್ನು ಸುಧಾರಣೆ ಗೊಳಿಸುತ್ತಿದೆ. ಹಾಗಾಗಿ, ಅವರು "ಹೊಳೆಯುವ ಜ್ಯೋತಿರ್ಮಂಡಲಗಳಂತೆ ಕಾಣಿಸುವರು".

ಅದೇ ರೀತಿಯಲ್ಲಿ, ಅದೇ ಹೋಲಿಕೆಯ ಭೀಕರ ಅಕ್ರಮ ವ್ಯಾಪಾರ ವಹಿವಾಟನ್ನು ಚೈನಾ ಮತ್ತು ಜಪಾನ್ ದೇಶಗಳ ಮೇಲೆ ಮನಃಪೂರ್ವಕವಾದ ಪ್ರತಿಭಟನೆಯ ವಿರುದ್ಧವಾಗಿಯೂ ಬಲವಂತದಿಂದ ಅದೇ ಕ್ರೈಸ್ತ (?) ಸರ್ಕಾರಗಳಿಂದ ಹೇರಲಾಯಿತು. 1840ರಲ್ಲಿ, ತಮ್ಮ ಜನರನ್ನು ಆ ಭೀಕರ ಶಾಪದಿಂದ ರಕ್ಷಿಸಲು ಬಯಸುತ್ತಿದ್ದ ಚೀನಾ ಸರ್ಕಾರವನ್ನು ಆ ವಸ್ತುವನ್ನು ಒಳಗೆ ಬಿಡುವಂತೆ ಬಲವಂತ ಮಾಡಲು ಗ್ರೇಟ್ ಬ್ರಿಟನ್ ಚೀನಾದ ಮೇಲೆ "ಓಪಿಯಮ್ ವಾರ್" ಎಂಬ ಹೆಸರಿನ ಯುದ್ಧ ಪ್ರಾರಂಭಿಸಿತು. ಈ ಯುದ್ಧದ ಈ ಸಮಸ್ಯೆಯು ಸೈತಾನನ ಪರವಾಗಿ ಅನುಕೂಲಕರ ಫಲಿತಾಂಶ ವನ್ನುಂಟುಮಾಡಿತು. ಬ್ರಿಟಿಷ್ ಯುದ್ಧ ನೌಕೆಗಳು ಚೀನಾದ ಸಹಸ್ರಾರು ಜೀವಗಳನ್ನೂ, ಮನೆಗಳನ್ನೂ ನಾಶಗೊಳಿಸಿತಲ್ಲದೆ, ಕ್ರೈಸ್ತನಲ್ಲದ ಚೀನಾದ ಅರಸನನ್ನು ಬಲವಂತಪಡಿಸಿ ಆತನು ಚಕ್ರಾಧಿಪತ್ಯವನ್ನು (ಚೀನಾವನ್ನು ಅಮಲೇರಿಸಿದ್ದ) ಓಪಿಯಂನ ನಿಧಾನ ಮರಣಕ್ಕೆ ತೆರೆಯುವಂತೆ ಮಾಡಿತು. ಬ್ರಿಟಿಷ್ ಸರ್ಕಾರಕ್ಕೆ ಈ ಮಾದಕ ಸಾಮಗ್ರಿಯ ಮಾರಾಟದಿಂದ ಬಂದ ಆದಾಯವನ್ನು ವಸೂಲಿ ಮಾಡಿದ ಖರ್ಚನ್ನು ಕಳೆದ

ನಂತರ ಉಳಿದ ಮೊತ್ತ $37,000,000ವೆಂದು 1872ರಲ್ಲಿ ಪ್ರಕಟಗೊಂಡ ಅಧಿಕೃತ ವರದಿಯಿಂದ ತಿಳಿದುಬರುತ್ತದೆ. ಇದಕ್ಕೂ ಮುಂಚಿತ ವರ್ಷದಲ್ಲಿ ಈ ಮೊತ್ತಕ್ಕಿಂತಲೂ ಹೆಚ್ಚಾಗಿತ್ತು. ವರ್ಷಕ್ಕೆ ಈ $37,000,000 ಆ ಯುದ್ಧಕ್ಕೆ ಉತ್ತೇಜಿಸಿದ ಕಾರಣವಾಗಿತ್ತು ಮತ್ತು ಇದು ಚೀನೀಯರ ಪ್ರಸ್ತುತ ಮತ್ತು ಭವಿಷ್ಯದಲ್ಲಿನ ಕ್ಷೇಮಾಭಿವೃದ್ಧಿಯನ್ನು ಬುಡಮೇಲು ಮಾಡುವುದಾಗಿತ್ತು. ಒಪ್ಪಂದದಲ್ಲಿನ ವಾಕ್ಯಾಂಗದ ಪ್ರಕಾರ ಕ್ರೈಸ್ತ ಮಿಷನರಿಗಳಿಗೆ ರಕ್ಷಣೆ ನೀಡುವುದು ನ್ಯಾಯವನ್ನು ಪ್ರೀತಿಸುವ ಜನರ ಮೇಲೆ ಅತ್ಮಸಾಕ್ಷಿಯನ್ನು ತಣಿಸುವಂತೆ ಎಸೆದ ಕಪಟವಾದ ಕೇವಲ ಬಾಯಿತುತ್ತು ಆಗಿತ್ತು – ಒಂದು ಮಹಾಅಪರಾಧವನ್ನು ಸೌಜನ್ಯಪೂರ್ವಕವಾದ ಕರುಣೆಯೆಂದು ಬಿಂಬಿಸುವುದಾಗಿತ್ತು. ಯುದ್ಧದ ಅಂತ್ಯದಲ್ಲಿ ಮಾಡಿಕೊಂಡ ಒಪ್ಪಂದದಲ್ಲಿ, ಕೆಲವೊಂದು ಬಂದರುಗಳನ್ನು ಬ್ರಿಟಿಷ್ ವ್ಯಾಪಾರಕ್ಕೆ ಮುಕ್ತವನ್ನಾಗಿ ಮಾಡಲಾಯಿತು. ಅದೇ ರೀತಿಯ ಒಪ್ಪಂದವನ್ನು ಬೇರೆ ದೇಶಗಳೊಡನೆ ಅನುಸರಿಸಲಾಯಿತು ಮತ್ತು ಇದರಿಂದ ಕೆಲವು ಉತ್ತಮ ಫಲಿತಾಂಶಗಳು ಬಂದವು. ಇದರಲ್ಲಿ ಒಂದು ಚೀನಾವನ್ನು ನಾಗರೀಕತೆಯ ಪ್ರಭಾವಕ್ಕೆ ತೆರೆಯುವುದು. ಆದರೆ, ವಾಸ್ತವವೆಂದರೆ ಕೆಲವು ಕ್ರೈಸ್ತ ಸ್ತ್ರೀ ಪುರುಷರು ಜನರಿಗೆ ನೀತಿವಂತಿಕೆಯನ್ನು ಬೋಧಿಸುವುದಕ್ಕೆ ಮುಂದೆ ಬಂದರು. ಅದನ್ನು ವಾಣಿಜ್ಯ ಉದ್ದೇಶವುಳ್ಳ ಬ್ರಿಟಿಷ್ ರಾಷ್ಟ್ರದ ಖ್ಯಾತಿಯಾಗಿ ಪ್ರತಿಬಿಂಬಿಸಬಾರದು. ಯಾಕೆಂದರೆ ಅವರು (ಬ್ರಿಟಿಷ್ ರಾಷ್ಟ್ರ) ಚಿನ್ನದ ದುರಾಸೆಯುಳ್ಳವರಾಗಿದ್ದಾರೆಯೇ ಹೊರತು ಚೀನಾದ ಒಳಿತನ್ನಾಗಲೀ, ದೇವರ ಮಹಿಮೆಯನ್ನಾಗಲೀ ಬಯಸುವವರಲ್ಲ. ಪೈಶಾಚಿಕ ಕಲೆಯಲ್ಲಿ ಅಷ್ಟೊಂದು ನಿಪುಣರಲ್ಲದ ಚೀನಿ ಜನರ ಮೇಲೆ ಅಪವಿತ್ರವಾದ ಮತ್ತು ಅನ್ಯಾಯವಾದ ಯುದ್ಧವನ್ನು ಸಾರಿದರು.

ಇತರೆ ದುರ್ಮಾರ್ಗಿಗಳೊಡನೆ "ಕ್ರೈಸ್ತ ಪ್ರಪಂಚ"ವು ರಾಷ್ಟ್ರಗಳಿಗೆ ಅತ್ಯಂತ ಕೆಟ್ಟದಾದ ವಿಗ್ರಹಾರಾಧನಾ ರೂಪವನ್ನು ಕಲಿಸಿತು. ಸ್ವಾರ್ಥ, ಸಂಪತ್ತು ಮತ್ತು ಅಧಿಕಾರವೆಂಬ ವಿಗ್ರಹಾರಾಧನೆ. ಇದಕ್ಕಾಗಿ ಕ್ರೈಸ್ತರೆಂದು ಹೇಳಿಕೊಳ್ಳುವ ಜನರು ಮತ್ತು ರಾಷ್ಟ್ರಗಳು ಮೋಸಮಾಡಲು, ಹಾನಿಮಾಡಲು ಮತ್ತು ಪರಸ್ಪರ ಕೊಲೆ ಮಾಡಲೂ ಇಚ್ಛೆಯುಳ್ಳವರಾದರು. ಇದು ಅವರಿಗೆ ಪ್ರತಿಯೊಂದು ಭಾಷೆಯಲ್ಲಿಯೂ ಕ್ರಿಸ್ತನ ಹೆಸರನ್ನು ನಿಂದಿಸುವುದನ್ನೂ ಮತ್ತು ಅಗೌರವ ತೋರುವುದನ್ನೂ ಕಲಿಸಿದೆ. ಪ್ರತಿಯೊಂದು ಹಡಗಿನ ಸಿಬ್ಬಂದಿ, ಪ್ರತಿಯೊಂದು ಕ್ರೈಸ್ತರೆಂದು ಹೇಳಿಕೊಳ್ಳುವ ರಾಷ್ಟ್ರಗಳಲ್ಲಿ ಕ್ರಿಸ್ತನ ಹೆಸರು ಧರ್ಮನಿಂದೆಗೊಳಗಾಗಿದೆ. ಆದರೆ, ಇವುಗಳು ಕ್ರೈಸ್ತ ರಾಷ್ಟ್ರಗಳೆಂದು ಹೇಳಿಕೊಳ್ಳುವವರ ಪ್ರಭಾವವಾಗಿರುವಾಗ, ಅವರ ಮಧ್ಯದಿಂದಲೂ ಕೆಲವು ಗಣ್ಯ ಮಿಷನರಿಗಳು, ದೇವರ ನಿಜವಾದ ಸೇವಕರುಗಳು, ಸ್ವಲ್ಪ ಕಡಿಮೆ ಗಣ್ಯರು ಆದರೆ ಕೇವಲ ಸಣ್ಣ ಸಂಖ್ಯೆಯಲ್ಲಿ ಅನ್ಯಜನರಿಗೆ ಕ್ರಿಸ್ತನ ಬಗ್ಗೆ ಮತ್ತು ನಿಜವಾದ ನಾಗರೀಕತೆಯ ಬಗ್ಗೆ ತಿಳಿಸಲು ಹೋಗಿದ್ದಾರೆ.

ಅದು ಮನಃಪೂರ್ವಕ ಮಿಷನರಿಗಳಲ್ಲ, ಬದಲಾಗಿ ಮಿಷನರಿ ಸೊಸೈಟಿಗಳ ಆಶಾವಾದಿ ಗೃಹ ಅಧಿಕಾರಿಗಳಿಗೆ ವಿದೇಶಿ ನಾಡಿನ ಪರಿಸ್ಥಿತಿಗಳ ಬಗ್ಗೆ ಸ್ವಲ್ಪ ಮನೋಭಾವ ಮತ್ತು ಕೆಲವೊಮ್ಮೆ ಸ್ವಲ್ಪ ಆಸಕ್ತಿ ಇದೆ ಮತ್ತು ಅವರ ದೃಷ್ಟಿಕೋನವು ವಾರ್ಷಿಕವಾಗಿ ಸಂಗ್ರಹವಾಗುವ ಮತ್ತು ವಿನಿಯೋಗಿಸಲ್ಪಡುವ ಹೆಚ್ಚಿನ ಹಣ ಇವುಗಳ ಮೇಲೆ ಆತುಕೊಂಡಿದ್ದು ಅವರು ಅನ್ಯರ ಲೋಕವು ಸುಮಾರಾಗಿ ಮತಾಂತರಗೊಂಡಿದೆ ಎಂಬುದಾಗಿಯೂ ಮತ್ತು ವಾಗ್ದಾನಪಡಿಸಿರುವ ಸಹಸ್ರವರ್ಷದ ಆಶೀರ್ವಾದಗಳು ಕರ್ತನ ಎರಡನೆಯ ಬರುವಿಕೆ ಯಿಲ್ಲದೆ ಸಂಭವಿಸುವುದೆಂದು ಆಲೋಚಿಸುತ್ತಾರೆ. ಕಾರ್ಯಕ್ಷೇತ್ರದಲ್ಲಿ ಮುಂದುವರೆಯಲು ಹೋದ ಮಿಷನರಿಗಳು ಅರಿಕೆ ಮಾಡುವುದೇನೆಂದರೆ ಎಲ್ಲಾ ಪರಿಮಾಣಗಳಲ್ಲಿ ತಮ್ಮ ನಿರೀಕ್ಷೆಯನ್ನು ನಿಜವಾದ ಅನುಭವಕ್ಕೆ ಮತ್ತು ಆರೋಗ್ಯಕರ ತೀರ್ಪಿಗೆ ಚೇತನಗೊಳಿಸುವ ಸಂದರ್ಭಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಮಹಾ ನಿರಾಶೆಯನ್ನು ಹೊಂದಿದ್ದಾರೆ ಎಂಬುದಾಗಿದೆ. ಭಾರತದಲ್ಲಿ ಒಂಬತ್ತು ವರ್ಷಗಳ ಕಾಲ ಮಿಷನರಿ ಸೇವೆಯಲ್ಲಿ ತೊಡಗಿಸಿಕೊಂಡವರು ರೆವ್. ಜೆ.ಸಿ.ಆರ್. ಎವಿಂಗ್ ಡಿ.ಡಿ. ಎನ್ನುವವರು, ಇತ್ತೀಚೆಗೆ ಪಿಟ್ಸ್‌ಬರ್ಗ್ Ps., Young Men's Association ನಲ್ಲಿ ಒಂದು ಪ್ರವಚನವನ್ನು ನೀಡಿದರು. ಅದು ಹೀಗಿದೆ: ಇವರ ಮುಂದೆ ನಾಗರೀಕ ಮತ್ತು ಮಿಷನರಿ ಪ್ರಯತ್ನದ ಪ್ರಸ್ತುತ ಪರಿಣಾಮವು ಅನ್ಯಧರ್ಮಗಳನ್ನು ಸ್ಥಗಿತಗೊಳಿಸುವುದು ಮಾತ್ರವಲ್ಲ, ಎಲ್ಲಾ ಧರ್ಮದ ನಂಬಿಕೆಯನ್ನು ತೊಡೆದುಹಾಕುವುದು ಮತ್ತು ಜನರನ್ನು ನಾಸ್ತಿಕರನ್ನಾಗಿ ಮಾಡುವುದು ಎಂದರು. ಆದರೆ ಆತನ ಬಲವಾದ ನಿರೀಕ್ಷೆಯೆಂದರೆ ನಾಸ್ತಿಕತೆಯಿಂದ ಮುಂದಿನ ಹೆಜ್ಜೆ ಕ್ರೈಸ್ತ ಧರ್ಮಕ್ಕೆ ಎಂಬ ಅಸಮಂಜಸವಾದ ನಿರೀಕ್ಷೆ. ಖಂಡಿತವಾಗಿಯೂ, ಎಲ್ಲರ ಅನುಭವದ ಪ್ರಕಾರ ನಾಗರೀಕ ದೇಶಗಳಲ್ಲಿ ಇದನ್ನು ಹೆಚ್ಚಾಗಿ ಸಾಬೀತುಪಡಿಸುತ್ತದೆ. ಅತನ ಪ್ರವಚನದ ಬಗ್ಗೆ ಮಾಡಿರುವ ಸಾರ್ವಜನಿಕ ಪತ್ರಿಕಾ ವರದಿಗಳಿಂದ ನಾವು ಆಯ್ದವುಗಳನ್ನು ಕೆಳಗೆ ನೀಡಲಾಗಿದೆ :–

ಭಾರತವು ಬೇರೆ ಯಾವುದೇ ಒಂದು ಸಂಗತಿಗಳಿಗಿಂತ ಹೆಚ್ಚಾಗಿ ಕ್ರೈಸ್ತಧರ್ಮದ ನೇರವಾದ ಮತ್ತು ನೇರವಲ್ಲದ ಪ್ರಭಾವಗಳಿಗೆ ಋಣಿಯಾಗ ಬೇಕಾಗುತ್ತದೆ. ಅದು ಸ್ಥೂಲ ಪದಾರ್ಥದ ದೇವರುಗಳ ಕಲ್ಪನೆಯನ್ನು ಮುರಿದುಹಾಕುವುದರಲ್ಲಿ, ಮತ್ತು ಅದರ ಬದಲಾಗಿ ಪಾಶ್ಚಿಮಾತ್ಯ (ಯೂರೋಪ್ ಮತ್ತು ಅಮೆರಿಕಾ ದೇಶದ) ಜನರು ಆರಾಧಿಸುವ ಒಬ್ಬನೇ ಆದ ಪರಮಶ್ರೇಷ್ಠ ದೇವರನ್ನು ಸ್ಥಾಪಿಸುವಲ್ಲಿ ಬಹಳಷ್ಟು ಮಾಡಿದೆ. [ಹೆಚ್ಚು ಸ್ಪಷ್ಟವಾದ ಹೇಳಿಕೆಯೆಂದರೆ, ಅವರು ನಾಸ್ತಿಕತೆಯು ಸಾಮಾನ್ಯವಾದ 'ಪ್ರಕೃತಿಯೇ ಪರಮಶ್ರೇಷ್ಟನಾದ ಒಬ್ಬನೇ ದೇವರು' ಎಂಬ ಕಲ್ಪನೆಯನ್ನು ಅಂಗೀಕರಿಸುತ್ತಾರೆ]

ಆ ದೇಶದ 263,000,000 ಜನರಲ್ಲಿ 10,000,000* ಯುವಜನರು ಇಂಗ್ಲೀಷ್ ಮಾತನಾಡಬಲ್ಲರು ಮತ್ತು ನಾವು ಕಲಿಸಿದ ಪಾಶ್ಚಿಮಾತ್ಯ ಕಲ್ಪನೆಯ ಶಿಕ್ಷಣ ಹೊಂದಿದವರೂ ಆಗಿದ್ದಾರೆ. ಉತ್ತಮ ಜಾತಿಗಳವರು ಆ ದೇಶದ ಜನರ ವಿದ್ಯಾಭ್ಯಾಸದ ತಳಹದಿಯಾದ ಸಾಹಿತ್ಯವನ್ನು, ಧರ್ಮವನ್ನು ಮತ್ತು ವಿಜ್ಞಾನವನ್ನು ಸಮಗ್ರವಾಗಿ ಅಭ್ಯಾಸ ಮಾಡಿದ್ದಾರೆ, ಪ್ರತಿಕಾರಕನಾದ ದೇವರು ಎಂಬ ಹಳೆಯ ಕಲ್ಪನೆಯು ಅದನ್ನು ಸಮಾಧಾನಪಡಿಸಲು ಹಲವಾರು ಕೊಡುಗೆ/ಉಡುಗೊರೆಗಳನ್ನು ಕೊಡಬೇಕು ಮತ್ತು ಪ್ರಾರ್ಥನೆಗಳನ್ನು ಮಾಡಬೇಕು ಎಂಬುದು. ಈಗ ಆಧುನಿಕ ಧರ್ಮನಿಂದನಾ ಚೈತನ್ಯಕ್ಕೆ ಎಡೆಮಾಡಿಕೊಟ್ಟಿದೆ. ಪೂರ್ವಭಾಗದ ವಿದ್ಯಾವಂತ ಪುರುಷರು ತಮ್ಮ ಪಿತೃಗಳ ದೇವರುಗಳನ್ನು ಬಹಳ ಕಾಲದಿಂದ ನಂಬುತ್ತಿಲ್ಲ, ಅದನ್ನು ಅವರು ಸದಾಕಾಲಕ್ಕೂ ತ್ಯಜಿಸಿಬಿಟ್ಟಿದ್ದಾರೆ ಮತ್ತು ಅವುಗಳನ್ನು Colonel Robert G, Ingersolla of Paine ofa Paine, of Voltaire, of Bradlaugh ಇವರುಗಳ ಮತ್ತು ಇತರೆ ನಾಸ್ತಿಕ ಮತ್ತು ಸರ್ವದೇವತಾರಾಧನೆಯ ಬೋಧನೆಗಳಿಗೆ ಸ್ಥಳಾಂತರಿಸಿದ್ದಾರೆ. ಈ ಸಂದೇಹಾಸ್ಪದ ಕಾಲವು ಬೇಗನೇ ಗತಿಸಿಹೋಗುತ್ತದೆ, ಮತ್ತು ಭಾರತಕ್ಕೆ ಆಗ ತಾನೇ ತನ್ನ ಆಲೋಚನೆಯನ್ನು ನೀಡಿದ ಅವರಿಗೆ ಪಾಶ್ಚಿಮಾತ್ಯವು ಕ್ರೈಸ್ತ ದೇವರ ಧರ್ಮವನ್ನು ನೀಡಿತು.

ಭಾರತದ ಯುವಜನರು ಉತ್ತಮ ವಿದ್ಯಾಭ್ಯಾಸ ಮಾಡಿದವರಾಗಿದ್ದಾರೆ, ತೀಕ್ಷ್ಣವಾಗಿ ಗಮನಿಸುವವರೂ, ಬುದ್ಧಿವಂತರೂ, ತಮ್ಮದರೊಂದಿಗೆ ಇತರೆ ದೇಶಗಳ ವಿಷಯಗಳ ಬಗ್ಗೆಯೂ ಉತ್ತಮ ಜ್ಞಾನವನ್ನು ಹೊಂದಿದ್ದಾರೆ. ಮತ್ತು ಆಶ್ಚರ್ಯವೆನಿಸಬಹುದಾದರೂ ಅವರು ನಮ್ಮ ಸತ್ಯವೇದದ ಬಗ್ಗೆ ಉತ್ತಮ ಪರಿಚಯವುಳ್ಳವರಾಗಿದ್ದಾರೆ. ನಿಜವಾಗಿಯೂ, ಯಾರು ಅದರ ಬೋಧನೆಗಳನ್ನು ಮತ್ತು ಕ್ರೈಸ್ತ ದೈವಜ್ಞಾನವನ್ನು ಅಭ್ಯಾಸಮಾಡಿದವರಷ್ಟೇ ಚೆನ್ನಾಗಿ ಬಲ್ಲವರಾಗಿದ್ದಾರೆ ಮತ್ತು ಅವರು ಅದರ ವಿರುದ್ಧ ಎತ್ತುವ ಎಲ್ಲಾ ಆಕ್ಷೇಪಣೆಗಳಿಗೆ ಸಮರ್ಥವಾಗಿ ಉತ್ತರಿಸ ಬಲ್ಲವರಾಗಿದ್ದಾರೆ ಎಂದು ಖಚಿತವಾಗಿ ತಿಳಿದುಕೊಂಡಿದ್ದಾರೆ. ಜನಪ್ರಿಯ ವಿಚಾರವೇನೆಂದರೆ, ಒಬ್ಬ ಮಿಷನರಿ ಮರದ ನೆರಳಿನಲ್ಲಿ ಕುಳಿತು ಅರೆನಗ್ನ ಕಾಡುಜನರಿಗೆ ಬೋಧಿಸುತ್ತಾನೆ ಎಂಬುದು ಸ್ಫೋಟಕಕರವಾದ ವಿಚಾರವಾಗಿದೆ. ಭಾರತದಲ್ಲಿ ಒಬ್ಬ ಮಿಷನರಿಯು ಬುದ್ಧಿವಂತ, ವಿದ್ಯಾವಂತನನ್ನು ಸಂಧಿಸುತ್ತಾನೆ ಮತ್ತು ಆತನನ್ನು ಪ್ರಭಾವಗೊಳಿಸುವಂತೆ ಉತ್ತಮ ರೀತಿಯಲ್ಲಿ ಅಣಿಯಾಗಿಯೇ ಇರುತ್ತಾನೆ. ಬುದ್ಧಿವಂತನಾಗಿರುವುದರೊಂದಿಗೆ ಅವರು ಚೆನ್ನಾಗಿ ಕಾಣುವ ವ್ಯಕ್ತಿಗಳಾಗಿದ್ದಾರೆ, ಮಧುರ ಸ್ವಭಾವದವರು, ವಿನಯಶೀಲರು, ಸಜ್ಜನರು ಮತ್ತು ಎಲ್ಲಾ ವಿದೇಶಿಗಳನ್ನೂ ಹೆಚ್ಚಿನ ಪರಿಗಣನೆ ಮತ್ತು ಗೌರವದೊಂದಿಗೆ ಕಾಣುವವರಾಗಿದ್ದಾರೆ.

ಅವರು ಉಲ್ಲೇಖಿಸುವದೇನೆಂದರೆ, ಮೊಂಡುತನದ ಸಂಗತಿಗಳು ನಿಶ್ಚಯವಾಗಿಯೂ ಒಬ್ಬ ಸಭ್ಯವ್ಯಕ್ತಿಯ ಅನುಚಿತವಾದ ನಿರೀಕ್ಷೆಗಳನ್ನು ಸಮರ್ಥಿಸುವುದಿಲ್ಲ. ಭಿನ್ನವರ್ಗಾಲಂಬಿಗಳ ಅಡ್ಡಾದಿಡ್ಡಿ ವಾದವಿವಾದಗಳು ಅವರ ದೋಷಗಳನ್ನು ವಿಕೃತಗೊಳಿಸುತ್ತದೆ. ಅವರು ಹೊಂದಿರುವ ಸತ್ಯವನ್ನು ವಿರೂಪಗೊಳಿಸುತ್ತವೆ ಹಾಗೂ ಪ್ರಾಮಾಣಿಕವಾಗಿರುವ ಮತ್ತು ಧಿಕ್ಕರಿಸುವ ಸಂದೇಹವಾದಿಗಳನ್ನು ವಿರಳವಾಗಿ ಪರಿವರ್ತಿಸುತ್ತದೆ ಎಂಬ ಅನುಭವವನ್ನು ಖಂಡಿತವಾಗಿಯೂ ಸಾಬೀತುಗೊಳಿಸುತ್ತದೆ. ಆದರೆ ಕುರುಡರನ್ನು ಹೊರತುಪಡಿಸಿ ಎಲ್ಲರಿಗೂ ಕಾಣಿಸುವುದೇನೆಂದರೆ, ಅನ್ಯಸಮುದಾಯದ ಹತ್ತು ನೂರು ಮಿಲಿಯನ್ ಜನರು ಕ್ರೈಸ್ತ ಪ್ರಪಂಚದವರು ಎಂದು ಹೇಳಿಕೊಳ್ಳುವ ನಾನೂರು ಮಿಲಿಯನ್** ಸ್ಥಿತಿಗೆ ಪರಿವರ್ತಿತರಾದರೆ, ಯೆಹೂದ್ಯ ಯುಗದಲ್ಲಿದ್ದಂತೆ ಅವರು ತಮ್ಮ ಮೂಲದ ಅನ್ಯಜನಗಳ ಮೂಢನಂಬಿಕೆಯಲ್ಲಿದ್ದುದಕ್ಕಿಂತ ಈಗ ಎರಡುಪಟ್ಟು ನಾಶನಕ್ಕೆ ಸೂಕ್ತವಾಗಿದ್ದಾರಲ್ಲವೆ ಎಂಬ ಪ್ರಶ್ನೆಯು ತೆರೆದ ಪುಸ್ತಕವಾಗಿದೆ (ಮತ್ತಾಯ 23:15).

---

* (ಅನುವಾದಕರ ಸ್ಪಷ್ಟನೆ) ಈ ಗ್ರಂಥದಲ್ಲಿ ಬರುವ ಎಲ್ಲಾ ರೀತಿಯ ಅಂಕಿ ಅಂಶಗಳು ಗ್ರಂಥಕರ್ತರ ಕಾಲಘಟ್ಟಕ್ಕೆ ಅನ್ವಯಿಸುತ್ತದೆ ಎಂದು ಅರ್ಥಮಾಡಿಕೊಳ್ಳಬೇಕು.

** ಈ 400,000,000 ರೋಮನ್ ಮತ್ತು ಗ್ರೀಕ್ ಕೈಥೋಲಿಕರು ಒಟ್ಟಾಗಿ 280,000,000 ಇದ್ದಾರೆಂತಲೂ ಉಳಿದ 120.000,000 ಜನರು ಪ್ರೊತಾಸ್ತಾಂತರೆಂದೂ ಹೇಳಿಕೊಳ್ಳುತ್ತಾರೆ

ಖಂಡಿತವಾಗಿಯೂ ಕ್ರೈಸ್ತ ಪ್ರಪಂಚದವರು ಎಂದು ಹೇಳಿಕೊಳ್ಳುವವರ ಇಂತಹ ಪರಿಸ್ಥಿತಿಗೆ ಪರಿವರ್ತನೆ (Conversion) ಮಾಡುವದನ್ನು; ಪ್ರವಾದಿಗಳು ಮುಂತಿಳಿಸಿರುವ ಮತ್ತು ನಮ್ಮ ಕರ್ತನ ಪ್ರಾರ್ಥನೆಯಲ್ಲಿ 'ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ' (ಲೂಕ 11:2) ಎಂದು ಸಂಕ್ಷಿಪ್ತಗೊಳಿಸಿರುವಂತೆ ಸಹಸ್ರಮಾನ ಯುಗದ ಶಾಂತಿಯ ಮತ್ತು ಸದ್ಭಾವನೆಯ ವಿವರಣೆಯನ್ನು ನೆರವೇರಿಸುತ್ತದೆ ಎಂದು ಸ್ವಸ್ಥ ಮನಸ್ಸಿನಿಂದ ಸಾಧಿಸಲಾರರು.

ಈ ನಾನೂರು ಮಿಲಿಯನ್ ಜನ ಸಮೂಹವು ಕ್ರಿಸ್ತನ ಸಭೆಯಾಗಿ ರಚಿಸಲ್ಪಟ್ಟಿದೆ ಮತ್ತು ತಮ್ಮನ್ನು ಕ್ರೈಸ್ತರಾಜ್ಯವೆಂಬುದಾಗಿ ಕರೆಕೊಳ್ಳುವುದನ್ನು ಕರ್ತನು ನಿರಾಕರಿಸುತ್ತಾನೆ ಮತ್ತು ಆತನು ಅದಕ್ಕೆ ಬಾಬೇಲ್ 'ಬೆರಕೆ, ತಾರುಮಾರು' (Mixture, confusion) ಎಂಬ ಹೆಸರನ್ನು ನೀಡಿದ್ದಾನೆ ಎಂಬುದು ಆಶ್ಚಯಕಾರಕ ವಾಗಿದೆಯಲ್ಲವೆ? ಮತ್ತು ಕ್ರಿಸ್ತನ ರಾಜ್ಯವೆಂಬ ಅವರ ಕಲ್ಪನೆಯೊಂದಿಗೆ, ಮತ್ತು ಅದರ ಜಗದಾದ್ಯಂತ ಹರಡುವಿಕೆ ಮತ್ತು ಅದರ ಫಲಿತಾಂಶ ಇವುಗಳು ನಿಜವಾದ ರಾಜ್ಯಕ್ಕೆ ಇನ್ನೂ ಸಿದ್ಧವಾಗಿಲ್ಲ ಮತ್ತು ನೂತನ ರಾಜನನ್ನು ಆತನ ಪ್ರಥಮಾಗಮನದ ಸಮಯದಲ್ಲಿ ಸಾಂಕೇತಿಕ ಮನೆಯ ಆಡಳಿತಗಾರರಿಗೆ ಸ್ವೀಕರಿಸುವ ಮನಸ್ಸಿಲ್ಲದ ಕಾರಣದಂತೆಯೇ ಈಗಲೂ ಸ್ವೀಕರಿಸಲು ಮನಸ್ಸಿಲ್ಲ ಎಂಬುದು ಯಾವುದೇ ವಿಸ್ಮಯಕರವೇ? ಅಥವಾ ಚಕ್ರವರ್ತಿಗಳು, ರಾಜರುಗಳು ಮತ್ತು ರಾಜಕುಮಾರರು ಈಗ ಮುಖ್ಯವಾಗಿ ತಮ್ಮ ಸ್ವಯಂ ಉನ್ನತಿಗಾಗಿ ಪ್ರಭಾವ ಮತ್ತು ಶಕ್ತಿಯನ್ನು ಉಪಯೋಗಿಸುವಂತೆ ತಮ್ಮ ರಾಜಸದೃಶ ಸ್ಥಾನಮಾನಗಳನ್ನು ಕಾಪಾಡಿಕೊಳ್ಳಲು ಮತ್ತು ಅದರಲ್ಲಿ ಮುಂದುವರೆಯಲು ಮಿಲಿಯಾಂತರ ಆಯುಧ ಸಹಿತರಾದ ಸೈನಿಕರನ್ನು ಸಜ್ಜುಗೊಳಿಸಿ, ಅವರನ್ನು ಸಲಹುತ್ತಾ ಬಂದಿದ್ದಾರೆ. ನಿಜವಾಗಿ ಹೇಳುವುದಾದರೆ, ತಮ್ಮ ಪ್ರಸ್ತುತ ಸವಲತ್ತುಗಳಿಂದ ಬೇರ್ಪಡುವುದಕ್ಕಿಂತ ಹೆಚ್ಚಾಗಿ ಅವರು ಮಿಲಿಯಾಂತರ ಜನರು ಹತ್ಯೆಗೊಳ್ಳುವುದನ್ನು ನೋಡಬಯಸುತ್ತಾರೆ ಮತ್ತು ಇನ್ನಷ್ಟು ಮಿಲಿಯನ್ ಜನರನ್ನು ಹಿಂದಿನಂತೆ ವಿಧವೆಯರಾಗಿಯೂ, ಅನಾಥರನ್ನಾಗಿಯೂ ಮಾಡುತ್ತಾರೆ. ಇವರುಗಳು ಪರಿಶುದ್ಧ ಗ್ರಂಥದಲ್ಲಿ ವಾಗ್ದಾನಪಡಿಸಿದ ರಾಜ್ಯವನ್ನು ಬಯಸುತ್ತಿಲ್ಲ, ನಿರೀಕ್ಷಿಸುತ್ತಿಲ್ಲ ಅಥವಾ ನಂಬುತ್ತಿಲ್ಲ ಎಂಬುದು ಆಶ್ಚರ್ಯವೇ ? ಮತ್ತು ಆ (ಕರ್ತನ) ರಾಜ್ಯದಲ್ಲಿ, ದೊಡ್ಡಸ್ತಿಕೆ, ಆಡಂಬರ ಹಾಗೂ ಹೆಮ್ಮೆಯುಳ್ಳವರು ಕೆಳಕ್ಕೆ ಇಳಿಸಲ್ಪಡುತ್ತಾರೆ, ಕೆಳಗಿನವರು ಸಾಮಾನ್ಯ ಸ್ಥಿತಿಗೆ, ಸರಿಯಾದ ಸ್ಥಿತಿಗೆ ಮತ್ತು ವಿನ್ಯಾಸಗೊಳಿಸಿದ ಮಟ್ಟಕ್ಕೆ ಎತ್ತಲ್ಪಡುತ್ತಾರೆ ಎಂಬುದು ಆಶ್ಚರ್ಯಕಾರಕವೇ? ಮತ್ತು ಯಾವುದೇ ದಬ್ಬಾಳಿಕೆ, ಸುಲಿಗೆ ಅಥವಾ ಏಕಸ್ವಾಮ್ಯತೆಯ ಬಗ್ಗೆ ಸಹಾನುಭೂತಿಯುಳ್ಳವರು ದಬ್ಬಾಳಿಕೆ, ಸುಲಿಗೆ ಮಾಡುವವರು ಅಥವಾ ಪುಡಿ ಪುಡಿ ಮಾಡುವ ಏಕಾಧಿಕಾರದಿಂದ ಹೊಂದುವ ಅಥವಾ ಹೊಂದಲು ಅಪೇಕ್ಷಿಸುವ ಜೊತೆಯವರ ಮೇಲೆ ಅನ್ಯಾಯವಾದ ಸವಲತ್ತು ಪಡಕೊಳ್ಳುವವರು ಅಂತಹವರು ಯಾವುದೇ ಅನ್ಯಾಯ ಅಥವಾ ಅತಿಕ್ರಮಣಗಳಿಗೆ ಅನುಮತಿಯಿಲ್ಲದ ನೀತಿಯುಳ್ಳ ರಾಜ್ಯದ ಬಗ್ಗೆ ನಂಬಿಕೆ ವ್ಯಕ್ತಪಡಿಸು ವುದದರಲ್ಲಿ ನಿಧಾನಿಗಳಾಗಿರುವುದು ಯಾವುದೇ ಆಶ್ಚರ್ಯವೇ? ವಿಶೇಷವಾಗಿ, ಅಂಥವರು ಈ ರಾಜ್ಯವು ಹತ್ತಿರದಲ್ಲಿಯೇ ಇದೆ, ಬಾಗಿಲ ಬಳಿಯೇ ಇದೆ ಎಂಬುದನ್ನು ನಂಬುವುದರಲ್ಲಿ ನಿಧಾನಿಗಳಾಗಿರುವುದು ಆಶ್ಚರ್ಯವೇ?

ಕ್ರೈಸ್ತ ಪ್ರಪಂಚದ ಮಹಾನುಭಾವರುಗಳೂ, ಮಹಾಯಾಜಕರುಗಳೂ, ಮತ್ತು ಆಡಳಿತಗಾರರುಗಳೂ ತಮ್ಮ ಸ್ವಂತ ದಿಕ್ಕಿನಿಂದ ಅಥವಾ ಪಂಗಡದಿಂದ ಲಾಭಗಳಿಸಿಕೊಳ್ಳುವುದನ್ನು ನೋಡುವವರಾಗಿ (ಯೆಶಾಯ 56:11) ಗ್ರಹಿಸಲಾಗದೇ ಹೋದುದರಿಂದ ಈಗ ಪ್ರಸನ್ನನಾಗಿರುವ ಆತ್ಮೀಕ ಅರಸನನ್ನು ಶಾರೀರಿಕ ಮನೆತನದವರು ಆತನು ದೇಹಧಾರಿಯಾಗಿ ಬಂದಾಗ ತಿರಸ್ಕರಿಸಿದಂತೆ ಈಗಲೂ ತಿರಸ್ಕರಿಸುವುದು ಆಶ್ಚರ್ಯವೇನಲ್ಲ. ಮತ್ತೆ ಕರ್ತನು ತಿರಸ್ಕರಿಸುವಾಗ, ತನ್ನ ಕೃಪೆಯಿಂದ ಕಿತ್ತು ಸಂಕಟದ ಬೆಂಕಿಗೆ ಒಗೆದು ಹಾಕುವಾಗ, ಒಲೀವ್ ಮರದ ಅನೇಕ "ಹುಟ್ಟು ಕೊಂಬೆಗಳು" ''ನಿಜ ಇಸ್ರಾಯೇಲ್ಯ''ರೆಂಬ ಕೊಂಬೆಗಳನ್ನು ಮಾತ್ರವೇ ಸಂರಕ್ಷಿಸಿಕೊಂಡದ್ದನ್ನು ನಾವು ನೋಡಲಿಲ್ಲವೇ? ಈ ಯುಗದ ಸುಗ್ಗಿಯಲ್ಲಿ ಅದೇ ವಿವೇಕವು ಕಾಡೆಣ್ಣೆ ಕೊಂಬೆಗಳನ್ನು ಸಹ ಪರೀಕ್ಷಿಸುತ್ತವೆಂಬುದನ್ನು ಮತ್ತು ಅಬ್ರಹಾಮನ ವಾಗ್ದಾನಗಳ ಕೃಪೆ ಮತ್ತು ಪುಷ್ಟೀಕರಣದಿಂದ ತುಂಡಾಗುವುದನ್ನು ನಾವು ನೋಡುವುದಿಲ್ಲವೋ? (ರೋಮಾ. 11:21, 22). ಕ್ರೈಸ್ತರೆಂದು ಹೇಳಿಕೊಳ್ಳುವ ಈ ದೊಡ್ಡ ಕೊಂಬೆಗಳ ಸಮೂಹದ ಗುಣಲಕ್ಷಣಗಳು ಮತ್ತು ಗುರಿ ಹಾಗೂ ಸ್ವಭಾವವು ಅನ್ಯದೇಶೀಯವೂ ಮತ್ತು ನಿಜವಾಗಿಯೂ ಒರಟಾಗಿದ್ದು – ಬೇರಿನಲ್ಲಿ ಪ್ರತಿನಿಧಿಸುವ ದೇವರ ವಾಗ್ದಾನ ಮತ್ತು ಯೋಜನೆಗಳಿಗಿಂತ ಬಹಳಷ್ಟು ವ್ಯತ್ಯಾಸವುಳ್ಳದ್ದಾಗಿದೆಯಲ್ಲವೋ ?

ಯೆಹೂದ್ಯ ಸುಗ್ಗಿಯಲ್ಲಿಯೂ ಕೆಲ ನಿಜವಾದ ಇಸ್ರಾಯೇಲ್ಯರಿಂದ ತೋರಿಕೆಯ ಇಸ್ರಾಯೇಲ್ಯರ ಪ್ರತ್ಯೇಕಿಸುವಿಕೆ ನೆರವೇರಿದಂತೆ ಪ್ರಸ್ತುತ ಸುಗ್ಗಿಯಲ್ಲಿಯೂ ತೋರಿಕೆಯವರಿಗಿಂತ ನಿಜ ಕ್ರೈಸ್ತರ ಪ್ರತ್ಯೇಕತೆಯನ್ನು ನಾವು ಕಾಣುತ್ತಿರುವುದು ಆಶ್ಚರ್ಯಕರವಲ್ಲವೇ? ಬಾಬೇಲಿನಂತೆ, ಸಮೂಹದ ತಿರಸ್ಕಾರವನ್ನ ತೋರಿಸುವ ಯಾವುದೇ ಪ್ರಕಟನೆ ದೇವರ ವಾಕ್ಯದಲ್ಲಿ ಕಂಡಬರದಿದ್ದರೂ ಇದನ್ನು ಮಾತ್ರವೇ ನಾವು ಸಮಂಜಸವಾಗಿ ನಿರೀಕ್ಷಿಸಬಹುದು (ರೋಮಾ. 11:20–22ನ್ನು ಪ್ರಕಟನೆ 3:16; 18;4ರೊಂದಿಗೆ ಹೋಲಿಸಿರಿ).

ಬಾಬೇಲಿನ ತಿರಸ್ಕರಣೆ, 1878ರಲ್ಲಿ 'ಕ್ರೈಸ್ತ ಪ್ರಪಂಚ'ದ ತಿರಸ್ಕರಣೆ ಇವುಗಳು ತೋರಿಕೆಯವರ ಸಮೂಹದ ತಿರಸ್ಕರಣೆಯಾಗಿದೆ. ಇದನ್ನು ದಾನಿಯೇಲನು ಪವಿತ್ರಾಲಯ ಮತ್ತು ದೇವಾಲಯ ವರ್ಗಗಳನ್ನು ಪ್ರತ್ಯೇಕಿಸುವಂತೆ 'ಸಮೂಹ' (Host) ಎಂದೇ ಕರೆದಿದ್ದಾನೆ. ಪವಿತ್ರಾಲಯ ವರ್ಗವನ್ನು – ಬಿಟ್ಟು ಬಿಡುವುದಿಲ್ಲ ಅಥವಾ ಉದಾಸೀನ ಮಾಡುವುದಿಲ್ಲ. ಇಲ್ಲ, ಪವಿತ್ರಾಲಯದ ವರ್ಗವನ್ನು ಮಹಿಮೆ ಪಡಿಸಬೇಕು; ಅದರ ಕಟ್ಟಕಡೆಯ ಜೀವಂತ ಕಲ್ಲನ್ನು ಹೊಳಪು ಕೊಟ್ಟು ಅನುಮೋದಿಸಿ ಅವರ ಸ್ಥಳದಲ್ಲಿ ಸ್ಥಾಪಿಸುವಾಗ ಕರ್ತನ ಮಹಿಮೆಯು ಆತನ ಆಲಯವನ್ನು ತುಂಬಿಕೊಳ್ಳಬೇಕು. (1 ಪೇತ್ರ 2:5,6). ಅಂಥಾಃ ಪವಿತ್ರಾಲಯ ವರ್ಗವು ಯುಗವೆಲ್ಲಾ ಯಾವ ರೀತಿ ಅಸ್ಥಿತ್ವದಲ್ಲಿತ್ತೆಂಬದನ್ನು, ಅದು ಹೇಗೆ ಭ್ರಷ್ಟಗೊಂಡಿತ್ತೆಂಬುದನ್ನು ಮತ್ತು ಅದರ ಅಮೂಲ್ಯ ಪಾತ್ರೆಗಳನ್ನು (ಸಿದ್ಧಾಂತಗಳನ್ನು) ಅಶುದ್ಧಗೊಳಿಸಿದ್ದನ್ನು, ಅದರ ಶುದ್ಧೀಕರಣವನ್ನು ಹೇಗೆ ಕ್ರಮೇಣವಾಗಿ ನೆರೆವೇರಿಸಲಾಯಿತೆಂಬುದನ್ನು ನಾವು ನೋಡಿದ್ದೇವೆ. ಈ ವರ್ಗವು ಅದರ ನಾಮಾಂಕಿತ ಪದ್ಧತಿಗಳು ಒಂದು ಮಟ್ಟದಲ್ಲಿ ಮಾನ್ಯ ಮಾಡಲ್ಪಟ್ಟು ಹೇಗೋ ಉಪಯೋಗದಲ್ಲಿರುವಾಗಲೂ ಇದುವರೆಗೂ ನಿಜವಾದ ಸಭೆಯಾಗಿದೆ. ನಾಮಾಂಕಿತ ಪದ್ಧತಿಗಳ ತಿರಸ್ಕರಣೆಯ ನಂತರವೂ, ಹೇಗಾದರೂ, ಈಗ ಯೆಹೂದ್ಯ ಸುಗ್ಗಿಯಲ್ಲಿದ್ದಂತೆ ನಿಜವಾದ ಸಭೆ ಅಥವ ಪವಿತ್ರಾಲಯ ವರ್ಗವು ಮಾತ್ರವೇ ಮಾನ್ಯಮಾಡಲ್ಪಟ್ಟು ಅದರ ಮುಖವಾಣಿಯಾಗಿ ಉಪಯೊಗಿಸಲ್ಪಡುತ್ತಿದೆ. ಆ ಪದ್ದತಿಯನ್ನು ತೊಡೆದು ಹಾಕುವ ಸ್ವಲ್ಪ ದಿನಗಳ ಮೊದಲು ಶಾರೀರಿಕ ಇಸ್ರಾಯಲ್ಯರ ಮಹಾ ಯಾಜಕನಾಗಿದ್ದ ಕಾಯಫನನ್ನು ಮಹಾಬೋಧನೆ ಮತ್ತು ಪ್ರವಾದನೆಗಳನ್ನು ಹೇಳುವಂತೆ ದೇವರ ಪಾರುಪತ್ಯಗಾರನನ್ನಾಗಿ ಉಪಯೋಗಮಾಡಲಾಗುತ್ತಿತ್ತು (ಯೋಹಾನ 11:50, 51, 55; 18:14 ನೋಡಿರಿ). ಆದರೆ ಆ ಬಗ್ಗೆ ನಮಗೆ ಪವಿತ್ರ ಗ್ರಂಥದಲ್ಲಿ ದೇವರು ಎಂದಾದರೂ ಸಭಾದೇಶವನ್ನು ತೊಲಗಿಸಿದ ನಂತರ, ಅದರ ಆಳ್ವಿಕೆ ಮಾಡುವವರನ್ನು ಉಪಯೋಗಿಸಿದನು. ಇಲ್ಲವೇ ಅವರನ್ನು ಮಾನ್ಯ ಮಾಡಿದನು ಎಂಬದಕ್ಕೆ ಯಾವುದೇ ಮಾಹಿತಿ ಇರುವುದಿಲ್ಲ, ಬಾಬೇಲಿನ ಬಗ್ಗೆಯೂ ಇದೇ ಪಾಠವನ್ನು ಇಲ್ಲಿ ಮಾನ್ಯ ಮಾಡಬೇಕು. ಆಕೆಯನ್ನು ಕರ್ತನ ಬಾಯಿಂದ ಕಾರಿಬಿಡಲಾಯಿತು. ಆಕೆಯಲ್ಲಿ ವಧುವರರ ಸ್ವರ ಕೇಳಿ ಬರುವುದೇ ಇಲ್ಲ (ಪ್ರಕಟನೆ 18:23).

ಬಾಬೇಲಿನ ಅವರ ವಾಸಸ್ಥಾನದ ಬಗ್ಗೆ ವಾದಮಾಡುವ ಪ್ರಯತ್ನವು ವ್ಯರ್ಥ ಮತ್ತು ಪ್ರವಾದನೀಯ ಚಿತ್ರಣದ ಸಾಮಾನ್ಯವಾದ ತಿದ್ದುಪಡಿಗಳನ್ನು ಒಪ್ಪಿಕೊಳ್ಳುವಾಗ, ಅವರ ಪಂಗಡ ಅಥವಾ ನಿರ್ದಿಷ್ಟವಾದ ಸಭೆಯು ಬಾಬೇಲಿನ ಸಾಮಾನ್ಯ ಗುಣಲಕ್ಷಣಗಳಿಗೆ ಅಪವಾದವೆಂದು ಸಾದಿಸುವುದು ವ್ಯರ್ಥವೇ ಸರಿ. ಹಾಗಾಗಿ, ಒಮ್ಮೆ ಸೇರಿದ ನಂತರದಲ್ಲಿ ಅವರನ್ನು ಅದರಿಂದ ಸಾಂಪ್ರದಾಯಕವಾಗಿ ಮತ್ತು ಸಾರ್ವಜನಿಕವಾಗಿ ಹೊರಬರುವಂತೆ ಕರ್ತನು ಕರೆ ನೀಡುವವನಲ್ಲ.

ನಾವೀಗ ಪ್ರತ್ಯೇಕಗೊಳ್ಳುವ ಸುಗ್ಗಿಯ ಸಮಯದಲ್ಲಿದ್ದೇವೆಂದು ಪರಿಗಣಸೋಣ ಮತ್ತು ನಮ್ಮ ಕರ್ತನು ನಮ್ಮನ್ನು ಬಾಬೇಲಿನಿಂದ ಹೊರಬರುವಂತೆ ವ್ಯಕ್ತಪಡಿಸಿದ "ನೀವುಗಳು ಆಕೆಯ ಪಾಪಗಳಲ್ಲಿ ಭಾಗವಹಿಸದಿರಿ" ಎಂಬ ಉದ್ದೇಶವನ್ನು ನೆನಪು ಮಾಡಿಕೊಳ್ಳೋಣ. ಬಾಬೇಲನ್ನು ಆ ರೀತಿಯಾಗಿ ಹಾಗೆ ಯಾಕೆ ಹೆಸರಿಸಲಾಗಿದೆ ಎಂಬುದನ್ನು ಪುನಃ ಪರಿಗಣಿಸೋಣ. ಸ್ಪಷ್ಟವಾಗಿ, ಆಕೆಯ ಸಿದ್ಧಾಂತಗಳಲ್ಲಿನ ಅನೇಕ ತಪ್ಪಾದ ಬೋಧನೆಗಳು, ಕೆಲವೊಂದು ದೈವಿಕ ಸತ್ಯಗಳೊಡನೆ ಮಿಶ್ರಣಗೊಂಡಿದ್ದು, ಮತ್ತು ವಿವಿದ ಜೊತೆಗಾರರು ಮಿಶ್ರಿತ ಸತ್ಯ ಮತ್ತು ತಪ್ಪುಗಳಿಂದ ಒಟ್ಟು ಸೇರಿರುವುದರಿಂದ ಬಹಳ ಗೊಂದಲವನ್ನುಂಟು ಮಾಡುವುದಾಗಿವೆ. ಅವುಗಳು ಸತ್ಯವನ್ನು ತ್ಯಾಗಮಾಡಿ ತಪ್ಪುಗಳನ್ನು ಹಿಡುಕೊಂಡಿರುವುದರಿಂದ, ಮೊದಲನೆಯದನ್ನು ನಿರರ್ಥಕಗೊಳಿಸಲಾಗಿದೆ ಮತ್ತು ಹಲವೊಮ್ಮೆ ಇವು ಅರ್ಥಹೀನತೆಗಿಂತಲೂ ಬಹಳ ಕೆಟ್ಟದ್ದಾಗಿರುತ್ತವೆ. ಸತ್ಯವನ್ನು ತ್ಯಾಗಮಾಡಿ ತಪ್ಪುಗಳನ್ನು ಹಿಡಿದು ಬೋಧಿಸುವದರಲ್ಲಿ ಹೆಸರು ಮಾತ್ರದ ಸಭೆಯ ಪ್ರತಿಪಂಗಡವೂ ಯಾರನ್ನೂ ಹೊರತುಪಡಿಸದೇ ಎಲ್ಲಾ ದೋಷವುಳ್ಳವುಗಳಾಗಿವೆ. ಪವಿತ್ರ ಗ್ರಂಥವನ್ನು ನೀವು ಪರಿಶ್ರಮಶೀಲತೆಯಿಂದ ಹುಡುಕಲು ಮತ್ತು ಆ ಮೂಲಕ ಕೃಪೆಯಲ್ಲಿ ಮತ್ತು ಜ್ಞಾನದಲ್ಲಿ ಬೆಳೆಯಲು ಯಾವ

ಪಂಗಡದವರ ಸಹಾಯವಿದೆ? ನಿಮ್ಮ ಬೆಳವಣಿಗೆಯನ್ನು ತನ್ನ ಸಿದ್ಧಾಂತಗಳಿಂದಲೂ, ಉಪಯೋಗಗಳಿಂದಲೂ ಕುಂಠಿತಗೊಳಿಸದ ಪಂಗಡ ಎಲ್ಲಿದೆ ? ನೀವು ಪ್ರಭುವಿನ ವಾಕ್ಯಗಳಿಗೆ ವಿಧೇಯರಾಗಿ ನಿಮ್ಮ ಬೆಳಕು ಪ್ರಕಾಶಿಸಲು ಬಿಡುವ ಪಂಗಡ ಎಲ್ಲಿದೆ? ನಮಗೆ ಗೊತ್ತಿರುವಂತೆ ಯಾವುದೂ ಇಲ್ಲ.

ಈ ಸಂಸ್ಥೆಗಳಲ್ಲಿ ಇರುವ ಯಾವುದಾದರೂ ದೇವರ ಮಕ್ಕಳು ಅವರ ಗುಲಾಮಗಿರಿಯನ್ನು ಗ್ರಹಿಸದೇ ಹೋಗಲು ಕಾರಣ ಅವರು ತಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸುವ ಪ್ರಯತ್ನ ಮಾಡುತ್ತಿಲ್ಲ ಎಂಬದೇ, ಯಾಕೆಂದರೆ, ಅವರು ಚಟುವಟಿಕೆಯುಳ್ಳ ಮನೆವಾರ್ತೆಯವರೂ, ನಿಷ್ಠಾವಂತ ಕಾವಲುಗಾರರೂ ಆಗಬೇಕಿರುವಲ್ಲಿ ಅವರು ಇನ್ನೂ ತಮ್ಮ ಕಾವಲುಗಾರನ ಹುದ್ದೆಯಲ್ಲಿ ನಿದ್ರೆಮಾಡುತ್ತಿದ್ದಾರೆ. (1 ಥೆಸ. 5: 5,6). ಅವರುಗಳು ಎಚ್ಚತ್ತುಕೊಳ್ಳಲಿ ಮತ್ತು ತಮ್ಮಲ್ಲಿರುವುದೆಂದು ತಿಳಿದಿರುವ ಸ್ವಾತಂತ್ರ್ಯವನ್ನು ಉಪಯೋಗಿಸಲು ಪ್ರಯತ್ನಿಸಲಿ. ಅವರು ತಮ್ಮ ಸಂಗಡಿಗ ಆರಾಧಕರುಗಳಿಗೆ ತಮ್ಮ ಪಂಥಗಳು ದೇವರ ಯೋಜನೆಯನ್ನು ತಿಳುಕೊಳ್ಳಲು ಎಲ್ಲಿ ಕಡಿಮೆ ಆಗಿದೆ, ಅವರು ಅದರಿಂದ ಎಲ್ಲಿ ಹಾದಿತಪ್ಪಿ ವಿರುದ್ಧ ದಿಕ್ಕಿನಲ್ಲಿ ಓಡುತ್ತಾ ಇದ್ದಾರೆಂಬುದನ್ನು ತೋರಿಸಲಿ, ಮತ್ತು ಯೇಸುಕ್ರಿಸ್ತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಬೇಕಾಗಿತ್ತು ಮತ್ತು ಅದರಿಂದ ಹರಿದು ಬರುವ ಈ ಸತ್ಯವು ಮತ್ತು ಆಶೀರ್ವಾದವು ಸೂಕ್ತ ಸಮಯದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಾಕ್ಷಿ ಕೊಡುವುದು; ದೇವರ ಸನ್ನಿಧಾನದಿಂದ ವಿಶ್ರಾಂತಿ ಕಾಲಗಳು ಒದಗಿ ಬರುವ ಸಮಯದಲ್ಲಿ ಪುನರ್ವಶದ ಅಶೀರ್ವಾದಗಳು ಎಲ್ಲಾ ಮಾನವ ಕುಲದವರಿಗೂ ಹರಿದು ಬರುವುದು ಎಂಬದನ್ನು ತೋರಿಸಲಿ. ಮುಂದುವರೆದು ಅವರು ಸುವಾರ್ತಾ ಸಭೆಯ ಮಹಾ ಕರೆಯನ್ನು, ಸಭೆಯೆಂಬ ದೇಹದಲ್ಲಿನ ಅದರ ಸದಸ್ಯತ್ವದ ಕಠಿಣ ಷರತ್ತುಗಳನ್ನು ಮತ್ತು ಸೂಕ್ತ ಸಮಯದಲ್ಲಿ ಈ ಮೀಸಲಾದ ಜನರನ್ನು ಅವರು ಕ್ರಿಸ್ತನೊಂದಿಗೆ ಆಳ್ವಿಕೆ ಮಾಡುವಂತೆ ಆತನ ಹೆಸರಿನಲ್ಲಿ ಮೇಲೆತ್ತುವ ಸುವಾರ್ತಾಯುಗದ ವಿಶೇಷ ನಿಯೋಗವನ್ನು ತೋರಿಸಲಿ. ಈ ರೀತಿಯಲ್ಲಿ ತಮ್ಮ ಸ್ವಾತಂತ್ರ್ಯವನ್ನು ಈ ದಿನದ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಬೋಧಿಸಲು ಪ್ರಯತ್ನಿಸಿದರೆ ಅವರು ಸಮಗ್ರ ಸಭೆಯವರನ್ನು ಪರಿವರ್ತನೆ ಮಾಡುವುದರಲ್ಲಿಯೋ ಅಥವಾ ವಿರೋಧದ ಅಲೆ ಎಬ್ಬಿಸುವದರಲ್ಲಿಯೋ ಜಯಶಾಲಿಗಳಾಗುತ್ತಾರೆ. ಅವರು ಖಂಡಿತವಾಗಿ ನಿಮ್ಮನ್ನು ತಮ್ಮ ಸಭಾಮಂದಿರಗಳಿಂದ ಹೊರಹಾಕುತ್ತಾರೆ, ಮತ್ತು ನಿಮ್ಮ ಸಹವಾಸದಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳುತ್ತಾರೆ. ಮತ್ತು ಕ್ರಿಸ್ತನ ಸಲುವಾಗಿ ನಿಮ್ಮ ಬಗ್ಗೆ ಎಲ್ಲಾ ವಿಧವಾದ ಕೆಟ್ಟಮಾತುಗಳನ್ನು ಸುಳ್ಳಾಗಿ ಹೊರಿಸುತ್ತಾರೆ. ಹಾಗೆ ಮಾಡುವಾಗ, ಸಂದೇಹವಿಲ್ಲದೆ, ಖಂಡಿತವಾಗಿ ಅನೇಕರು ಅವರು ಇದನ್ನೆಲ್ಲಾ ದೇವರ ಸಲುವಾಗಿ ಮಾಡುತ್ತಿದ್ದಾರೆಂದು ಭಾವಿಸುತ್ತಾರೆ. ಆದರೆ, ನೀವು ಆ ರೀತಿ ನಂಬಿಗಸ್ತರಾಗಿರುವಾಗ, "ಯೆಹೋವನ ಮಾತಿಗೆ ಭಯಪಡುವವರರೇ, ಆತನ ಮಾತನ್ನು ಕೇಳಿರಿ! ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ದ್ವೇಷಿಸಿ ಬಹಿಷ್ಕರಿಸಿದ ಸಂಬಂಧಿಗಳು – ಯೆಹೋವನು ಮಹಿಮೆಪಡಲಿ, ನಿಮಗಾಗುವ ಉತ್ಸಾಹವನ್ನು ನೋಡೋಣ, ಎಂದು ಹೇಳಿದ್ದಾರಲ್ಲಾ; ಅವರಿಗಂತೂ ಅವಮಾನವಾಗುವದು" ಎಂಬ ಯೆಶಾಯ 66.5 ರ ಅಮೂಲ್ಯ ವಾಗ್ದಾನವು ನಿಮ್ಮನ್ನು ಸಾಂತ್ವನಗೊಳಿಸುವುದು, ಮತ್ತು "ಮನುಷ್ಯಕುಮಾರನ ನಿಮಿತ್ತವಾಗಿ ಜನರು ನಿಮ್ಮನ್ನು ಹಗೆಮಾಡಿ ನಿಮಗೆ ಬಹಿಷ್ಕಾರ ಹಾಕಿ, ನಿಂದಿಸಿ ನಿಮ್ಮ ಹೆಸರನ್ನು ಕೆಟ್ಟದ್ದೆಂದು ತೆಗೆದುಹಾಕಿದರೆ ನೀವು ಧನ್ಯರು". ಆ ದಿನದಲ್ಲಿ ಸಂತೋಷಪಡಿರಿ, ಕುಣಿದಾಡಿರಿ, (ನಾವು ದೇವರ ಮಹಿಮೆಗಾಗಿ ಮಾಡುತ್ತೇವೆ) ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು ಎಂದು ತಿಳುಕೊಳ್ಳಿರಿ. ಈ ಜನರ ಪಿತೃಗಳು ಪ್ರವಾದಿಗಳಿಗೂ ಹಾಗೆಯೇ ಮಾಡಿದರು". ಲೂಕ 6:22 ರಲ್ಲಿನ ಅಮೂಲ್ಯ ಆಶೀರ್ವಾದಗಳಲ್ಲಿ ಹೆಚ್ಚಾದ ಸಮಾಧಾನವನ್ನು ಪಡೆಯುತ್ತೀರಿ. ಆದರೆ ಅಯ್ಯೋ, ಜನರೆಲ್ಲಾ ನಿಮ್ಮನ್ನು ಹೊಗಳಿದರೆ ನಿಮ್ಮ ಗತಿಯನ್ನು ಏನು ಹೇಳಲಿ! ಅವರ ಪಿತೃಗಳು ಸುಳ್ಳು ಪ್ರವಾದಿಗಳನ್ನು ಹಾಗೆಯೇ ಹೊಗಳಿದರು.

ನೀವು ಯಾರೊಂದಿಗೆ ಒಂದು ಸಭೆಯಾಗಿ ಆರಾಧಿಸುತ್ತಿದ್ದೀರೋ ಅವರೆಲ್ಲರೂ ಭಕ್ತರಾಗಿರುವುದಾದಲ್ಲಿ, – ಎಲ್ಲರೂ ಗೋಧಿಯಾದಲ್ಲಿ, ಅವರಲ್ಲಿ ಹಣಜಿಗಳು ಇಲ್ಲವಾದಲ್ಲಿ, ನೀವು ಸುಗ್ಗಿಯ ಸತ್ಯಗಳನ್ನು ಸಂತೋಷವಾಗಿ ಸ್ವೀಕರಿಸುವದಾದರೆ, ನೀವು ಅಸಾಧಾರಣ ಅಪೂರ್ವ ಜನರನ್ನೇ ಸೇರಿದ್ದೀರಿ. ಇಲ್ಲವಾದಲ್ಲಿ, ಹಣಜಿಗಳನ್ನು ಗೋಧಿಯಿಂದ ಪ್ರತ್ಯೇಕಿಸುವ ಪ್ರಸ್ತುತ ಸತ್ಯವನ್ನು ಎದುರು ನೋಡಿರಿ ಹಾಗೂ ಈ ಸತ್ಯಗಳನ್ನು ಪ್ರಸ್ತುತಿಪಡಿಸುವ ನಿಮ್ಮ ಭಾಗದ ಕೆಲಸವನ್ನು ನಿರ್ವಹಿಸುವಾಗ ಬೇರ್ಪಡಿಸುವಿಕೆಯು ನೆರವೇರುತ್ತದೆ.

ನೀವು ಜಯಿಸುವ ಭಕ್ತರುಗಳಲ್ಲಿ ಒಬ್ಬರಾಗಿರುವುದಾದರೆ, ನೀವೀಗ ಕೊಯ್ಲುಗಾರರುಗಳಲ್ಲಿ ಒಬ್ಬರಾಗಿ

ಸತ್ಯವೆಂಬ ಕುಡುಗೋಲನ್ನು ಹಾಕಬೇಕು. ಕರ್ತನಿಗೆ ನಿಷ್ಠೆಯುಳ್ಳವರಾದರೆ, ಸತ್ಯ ಮತ್ತು ಮಹಿಮೆಯಲ್ಲಿ ಆತನೊಂದಿಗೆ ಜೊತೆ ಬಾಧ್ಯಸ್ಥಿಕೆಗೆ ಅರ್ಹರಾಗಿರುವುದಾದರೆ, ನೀವು ಎಷ್ಟೇ ಹೊರಹಾಕಲ್ಪಟ್ಟಿದ್ದರೂ ಸಹಜವಾಗಿ, ಲೋಕದಲ್ಲಿ ಸರಾಗವಾಗಿ ನುಸುಳುವವರಾಗಿದ್ದರೂ, ಸ್ವಾಭಾವಿಕವಾಗಿ ಪ್ರಪಂಚದ ಮೂಲಕ ನಿರ್ವಿಘ್ನವಾಗಿ ಪ್ರಸ್ತುತ ಸುಗ್ಗಿಯ ಕಾರ್ಯದಲ್ಲಿನೀವು ಮುಖ್ಯಕೊಯ್ಲುಗಾರನೊಂದಿಗೆ ಹಂಚಿಕೊಳ್ಳುವಲ್ಲಿ ಸಂತೋಷಿಸುತ್ತೀರಿ.

ನೀವು ಸದಸ್ಯರಾಗಿ ಇರುವ ಸಭೆಯಲ್ಲಿ ಗೋಧಿಯೊಂದಿಗೆ ಹಣಜಿಯೂ ಇರುವುದಾದರೆ, ಯಾವಾಗಲೂ ಇರುವಂತೆ, ಯಾವುದು ಹೆಚ್ಚಾಗಿದೆ ಎಂಬದರ ಮೇಲೆ ಎಲ್ಲವೂ ಹೆಚ್ಚಾಗಿ ಆತುಕೊಂಡಿದೆ. ಗೋಧಿಯು ಪ್ರಭಲವಾಗಿರುವುದಾದರೆ, ಬುದ್ಧಿವಂತಿಕೆಯಿಂದಲೂ, ಪ್ರೀತಿಯಿಂದಲೂ ಪ್ರಸ್ತುತಿಪಡಿಸುವ ಸತ್ಯವು ಅವರಿಗೆ ಅನುಕೂಲಕರ ಪರಿಣಾಮಗಳನ್ನುಂಟು ಮಾಡುತ್ತದೆ ಮತ್ತು ಹಣಜಿಗಳು ಹೆಚ್ಚುಕಾಲ ಉಳುಕೊಳ್ಳಲು ಆಸಕ್ತಿ ತೋರುವುದಿಲ್ಲ. ಆದರೆ ಹೆಚ್ಚಿನವುಗಳು ಹಣಜಿಗಳಾಗಿದ್ದರೆ, – (ಹತ್ತರಲ್ಲಿ ಒಂಬತ್ತು ಪಾಲು ಅಥವಾ ಹೆಚ್ಚು) ಅತ್ಯಂತ ಎಚ್ಚರಿಕೆಯ ಮತ್ತು ದಯಾಳುವಾದ ಸುಗ್ಗಿಯ ಸತ್ಯವನ್ನು ಪ್ರಸ್ತುತಪಡಿಸುವುದರ ಪರಿಣಾಮವು ಪ್ರಬಲ ವಿರೋಧ ಮತ್ತು ಕಹಿಯನ್ನು ಜಾಗೃತಿಗೊಳಿಸುವುದಾಗಿದೆ. ಮತ್ತು ನೀವು ಸುವಾರ್ತೆಯನ್ನು ಪ್ರಕಟಿಸಲು ಮತ್ತು ದೀರ್ಘಕಾಲದ ತಪ್ಪುಗಳನ್ನು ಬಹಿರಂಗಪಡಿಸಲು ಪಟ್ಟು ಹಿಡಿಯುವವರಾದರೆ, ನೀವುಗಳು ಕೂಡಲೇ ಪಂಥೀಯ ಕಾರಣದ ಒಳಿತಿಗಾಗಿ ಹೊರಹಾಕಲ್ಪಡುವಿರಿ ಅಥವಾ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸದಂತೆ ನಿಮ್ಮ ಸ್ವಾತಂತ್ರ್ಯವನ್ನು ಹತೋಟಿಗೊಳಿಸಲಾಗುವುದು. ಹಾಗಿರುವಾಗ ನಿಮ್ಮ ಕರ್ತವ್ಯವು ಸರಳವಾಗಿರಲಿ; ದೇವರ ಯುಗಾಂತರಗಳ ಮಹಾ ಯೋಜನೆಯನ್ನು ನೀವು ಒಳ್ಳೇತನದಿಂದಲೂ ವಿವೇಕದಿಂದಲೂ ಪ್ರೀತಿಯ ಸಾಕ್ಷ್ಯಗಳನ್ನು ತಲುಪಿಸಿರಿ ಬುದ್ಧಿವಂತಿಕೆಯಿಂದ ನಮ್ರತೆಯಿಂದ ಸಕಾರಣಗಳೊಂದಿಗೆ ಉಪನ್ಯಾಸ ಮಾಡಿರಿ, ಅವುಗಳಿಂದ ಅವರಿಂದ ಸಾರ್ವಜನಿಕವಾಗಿ ಹಿಂಜರಿಯಿರಿ.

'ಬಾಬೇಲ್' ಎಂಬ ವಿವಿಧ ಪಂಗಡಗಳುಳ್ಳ "ಕ್ರೈಸ್ತ ಪ್ರಪಂಚ"ದ ದಾಸತ್ವದ ಮಟ್ಟವು ಅನೇಕ ಶ್ರೇಣಿಯಲ್ಲಿವೆ. ರೋಮನಿಸಂಗೆ ಬೇಕಾಗಿದ್ದ ಅತ್ಯಧಿಕವಾದ ಹಾಗೂ ಸಂಪೂರ್ಣವಾದ ವೈಯುಕ್ತಿಕ ಆತ್ಮಸಾಕ್ಷಿಯನ್ನು ದಾಸ್ಯತ್ವಕ್ಕೆ ಒಪ್ಪಿಸುವವರ ಬಗ್ಗೆ ತಮ್ಮ ಅಸಮಾಧಾನವನ್ನು ಪೂರ್ತಿಯಾಗಿ ತೋರ್ಪಡಿಸುವ ಅಂಥವರು ತಮ್ಮನ್ನು ಬಂಧಿಸಿಕೊಳ್ಳಲು ತೀರ ಸಿದ್ಧರಾಗಿದ್ದು ಹಾಗೂ ಇತರರು ಸಹ ಯಾವುದಾದರೂ ಪ್ರೊತಸ್ತಾಂತ ಪಂಗಡದ ಮತಾಭಿಪ್ರಾಯ ಮತ್ತು ತತ್ವ ಸಿದ್ಧಾಂತಗಳಿಂದ ಬಂಧಿತರಾಗಬೇಕೆಂದು ತವಕಿಸುತ್ತಾರೆ. ವಾಸ್ತವವಾಗಿ, ಅವರ ಸರಪಣಿಗಳು ರೋಮಿನವರಿಗಿಂತಲೂ ಮತ್ತು ಕತ್ತಲಯುಗದವರಿಗಿಂತಲೂ ಹಗುರವಾಗಿರುವುದು, ನೀಳವಾಗಿರುವುದು ಸತ್ಯ. ಅದು ಹೋಗುವವರೆಗೆ ತನಕ ಇದು ಖಂಡಿತವಾಗಿಯೂ ಒಳ್ಳೆಯದು – ನಿಜವಾಗಿಯೂ ಸುಧಾರಣೆ – ಸರಿಯಾದ ಮಾರ್ಗದಲ್ಲಿ ಸಂಪೂರ್ಣ ಸ್ವಾತಂತ್ರ್ಯದೆಡೆಗೆ ನಡೆಸುವ ಹೆಜ್ಜೆ ಅಪೋಸ್ತಲರ ಸಮಯದ ಸಭೆಯ ಸ್ಥಿತಿಯ ಕಡೆಗೆ ನಡೆಸುವುದಾಗಿದೆ. ಆದರೆ ಯಾಕೆ ಮಾನವ ಸಂಕೋಲೆಗಳನ್ನು ಧರಿಸಬೇಕು? ನಮ್ಮ ವಿವೇಚನಾ ಶಕ್ತಿಯನ್ನು ಯಾಕೆ ಬಂಧಿಸಬೇಕು?, ಯಾಕೆ ಮಿತಿಗೊಳಿಸಬೇಕು? ಕ್ರಿಸ್ತನು ನಮ್ಮನ್ನು ಸ್ವತಂತ್ರಗೊಳಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು. ಪೂರ್ಣ ಸ್ವಾತಂತ್ರ್ಯದಲ್ಲಿ ಯಾಕೆ ಸ್ಥಿರವಾಗಿ ನಿಲ್ಲಬಾರದು? ಆತ್ಮಸಾಕ್ಷಿಯನ್ನು ತಡೆಯೊಡ್ಡುವ, ಪರಿಶೋಧಿಸುವುದನ್ನು ಅಡ್ಡಿಪಡಿಸುವ, ದೋಷಾಸ್ಪದ ಜತೆಗಾರರ ಪ್ರಯತ್ನವನ್ನು ಏಕೆ ನಿರಾಕರಿಸಬಾರದು? ಹಿಂದಿನ, ಕತ್ತಲಯುಗದ ಪ್ರಯತ್ನಗಳು ಮಾತ್ರವಲ್ಲ, ಸ್ವಲ್ಪ ಹಿಂದಿನ ವಿವಿಧ ಸುಧಾರಕರುಗಳ ಪರಿಶ್ರಮಗಳನ್ನು ಅಡ್ಡಿಪಡಿಸುವ ಎಲ್ಲಾ ಪ್ರಯತ್ನಗಳನ್ನು ಯಾಕೆ ನಿರಾಕರಿಸಬಾರದು? ಕರ್ತನು ಸೂಕ್ತ ಸಮಯದಲ್ಲಿ ತನ್ನ ಕೃಪಾ ಯೋಜನೆಯನ್ನು ಹೆಚ್ಚು ಹೆಚ್ಚು ಪೂರ್ಣವಾಗಿ ಬಹಿರಂಗಗೊಳಿಸಲಿರುವುದರಿಂದ ನಾವು ಜ್ಞಾನದಲ್ಲಿ, ಕೃಪೆಯಲ್ಲಿ, ಪ್ರೀತಿಯಲ್ಲಿ ಮುಕ್ತವಾಗಿ ಬೆಳೆಯಲು ಅಪೋಸ್ತಲರ ಸಭೆಯವರಂತಿರಲು, ಯಾಕೆ ತೀರ್ಮಾನಿಸಬಾರದು?

"ನಂಬಿಕೆಯನ್ನು ಅರಿಕೆಮಾಡುವ" ಈ ಮಾನವ ಸಂಸ್ಥೆಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿ ಅದನ್ನು ತನ್ನದೆಂದು ಒಪ್ಪಿಕೊಳ್ಳುವಾಗ, ಮತಾಭಿಪ್ರಾಯವು ಆ ಪ್ರಸ್ತಾಪದ ಬಗ್ಗೆ ಹೇಳುವುದನ್ನು ಹೆಚ್ಚು ಕಡಿಮೆ ಇಲ್ಲದಂತೆ ನಂಬಲು ಅವರು ಬದ್ಧರಾಗಿರುತ್ತಾರೆ ಎಂಬುದನ್ನು ಎಲ್ಲರೂ ಖಂಡಿತವಾಗಿ ತಿಳಿದಿರುತ್ತಾರೆ. ಈ ರೀತಿ ಸ್ವಯಿಚ್ಛೆಯಿಂದ ಇಂಥಾಃ ಕಟ್ಟುಪಾಡುಗಳಿಗೆ ಶರಣಾಗಿದ್ದರೂ ಅವರು ತಮ್ಮಷ್ಟಕ್ಕೆ ಆಲೋಚನೆ ಮಾಡಿಕೊಂಡು ಅವರು ಸೇರಿಕೊಂಡಿರುವ ಪಂಗಡದವರು ಬೆಳಕನ್ನು ಅನುಭವಿಸುವ ಮೊದಲೇ ಇತರ ಮೂಲಗಳಿಂದ ಆ ಬೆಳಕನ್ನು ಹೊಂದಿಕೊಳ್ಳಬೇಕು. ಅವರು ಆ ಪಂಗಡಕ್ಕೆ ಮತ್ತು ಅದರೊಂದಿಗಿನ ಒಡಂಬಡಿಕೆಗೆ, ಅವರ ಅರಿಕೆಗೆ

ವ್ಯತಿರಿಕ್ತವಾದ ಯಾವುದನ್ನೂ ನಂಬಲು ಸತ್ಯರಲ್ಲ ರೆಂಬುದನ್ನು ಸಾಬೀತು ಪಡಿಸಬೇಕು. ಇಲ್ಲವಾದಲ್ಲಿ, ಅವರು ಪ್ರಾಮಾಣಿಕತೆಯಿಂದ ಪಕ್ಕಕ್ಕೆ ಸರಿಯಬೇಕು ಮತ್ತು ಅವರು ಮೀರಿ ಬೆಳೆದ ಅರಿಕೆಯನ್ನು ತ್ಯಜಿಸಿ ಬಿಡಬೇಕು ಮತ್ತು ಅಂಥಾಃ ಗುಂಪಿನಿಂದ ಹೊರಬರಬೇಕು. ಹೀಗೆ ಮಾಡಲು ಕೃಪೆ ಬೇಕಾಗುತ್ತದೆ ಮತ್ತು ಸ್ವಲ್ಪ ಪರಿಶ್ರಮ ಖರ್ಚಾಗುತ್ತದೆ. ಎಂದಿನಂತೆ ಆಹ್ಲಾದಕರ ಸಹವಾಸಗಳಿಂದ ಸಿಡಿಯುವಿಕೆ ಉಂಟಾಗುತ್ತದೆ ಮತ್ತು ಪ್ರಾಮಾಣಿಕ ಸತ್ಯಾನ್ವೇಷಿಯು "ವಿಶ್ವಾಸಘಾತಕ", "ಪಕ್ಷಾಂತರಿ", "ಸ್ಥಿರತೆ ಇಲ್ಲದವ" ಮುಂತಾದ ತಿಳಿಗೇಡಿ ಅರೋಪಗಳಿಗೆ ತುತ್ತಾಗ ಬೇಕಾಗುತ್ತದೆ. ಒಬ್ಬಾತನು ಒಂದು ಪಂಗಡಕ್ಕೆ ಸೇರಿದಾಗ, ಆತನ ಮನಸ್ಸನ್ನು ಆತನು ಆ ಗುಂಪಿಗೆ ಪೂರ್ಣವಾಗಿ ಕೊಟ್ಟುಬಿಟ್ಟಿದ್ದಾನೆ. ಅದು ಇನ್ನು ಆತನದಲ್ಲ ಎಂದು ಭಾವಿಸಲಾಗುವುದು. ಪಂಗಡವು ಆತನ ಬಗ್ಗೆ ಯಾವದು ಸತ್ಯ, ಯಾವದು ತಪ್ಪು ಎಂದು ನಿರ್ಧರಿಸುವುದನ್ನು ಕೈಗೆತ್ತಿಕೊಳ್ಳುವುದು. ಮತ್ತು ಆತನು ಒಬ್ಬ ನಿಜವಾದ ಕಟ್ಟಾ ಪ್ರಾಮಾಣಿಕ ಸದಸ್ಯನಾಗಲು ಆತನ ಗುಂಪಿನ ಹಿಂದಿನ ಹಾಗು ಮುಂದಿನ ಧಾರ್ಮಿಕ ಸಂಬಂಧಿತ ನಿರ್ದಾರಗಳನ್ನು ಒಪ್ಪಬೇಕು. ತನ್ನ ವೈಯಕ್ತಿಕ ಆಲೋಚನೆಗಳನ್ನು ಕಡೆಗಣಿಸಬೇಕಾಗುತ್ತದೆ ಮತ್ತು ಖಾಸಗಿ ಪರಿಶೋಧನೆಗಳಿಂದ ದೂರವಿರಬೇಕು. ಹಾಗಾಗದಿದ್ದಲ್ಲಿ, ಆತನು ಜ್ಞಾನದಲ್ಲಿ ವೃದ್ಧಿಗೊಳ್ಳುವನು ಮತ್ತು ಅಂತಹ ಗುಂಪಿನ ಸದಸ್ಯತ್ವವನ್ನು ಕಳಕೊಳ್ಳುವನು. ಒಂದು ಪಂಗಡಕ್ಕೆ ಆತ್ಮಸಾಕ್ಷ್ಯದ ಈ ದಾಸತ್ವವು ಹಲವೊಮ್ಮೆ ಅಂಥವರು ತಾವು ಅಂತಹ ಪಂಗಡಕ್ಕೆ ಸೇರಿದವರು ಎಂದು ಪ್ರಕಟಮಾಡುವಾಗ ಅನೇಕ ಮಾತುಗಳಲ್ಲಿ ಹೇಳಲಾಗುವುದು.

ಪಂಥಗಳ ಅವಲಂಬನೆಯ ಈ ಸಂಕೋಲೆಯನ್ನು ಸಂಕೋಲೆ ಮತ್ತು ಬಂಧನ ಎಂದು ಸರಿಯಾಗಿ ಪರಿಗಣಿಸಲಾಗದೆ, ಈಗ ಅವುಗಳನ್ನು ಗೌರವದೊಡನೆ ಒಡವೆಗಳನ್ನಾಗಿಯೂ, ಗೌರವದ ಬಿಲ್ಲೆಗಳನ್ನಾಗಿಯೂ ಮತ್ತು ಗುಣಲಕ್ಷಣದ ಗುರುತನ್ನಾಗಿಯೂ ಧರಿಸಲಾಗುವುದು. ಈ ಭ್ರಮೆಯು ಎಷ್ಟು ದೂರದವರೆಗೂ ಹೋಗಿದೆಯೆಂದರೆ, ದೇವರ ಮಕ್ಕಳಲ್ಲಿ ಅನೇಕರು ಅಂಥಾಃ ಹಗುರ ಅಥವಾ ಭಾರವಾದ, ಉದ್ದ ಅಥವಾ ಗಿಡ್ಡವಾದ ಅಥವಾ ವೈಯಕ್ತಿಕ ಸ್ವಾತಂತ್ರ್ಯದ ಸಂಕೋಲೆಗಳಿಲ್ಲದೆ / ಬಿಲ್ಲೆಗಳಿಲ್ಲದೆ ಗುರುತಿಸಲ್ಪಡುವದು ಅವಮಾನಕರವೆಂದು ನೆನಸುತ್ತಾರೆ. ತಾವು ಯಾವುದೇ ಪಂಗಡದ ಅಥವಾ ಮತಾಭಿಪ್ರಾಯದ ದಾಸತ್ವದಲ್ಲಿಲ್ಲ, ಆದರೆ, ಕ್ರಿಸ್ತನಿಗೆ ಮಾತ್ರವೇ ಸೇರಿದವರೆಂದು ಹೇಳಿಕೊಳ್ಳಲು ನಾಚಿಕೆಪಟ್ಟುಕೊಳ್ಳುತ್ತಾರೆ.

ಹಾಗಾಗಿ ನಾವು ಕೆಲವೊಮ್ಮೆ ಪ್ರಾಮಾಣಿಕ, ಸತ್ಯದ ಹಸಿವೆಯುಳ್ಳ ದೇವರ ಮಗುವು ಒಂದು ಪಂಗಡದಿಂದ ಮತ್ತೊಂದಕ್ಕೆ ಶಾಲೆಯಲ್ಲಿ ಮಕ್ಕಳು ಉತ್ತೀರ್ಣರಾಗಿ ತರಗತಿಯಿಂದ ತರಗತಿಗೆ ಹೋಗುವಂತೆ ಕ್ರಮೇಣವಾಗಿ ಪ್ರಗತಿಹೊಂದಿಕೊಳ್ಳುವುದನ್ನೂ ನೋಡುತ್ತೇವೆ. ಆತನೇನಾದರೂ, ಆತನು ರೋಮಿನ ಸಭೆಯಲ್ಲಿ ಇರುತ್ತಿದ್ದರೆ, ಆತನ ಕಣ್ಣುಗಳು ತೆರೆಯಲ್ಪಟ್ಟಾಗ, ಆತನು ಅದರಿಂದ ಹೊರಬಂದು ಬಹುಶಃ ಮೆಥೊಡಿಸ್ಟ್ ಅಥವಾ ಪ್ರೆಸ್ಬಿಟೇರಿಯನ್ ಪದ್ಧತಿಯ ಒಂದು ಶಾಖೆಗೆ ಬೀಳುವವನಾಗಿದ್ದಾನೆ. ಇಲ್ಲಿ ಆತನ ಸತ್ಯದ ದಾಹವು ಸಂಪೂರ್ಣವಾಗಿ ತಣಿಯದಿದ್ದರೆ, ಮತ್ತು ಆತನ ಆತ್ಮೀಕ ಜ್ಞಾನವು ಈ ಲೋಕದ ಆತ್ಮನೊಂದಿಗೆ ಮಂಕು ಮಾಡಲ್ಪಡುತ್ತದೆ. ನೀವು ಕೆಲವು ವರ್ಷಗಳ ನಂತರ ಬ್ಯಾಪ್ಟಿಸ್ಟ್ ಪದ್ಧತಿಯ ಯಾವುದಾದರೂ ಶಾಖೆಯಲ್ಲಿ ಆತನನ್ನು ಕಾಣುತ್ತೀರಿ. ಆತನು ಇನ್ನು ಕೃಪೆ, ಜ್ಞಾನದಲ್ಲಿ ಮತ್ತು ಸತ್ಯದ ಪ್ರೀತಿಯಲ್ಲಿ ಹಾಗೂ ಕ್ರಿಸ್ತನು ಮುಕ್ತರನ್ನಾಗಿ ಮಾಡಲಿರುವ ಬಿಡುಗಡೆಯ ಮೆಚ್ಚುಗೆಯಲ್ಲಿ ಮುಂದುವರಿಯುತ್ತಿರುವುದಾದಲ್ಲಿ, ನೀವು ಆತನನ್ನು ಆಗಿಂದಾಗ್ಯೆ ಎಲ್ಲಾ ಮಾನವ ಸಂಸ್ಥೆಗಳಿಂದ ಹೊರಗಿರುವುದನ್ನು, ಆದಿಸಭೆಯವರಂತೆ ಕೇವಲ ಕರ್ತನಿಗೆ ಮತ್ತು ಆತನ ಭಕ್ತರೊಂದಿಗೆ ಸೇರಿರುವುದನ್ನು ಮತ್ತು ಕೋಮಲ ಆದರೆ ಪ್ರೀತಿ ಮತ್ತು ಸತ್ಯದ ಬಲವಾದ ಕಟ್ಟಿನಲ್ಲಿರುವುದನ್ನು ಆದಿಸಭೆಯಲ್ಲಿದ್ದಂತೆ ಕಾಣುವಿರಿ. (1 ಕೊರಿ. 6:15,17; ಎಫೆಸ 4:15,16).

ಯಾವುದಾದರೂ ಪಂಗಡದ ಸಂಕೋಲೆಯಿಂದ ಬಂಧಿತವಾಗದೇ ಹೋದಲ್ಲಿ ಚಡಪಡಿಸುವಿಕೆ ಮತ್ತು ಅಸುರಕ್ಷತೆಗಳು ಸರ್ವೇ ಸಾಮಾನ್ಯ. ಅದು ಭೂಲೋಕದ ಸಂಸ್ಥೆಯೊಂದರ ಸದಸ್ಯತ್ವವು ಅಗತ್ಯ, ಇದು ಕರ್ತನನ್ನು ಸಂತೋಷಪಡಿಸುತ್ತದೆ ಮತ್ತು ನಿತ್ಯಜೀವಕ್ಕೆ ಇದು ಅಗತ್ಯವಾಗಿದೆ ಎಂದು ಪ್ರಚಾರಗೊಂಡ ಮೊದಲಿಗೆ ಪೋಪನ ಅಧಿಕಾರದ ತಪ್ಪಾದ ಕಲ್ಪನೆಗಳಿಂದ ಹುಟ್ಟಿದ್ದು. ಈ ಭೂಲೋಕದ ಮತ್ತು ಮಾನವರಿಂದ ಸಂಘಟಿತವಾದ ಪದ್ಧತಿಗಳು ಸಾಧಾರಣ ವಾದವುಗಳಿಗಿಂತ, ಅಪೋಸ್ತಲರ ಕಾಲದ ಅನಿರ್ಬಂಧಿತ ಸಂಘಗಳಿಗಿಂತ ಪ್ರತ್ಯೇಕವಾಗಿದ್ದು, ಕ್ರೈಸ್ತ ಜನರು ಅವುಗಳನ್ನು ಪರಲೋಕದ ಹಲವಾರು ವಿಮಾ ಕಂಪನಿಗಳೋ ಎಂಬಂತೆ, ಅವುಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿದರೆ, ಮರಣಾನಂತರ ಪರಲೋಕದ ವಿಶ್ರಾಂತಿ ಮತ್ತು ಶಾಂತಿಯನ್ನು ಪಡಕೊಳ್ಳುವಂತೆ ಹಣ,

ಸಮಯ ಮತ್ತು ಗೌರವ ಮುಂತಾದವುಗಳನ್ನು ನಿಯಮಿತವಾಗಿ ನೀಡಬೇಕಾಗುತ್ತದೆ ಎಂದು ಇಚ್ಛಾರಹಿತವಾಗಿ ಮತ್ತು ಅವಿವೇಚನೆಯೊಡನೆ ಅವಲೋಕಿಸುವುದಾಗಿದೆ. ಈ ತಪ್ಪಾದ ಕಲ್ಪನೆಯನ್ನು ಕಾರ್ಯಗತಗೊಳಿಸಿ ಜನರು ಬಹುಮಟ್ಟಿಗೆ ಅವರು ಒಂದು ಪಂಗಡದಿಂದ ಹೊರಬಂದರೆ, ಅವರ ಪಾಲಿಸಿ ಪ್ರೀಮಿಯಂ ಮುಗಿದು ಹೋಗುವುದೇನೋ ಎಂದು ಭಯಕಂಪಿತರಾಗಿ, ಅದನ್ನು ನವೀಕರಿಸಿಕೊಳ್ಳುವಂತೆ ಮತ್ತೊಂದು ಗೌರವಾನ್ವಿತ ಪಂಗಡಗಳೊಂದಿಗೆ ಬಂಧಿತವಾಗಲು ಕಾತುರರಾಗಿರುತ್ತಾರೆ.

ಆದರೆ, ಯಾವುದೇ ಭೂಲೋಕದ ಸಂಸ್ಥೆಗಳು ಪರಲೋಕದ ಮಹಿಮೆಗೆ ರಹದಾರಿ ಪತ್ರ (ಪಾಸ್ಪೋರ್ಟ್) ನೀಡುವುದಿಲ್ಲ. ಅತ್ಯಂತ ಧರ್ಮಾಂಧನಾದ ಪಂಥಾಭಿಮಾನಿಯೂ ಸಹ (ರೋಮನಿಸಂನಿಂದ ಒತ್ತಟ್ಟಿಗೆ) ಆತನ ಪಂಗಡದಲ್ಲಿ ಅಂಥಾಃ ಸದಸ್ಯತ್ವವು ಪರಲೋಕದ ಮಹಿಮೆಯನ್ನು ನೀಡುವುದೆಂದು ಹಕ್ಕಿನಿಂದ ಸಾಧಿಸುವದಿಲ್ಲ. ಸತ್ಯ ಸಭೆಯ ದಾಖಲೆಯು ಮಾತ್ರವೇ ಪರಲೋಕದಲ್ಲಿ ಇಡಲ್ಪಟ್ಟಿವೆ, ಭೂಲೋಕದಲ್ಲಿ ಅಲ್ಲ ಎಂಬುದನ್ನು ಎಲ್ಲಾ ಸಭೆಗಳೂ ನಂಬುವಂತೆ ಒಪ್ಪಿಕೊಳ್ಳಬೇಕಾಗಿದೆ. ಅವರು ಸತ್ಯಸಭೆಯಾದ ಕ್ರಿಸ್ತನ ದೇಹದ ಅಂಗವಾಗಬೇಕಾದರೆ, ಯಾವುದಾದರೂ ಒಂದು ಪಂಗಡದ ಅಂಗವಾಗಿರಬೇಕು ಮತ್ತು ಕ್ರಿಸ್ತನ ಬಳಿಗೆ ತಮ್ಮ ಮೂಲಕವೇ ಬರಬೇಕೆಂದು ಹೇಳುವುದರ ಮೂಲಕ ಜನರನ್ನು ಮೋಸಗೊಳಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ಕರ್ತನು ಯಾವುದೇ ಪಂಥಗಳಿಂದ ತನ್ನ ಬಳಿಗೆ ಬರುವ ಯಾರೊಬ್ಬರನ್ನೂ ತಿರಸ್ಕರಿಸಿರುವುದಿಲ್ಲ ಮತ್ತು ಸತ್ಯಾನ್ವೇಷಕರನ್ನು ಖಾಲಿಯಾಗಿ ಹೊರಕ್ಕೆ ಕಳುಹಿಸಿಬಿಡುವವನಲ್ಲ. ನಮಗೆ ಅಂಥಾಃ ಅಡಚಣೆಗಳ ಅವಶ್ಯಕತೆ ಇಲ್ಲ, ಆತನ ಬಳಿಗೆ ನೇರವಾಗಿ ಬರುವುದು ಹೆಚ್ಚು ಒಳ್ಳೇದು ಎಂದು ಹೇಳುತ್ತಾನೆ. ಆತನು "ನನ್ನ ಬಳಿಗೆ ಬನ್ನಿರಿ, ಆ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಿಂದ ಕಲಿತುಕೊಳ್ಳಿರಿ. ಆಗ, ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವುದು. ಯಾಕೆಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು" (ಮತ್ತಾಯ11: 29–30) ಎಂದು ಕೂಗಿ ಹೇಳುತ್ತಾನೆ. ನಾವು ಬೇಗನೇ ಆತನ ಧ್ವನಿಗೆ ಓಗೊಡುವವರಾಗಿದ್ದರೆ, ನಾವು ಪಂಗಡವಾದಿಗಳ ಅನೇಕ ಭಾರವಾದ ಹೊರೆಯನ್ನು, ಅವರ ಹತಾಶೆಯ ಅನೇಕ ಕೆಸರುಗಳನ್ನು, ಅವರ ಅನೇಕ ಅನುಮಾನದ ಕೋಟೆಗಳನ್ನು, ಅದರ ಒಣಜಂಬದ ಸಂತೆಯನ್ನು, ಅವರ ಲೌಕಿಕ ಮನಸ್ಸಿನ ಸಿಂಹಗಳು ಮುಂತಾದವುಗಳನ್ನು ಕಡೆಗಣಿಸಬಹುದಿತ್ತು.

ಆದರೆ, ವಿವಿಧ ಪಂಗಡಗಳಲ್ಲಿ ಹುಟ್ಟಿದ ಅನೇಕರು ಅಥವಾ ಶೈಶವಾವಸ್ಥೆಯಲ್ಲಿ ಅಥವಾ ಬಾಲ್ಯಾವಸ್ಥೆಯಲ್ಲಿ ಆ ಪದ್ಧತಿಯ ಬಗ್ಗೆ ಯಾವ ಪ್ರಶ್ನೆಯನ್ನೂ ಮಾಡದೇ ಅದರೊಂದಿಗೆ ಕಸಿಮಾಡಲ್ಪಟ್ಟವರು, ಹೃದಯದಲ್ಲಿ ಮುಕ್ತವಾಗಿ ಬೆಳೆದು ಅರಿವಿಲ್ಲದೆ ಮತಾಭಿಪ್ರಾಯದ ಮೇರೆಗಳನ್ನೂ, ಬಂಧನಗಳನ್ನೂ ಮೀರಿ ಅವರು ತಮ್ಮ ಉದ್ಯೋಗದ ಮೂಲಕ ಒಪ್ಪಿಕೊಂಡು ಮತ್ತು ತಮ್ಮ ದುಡಿಮೆಯ ಪ್ರಭಾವಗಳ ಮೂಲಕ ಬೆಂಬಲಿಸುತ್ತಾರೆ. ಇವರಲ್ಲಿ ಕೆಲವರು ಸಂಪೂರ್ಣ ಸ್ವಾತಂತ್ರ್ಯದ ಸೌಕರ್ಯಗಳನ್ನು ಪಂಗಡವಾದಿಗಳ ಬಂಧನದಲ್ಲಿರುವ ನ್ಯೂನತೆಗಳನ್ನು ಹಾಗೂ ಗ್ರಹಿಸಿದ್ದಾರೆ. ಇದುವರೆಗೆ ಸುಗ್ಗಿಯ ಕಾಲದಲ್ಲಿ ಪೂರ್ತಿಯಾದ, ಪೂರ್ಣವಾದ ಪ್ರತ್ಯೇಕತೆಯು ಪ್ರಚೋದಿಸಲ್ಪಟ್ಟಿಲ್ಲ. "ಪಾತ್ರೆಗಳನ್ನು ಅಂದರೆ, ಕರ್ತನ ಆರಾಧನೆಯ ಉಪಕರಣಗಳನ್ನು (ಕರ್ತನ ಸತ್ಯ ಮತ್ತು ಸಿದ್ಧಾಂತಗಳು) ಹೊತ್ತ ನೀವು ಅವರುಗಳಿಂದ ಹೊರಬನ್ನಿರಿ; ನೀವು ಶುದ್ಧಿ ಹೊಂದಿರಿ" ಎಂಬ ಕರ್ತನ ಸ್ವರವು ಈಗ ಕೇಳಿಸುತ್ತಿದೆ. (ತಪ್ಪು ಅಭ್ಯಾಸಗಳಿಂದ ಮತ್ತು ತಪ್ಪು ಸಿದ್ಧಾಂತಗಳಿಂದ ಮುಕ್ತಿಹೊಂದಿರಿ) – ಯೆಶಾಯ 52:11*

ಈಗ ಹೆಸರುಮಾತ್ರದ (ನಾಮಾಂಕಿತ) ಕ್ರೈಸ್ತ ಪದ್ಧತಿಯ, ಬಾಬೇಲಿನ, ಕ್ರೈಸ್ತ ಪ್ರಪಂಚದ ಬೇರಿಗೆ ಅಂದರೆ ಪ್ರಥಮ ಆಗಮನ ಕಾಲದಲ್ಲಿ ಹೆಸರು ಮಾತ್ರದ ಯೆಹೂದ್ಯರಿಗೆ ಹಾಕಿದಂತೆಯೇ ಕೊಡಲಿ ಹಾಕಿಯದೆ. ಮತ್ತು ಮಹಾಪದ್ಧತಿಯಲ್ಲಿ ''ಆಕಾಶದಲ್ಲಿ ವಿಶ್ರಮಿಸಿಕೊಳ್ಳಲು ಸಂತೋಷಿಸುವ ಹಾರುವಪಕ್ಷಿಗಳು ಘೋರವಾಗಿ ಕಲುಷಿತರಾಗಿದ್ದಾರೆ (ಲೂಕ 13: 18,19) ಮತ್ತು ನಿಜವಾಗಿಯೂ ಇದು ಎಲ್ಲಾ ಅಶುದ್ಧ ಮತ್ತು ಅಸಹ್ಯ ಪಕ್ಷಿಗಳ ಪಂಜರವಾಗಿದೆ" (ಪ್ರಕಟನೆ 18:2). ಅದು ಇನ್ನು ಮುಂದೆ ಲೋಕವನ್ನು ಮೋಸ ಗೊಳಿಸಿದಂತೆ ಅದನ್ನು ಕತ್ತರಿಸಿ ಕೆಳಗೆ ಹಾಕಲ್ಪಡುವದು. ಅದರ ಬದಲಾಗಿ ಒಲಿವ ಮರದ ಬೇರುಗಳ ದೇವರ ವಾಗ್ದಾನವಾಗಿರುವ ಕೊಂಬೆಗಳು ನಿಜವಾಗಿಯೂ ಮತ್ತು

---

* ಕೆಲವರು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ, ಇತರರು ತಪ್ಪಾಗಿ ನಿರೂಪಿಸುತ್ತಾರೆ, ಕರ್ತನಿಗಾಗಿ ಮತ್ತು ಸತ್ಯಕ್ಕಾಗಿ ಈ ನಿಲುವನ್ನು ತೆಗೆದುಕೊಳ್ಳುವವರಿಗೆ ನಾವು ಹಿಂತೆದುಕೊಳ್ಳುವ ಪತ್ರಗಳನ್ನು ನೀಡಿದ್ದೇವೆ. ಆದರೆ ದಿನಾಂಕ ಮತ್ತು ಸಹಿ ಹಾಕುವುದು, ಮತ್ತು ಒಂದು ಸೆಂಟ್ ಸ್ಟಾಂಪ್ ಅಂಟಿಸುವುದು ಮಾತ್ರವೇ ಬಾಕಿ. ನಾವು ಕಾಗದ ಪತ್ರಗಳನ್ನು, ಲಕೋಟೆಗಳನ್ನು, ಮತ್ತು ಚಿಕ್ಕಚಿಕ್ಕ ಪುಸ್ತಕಳನ್ನು, ಕರಪತ್ರಗಳನ್ನು ಉಚಿತವಾಗಿ ಸಭೆಯ ಒಬ್ಬ ಸದಸ್ಯನಿಗೆ ಒಂದರಂತೆ ಒದಗಿಸುತ್ತೇವೆ. ನಮೂನೆಗಾಗಿ ಅಥವಾ ಎಷ್ಟನ್ನು ಉಪಯೋಗಿಸಬಹುದೆಂಬುದನ್ನು ನಮಗೆ ಬರೆಯಿರಿ.

ಸಂಪೂರ್ಣವಾಗಿ ಪ್ರತಿಷ್ಟೆ ಹೊಂದಿರುವ ಈ ಸುವಾರ್ತಾಯುಗದಲ್ಲಿ ನಂಬಿಗಸ್ತರಾಗಿರುವವರ ಹೆಸರುಗಳು ಪರಲೋಕದಲ್ಲಿ ಬರೆದಿರುವ ಇವರು, ಸತ್ಯಪರರು ಮತ್ತು ಕುರಿಮರಿಯ ಬಾಧ್ಯಸ್ತವೂ, ಮದಲಗಿತ್ತಿಯೂ ಎಂದು ಕಾಣಲಾಗುವುದು – ಪ್ರಕಟನೆ 17:14.

## ಪರೀಕ್ಷಿಸಲ್ಪಡುವ ಪರಿಶೋಧಿಸಲ್ಪಡುವ ಪವಿತ್ರಾಲಯದ ವರ್ಗದವರು

## The Testing and Sifting of the Sanctuary Class

ಬಾಬೇಲಿನಿಂದ ಹೊರಬರುವುದು ಒಂದೇ ಹೆಜ್ಜೆಯಾದರೂ, ಅದು ಸಂಪೂರ್ಣ ಗೆಲುವಿನ ಹಾದಿಯಲ್ಲಿ ಉದ್ದವಾದುದಾದರೂ, ಅದು ಯಾವುದೇ ಕಾರಣಕ್ಕೂ ಕಡೆಯದಲ್ಲ. ನಾವು ಹಾದಿಯಲ್ಲಿ ಮುಂದಿಡುವ ಪ್ರತಿಯೊಂದು ಹೆಜ್ಜೆಯ ನಂತರವೂ ವಿಶ್ರಾಂತಿಯ ಪ್ರವೃತ್ತಿಯ ಬಗ್ಗೆ ಜಾಗರೂಕತೆ ವಹಿಸತಕ್ಕದ್ದು :–

"Never think the Victory won,
Nor once at ease sit down
Thine arduous work will not be done
Till thou hast gained thy crown.

“A cloud of witnesses around
Hold thee in full survey
Forget the step already trod,
And onward urge thy way"

“ಜಯಗಳಿಸಿದೆವೆಂದು ಎಂದೂ ಯೋಚಿಸದಿರಿ,
ಒಂದು ಘಳಿಗೆಯೂ ವಿಶ್ರಮಿಸದಿರಿ:
ಕಿರೀಟವನ್ನು ಗಳಿಸದ ಹೊರತು ನಿಮ್ಮ ಪ್ರಯಾಸಕರ
ಕಾರ್ಯವು ಇನ್ನೂ ಮುಗಿದಿರುವುದಿಲ್ಲ”

“ಸಾಕ್ಷಿಗಳ ಒಂದು ಮೋಡವು ಸುತ್ತುವರೆದು ನಿಮ್ಮನ್ನು
ಪೂರ್ತಿಯಾಗಿ ಪರಿಶೀಲಿಸಲು ಹಿಡಿದಿರುವುದು.
ಈಗಾಗಲೇ ನಡೆದ ಹೆಜ್ಜೆಗಳನ್ನು ಮರೆತುಬಿಡಿ,
ಮುಂದಕ್ಕೆ ನಡೆಯಲು ನೀವು ಸ್ಫೂರ್ತಿ ಪಡೆಯಿರಿ”

ಬಾಬೇಲಿನಿಂದ ಹೊರ ಬೀಳುವ ಹೆಜ್ಜೆಯು ಸಾಮಾನ್ಯವಾಗಿ ವಿಧೇಯತೆಯ ಇತರೆ ಹಂತಗಳಿಗಿಂತ ಮುಂಚಿತವಾಗಿರುವ ಹೆಜ್ಜೆಯಾಗಿರುತ್ತದೆ, ಮತ್ತು ಇದು ಮುಂದೆ ಬರಬಹುದಾದ ಘರ್ಷಣೆಗಳ ಮತ್ತು ವಿಜಯಗಳ ಅನುಷ್ಠಾನದಲ್ಲಿ ತನ್ನ ಗುಣಲಕ್ಷಣಗಳನ್ನು ಅಭ್ಯಾಸಿಸಿ ಬಲಗೊಳಿಸಿರುತ್ತದೆ ಮತ್ತು ವಿವಿಧ ಇತರೆ ಪರೀಕ್ಷೆಗಳು ಮತ್ತು ಅವನ್ನು ಗೆಲ್ಲುವ ಅವಕಾಶಗಳು ಇದನ್ನು ಅನುಸರಿಸುತ್ತವೆ. ಈ ದೃಷ್ಟಿಯಿಂದ ಪೌಲನು “ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲಿ ಲ್ಲತಿರುಗಿ ಸಿಕ್ಕಿಹಾಕಿಕೊಳ್ಳಬೇಡಿರಿ” (ಗಲಾತ್ಯ 5:1) ಎಂದು ಬರೆಯುತ್ತಾನೆ. ದೇವರ ಮಕ್ಕಳ ಸ್ವಾತಂತ್ರ್ಯ ಮತ್ತು ಬಾಬೇಲಿನ ಬಂಧನದಿಂದ ಪೂರ್ಣ ಸ್ವಾತಂತ್ರ್ಯವನ್ನು ಗ್ರಹಿಸಿರುವ ಪ್ರತಿಯೊಬ್ಬನೂ ಮಹಾವಿರೋಧಿಯು ಆತನನ್ನು ಬೇರೊಂದು ಬಂಧನದಲ್ಲಿ ಬೀಳಿಸುವ ಅಥವಾ ಮುಗ್ಗರಿಸುವಂತೆ ಮಾಡುವ ಇತರೆ ಪ್ರಯತ್ನಗಳನ್ನು ಎದುರಿಸುವುದನ್ನು ನಿರೀಕ್ಷಿಸಬೇಕು. ಈಗ ಈ ಕಠಿಣ ಪರೀಕ್ಷೆಗಳು ಬಯಸುವ ವರ್ಗದವರಿಗೆ ಪ್ರಕಟವಾಗುವುದನ್ನು ದೇವರು ಅನುಮತಿಸುತ್ತಾನೆ ಮತ್ತು ಅವರನ್ನು ತನ್ನ ಮಹಿಮಾರಾಜ್ಯದ ಸೇವೆಗಾಗಿ ಸಿದ್ಧಪಡಿಸುತ್ತಾನೆ.

ಈ ಪರೀಕ್ಷೆ ಮತ್ತು ಪರಿಶೋಧನೆಯ ನಿದರ್ಶನವು ನಾವು ಇಲ್ಲಿ ನಿರೀಕ್ಷಿಸುವದಕ್ಕೆ ಪೂರ್ವಛಾಯೆಯಾಗಿ ಯೆಹೂದ್ಯ ಸುಗ್ಗಿಯಲ್ಲಿ ನೆರವೇರಿತು. ಮೊದಲ ಆಗಮನದಲ್ಲಿ ದೇವಾಲಯ ಅಥವಾ ಪವಿತ್ರಾಲಯ ವರ್ಗವನ್ನು ಕರ್ತನ ಶಿಷ್ಯರು ಪ್ರತಿನಿಧಿಸಿದರು ಅವರಿಗೆ ಆತನು “ನೀವು ಶುದ್ಧರಾಗಿದ್ದೀರಿ, ಆದರೆ ನಿಮ್ಮಲ್ಲಿ ಎಲ್ಲರೂ ಅಲ್ಲ” (ಯೋಹಾನ 13:10) ಎಂದಿದ್ದಾನೆ; ಹೆಸರು ಮಾತ್ರದ ಇಸ್ರಾಯೇಲನ್ನು ಹೊರಹಾಕುವುದನ್ನು ಅನುಸರಿಸಿ (ಕ್ರಿ.ಶ. 33) ದೇವರ ದೇವಾಲಯವನ್ನು ಪ್ರತಿನಿಧಿಸುವವರಿಗೆ, ಶುದ್ಧರು ಮತ್ತು ಅಶುದ್ಧರನ್ನು ಪ್ರತ್ಯೇಕಿಸುವಂತೆ ಕಠಿಣ ಪರೀಕ್ಷೆಯು ಬಂತು. ಪೇತ್ರನನ್ನು ಪರಿಶೀಲಿಸಲಾಯಿತು ಮತ್ತು ಆತನು ಬಹಳಮಟ್ಟಿಗೆ ಸೋತು ಹೋದನು (ಲೂಕ 22:31; ಮತ್ತಾಯ 26:74.75; ಯೋಹಾನ 21: 15–17). ಆದರೆ ‘ಶುದ್ಧನಾಗಿದ್ದ’, ಪ್ರಯುಕ್ತ ಹೃದಯದಲ್ಲಿ ಸತ್ಯವುಳ್ಳವನಾಗಿ ಇದ್ದದ್ದರಿಂದ ಆತನು ವಿಜಯಶಾಲಿಯಾಗಿ ಹೊರಬರಲು ಸಾಧ್ಯವಾಯಿತು. ಯೂದನನ್ನು ಪರೀಕ್ಷಿಸಲಾಯಿತು, ಆತನು ‘ಅಶುದ್ಧ’ನೆಂಬುದಾಗಿ ಸಾಬೀತಾದನು. ಸತ್ಯವನ್ನು ಲೋಕದ ಅನುಕೂಲಕ್ಕಾಗಿ ಮಾರುವವನಾದನು. ಹಣಕ್ಕಾಗಿ ಕರ್ತನನ್ನು ಒಪ್ಪಿಸಿ

ಕೊಡುವಾಗಲೂ ಆತನಿಗೆ ಪ್ರೀತಿ ತೋರಿಸುವ ಮುದ್ದಿಟ್ಟು ದ್ರೋಹಮಾಡಿದನು.

ಹೀಗಾಗಿ, ಇಲ್ಲಿ, ಈ ಸುಗ್ಗಿಯಲ್ಲಿ ಒಂದು ಶುದ್ಧೀಕರಿಸಲ್ಪಟ್ಟ ಪವಿತ್ರಾಲಯವಿದೆ, ಮತ್ತು, ಅದರೊಂದಿಗೆ ನಿಕಟವಾಗಿ ಸಂಬಂಧವಿರಿಸಿ ಕೊಂಡವರಲ್ಲಿ, ಕೆಲವರು ಇನ್ನೂ ಶುದ್ಧರಾಗಿರುವುದಿಲ್ಲ. 1878ರಲ್ಲಿ ಬಾಬೇಲನ್ನು ಹೊರಹಾಕಿದಂದಿನಿಂದ, ಆಕೆಯಿಂದ ಹೊರಬರುವಂತೆ ಅಲ್ಲಿ ಕರೆ ಮಾಡಿದಂದಿನಿಂದ, ಪರೀಕ್ಷಿಸುವ ಮತ್ತು ಪರಿಶೋಧಿಸುವ ಕಾರ್ಯವು ಹೊರ ಬಂದವರ ಮಧ್ಯದಲ್ಲಿ ನಡೆಯುತ್ತಿದೆ. ನಿಸ್ಸಂದೇಹವಾಗಿ ಪೇತ್ರ ಮತ್ತು ಯೂದರಂತೆ, ಇಲ್ಲಿ ಬಾಬೇಲಿನಿಂದ ಹೊರಬಂದವರಲ್ಲಿ ಅವರ ಅನೇಕ ಸಿದ್ಧಾಂತಗಳ ಮಾಲಿನ್ಯದಿಂದ ಶುದ್ಧೀಕರಿಸಲ್ಪಟ್ಟವರಲ್ಲಿ – ಅದೇ ರೀತಿಯ ವರ್ಗದವರಾಗಿದ್ದಾರೆ. ದೇವರಿಗೆ ಮತ್ತು ಸತ್ಯಕ್ಕೆ ನಿಷ್ಠಾವಂತರಾಗಿರುವ ಒಂದು ವರ್ಗ, ಕರ್ತನನ್ನು ಅರ್ಥಮಾಡಿಕೊಳ್ಳುವಂತೆ ಮತ್ತು ನಿಷ್ಠಾವಂತರಲ್ಲದ, ಇನ್ನೊಂದು ವರ್ಗ ಆತನನ್ನು ಅನುಸರಿಸದೇ ಇರುವವವರು ಆದರೆ ಕೆಟ್ಟ ಮತ್ತು ತಪ್ಪು ಸಿದ್ಧಾಂತಗಳಿಂದ ಪಕ್ಕಕ್ಕೆ ತಿರುಗಿದವರು. ಇವರು ಹಲವೊಮ್ಮೆ ತಮ್ಮ ಹಳೆಯ ತಪ್ಪುಗಳಿಂದ ತಪ್ಪಿಸಿಕೊಂಡು ಬಂದುದಕ್ಕಿಂತಲೂ ಇನ್ನೂ ಕೀಳಾಗಿರುತ್ತಾರೆ.

1878ರಿಂದ ಸುಗ್ಗಿಯಲ್ಲಿ ದೇವಾಲಯ ವರ್ಗದವರನ್ನು ಪರೀಕ್ಷಿಸುವ ಹಾಗೂ ಪರಿಶೋಧಿಸುವ ಈ ಕಾರ್ಯವು, ಕರ್ತನು ಅರಸನ ಪದವಿಯನ್ನು ವಹಿಸಿಕೊಂಡ ನಂತರ ಯೆಹೂದ್ಯ ಸಭೆಯ ವಿರುದ್ಧ ತೀರ್ಪನ್ನು ನೀಡುವ ಸಾಂಕೇತಿಕವಾದ ದೇವಾಲಯದ ಶುದ್ಧೀಕರಣ ಕಾರ್ಯದ ಮುಂಛಾಯೆಯಾಗಿದೆ. ಅವರ ಮನೆಯು ನಿರ್ಜನವಾಗುವುದನ್ನು ಪ್ರಕಟಿಸಿದ ನಂತರ ಆತನು ನಿಜವಾದ ದೇವಾಲಯ ಅಥವಾ ಪವಿತ್ರಾಲಯದ ಸಂಕೇತವಾದ ಯೆರೂಸಲೇಮಿನ ದೇವಾಲಯಕ್ಕೆ ಹೋದನು ಮತ್ತು ಸಣ್ಣ ಚಾವಟಿಗಳನ್ನು ಮಾಡಿಕೊಂಡು ಅಲ್ಲಿನ ಚಿನಿವಾರರನ್ನು ಹೊರಗೋಡಿಸಿದನು, ಪರಿವಾಳಗಳನ್ನು ಮಾರುತ್ತಿದ್ದವರ ಮೇಜುಗಳನ್ನು ತಿರುವಿಹಾಕಿದನು.

ಈ ಸಾಂಕೇತಿಕ ಕಾರ್ಯಾಚರಣೆಯಲ್ಲಿ ಉಪಯೋಗಿಸಿದ ಸಣ್ಣ ಚಾವಟಿಯು, ಪ್ರಸ್ತುತ ಸುಗ್ಗಿಯಲ್ಲಿ, ದೇವಾಲಯ ವರ್ಗದವರ ಮಧ್ಯದಲ್ಲಿ ತಿದ್ದಲು ಮತ್ತು ಸಾಬೀತುಪಡಿಸಲು ಮತ್ತು ಅಶುದ್ಧ ವರ್ಗದವರನ್ನು ಪ್ರತ್ಯೇಕಿಸಲು ಉಪಯೋಗಿಸುವ ವಿವಿಧ ಸತ್ಯಗಳನ್ನು ಪ್ರತಿನಿಧಿಸುತ್ತವೆ. ಈಗ ಪ್ರಕಟಿಸಿದ ಸತ್ಯವು ದೇವರ ಸಮರ್ಪಕವಾದ ಚಿತ್ತವನ್ನು, ಆತನ ಸೇವೆಗೆ ಪೂರ್ಣ ಪ್ರತಿಷ್ಠೆಯ ಅರ್ಥ ಸೂಚನೆಯನ್ನು, ಮತ್ತು ಕರ್ತನ ಹೆಜ್ಜೆಜಾಡಿನಲ್ಲಿ ನಡೆಯಬೇಕಾದ ಇಕ್ಕಟ್ಟಾದ ಮಾರ್ಗವನ್ನು ಬಹಿರಂಗಪಡಿಸುತ್ತದೆ. ಯಾರು ಈ ವರ್ಗಕ್ಕೆ ಅಶುದ್ಧ ಉದ್ದೇಶಗಳಿಂದ ತಾವಾಗಿಯೇ ಸೇರಿಕೊಳ್ಳುತ್ತಾರೋ ಅಂಥವರನ್ನು ಅವರು ಈ ಪವಿತ್ರಾಲಯ ವರ್ಗದಿಂದ ಪ್ರತ್ಯೇಕಗೊಳ್ಳುವಂತೆ ಒತ್ತಾಯಪೂರ್ವಕ ಸತ್ಯವೆಂಬ ಕೊರಡೆಯಿಂದ ನಿರಂತರವಾಗಿ ಹೊಡೆಯಲಾಗುವುದು.

ನಮ್ಮ ಕರ್ತನ ಹಲವಾರು ಸಾಮ್ಯಗಳು, ಪವಿತ್ರಾಲಯ ವರ್ಗವು ಸಮೂಹದಿಂದ ಅಥವಾ ಹೇಳಿಕೊಳ್ಳುವ ಕ್ರೈಸ್ತ ಪ್ರಪಂಚದವರಿಂದ ಹೊಂದುವ ಸಾಮಾನ್ಯ ಬೇರ್ಪಡಿಸುವಿಕೆಯನ್ನು ತೋರಿಸುವು ದಾದರೂ, ಎರಡು ಸಾಮ್ಯಗಳು ನಂತರದಲ್ಲಿ ಮತ್ತಷ್ಟು ಮುಂದಕ್ಕೆ ಹೋಗಿ ಪವಿತ್ರಾಲಯ ವರ್ಗದವರನ್ನು ಪರೀಕ್ಷಿಸುವುದನ್ನೂ, ಪರಿಶೋಧಿಸು ವುದನ್ನೂ, ಜಯಗಳಿಸುವವರನ್ನು ಇತರರಿಂದ ಪ್ರತ್ಯೇಕಿಸಿ, ಅವರು ರಾಜ್ಯದ ಬಾಧ್ಯಸ್ಥಿಕೆ ಹೊಂದಿರುವದನ್ನು (ಪ್ರಕಟನೆ 3:21) ಹಾಗೂ ಪ್ರಾಮಾಣಿಕವಾಗಿ ಪ್ರತಿಷ್ಠೆ ಹೊಂದಿದ ನಂತರ, ಈ ಲೋಕದ ಉತ್ಸಾಹವನ್ನು ಗೆದ್ದುಬಂದವರಿಗೂ ಹಾಗೂ ದೇವರಿಂದ ದೊರೆಯುವ ಮಾನ್ಯತೆಯನ್ನು ನಿರ್ಲಕ್ಷಿಸಿ ಈ ಲೋಕದವರ ಮಾನ್ಯತೆಯನ್ನು ತ್ಯಾಗಮಾಡ ಮನಸ್ಸಿಲ್ಲದೆ ಇರುವವರ ವ್ಯತ್ಯಾಸವನ್ನು ತೋರಿಸುತ್ತವೆ.

ಹತ್ತು ಮಂದಿ ಕನ್ಯೆಯರ ಸಾಮ್ಯದಲ್ಲಿ ಸಮಸ್ತ ಕನ್ಯೆಯರು ಅಥವಾ ಪ್ರತಿಷ್ಠೆ ಹೊಂದಿದ ವರ್ಗಕ್ಕೆ ಸೇರಿದವರೆಲ್ಲರೂ, ಬಾಬೇಲಿನಿಂದ ಬೇರೆಯಾದವರು, ಈ ವರ್ಗದಲ್ಲಿ ನಿರ್ದಿಷ್ಟವಾಗಿ ಪರೀಕ್ಷೆ ಹೊಂದುವದನ್ನು ಪರಿಶೋಧನೆಗೊಂಡು ಪ್ರತ್ಯೇಕತೆ ಹೊಂದಿಕೊಳ್ಳುವ ವರ್ಗವನ್ನು ಗುರುತಿಸುತ್ತದೆ – ಇವರು ಪೂರ್ತಿ ನಂಬಿಗಸ್ತರಾಗಿ, ಉತ್ಸಾಹಪೂರಿತ, ಪ್ರೀತಿಯುಳ್ಳವರಾಗಿ ಮತ್ತು ಅವಿಳಂಬವಾದ ವಿಧೇಯತೆ ಹೊಂದಿದ್ದ ಬುದ್ಧಿವಂತ ಕನ್ಯೆಯರು: ಆದರೆ ಬುದ್ಧಿಯಿಲ್ಲದ ಕನ್ಯೆಯರು ತಮ್ಮ ಪ್ರಥಮ ಪ್ರೀತಿಯನ್ನು, ಉತ್ಸಾಹದ ಚುರುಕುತನವನ್ನು ತಣ್ಣಗಾಗಲು ಅವಕಾಶ ಮಾಡಿಕೊಟ್ಟ ಕಾರಣ ತಮ್ಮ ನಂಬಿಕೆ ಮತ್ತು ವಿಧೇಯತೆಯ ನಿಷ್ಠೆಯನ್ನು ತಗ್ಗಿಸಿಕೊಂಡ ಪರಿಣಾಮವಾಗಿ ಬುದ್ಧಿವಂತ ಕನ್ಯೆಯರಿಂದ ಬೇರ್ಪಟ್ಟು ಕುಗ್ಗಿಸಲ್ಪಡುತ್ತಾರೆ. ಬುದ್ಧಿವಂತೆಯರು ತಮ್ಮ ದೇವರೊಂದಿಗಿನ ಸಮಸ್ತ ಪ್ರತಿಷ್ಠೆಯ ಒಡಂಬಡಿಕೆ ಯೊಡನೆ ಜೀವಿಸುತ್ತಿದ್ದು

ಕರ್ತನು ವಾಗ್ದಾನಪಡಿಸಿರುವ ಆತನ ಹಿಂತಿರುಗುವಿಕೆಯನ್ನು ಕಾಯುತ್ತಿರುತ್ತಾರೆ ಮತ್ತು ಸುಗ್ಗಿಯ ಸಂತೋಷ ಸಂದೇಶವನ್ನು ಮೆಚ್ಚಿಕೊಳ್ಳಲು, ಕರ್ತನ ಪ್ರಸನ್ನತೆಯ ಬಗ್ಗೆ ಮುಂತಿಳಿಸಿರುವ ಸೂಚನೆಗಳನ್ನು ಗ್ರಹಿಸಲು, ಮತ್ತು ಆತನು ಅನ್ವಯಿಸಲು ಸೂಕ್ತವೆಂದೆಣಿಸಿ ನೀಡುವ ಯಾವುದೇ ಪರೀಕ್ಷೆಗಳನ್ನು ಎದುರಿಸಿ, ತಮ್ಮ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಸಾಬೀತುಪಡಿಸಲು ಸದಾ ಸಿದ್ಧರಿರುತ್ತಾರೆ. ಇವರುಗಳು ಎಚ್ಚರವಾಗಿದ್ದು ತಟ್ಟೋಣದ ಸ್ವರವನ್ನು ಕರ್ತನ ಪ್ರಸನ್ನತೆಯನ್ನು ಪ್ರಕಟಿಸುವ ಪ್ರವಾದಿಯ ಮಾತುಗಳ ಮೂಲಕ ಲಾಲಿಸಲು ಕಾತುರಗೊಂಡು ಕಾಯುತ್ತಿರುತ್ತಾರೆ. ಅವರಿಗೆ ಪ್ರಸ್ತುತ ನಷ್ಟಗನ್ನು ಶಿಲುಬೆಗಳೂ, ಸತ್ಯದ ಸಲುವಾಗಿ ನಮ್ರತೆಯಿಂದ ಹೊತ್ತುಕೊಳ್ಳುವವುಗಳಾಗಿದ್ದು, ಅವುಗಳನ್ನು ಅವರು ಮುಂಬರಲಿರುವ ದೀರ್ಘಕಾಲ ಬಾಳುವ ಶಾಂತಿ, ಆನಂದ ಹಾಗೂ ಮಹಿಮೆಯ ಆಶೀರ್ವಾದಗಳ ಮುನ್ಸೂಚನೆಯೆಂದು ಸ್ವಾಗತಿಸುತ್ತಾರೆ.

1874ರ ಶರತ್ಕಾಲದಲ್ಲಿ ಕರ್ತನ ಆಗಮನವನ್ನು ಪ್ರಕಟಿಸುವ ಪ್ರವಾದನಾ ತಟ್ಟುವಿಕೆಯನ್ನು ಕೇಳಿಸಿಕೊಂಡಾಗ, ಬಹುಮಟ್ಟಿಗೆ ಅದರ ಅಂಗೀಕಾರವು ಪ್ರಾರಂಭವಾಯಿತು; ತ್ವರಿತವಾಗಿ "ಇಗೋ ಮದಲಿಂಗನು! ಅವನನ್ನು ಎದುರುಗೊಳ್ಳುವುದಕ್ಕೆ ಹೊರಡಿರಿ" (ಮತ್ತಾಯ 25:6) ಎಂಬ ಕೂಗು ಎದ್ದಿತು. ಈ ಕರೆಯು ಈಗಲೂ ಮುಂದುವರೆಯುತ್ತಿದೆ, ಮತ್ತು ಎಲ್ಲಾ ಪ್ರತಿಷ್ಠೆಗೊಂಡ ಕನ್ಯಾವರ್ಗದವರು ಅದನ್ನು ಕೇಳಿಸಿಕೊಳ್ಳುವವರೆಗೆ, ಅವರ ನಂಬಿಕೆ ಮತ್ತು ನಿಷ್ಠೆಯು ಪರೀಕ್ಷಿಸಲ್ಪಡುವವರೆಗೆ ಅದು ಮುಂದುವರೆಯುತ್ತದೆ. ಬುದ್ಧಿವಂತೆಯರೆಲ್ಲರೂ ತಮ್ಮ ಆರತಿಗಳನ್ನು ನೆಟ್ಟಗೆ ಮಾಡಿಕೊಂಡು, ಎಣ್ಣೆಯೊಡನೆ (ಪವಿತ್ರಾತ್ಮ) ತಮ್ಮ ಪಾತ್ರೆಗಳಲ್ಲಿ (ತಮ್ಮ ಹೃದಯಗಳಲ್ಲಿ) ಪ್ರಕಾಶಮಾನವಾಗಿ ಉರಿಯುತ್ತಿರುವ ದೀಪದೊಡನೆ (ದೇವರ ವಾಕ್ಯವೆಂಬ) ಕರ್ತನ ಪ್ರಸನ್ನತೆಯನ್ನು ಒಪ್ಪಿಕೊಳ್ಳುತ್ತಾರೆ. ನಂಬಿಕೆಯೊಡನೆ ತಮ್ಮ ಗುಣಲಕ್ಷಣ ಮತ್ತು ಕಾರ್ಯವಿಷಯಗಳ ಸಾಮರಸ್ಯವನ್ನು ಸರಿಪಡಿಸಿಕೊಂಡು ಪ್ರಿಯ ಮದಲಿಂಗನನ್ನು ಎದುರು ನೋಡಲು ಹೋದರು ಮತ್ತು ಆತನೊಡನೆ ಮದುವೆಯ ಸಮಾರಂಭದಲ್ಲಿ ಕುಳಿತುಕೊಳ್ಳುತ್ತಾರೆ.

ಯೆಹೂದ್ಯರ ವಿವಾಹ ಸಂಪ್ರದಾಯಗಳು ಕ್ರಿಸ್ತನು ತನ್ನ ಸಭೆಯೆಂಬ ಮದುವಣಗಿತ್ತಿಯೊಡನೆ ಮಾಡಿಕೊಳ್ಳುವ ವಿವಾಹಕ್ಕೆ ಒಂದು ಸುಂದರ ದೃಷ್ಟಾಂತವಾಗಿದೆ – ಆಕೆಯ ಕರ್ತನು. ಪರಿಗ್ರಹಣ ಅಥವಾ ಮದುವೆಯ ನಿಶ್ಚಿತಾರ್ಥ ಕಾರ್ಯವು ಎರಡೂ ಕಡೆಯುವರ ವಿಧಿಯುಕ್ತವಾದ ನಿಷ್ಠಾವಂತಿಕೆ ಒಡಂಬಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಒಪ್ಪಿಕೊಳ್ಳುವುದು. ಸ್ತ್ರೀಯನ್ನು ತನ್ನ ಗಂಡನ ಮನೆಗೆ ಕರೆದುಕೊಂಡು ಹೋಗುವವರೆಗೂ ತನ್ನ ತಂದೆತಾಯಿಗಳ ಮನೆಯಲ್ಲಿಯೇ ಇರುತ್ತಾಳೆ ಇದಕ್ಕೆ ರೂಢಿಯಲ್ಲಿರುವಂತೆ ನಿಶ್ಚಿತಾರ್ಥ ಅಥವಾ ವಿವಾಹದ ನಂತರ ಒಂದು ವರ್ಷಗಳವರೆಗೆ ಹಿಡಿಯಬಹುದು. ಅನ್ಯೋನ್ಯತೆಯ ನೆರವೇರಿಕೆಯು ಆಕೆಗಾಗಿ ಆಕೆಯ ಗಂಡನು ಸಿದ್ಧಪಡಿಸಿರುವ ಮನೆಯನ್ನು ಸ್ವೀಕರಿಸುವದನ್ನು ಒಳಗೊಂಡಿದೆ ಮತ್ತು ಇದು ಬಹುದಿನದವರೆಗೆ ನಡೆಯುವ ಸಂಭ್ರಮಾಚರಣೆಗಳನ್ನೊಳಗೊಂಡಿರುತ್ತದೆ – ಇದನ್ನು 'ಶೋಭನ ಹಬ್ಬ'ವೆಂದು ಕರೆಯುತ್ತಾರೆ. ನಿಯಮಿತ ಸಮಯದಲ್ಲಿ ಮದಲಿಂಗನು ತನ್ನ ಮದುವಣಗಿತ್ತಿಗಾಗಿ ಹೊರಡುತ್ತಾನೆ. ಮದುವಣಗಿತ್ತಿಯು ಆತನನ್ನು ಸ್ವೀಕರಿಸಲು ಮತ್ತು ಅವರ ಭವಿಷ್ಯದ ಮನೆಗೆ ಹೋಗಲು ಮತ್ತು ಆತನು ಒದಗಿಸುವ ಔತಣಕ್ಕಾಗಿ ತಮ್ಮ ದೀಪಗಳು ಮತ್ತೆಲ್ಲಾ ಅಗತ್ಯ ಸಿದ್ಧತೆಗಳೊಡನೆ ಸಿದ್ಧರಾಗಿರುವ ತನ್ನ ಕನ್ಯಾ ಸಂಗಾತಿಗಳೊಡನೆ ಕಾಯುತ್ತಿರುತ್ತಾಳೆ.

ಸಾಮ್ಯದಲ್ಲಿ ಮದಲಗಿತ್ತಿಯ ಬಗ್ಗೆ ಏನನ್ನೂ ಹೇಳಿರುವುದಿಲ್ಲ. ಆದರೆ ಮದಲಿಂಗನು ಬರುವ ಆತನ ಸಂಗಡ ಸಿದ್ಧಪಡಿಸಿರುವ ಸಂತೋಷಕೂಟಕ್ಕೆ ಹೋಗುವ ಎಲ್ಲಾ ಬುದ್ಧಿವಂತ ಕನ್ಯೆಯರ ಬಗ್ಗೆ ಹೇಳಲ್ಪಟ್ಟಿದೆ. ಇವರೆಡೂ ಸರಿಯಾಗಿವೆ ಮತ್ತು ಅಗತ್ಯವೂ ಆಗಿವೆ. ಯಾಕೆಂದರೆ ಕ್ರಿಸ್ತನ ಮದುವಣಗಿತ್ತಿಯು ಹಲವಾರು ಸದಸ್ಯರು ಅಥವಾ ವ್ಯಕ್ತಿಗಳಿಂದ ರಚಿಸಲ್ಪಟ್ಟಿದೆಯೆಂಬುದು ಬುದ್ಧಿವಂತ ಕನ್ಯೆಯರ ಮೂಲಕ ಅತ್ಯಂತ ಸುಂದರವಾಗಿ ಪ್ರತಿನಿಧಿಸಲ್ಪಟ್ಟಿದೆ. ನಂತರದಲ್ಲಿ ಆ ದೀಪ ಮತ್ತು ಅನುಭವವನ್ನು ಹೊಂದಿಕೊಳ್ಳುವ, ಬುದ್ಧಿಹೀನ ಕನ್ಯೆಯರು 'ಬುದ್ಧಿವಂತ, ನಂಬಿಗಸ್ತ ಕನ್ಯಾವರ್ಗ'ಕ್ಕೆ ಉನ್ನತಕ್ಕೇರುವುದರಲ್ಲಿ ಸೋತುಹೋದವರು. ಈ ಬುದ್ಧಿಹೀನ ಕನ್ಯೆಯರು ಸಂಶಯಾತೀತವಾಗಿ ಕೀರ್ತನೆ 45:14,15ರಲ್ಲಿ ಹೇಳಿರುವಂತೆ "ಬೂಟೇಧಾರಿ ಕೆಲಸದ ವಸ್ತ್ರಗಳನ್ನು ಧರಿಸಿಕೊಂಡು ಬರುವ ಅರಸುಕುಮಾರಿಯ ಸಖಿಯರಾದ ಕನ್ಯೆಯರ ಪರಿವಾರ ವರ್ಗಕ್ಕೆ ಸೇರಿದವರು. ಅವರು ಸಹ ಸೂಕ್ತ ಕಾಲದಲ್ಲಿ ಅರಸನ ಕೃಪೆ ಹೊಂದುವರು, ಆದರೆ ಅಷ್ಟು ಉನ್ನತವಾದದ್ದಲ್ಲ.

ಮದಲಿಂಗನ ಬರೋಣಕ್ಕಾಗಿ ಕುತೂಹಲದಿಂದ ಸಿದ್ಧರಾಗಿ ಕಾಯುತ್ತಿರುವ ಬುದ್ಧಿವಂತ ಕನ್ಯೆಯರ ಮನೋವೃತ್ತಿಯು ಸರಿಯಾಗಿ ಕರ್ತನಿಗೆ ನಿಶ್ಚಿತಾರ್ಥ

ಹೊಂದಿದವರ ನಿಜವಾದ ಮನೋವೃತ್ತಿಯನ್ನು, ಪ್ರತಿಷ್ಠೆಗೊಂಡ ಸಭೆಯನ್ನು ಪ್ರತಿನಿಧಿಸುತ್ತದೆ. ಜೀವನದ ಮಹತ್ತರ ವಿಶೇಷ ಘಟನೆಯಾದ ಇದನ್ನು ನಿರ್ಲಕ್ಷಿಸುವ ಅಥವಾ ಇದಕ್ಕಾಗಿ ಸಿದ್ಧಪಡಿಸಿಕೊಳ್ಳದ ಕನ್ಯೆಯರಿಗೆ ಅದು ಆಕೆಯು ಆ ಗೌರವಕ್ಕೆ ಅಪಾತ್ರಳು ಎಂಬುದನ್ನು ಸಾಬೀತುಪಡಿಸುತ್ತದೆ; ಹಾಗೆಯೇ ಅಂತಹ ಸಭೆಗೂ ಸಹ. "ಆತನ ಮೇಲೆ ಈ ನಿರೀಕ್ಷೆಯನ್ನಿಟ್ಟುಕೊಂಡಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ" (1 ಯೋಹಾನ 3:3). ಅಂಥವನು ತನ್ನ ಹೃದಯ ಮತ್ತು ಜೀವಿತದ ಮನೋವೃತ್ತಿಯು ಮದಲಿಂಗನಿಗೆ ಸಂಪ್ರೀತ ವಾಗಿರುವುದನ್ನು ಬಯಸುತ್ತಾನೆ. ಮತ್ತು ಇದು "ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡುಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು" (ಯೋಹಾನ 14:3) ಎಂದು ಹೇಳಿದಾತನ ಆಶೀರ್ವದಿತ ಅನ್ಯೋನ್ಯತೆ ಮತ್ತು ಔತಣಕ್ಕೆ ಹೆಬ್ಬಯಕೆಯುಳ್ಳದ್ದೂ, ನಿರೀಕ್ಷೆಯುಳ್ಳದ್ದೂ ಆಗಿದೆ.

ಈ ಸಾಮ್ಯದಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ, ಈ ವಿಶೇಷ ಸತ್ಯದ ವೈಶಿಷ್ಟ್ಯವು (ಮದಲಿಂಗನ ಪ್ರಸನ್ನತೆಯ ತಿಳುವಳಿಕೆಯು), ಇವುಗಳು ಸಾಮಾನ್ಯವಾಗಿ ಈ ಲೋಕಕ್ಕೆ ಅಥವಾ ಹೆಸರುವಾತ್ರದ ಸಭೆಗೆ ಉದ್ದೇಶಿತವಾದವುಗಳಲ್ಲ, ಆದರೆ ಕೇವಲ ಕನ್ಯೆಯರ ಅಥವಾ ಪ್ರತಿಷ್ಠೆ ಹೊಂದಿದವರ ವರ್ಗಕ್ಕೆ ಮಾತ್ರವೇ ಉದ್ದೇಶಿತವಾದವುಗಳು. ಎರಡನೆಯದಾಗಿ, ಮದಲಿಂಗನ ಪ್ರಸನ್ನತೆಯ ಈ ಸಂದೇಶವು ಬೇರ್ಪಡಿಸುವಿಕೆಗೆ ಕಾರಣವಾಗುತ್ತದೆ ಮತ್ತು ಅದು ಕನ್ಯೆಯರ ವರ್ಗದ ಪ್ರತಿಯೊಬ್ಬ ಬುದ್ಧಿವಂತರನ್ನು, ನಿಷ್ಠಾವಂತರನ್ನು, ಯೋಗ್ಯರಾದವರನ್ನು ಸ್ಪಷ್ಟವಾಗಿ ಪರೀಕ್ಷಿಸಿ, ಸಾಬೀತುಪಡಿಸಿ, ನಂತರ ಅಪ್ರಮಾಣಿಕರಾದ, ಬುದ್ಧಿಹೀನ ಕನ್ಯೆಯರಿಂದ ಅವರನ್ನು ಪ್ರತ್ಯೇಕರನ್ನಾಗಿ ಪ್ರಕಟಿಸುತ್ತದೆ.

ಆಹಾ! ಕೃಪೆಯ ಎಂಥಾಃ ಶ್ರೀಮಂತಿಕೆಯು "ಇದೋ ಮದಲಿಂಗನು!" ಎಂಬ ಈ ಭವ್ಯವಾದ ಸಂದೇಶದಲ್ಲಿ ಒಳಗೊಂಡಿದೆ. ಆದಾಗ್ಯೂ ಇದೊಂದು ಭಕ್ತರುಗಳಿಗೆ ಮಾತ್ರವೇ ಗೊತ್ತಿರುವ ಮಹಾ ಗುಪ್ತ ವಿಷಯವಾಗಿದೆ. ಈ ಪ್ರಪಂಚವು ಇದನ್ನು ಸ್ವೀಕರಿಸಲು ಸಾಧ್ಯವಿಲ್ಲ. ಅದು ಅವರಿಗೆ ಮೂರ್ಖತನವಾಗಿದೆ ಹಾಗೂ ಎಲ್ಲಾ ಕನ್ಯೆಯರೂ ಕೇಳಿಸಿಕೊಳ್ಳುವವರೆಗೆ, ಅವರಲ್ಲಿ ಬುದ್ಧಿವಂತೆಯರಾದವರು ಪೂರ್ಣವಾಗಿ ಒಳ ಪ್ರವೇಶಿಸುವ ತನಕ, ಬಾಗಿಲು ಮುಚ್ಚುವವರೆಗೆ ಮತ್ತು ಮಹಾ ಸಂಕಟದ ಸಮಯದ ಬೆಂಕಿಯ ಜ್ವಾಲೆಯು ಆಗ ಉದ್ಭವಿಸುತ್ತದೆ ಮತ್ತು ಎಲ್ಲರ ಕಣ್ಣುಗಳು ಕರ್ತನ ಪ್ರಸನ್ನತೆಯನ್ನು ಮತ್ತು ಆತನ ಆಳ್ವಿಕೆಯ ಪ್ರಾರಂಭವನ್ನು ಕಾಣುವಂತೆ (ಅಂಗೀಕರಿಸುವಂತೆ) ಮಾಡುವವರೆಗೆ ಹಾಗೆ ಇರುತ್ತದೆ.

"ಎಲೈ ಕುಮಾರಿಯೇ, ನನ್ನ ಮಾತನು ಕೇಳಿ ಆಲೋಚಿಸು, ಸ್ವಜನರನ್ನೂ ತವರು (ಆದಾಮನ) ಮನೆಯನ್ನು (ಮಾನವ ಸಂಬಂಧಗಳನ್ನು, ನಿರೀಕ್ಷೆಗಳನ್ನು, ಗುರಿಗಳನ್ನು, ಹಂಬಲಗಳನ್ನು) ಮರೆತುಬಿಡು. ಆಗ ರಾಜನು (ಕರ್ತನಾದ ಯೇಸು) ನಿನ್ನ ಲಾವಣ್ಯವನ್ನು ನೋಡಲಪೇಕ್ಷಿಸುವನು. ಆತನೇ ನಿನಗೆ ಒಡೆಯನು. ಆತನಿಗೇ ನಮಸ್ಕರಿಸು" (ಕೀರ್ತನೆ 45:10,11) ಎಂಬ ಯೆಹೋವನ ಸಂದೇಶವು ಎಷ್ಟೋ ರಾಜಕೃಪೆಯಿಂದ ಆತನ ನಮ್ರ ಸೇವಕರಿಗೆ ಮತ್ತು ಆತನ ಮನೆ ಸೇವಕಿಯರಿಗೆ ಬರುತ್ತದಲ್ಲವೋ?. ಇಂಥಾಃ ಕೃಪೆಯನ್ನು ಹೊಂದತಕ್ಕವರು ಯಾರು? ಅವರುಗಳು 'ಕರೆಯಲಟ್ಟವರು, ಸ್ವೀಕರಿಸಲ್ಪಟ್ಟವರು ಮತ್ತು ನಂಬಿಗಸ್ತರು" "ರಾಜಕುಮಾರಿ" [ಯೆಹೋವನ ಮಗಳು; ಅಂಥವರಿಗೆ ಮದಲಿಂಗನಾದ ಕಿಸ್ತನು ಸ್ವಂತದವನು] ಇವರೆಲ್ಲರೂ ತಮ್ಮೊಳಗೆ ಮಹಿಮೆ ಯುಳ್ಳವರು. ಆಕೆಯ ಸೌಂದರ್ಯವು ಪವಿತ್ರತೆಯ ಸೌಂದರ್ಯವಾಗಿದೆ. ಬಾಹ್ಯರೂಪವಾಗಿ ಲೋಕದ ಮುಂದೆ, ಆಕೆಯು ಮಹತ್ವವುಳ್ಳವಳಾಗಿರದೆ, ಆಕೆಯ ಕರ್ತನು ನಮ್ರನಾಗಿದ್ದಂತೆಯೇ ಆಕೆಯು ಮನುಷ್ಯರಿಂದ ತಿರಸ್ಕೃತಳೂ, ಹೀನೈಸಲ್ಪಟ್ಟವಳೂ ಆಗಿದ್ದಾಳೆ. ಆದರೆ, ಆಕೆಯು ಯಾವಾಗಲೂ ಹಾಗೆಯೇ ಇರುವವಳಲ್ಲ. ನಮ್ರತೆಯಲ್ಲಿ ಆತನನ್ನು ಅನುಸರಿಸುವವಳಾಗಿದ್ದು ಆಕೆಯು ಆತನ ಮಹಿಮೆಯಲ್ಲಿ ಸಹ ಪಾಲುದಾರ ರಾಗುವಳು. ಒಬ್ಬ ನೂತನ ಸೃಷ್ಟಿಯಾಗಿ, ತಕ್ತ ಸಮಯದಲ್ಲಿ ಆಕೆಯು ಆತನ ದೈವಿಕ ಸ್ವಭಾವವೆಂಬ ಬಟ್ಟೆಗಳನ್ನು ಧರಿಸಿಕೊಳ್ಳುವಳು. ಆಕೆಯ ಬಟ್ಟೆಗಳು (ಮಹಿಮೆ ಹೊಂದುವಾಗ) ರೂಪಿತಗೊಂಡ ಚಿನ್ನದಂತೆ. ಚಿನ್ನವು ದೈವಿಕ ಸ್ವಭಾವದ ಸಂಕೇತವಾಗಿದೆ. ಆಕೆಯು ಜರತಾರಿ ವಸ್ತ್ರಗಳನ್ನು, ಬೂಟೇಧಾರಿ ಕಸೂತಿ ಕೆಲಸದ ವಸ್ತ್ರಗಳನ್ನು ಧರಿಸಿ ಸಖಿಯರಾದ ಕನ್ಯೆಯರ ಪರಿವಾರದೊಡನೆ ಅರಸನ ಬಳಿಗೆ ಬರುವಳು" (ಕೀರ್ತನೆ 45:14). ಆಕೆಯು ದೇವರೇ ಒದಗಿಸಿಕೊಡುವ ಸಾಧಾರಣ ಶ್ವೇತವಸ್ತ್ರಧಾರಿಯಾಗಿ ರಾಜನ ಬಳಿಗೆ ತರಲ್ಪಡುವಳು, ಆ ವಸ್ತ್ರವು ಆತನ ನೀತಿವಂತಿಕೆಯ

ವಸ್ತ್ರವಾಗಿದೆ, ಅದರಿಂದ ಅವಳು ಸಿದ್ಧವಾಗಿರುತ್ತಾಳೆ. ಬಹಳ ಎಚ್ಚರಿಕೆಯಿಂದ, ಕ್ರಿಸ್ತೀಯ ಕೃಪೆಗಳಿಂದ ಅಲಂಕಾರಗೊಂಡಿರುತ್ತಾಳೆ. ಅರಸನ ಅರಮನೆಗೆ ಆಕೆಯ ಸಮೃದ್ಧವಾದ ಪ್ರವೇಶದಿಂದ ಪರಲೋಕ, ಭೂಲೋಕಗಳಲ್ಲಿ ಬಹಳ ಸಂತೋಷವುಂಟಾಗುವುದು (2 ಪೇತ್ರ 1:5–8,11); "ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ"; ಅನೇಕರು "ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ" ಎಂದು ಹೇಳುವರು (ಪ್ರಕಟನೆ 19:7). "ತೂರಿನ ಮಗಳು (ಭೂಲೋಕದಲ್ಲಿ ಬಲಶಾಲಿಗಳು). ಅಲ್ಲಿ ಕಾಣಿಕೆ ಗಳೊಡನೆ ಇರುವಳು; ಪ್ರಜೆಗಳಲ್ಲಿ ಸ್ಥಿತಿವಂತರು ನಿನ್ನ ದಯೆಯನ್ನು ಕೋರುವರು..... ನಿನ್ನ ಹೆಸರು ಯಾವಾಗಲೂ ಜ್ಞಾಪಕದಲ್ಲಿರುವಂತೆ ನಾನು ಮಾಡುವೆನು". ಆದರಿಂದ ಎಲ್ಲಾ ಜನಗಳು ನಿನ್ನನ್ನು ಯುಗಯುಗಾಂತರಗಳಲ್ಲಿಯೂ ಹೊಗಳುವರು (ಕೀರ್ತನೆ 45 : 12 –17).

ನಿಜವಾಗಿಯೂ, ಪ್ರತಿಷ್ಠೆ ಹೊಂದಿದವರಲ್ಲಿ "ಜ್ಞಾನಿಗಳು" ಈ ಲೋಕದ ಆಕರ್ಷಣೆಗಳನ್ನು ಮತ್ತು ಲೌಕಿಕ ನಿರೀಕ್ಷೆಗಳು ಮತ್ತು ಬಹುಮಾನಗಳನ್ನು ನಿರ್ಲಕ್ಷಿಸುವವರೆಂದು ರುಜುವಾತುಪಡಿಸುತ್ತಾರೆ ಮತ್ತು ಅವರ ಹೃದಯಗಳು ಹಾತೊರೆಯುವವುಗಳಾಗಿ ಪ್ರಿಯಕರಿನಿಗಾಗಿ ಕಾಯುವುದಾಗಿದ್ದು ಮದಲಗಿತ್ತಿ, ಯಜ್ಞಕುರಿಯಾದ ಪತಿಗೆ ವಾಗ್ದಾನ ಮಾಡಿದ ಮಹಾ ಉನ್ನತಿಗೆ ಸಿದ್ಧರಾಗಿ ಮತ್ತು ಅರ್ಹರಾಗಿ ಕಾಣಿಸಿಕೊಳ್ಳುತ್ತಾರೆ.

"Bride of the Lamb, thy charms,
Oh, may we share"

"ಯಜ್ಞದ ಕುರಿಯಾದಾತನ ವಧುವೇ,
ನಿನ್ನ ಲಾವಣ್ಯವನ್ನು ಆಹಾ,
ನಾವೂ ಹಂಚಿಕೊಳ್ಳಬಹುದೇ"

ಅವರ ದೀಪಗಳನ್ನು ತಕ್ಕೊಂಡು ಮದಲಿಂಗನನ್ನು ಅನುಸರಿಸುವುದೇನೆಂದರೆ, ಎಲ್ಲವನ್ನೂ ಕ್ರಿಸ್ತನಿಗೋಸ್ಕರ ತ್ಯಜಿಸಿ ಆತನನ್ನು ಈ ಪ್ರತ್ಯಕ್ಷತೆಯ ಕಾಲದಲ್ಲಿ ಹಿಂಬಾಲಿಸುವುದನ್ನು ಪ್ರತಿನಿಧಿಸುವುದರಿಂದ ಅದು ಕನ್ಯೆಯರು ಮುಖ್ಯವಾಗಿ ಇದ್ದ ಬಾಬೇಲನ್ನು ಬಿಟ್ಟುಬರುವುದಕ್ಕೆ ಸಮವಾಗಿದೆ. ಯಾಕೆಂದರೆ ಸುಗ್ಗಿಯ ಬೆಳಕಿನಲ್ಲಿ ಸತ್ಯವು ಪ್ರಕಟಗೊಂಡಿರುವುದು ಸ್ಪಷ್ಟವಾಗಿ ಗೋಧಿಯು ಹಣಜಿಯಿಂದ ಪತ್ಯೇಕಿಸಲ್ಪಟ್ಟದ್ದನ್ನು ಸೂಚಿಸುತ್ತದೆ. ಜಾಗರೂಕವಾಗಿ ಸಜ್ಜುಗೊಳಿಸಿರುವುದು ತಿಳಿಸುವ ಸತ್ಯವು ಬುದ್ಧಿವಂತ ಕನ್ಯೆಯರು ಪವಿತ್ರಾತ್ಮದ ಪ್ರತಿಷ್ಠೆಯನ್ನು ಮತ್ತು ವಿಧೇಯತೆಯನ್ನು ಹೊಂದಿರುವದನ್ನು ಪ್ರಕಟಪಡಿಸುತ್ತದೆ. ಈ 'ಎಣ್ಣೆ'ಯನ್ನು ಹೊಂದಿರುವವರು ಬೆಳಕನ್ನೂ ಹೊಂದಿರುತ್ತಾರೆ. ಈ ರೀತಿಯಾಗಿ ಈ ಸವಲತ್ತನ್ನು ಮೆಚ್ಚಿಕೊಳ್ಳುವವರು ಸಂತೋಷವಾಗಿ ಮತ್ತು ಅವಿಳಂಬವಾಗಿ "ಮದಲಿಂಗನನ್ನು ಆತನು ಹೋಗುವ ಕಡೆಗಳಲ್ಲೆಲ್ಲಾ ಹಿಂಬಾಲಿಸುವರು".

ಇದಕ್ಕೆ ವ್ಯತಿರಿಕ್ತವಾಗಿ ಬುದ್ಧಿಹೀನ ಕನ್ಯೆಯರು, ಸಾಕಷ್ಟು ಎಣ್ಣೆಯ ಕೊರತೆಯುಳ್ಳವರಾಗಿದ್ದು, ಮದಲಿಂಗನ ಪ್ರಸನ್ನತೆಯ ಬಗ್ಗೆ ಸ್ಪಷ್ಟವಾದ ಬೆಳಕನ್ನು ಹೊಂದುವಲ್ಲಿ ವಿಫಲರಾಗುತ್ತಾರೆ. ಪ್ರಸ್ತುತ ಜೀವನದ ಪಾಲನೆ ಮತ್ತು ಯೋಜನೆ ಮುಂತಾದವುಗಳ ವಿಪರೀತ ಹೊರೆಹೊತ್ತವರಾಗಿ, ಅವರು ಪ್ರಸ್ತಾಪವನ್ನು ಕೂಲಂಕುಷವಾಗಿ ವಿಚಾರಿಸುವುದರಲ್ಲಿ ವಿಫಲ ರಾಗುತ್ತಾರೆ. ಇದರ ಫಲವಾಗಿ ಅಲ್ಲೇ ನೆಲಸಿ ಬಾಬೇಲನ್ನು ಬಿಟ್ಟು ಬರುವ ಬಗ್ಗೆ ನಿರ್ಧರಿಸದವರಾಗುತ್ತಾರೆ ಮತ್ತು ಅಳತೆ ಮೀರಿ ಉದಾಸೀನರಾಗಿದ್ದು, ಸಂಪೂರ್ಣ ಪ್ರಸ್ತಾಪದ ಬಗ್ಗೆ ನಂಬಿಕೆಯಿಲ್ಲದವರಾಗಿರುತ್ತಾರೆ. ಇತರರಿಂದ ಒತ್ತಾಯಿಸಲ್ಪಟ್ಟರೂ ಅವರು ಬಾಬಿಲೋನಿನಿಂದ ತಮ್ಮ ನಿರ್ಗಮನವನ್ನು ತೆಗೆದುಕೊಳ್ಳಲು ಒಲವಿಲ್ಲದವರಾಗಿರುತ್ತಾರೆ. ಲೋಟನ ಹೆಂಡತಿಯಂತೆ, ಹಿಂತಿರುಗಿ ನೋಡಲು ಎಡಬಿಡದೆ ಬಾಗುತ್ತಾರೆ. ಅಂಥವರಿಗೆ ಕರ್ತನು "ಲೋಟನ ಹೆಂಡತಿಯನ್ನು ನೆನಪಿಗೆ ತಂದುಕೊಳ್ಳಿರಿ" (ಲೂಕ 17:32) ಎಂಬ ಎಚ್ಚರಿಕೆಯನ್ನು ನೀಡಿದ್ದಾನೆ, ಪುನಃ ಆತನು "ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲ"ಎಂದು ಹೇಳಿದ್ದಾನೆ (ಲೂಕ 9:62).

ಈ ಬುದ್ಧಿಹೀನ ಕನ್ಯೆಯರಿಗೆ ಔತಣಕ್ಕೆ ಹೋಗುವ ಅವಕಾಶ ದಾಟಿ ಹೋಗುವವರೆಗೆ ತಮ್ಮ ಬುದ್ಧಿಹೀನತೆಯ ಬಗ್ಗೆ ಅರಿವಿದ್ದಿತೆಂಬುದಕ್ಕೆ ಸಾಮ್ಯದಲ್ಲಿ ಯಾವುದೇ ಸುಳಿವಿರಲಿಲ್ಲ. ನಂತರದಲ್ಲಿ ಅವರು ಅತ್ಯಂತ ಉಗುರುಬೆಚ್ಚಗಿನ ಸ್ಥಿತಿಯಲ್ಲಿದ್ದವರೂ ಮತ್ತು ದೂರದಲ್ಲಿ ಹಿಂಬಾಲಿಸುವವರು ಆಗಿದ್ದು ತಾವು ಕರ್ತನ ಸ್ವಂತದವರು ಮತ್ತು ಆತನ ಜೊತೆ ಬಾಧ್ಯಸ್ಥರು ಎಂದು ನಿರೀಕ್ಷಿಸುವುದರಲ್ಲಿ ತಾವೆಷ್ಟು ಬುದ್ಧಿಹೀನರು ಎಂಬುದನ್ನು ಗ್ರಹಿಸಿಕೊಳ್ಳುತ್ತಾರೆ. ಅನೇಕರು ಈಗ ಮನುಷ್ಯರಲ್ಲಿ ಶ್ರೇಷ್ಠವೆನಿಸಿಕೊಳ್ಳುವಂಥವರು ಮತ್ತು ತಮ್ಮ ಅದ್ಭುತ ಕೃತ್ಯಗಳಿಗೆ ಪ್ರಸಿದ್ಧಿಯಾದವರು ಸಹ ಆಶಾಭಂಗ ಪಟ್ಟುಕೊಳ್ಳುವರು.

## ಮತ್ತು ಬಾಗಿಲು ಮುಚ್ಚಲ್ಪಟ್ಟಿತು
## And The Door Was Shut

ಮದಲಿಂಗನ ಪ್ರತ್ಯಕ್ಷತೆಯ ಘೋಷಣೆಯು, ಆತನನ್ನು ಭೇಟಿಯಾಗಲು ಮುಂದೆ ಸಾಗುವುದು ಮತ್ತು ಆತನೊಂದಿಗೆ ವಿವಾಹ ಕಾರ್ಯಕ್ಕೆ ಪ್ರವೇಶಿಸುವುದು ಇವುಗಳು ಈಗಲೂ ಮುಂದುವರೆಯುತ್ತಿವೆ, ಎಲ್ಲಾ ಬುದ್ಧಿವಂತ ಕನ್ಯೆಯರ ಹಣೆಯ ಮೇಲೆ ಅವರನ್ನು ಬಾಬೇಲಿನಿಂದ ಪ್ರತ್ಯೇಕಿಸುವ ಸುಗ್ಗಿಯ ಸತ್ಯದ ತಿಳಿವಳಿಕೆ ಎಂಬ ಮುದ್ರೆ ಹಾಕಿ ಅವರು ಮದಲಿಂಗನೊಡನೆ ಸಿದ್ಧಪಡಿಸಿರುವ ಔತಣಕೂಟವನ್ನು ಪ್ರವೇಶಿಸುವಂತೆ ಮಾಡುವವರೆಗೆ ಇನ್ನೂ ಮುಂದುವರೆಯುವುವು. ನಂತರ ಎಲ್ಲಾ ಕನ್ಯೆಯರನ್ನೂ ಈ ಪ್ರಸ್ತುತ ಸತ್ಯದಿಂದ ಪರೀಕ್ಷಿಸಿದ ನಂತರ, ಅವಕಾಶದ ಬಾಗಿಲನ್ನು ಮುಚ್ಚಲಾಗುವುದು ಮತ್ತು ಬೇರೆ ಯಾರನ್ನೂ ಔತಣ ಪ್ರವೇಶಕ್ಕೆ ಬಿಡಲಾಗುವುದಿಲ್ಲ. “ಯಾರೂ ಮುಚ್ಚಕೂಡದಂತೆ ತೆರೆಯುವವನೂ, ಯಾರೂ ತೆರೆಯದಂತೆ ಮುಚ್ಚುವವನೂ ಆಗಿದ್ದೇನೆ” (ಪ್ರಕಟನೆ 3:7) ಎಂದು ಯಜಮಾನನು ಹೇಳುತ್ತಾನೆ. ಬಾಗಿಲು ಮುಚ್ಚಿದ ನಂತರ, ಬುದ್ಧಿಹೀನ ಕನ್ಯೆಯರು ಬಂದು ಬಾಗಿಲನ್ನು ತಟ್ಟಿ ಒಳಬರುವ ಅವಕಾಶವನ್ನು ಬಯಸಿದರೆ, “ಸ್ವಾಮಿ, ಸ್ವಾಮಿ ನಮಗೆ ತೆರೆಯಿರಿ” ಎಂದರೆ, ಆತನು ಅವರಿಗೆ “ನಿಮ್ಮನ್ನು ನಾನರಿಯನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ” (ಮತ್ತಾಯ25:12) ಎಂದು ಹೇಳುತ್ತಾನೆ. ಆತನ ಬಗ್ಗೆ ಮತ್ತು ಆತನ ಮಾತುಗಳ ಬಗ್ಗೆ ಈಗ ನಾಚಿಕೆಪಡುವವರು, ಮತ್ತು ಆ ಕಾರಣ ಅವುಗಳ ಬಗ್ಗೆ ಉದಾಸೀನರಾಗಿರುವಂಥವರು, ಆತನು ಮಹಿಮೆ ಮತ್ತು ಶಕ್ತಿಯೊಡನೆ ತನ್ನೆಲ್ಲಾ ಪವಿತ್ರ ಮತ್ತು ನಿಷ್ಠಾವಂತ ಸಂದೇಶಕವಾಹಕರೊಡನೆ, ಮತ್ತು ಆತನಿಂದ ಮಹಿಮೆ ಹೊಂದಿ ಉನ್ನತಿ ಪಡೆದಿರುವ ಬುದ್ಧಿವಂತ ಕನ್ಯೆಯರೊಡನೆ ಪುನಃ ಕಾಣಿಸಿಕೊಳ್ಳುವಾಗ ನಾಚಿಕೆಪಡುವರು.

ಮುಚ್ಚಿದ ಬಾಗಿಲಿಗೆ ಈ ಲೋಕದೊಡನೆ ಮಾಡುವುದೇನೂ ಇಲ್ಲವೆಂದು ತಿಳಿದುಕೊಳ್ಳಬೇಕು. ಅದು ಮದುವೆಯ ಔತಣಕ್ಕೆ ಹೋಗುವ ಬಾಗಿಲಾಗಿದೆ. ಅದು ಎಂದೂ ಪ್ರತಿಷ್ಠಿತರಿಗೆ, ಕನ್ಯಾವರ್ಗಕ್ಕೆ ಹೊರತಾಗಿ ಯಾರಿಗೂ ತೆರೆಯಲ್ಪಡುವುದಿಲ್ಲ. ಬೇರೆ ಯಾವ ವರ್ಗದವರಿಗೂ ಅದನ್ನು ಪ್ರವೇಶಿಸುವಂತೆ ಆಹ್ವಾನ ನೀಡಿರುವುದಿಲ್ಲ. ಸುಗ್ಗಿಯ ಸತ್ಯವು ಪರಿಶೀಲಿಸಲ್ಪಟ್ಟು ಎಲ್ಲಾ ಬೆಚ್ಚಗಿನವರನ್ನೂ, ಪ್ರಾಮಾಣಿಕವಾಗಿ ಒಡಂಬಡಿಕೆಯನ್ನು ಕಾಪಾಡಿಕೊಳ್ಳುವವರಿಂದ ತಣ್ಣನೆಯ ಅಥವಾ ಉಗುರು ಬೆಚ್ಚಗಿನ ಸ್ಥಿತಿಯಿಂದ, ಒಡಂಬಡಿಕೆಯನ್ನು ನೆರವೇರಿಸುವುದರಲ್ಲಿ ನಿರ್ಲಕ್ಷ್ಯ ತೋರುವವರಿಂದ ಪ್ರತ್ಯೇಕಿಸಿದ ನಂತರ ಅದನ್ನು ಮುಚ್ಚಲಾಗುವುದು. ದೇವರಿಗೆ ಸ್ತೋತ್ರ!, ಇಲ್ಲಿ ಮುಚ್ಚಲ್ಪಡುವ ಬಾಗಿಲು ಕನಿಕರ ತೋರುವ ಬಾಗಿಲಲ್ಲ, ಎಲ್ಲಾ ಕೃಪೆಯನ್ನು ತೋರುವ ಬಾಗಿಲೂ ಅಲ್ಲ. ಬದಲಿಗೆ ಅದು ಕ್ರಿಸ್ತನೊಂದಿಗೆ ಮದಲಗಿತ್ತಿಯಾಗುವ ಜೊತೆ ಬಾಧ್ಯಸ್ಥಿಕೆಯನ್ನು ನೀಡುವ ಒಂದು ಮಹತ್ವದ ಕೃಪೆಗೆ ತೆರೆಯಲ್ಪಡುವ ಬಾಗಿಲಾಗಿದೆ. ಆದರೆ, ಅದು ಮೂರ್ಖ ಅಥವಾ ಬುದ್ಧಿಹೀನ ಕನ್ಯೆಯರಿಗೆ ಮುಚ್ಚಲ್ಪಡುವಾಗ, ಅವರ ತಟ್ಟುವಿಕೆಗೆ ಎಂದಿಗೂ ತೆರೆಯಲ್ಪಡುವುದಿಲ್ಲ. ಅವರು ಬಾಗಿಲ ಹೊರಗೆ “ಸಂಕಟದ ದಿನ”ದ ಯಾತನೆಗೆ ಒಳಗಾಗುತ್ತಾರೆ. ಆಗ ಕಣ್ಣೀರು ಮತ್ತು ಕಟಕಟನೆ ಹಲ್ಲು ಕಡಿಯೋಣವು ಇರುವುವು (ಅವರು ಹೊರಗಡೆ ನಿಂತಿದ್ದರೂ, ಕಠಿಣ ದಿವಸದ ಮಹಾಸಂಕಟಕ್ಕೆ ಈಡಾಗಿದ್ದರೂ). ಆದರೂ ಅವರನ್ನು ಕರ್ತನ ಪ್ರೀತಿಯ, ಕರುಣೆಯ ತೋಳುಗಳಲ್ಲಿ, ಆತನ ಅನುಗ್ರಹ ಮತ್ತು ವಿಶೇಷ ಪಾಲನೆಯಲ್ಲಿ ಇರಿಸುತ್ತದೆ. ಅವರು ಸಾಗಲಿರುವ ಮಹಾಯಾತನೆಗಳು ಅವರನ್ನು ಶುದ್ಧೀಕರಿಸುವಂತೆ, ಆಗ ಪಶ್ಚಾತ್ತಾಪಪಡುವ ಕನ್ಯೆಯರ ಮನಸ್ಸನ್ನು ಬೇಧಿಸುವಂತೆ ವಿನ್ಯಾಸಗೊಂಡಿರುತ್ತವೆ. ಆ ಮೂಲಕ ಒಡೆಯನ ಉತ್ತಮ ಬಳಕೆಗೆ ಯೋಗ್ಯರಾಗುತ್ತಾರೆ. ಆದರೆ ಮೂಲದಲ್ಲಿ ಕರೆಯಲ್ಪಟ್ಟಿದ್ದ ಮಹಾಗೌರವಕ್ಕೆ ಅವರು ಅರ್ಹರಲ್ಲ. ಬಾಬೇಲಿನ ಉತ್ಸಾಹದಲ್ಲಿ ಸ್ವಲ್ಪಮಟ್ಟಿಗೆ ಭಾಗವಹಿಸಿ, ಆಕೆಗೆ ತಮ್ಮ ಪ್ರಭಾವದ ಸ್ವಲ್ಪ ಮಟ್ಟಿಗೆ ಪ್ರಾಮುಖ್ಯತೆ ಕೊಟ್ಟರೂ, ಅದು ಎಷ್ಟೇ ಕಡಿಮೆಯಾಗಿದ್ದರೂ ದೇವರ ಲೆಕ್ಕದಲ್ಲಿ ಅವರು ಆಕೆಯ (ಬಾಬೇಲಿನ) ಪಾಪದಲ್ಲಿ ಪಾಲುದಾರರೆಂದು ಕಂಡು ಬಂದು ಆಕೆಯ ಮೇಲೆ ಬರುವ ಉಪದ್ರವಗಳಿಂದ ತಪ್ಪಿಸಿಕೊಳ್ಳಲು ಅರ್ಹರಾಗುವುದಿಲ್ಲ. ಈ ಉಪದ್ರವಗಳು ಬಾಬೇಲಿನ ನಾಶನಕ್ಕೆ ಮಾತ್ರವೇ ಅಗತ್ಯವಾಗಿರುವುದು ಮಾತ್ರವಲ್ಲ, ಆದರೆ ಇದುವರೆಗೆ ಆಕೆಯಲ್ಲಿರುವ ಮಾಗದ (ಪಕ್ವವಾಗದ) ಗೋಧಿಯನ್ನು ಶುದ್ಧೀಕರಿಸಿ, ಪ್ರತ್ಯೇಕಿಸಲೂ ಅಗತ್ಯವಾಗಿದೆ. ಮೂರ್ಖ ಕನ್ಯೆಯರು ಸಾಕಷ್ಟು ಮಟ್ಟಿಗೆ ಮತ್ತರಾಗಿದ್ದು ಬಾಬೇಲಿನ ದ್ರಾಕ್ಷಾರಸದೊಂದಿಗೆ ಸೋತು ಹೋಗಿದ್ದಾರೆ.

ಕರ್ತನೊಂದಿಗೆ ವಿವಾಹಕ್ಕೆ ಒಳಹೋಗುವುದನ್ನು ಯೆಹೂದ್ಯ ಮದುವಣಗಿತ್ತಿಯು ಆಕೆಯ ಗಂಡನ ಮನೆಗೆ ಹೋಗುವಾಗ ಪಹರೆ ಮಾಡುವ ಸಂಗೀತ ಮತ್ತು ಬೆಳಗುವ ದೀಪಗಳುಳ್ಳ ಸಂತೋಷದ ಎಲ್ಲಾ ನಿರೂಪಣೆಗಳುಳ್ಳ ಸುಂದರವಾದ ಮೆರವಣಿಗೆಯಲ್ಲಿ

ದೃಷ್ಟಾಂತಗೊಳಿಸಲಾಗಿದೆ. ಈ ರೀತಿಯಲ್ಲಿ ಆಕೆಯು ತನ್ನ ಕರ್ತನ ಸಂತೋಷಕ್ಕೆ ಮತ್ತು ಆತನು ಒದಗಿಸುವ ಔತಣಕೂಟಕ್ಕೆ ಪ್ರವೇಶಿಸುತ್ತಾಳೆ. ಅದೇ ರೀತಿಯಲ್ಲಿ ಬುದ್ಧಿವಂತ ಕನ್ಯೆಯರು ಈಗ ಪ್ರವೇಶಿಸುತ್ತಿದ್ದಾರೆ. ಅವರು ಮದಲಿಂಗನ ಪ್ರತ್ಯಕ್ಷತೆಯ ಬಗ್ಗೆ ಕೇಳಿಸಿಕೊಳ್ಳುವಾಗ ಆನಂದವು ಪ್ರಾರಂಭಗೊಳ್ಳುತ್ತದೆ. ಅವರು ಆತನ ಸಹವಾಸಕ್ಕಾಗಿ, ಮತ್ತು ಸಿದ್ಧಪಡಿಸಿರುವ ಔತಣಕ್ಕಾಗಿ ಉಳಿದೆಲ್ಲವನ್ನೂ ಸಂತೋಷದಿಂದ ಬಿಟ್ಟುಬಿಡುತ್ತಾರೆ. ಈಗಾಗಲೇ ನಂಬಿಕೆಯಿಂದ ಅವರು ಬರಲಿರುವ ಔತಣದಲ್ಲಿ ಸಂತೋಷಿಸುತ್ತಿದ್ದಾರೆ. ಯಾಕೆಂದರೆ ಪ್ರಸ್ತುತದಲ್ಲಿ ಮದಲಿಂಗನು ಅವರಿಗೆ ಆತನು ಆಯ್ದುಕೊಂಡ ಮದಲಗಿತ್ತಿಗೆ ಮೀಸಲಾದ ಹೆಚ್ಚಾದ ಮತ್ತು ಅಮೂಲ್ಯವಾದ ಸಂಗತಿಗಳ ಬಗ್ಗೆ ಅವರಿಗೆ ತಿಳಿಸುವವನಾಗಿದ್ದಾನೆ ಮತ್ತು ಅವರಿಗೆ ಆತನ ಆಶೀರ್ವಾದದ ಮಹಾಕಾರ್ಯವನ್ನು ಮತ್ತು ಲೋಕವನ್ನು ಪುನರ್‌ಸ್ಥಾಪನೆ ಮಾಡುವ ಬಗ್ಗೆ ಅವರಿಗೆ ಬಹಿರಂಗಪಡಿಸುತ್ತಾನೆ. ಅದರಲ್ಲಿ ಮದಲಗಿತ್ತಿಯು ಪಾಲು ಪಡೆಯುವುದು ಸೌಭಾಗ್ಯವಾಗಿದೆ. ನಿಶ್ಚಯವಾಗಿ, ನಾವು ಸತ್ಕಾರದ ಆವರಣವನ್ನು ಪ್ರವೇಶಿಸುವಾಗ ಮತ್ತು ರಾಜ್ಯದ ಅನುಗ್ರಹಗಳ ಲಕ್ಷ್ಮಣಗಳನ್ನು ನೋಡುವಾಗ, ನಾವು ಈಗಾಗಲೇ ಕರ್ತನ ಸಂತೋಷವನ್ನು ಪ್ರವೇಶಿಸಿದವರಾಗಿದ್ದೇವೆ. ಬರಲಿರುವ ಒಳ್ಳೆಯ ಸಂಗತಿಗಳನ್ನು ನಾವು ಆಗಲೇ ಮುಂದಾಗಿ ಸವಿದಿದ್ದೇವೆ, ಈಗಾಗಲೇ ನಾವು ಆತನ ಅತಿ ಶ್ರೀಮಂತವಾದ ಕೃಪಾ ಔದಾರ್ಯಗಳಲ್ಲಿ ಮಾನಸಿಕವಾಗಿ ಔತಣದಲ್ಲಿ ಭಾಗಿಯಾಗಿದ್ದೇವೆ. ನಂಬಿಕೆಯಲ್ಲಿ ಈಗಾಗಲೇ ನಮ್ಮ ಕರ್ತನ ಮೇಜಿನಲ್ಲಿ ಕುಳಿತಿರುತ್ತೇವೆ. ಆತನು ತಾನೇ ಆತನ ವಾಗ್ದಾನಕ್ಕನುಸಾರವಾಗಿ ಮುಂದೆ ಬಂದು ನಮಗೆ ಬಡಿಸುವವನಾಗಿದ್ದಾನೆ (ಲೂಕ 12:37).

ಅಮೂಲ್ಯವಾದ ನಂಬಿಕೆಯ ಮೇಲಿನ ಈ ಔತಣದ ಸತ್ಯವು 1335 ದಿನಗಳ ಅಂತ್ಯದಲ್ಲಿ, 1874ರಲ್ಲಿ ಪ್ರಾರಂಭಗೊಂಡ ಸುಗ್ಗಿಯಲ್ಲಿ ಬಹಿರಂಗವಾಯಿತು (ದಾನಿಯೇಲ 12:12), ಸುಗ್ಗಿಯ ಆರಂಭದಲ್ಲಿ ಪ್ರವಾದಿಯ ಆಶೀರ್ವಾದಕರ ಮುಂತಿಳಿಸುವಿಕೆಯು ಹೀಗೆ ಹೇಳುತ್ತದೆ "ಹೋ! ಪ್ರವಾದಿಯ ಮೂಲಕ ಮುಂತಿಳಿಸಿರುವ ಆತನ ಆಶೀರ್ವಾದವು" ಅಂದರೆ "ಕಾದುಕೊಂಡು ಸಾವಿರದ ಮುನ್ನೂರ ಮೂವತ್ತೈದು ದಿನಗಳ ಕೊನೆಯ ಮಟ್ಟಿಗೆ ತಾಳಿರುವವನು ಧನ್ಯನು".

## ವಿವಾಹ ಉಡುಪಿನ ಪರೀಕ್ಷೆ
## The Wedding Garment Test

ನಮ್ಮ ಕರ್ತನ ಮತ್ತೊಂದು ಸಾಮ್ಯವು (ಮತ್ತಾಯ 22:1–14) ಪವಿತ್ರಾಲಯ ವರ್ಗದವರ ಮುಂದಿನ ಪರೀಕ್ಷೆಯನ್ನು ತೋರಿಸುತ್ತದೆ. ಇದು ಸುಗ್ಗಿಯ ಸಂದೇಶವನ್ನು ಕೇಳಿ ಗ್ರಹಿಸಿಕೊಂಡವರ ಮಧ್ಯೆಯೂ ಇರುವ ಪರೀಕ್ಷೆ ಮತ್ತು ಬೇರ್ಪಡಿಸುವಿಕೆ ಯಾಗಿದೆ. ಒಂದು ಸಾಮ್ಯದ ಮದಲಿಂಗನೊಡನೆ ವಿವಾಹವನ್ನು ಪ್ರವೇಶಿಸುವ "ಬುದ್ದಿವಂತ ಕನ್ಯೆಯರು" ಮತ್ತು ಈ ಸಾಮ್ಯದ ಅತಿಥಿಗಳು ಇಬ್ಬರೂ ಒಂದೇ ಪ್ರತಿಷ್ಟೆಗೊಂಡ ವರ್ಗದವರು. ಅವರು ಇದುವರೆಗೆ ತಮ್ಮನ್ನು ನಂಬಿಗಸ್ತರೂ, ವಿಧೇಯರೂ ಎಂದು ತೋರಿಸಿ ಕೊಂಡಿದ್ದಾರೆ. ವಾಸ್ತವವಾಗಿ, ಈ ವರ್ಗವು ಅನೇಕ ವಿವಿಧ ಸಂಖ್ಯೆಗಳಿಂದ ಪ್ರತಿನಿಧಿತವಾಗಿದೆ. ಇದರಲ್ಲಿ ಪ್ರತಿಯೊಂದೂ ಒಂದು ಚಿತ್ರಣವನ್ನು, ಮತ್ತು ತನ್ನ ಸ್ವಂತ ವಿಶಿಷ್ಟ ಬಲವನ್ನು ಹೊಂದಿದೆ. ಅವರು ಬುದ್ಧಿವಂತ ಕನ್ಯೆಯರಾಗಿ, ತಮ್ಮ ಕರ್ತನು ವಿವಾಹದಿಂದ ಹಿಂದಿರುಗುವುದನ್ನು ಕಾಯುತ್ತಿರುವ ಸೇವಕರುಗಳಾಗಿ, ಮದುವೆಯಲ್ಲಿನ ಅತಿಥಿಗಳಾಗಿ ಮತ್ತು ಮದಲಗಿತ್ತಿಯಾಗಿ ಪ್ರತಿನಿಧಿಸಲ್ಪಟ್ಟಿದ್ದಾರೆ. ಅವರು ಕ್ರಿಸ್ತನ ದೇಹವಾಗಿದ್ದಾರೆ, ಕ್ರಿಸ್ತನ ಪ್ರತೀಕ್ಷೆಯುಳ್ಳ ಮದಲಗಿತ್ತಿಯಾಗಿದ್ದಾರೆ, ಅವರ ನಾಯಕನಾದ ಕ್ರಿಸ್ತನ ಕೈಕೆಳಗಿನ ಸೈನಿಕರು, ದ್ರಾಕ್ಷೆ ಬಳ್ಳಿಯಾದ ಕ್ರಿಸ್ತನ ಕೊಂಬೆಗಳು, ಕ್ರಿಸ್ತನಲ್ಲಿ ಒಲೀವ್ ಮರದ ಕೊಂಬೆಗಳು, ಕ್ರಿಸ್ತನು ಮುಖ್ಯವಾದ ಮೂಲೆಗಲ್ಲಾಗಿರುವ ದೇವಾಲಯದ ಜೀವಂತ ಕಲ್ಲುಗಳೂ ಆಗಿದ್ದಾರೆ. ಕ್ರಿಸ್ತನು ಅವರ ಗುರುವಾಗಿದ್ದು ಆತನ ಕೈಕೆಳಗಿನ ಶಿಷ್ಯರಾಗಿದ್ದಾರೆ, ಕುರಿಗಳಾದ ಇವರ ಮೇಲೆ ಕ್ರಿಸ್ತನು ಕುರುಬನಾಗಿದ್ದಾನೆ ಮುಂತಾಗಿ ಹೇಳಬಹುದು. ಈ ಚಿತ್ರಣಗಳನ್ನು ಪರಿಗಣಿಸುವಾಗ ಅವುಗಳು ಭಿನ್ನವಾದ, ಪ್ರತ್ಯೇಕವಾದ ದೃಷ್ಟಾಂತಗಳು, ಒಂದರಿಂದ ಮತ್ತೊಂದು ಬೇರೆಯಾದುದು. ಆದರೆ ಒಟ್ಟಾಗಿ ಪ್ರತಿಯೊಂದರಿಂದ ಅದು ವಿನ್ಯಾಸಗೊಂಡು ತಿಳಿಸಿಕೊಡಬಯಸುವ ಪಾಠಗಳು ಏನೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಾವು ಈ ದೃಷ್ಟಾಂತಗಳನ್ನು ಮಿಶ್ರಣ ಮಾಡಲು ಸಾಹಸ ಮಾಡುವವರಾದರೆ, ಮತ್ತು ಹೇಗೆ ದೇವಾಲಯದ ಒಂದು ಕಲ್ಲು, ದ್ರಾಕ್ಷೆಯ ಕೊಂಬೆಯಾಗಬಹುದು. ಹೇಗೆ ಕುರಿಗಳು ಸೈನಿಕರಾಗಬಹುದು ಮತ್ತು ಮದುವೆಯಲ್ಲಿನ ಅತಿಥಿಗಳು ಸೇವಕರಾಗಬಹುದು ಅಥವಾ ಮದಲಗಿತ್ತಿಯಾಗಬಹುದು ಎಂದು ಗ್ರಹಿಸುವುದರಲ್ಲಿ ನಾವು ಸೋತು ಹೋಗುತ್ತೇವೆ. ನಿಜವಾಗಿಯೂ, ನಾವು

ಕುರಿಮರಿಯ ಮದುವೆಯ ರಾತ್ರಿ ಭೋಜನದಲ್ಲಿ ಅತಿಥಿಗಳಾಗಿ ಕರೆಯಲ್ಪಟ್ಟವರೂ ಅಲ್ಲ ಅಥವಾ ಮದುವೆಯಿಂದ ಹಿಂತಿರುಗುವ ಆತನ ಸೇವಕರಾಗುವಂತೆ ಕರೆಯಲ್ಪಟ್ಟವರೂ ಅಲ್ಲ. ಆದರೆ ನಾವು ಮದಲಗಿತ್ತಿಯಾಗುವಂತೆ ಕರೆಯಲ್ಪಟ್ಟವರು ಸ್ವಲ್ಪ ಅಂಶಗಳಲ್ಲಿ ನಾವು ಸೇವಕರುಗಳಂತೆಯೂ ಮತ್ತು ಈ ಅತಿಥಿಗಳಂತೆಯೂ – ನಮ್ಮ ಎಚ್ಚರಿಕೆ ಮತ್ತು ಜಾಗರೂಕತೆಗಳಲ್ಲಿ ನಂಬಿಗಸ್ಥ ಸೇವಕರಂತೆಯೂ, ಬೇರೊಂದು ವಿಧದಲ್ಲಿ ಅತಿಥಿಗಳಂತೆಯೂ ಇರಬೇಕಾಗುತ್ತದೆ.

ಈ ಸಾಮ್ಯವು ತೋರಿಸುವುದೇನೆಂದರೆ ಮದಲಗಿತ್ತಿಯ ಚಿತ್ರಣದಲ್ಲಿ ಯಾವುದು ಆಯ್ಕೆಯಾದ ಸಭೆಯನ್ನು ಒಟ್ಟಾಗಿ ಕ್ರಿಸ್ತನ ಜೊತೆ ಬಾಧ್ಯಸ್ಥರನ್ನಾಗಿ ಪ್ರತಿನಿಧಿಸುವದನ್ನು ದೃಷ್ಟಾಂತಪಡಿಸಲಾಗುವುದಿಲ್ಲವೋ ಅದನ್ನು ತೋರಿಸುವ ಕಾರ್ಯವನ್ನು ಮಾಡುವುದಾಗಿದೆ. ಇದು ಸಿದ್ಧಪಡುವಿಕೆಗೆ ಅಗತ್ಯವನ್ನು ಮಾತ್ರವಲ್ಲದೆ ಕೆಲವರನ್ನು ತಿರಸ್ಕರಿಸಿ, ಮತ್ತೆ ಕೆಲವರನ್ನು ಆಯ್ದುಕೊಳುವ ಪ್ರತಿಯೊಬ್ಬ ವ್ಯಕ್ತಿಯ ತನಿಖೆಯ ಎರಡೂ ಗುಣಲಕ್ಷಣಗಳನ್ನು ತೋರಿಸುತ್ತದೆ. ಈ ರೀತಿಯಲ್ಲಿ ತನಿಖೆಗೊಳಗಾದವರು ಈಗಾಗಲೇ ಅತಿಥಿಯನ್ನು ಕೊಠಡಿಯಲ್ಲಿ ಪ್ರತಿನಿಧಿಸುತ್ತಾರೆ. ಹಣಜಿಗಳಿಂದ ಆಯ್ದುಕೊಂಡು ಶೇಖರಿಸಿದ ಅವರುಗಳು ಮಾಗಿದ ಗೋಧಿಗಳು, ಮೂರ್ಖ ಕನ್ಯೆಯರಿಂದ ಪ್ರತ್ಯೇಕಗೊಂಡ ಬುದ್ಧಿವಂತ ಕನ್ಯೆಯರಂತೆಯೂ ಇದ್ದಾರೆ. ಅವರು ಸುಗ್ಗಿಯ ಸತ್ಯವನ್ನು ಕೇಳಿಸಿಕೊಂಡಿದ್ದಾರೆ ಮತ್ತು ಅಂಗೀಕರಿಸಿದ್ದಾರೆ. ಮತ್ತು ಕರ್ತನೊಂದಿಗೆ ಅವರ ಪೂರ್ಣ ಅನ್ಯೋನ್ಯತೆಯಲ್ಲಿ ದೊರೆಯುವ ಮಹಿಮೆಯ ಪೂರ್ಣ ನಿರೀಕ್ಷೆಯ ನಂಬಿಕೆಯಲ್ಲಿ ಆನಂದಿಸುವವರಾಗಿದ್ದಾರೆ. ಇದುವರೆಗೆ ಅವರೆಲ್ಲರೂ ಚೆನ್ನಾಗಿ ಓಡಿದ್ದಾರೆ, ಆದರೆ ಅವರು ಅಂತಿಮ ಗುರಿಯನ್ನು ಮುಟ್ಟುವವರೆಗೆ "ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ" (1 ಕೊರಿಂಥ 10;12).

ಮದುವೆಯ ಅಂಗೀಕಾರದ ಸಿದ್ಧತೆಯ ಸ್ಥಿತಿಗಳು ಈ ಸಾಮ್ಯದಲ್ಲಿ ವಿವಾಹದ ಉಡುಪಿನ ಚಿತ್ರಣದಲ್ಲಿ ಸಾಂಕೇತಿಕಗೊಂಡಿವೆ. ಯೆಹೂದ್ಯ ವಿವಾಹಗಳಲ್ಲಿ ಆತಿಥ್ಯ ಮಾಡುವವನು ಸಮಾರಂಭದ ಉಡುಪುಗಳನ್ನು ಅಂದರೆ, ಶ್ವೇತವರ್ಣದ ನಾರುಮಡಿಯನ್ನು ಎಲ್ಲಾ ಅತಿಥಿಗಳಿಗೆ ಒದಗಿಸುವುದು ಸಂಪ್ರದಾಯವಾಗಿತ್ತು; ಯಾವುದೇ ಅತಿಥಿಯು ಮದುವೆಯ ಉಡುಪನ್ನು ನಿರಾಕರಿಸುವುದು ಒಂದು ನಾಚಿಕೆಗೇಡಿನ ಅನೌಚಿತ್ಯವೆಂದು, ಗರ್ವದ ಸೂಚನೆಯಾಗಿ ಮತ್ತು ಆತನನ್ನು ಉಪಚರಿಸುವವನ ಅವಮಾನದ ಅರ್ಥವೆಂದು ಪರಿಗಣಿಸಲ್ಪಡುತ್ತಿತ್ತು.

ವಿವಾಹದ ಉಡುಪು ಒಂದು ಸಂಕೇತವಾಗಿ ನಮ್ಮ ಯಜಮಾನನಾದ ಯೆಹೋವನಿಂದ ಒದಗಿಸಿರುವ ಕ್ರಿಸ್ತನ ನೀತಿವಂತಿಕೆಯನ್ನು ಆತನನ್ನು ನಂಬುವ ಎಲ್ಲರಿಗೆ ಸ್ಪಷ್ಟವಾಗಿ ದೃಷ್ಟಾಂತಗೊಳಿಸುತ್ತದೆ (ರೋಮಾ. 8:30–34). ಇದಲ್ಲದೆ ಯಾರಿಗೂ ಕುರಿಮರಿಯ ವಿವಾಹಕ್ಕೆ ಪ್ರವೇಶ ದೊರೆಯಲಾಗದು. ಅಹ್ವಾನ ಮತ್ತು ವಿವಾಹದ ನಿಲುವಂಗಿ ಇವೆರಡೂ ಅವಶ್ಯವಾಗಿವೆ. ಮದಲಗಿತ್ತಿಯು ತನ್ನನ್ನು ಅಂತಿಮವಾಗಿ ಸಿದ್ಧತೆ ಮಾಡಿಕೊಳ್ಳುವ (ಪ್ರಕಟನೆ 19:7) ವಿಶೇಷ ಸಿದ್ಧತೆಯ ಮೊಗಸಾಲೆಗೆ ಹೋಗಲೂ ಸಹ – ಪ್ರಸ್ತುತ ಸತ್ಯದ ಬೆಳಕಿಗೆ ಆ ರೀತಿಯ ಪೋಷಾಕು ಧರಿಸಿದವರಿಗೆ ಮಾತ್ರವೇ ಅನುಮತಿ ದೊರೆಯುವುದೆಂದು ಈ ಸಾಮ್ಯವು ತೋರಿಸಿಕೊಡುತ್ತದೆ. ನಿಲುವಂಗಿ ಮತ್ತು ಆಹ್ವಾನವು ಸ್ವೀಕರಿಸಿ ಒಪ್ಪಿಗೆಯಾದ ಮೇಲೆ, ಅತಿಥಿಗಳು ಮದುವೆ ಔತಣಕ್ಕೆ (ಸುಗ್ಗಿಯ ಸಮಯಕ್ಕೆ) ಮುಂಚೆ ಸ್ವಲ್ಪ ಸಮಯವನ್ನು ಅವರ ನಿಲುವಂಗಿಗಳನ್ನು ಸರಿಪಡಿಸಿಕೊಳ್ಳಲು, ತಮಗೂ ಮತ್ತು ಪ್ರತಿಯೊಬ್ಬರಿಗೂ ಸಿದ್ಧತೆಯ ಅಂತ್ಯದಲ್ಲಿ ಒಪ್ಪಮಾಡಿಕೊಳ್ಳುವಂತೆ (finishing touches) ವಿನಿಯೋಗಿಸುತ್ತಾರೆ. ಹೀಗೆ ಅವರು ನಿರತರಾಗಿರುವಾಗ ಅವರುಗಳು ಆಗಲೇ ನಂಬಿಕೆಯ ಮೂಲಕ, ತಮ್ಮ ಮುಂದಿರುವ ಪ್ರತೀಕ್ಷೆಯ ಮೂಲಕ ಔತಣಕೂಟದಲ್ಲಿ ಪಾಲುದಾರರಾಗಿದ್ದಾರೆ. ಮದಲಿಂಗನ, ಭವ್ಯವಾದ ಮುಂದಣ ಕಾರ್ಯವು, ವೈಭವಯುತ ಭಾಧ್ಯತೆಯು ಮತ್ತು ಸಿದ್ಧತೆಯ ಪ್ರಸ್ತುತ ಕಾರ್ಯ ಇವುಗಳೆಲ್ಲವೂ ಅವರ ಆಲೋಚನೆಗಳ ಮತ್ತು ಸಂಭಾಷಣೆಗಳ ನಿರಂತರವಾದ ವಸ್ತು ವಿಷಯಗಳಾಗಿವೆ.

ಈ ಮೊಗಸಾಲೆಯು (ಈ ಅನುಕೂಲಕರ ಸಮಯ ಮತ್ತು ಸ್ಥಿತಿಯಲ್ಲಿ), ಈಗ ಯುಕ್ತವಾದ ದೈವಿಕ ಸತ್ಯದ ಸ್ಪಷ್ಟವಾದ ತೆರೆಯುವಿಕೆಯೊಂದಿಗೆ ಪ್ರಕಾಶಗೊಂಡಿದ್ದು ವಿವಾಹ ಔತಣದ ಸಂಪೂರ್ಣ ಸಿದ್ಧತೆಗಾಗಿ ಅಂತಿಮ ಅಲಂಕಾರಕ್ಕೆ ಅನುಕೂಲ ಮತ್ತು ಸ್ಫೂರ್ತಿ ಇವುಗಳೆರಡೂ ದಯಪಾಲಿಸಲಾಗುವುದು, ಆದರೆ, ಪರಂತು ಈ ವಿಶೇಷ ಅನುಕೂಲಕರ ಪರಿಸ್ಥಿತಿಯಲ್ಲಿಯೂ ಕೆಲವರು ಇಲ್ಲಿ 'ಒಬ್ಬರಿಂದ' ಪ್ರತಿನಿಧಿಸಲ್ಪಟ್ಟಿದ್ದು ಅತಿಥೇಯನನ್ನು, ಜಯಮಾನನನ್ನು, ಅರಸನನ್ನು ಆತನ ವಿವಾಹದ ಉಡುಪನ್ನು ಕಳಚುವುದರ

ಮೂಲಕ ಉಪೇಕ್ಷಿಸಿ ಆತನನ್ನು ಅವಮಾನ ಗೊಳಿಸುವುದು ಎಂದು ಈ ಸಾಮ್ಯವು ನಮಗೆ ತೋರಿಸುತ್ತದೆ.

ಹಾಗಾದರೆ, ಈ ಸಾಮ್ಯದಲ್ಲಿ ತಪ್ಪು ತಿಳಿಯಲಾಗದ ಬೋಧನೆಯೆಂದರೆ, ಇದುವರೆಗೆ ಸಿದ್ಧರೂ ಮತ್ತು ಅರ್ಹರೂ ಎಂದು ಕಂಡುಬಂದಿದ್ದ ಆ 'ಬುದ್ಧಿವಂತ ಕನ್ಯೆ'ಯರು ಆದುದರಿಂದ ಅವರನ್ನು ಹೆಚ್ಚಾದ ಸುಗ್ಗಿಯ ಬೆಳಕಿಗೆ ಮಾರ್ಗತೋರಿದ ನಂತರ ಅವರಿಗೆ ಅಂತಿಮ ಸಾಮಾನ್ಯ ಪರೀಕ್ಷೆಯು ಅವರ ಮೆಚ್ಚುಗೆಯ ವಾಸ್ತವಿಕತೆಯ ಪರೀಕ್ಷೆಯಾಗಿದೆ. ಇದನ್ನು ಹಲವಾರು ಸಲ ಪರಿಶುದ್ಧ ಗ್ರಂಥದಲ್ಲಿ ಪರೀಕ್ಷಿಸಲಾಗಿದೆ. ಅವರು ತಮ್ಮ ಸ್ವಂತ ಅರ್ಹತೆಯ ಮಾತ್ರದಿಂದಲೇ ಔತಣಕ್ಕೆ ಸ್ವೀಕಾರಗೊಂಡಿಲ್ಲ, ಆದರೆ ಮೊದಲನೆಯದಾಗಿ ಅವರ ನಗ್ನತೆ ಮತ್ತು ಹಲವು ಅಪರಿಪೂರ್ಣತೆಯ ಸಂಗತಿಗಳು ಅವರಿಗೆ ತನ್ನನ್ನು ಈಡುಬಲಿಯಾಗಿ ನೀಡಿದಾತನಿಂದ ಮುಚ್ಚಲ್ಪಟ್ಟಿದೆ ಮತ್ತು ಆತನು ಮೇಲೆ ಹೊದಿಸಿರುವ ನೀತಿವಂತಿಕೆಯ ಒಂದು ನಿಲುವಂಗಿಯು ಅರಸನ ಮುಂದೆ ಅರ್ಪಿಸತಕ್ಕದ್ದಾಗಿಯೂ, ಸ್ವೀಕಾರಾರ್ಹವೂ ಆಗಿದೆ. ಎಲ್ಲರೂ ಆ ನಿಲುವಂಗಿಯನ್ನು ಧರಿಸಿಕೊಳ್ಳಲೇ ಬೇಕು. ಪ್ರತಿಯೊಬ್ಬರೂ ತಮ್ಮ ಸತ್ಕಾರ್ಯಗಳಿಂದ ಅದಕ್ಕೆ ಒಳ್ಳೆಯ ಕಸೂತಿ ಹಾಕಿಕೊಳ್ಳಬಹುದು.

ಈ ಮಹಾ, ಪ್ರಧಾನ, ಅಂತಿಮ ಪರೀಕ್ಷೆಯು ಎಷ್ಟೋ ಗಮನಾರ್ಹವೂ, ಮಹತ್ವವುಳ್ಳದ್ದೂ ಆಗಿರಬೇಕಲ್ಲವೆ? ತಮಗೆ ಸ್ವಂತವಾಗಿ ಏನೂ ಇಲ್ಲದಿರುವಿಕೆಯನ್ನು ನಿರ್ಧರಿಸಿದವರ ಮತ್ತು ಮಹಾ ಮದಲಿಂಗನು ತಮ್ಮ ವಿಮೋಚಕನು, ಮಾತ್ರವಲ್ಲದೆ ತಮ್ಮ ಕರ್ತನು ಮತ್ತು ಬೋಧಕನು ಎಂದು ಒಪ್ಪಿಕೊಂಡಿರುವವರನ್ನು ಹೊರತುಪಡಿಸಿ ಬೇರೆ ಯಾರೂ ಮದಲಗಿತ್ತಿ ಕೂಟವಾಗಬಾರದು ಎಂದು ಪರಲೋಕದ ತಂದೆಯು ಸ್ಪಷ್ಟವಾಗಿ ನಿರ್ಧರಿಸಿದ್ದಾನೆ.

ಇದುವರೆಗೆ ಪಥದಲ್ಲಿ ಚೆನ್ನಾಗಿ ಓಡಿದವರು ಅವರ ನಿರೀಕ್ಷೆಯ ಫಲವು ಹತ್ತಿರದಲ್ಲಿರುವಾಗ ಬಿದ್ದು ಹೋಗುವುದು ವಿಚಿತ್ರವೆನಿಸಬಹುದು. ಆದಾಗ್ಯೂ, ಅಂಥಾಃ ಸಾಧ್ಯತೆಯ ಬಗ್ಗೆ ಎಚ್ಚರಿಕೆ ಕೊಡುತ್ತಾ, ಅದು ಎಲ್ಲಾ ಪ್ರತಿಷ್ಠೆಗೊಂಡವರೂ ಎಚ್ಚರವಾಗಿರುವುದು ಮತ್ತು ಪ್ರಾರ್ಥಿಸುವುದು ಅಗತ್ಯವಾಗಿದೆ. ಇಲ್ಲವಾದಲ್ಲಿ ಅವರು ಪ್ರಲೋಭನೆಗೆ ಒಳಗಾಗುತ್ತಾರೆ. ಯಾಕೆಂದರೆ, ಈ ಕಡೆಯ ದಿನಗಳಲ್ಲಿ ಅಪೋಸ್ತಲರಿಂದ ಮುಂತಿಳಿಸಿರುವ ಗಂಡಾಂತರ ಸಮಯವು ಬರಲಿದೆ (1 ತಿಮೋ. 4:1; 2 ತಿಮೋ. 3:1; 4:3–5). ಮತ್ತು ದೈವಿಕಕೃಪೆಯು ಸರ್ವವ್ಯಾಪಿಯ ತೋಳುಗಳ ಮೇಲೆ ಭರವಸೆಯಿಂದ ಆತು ಕೊಂಡಿರುವವರಿಗೆ ಸಂರಕ್ಷಣೆ ಮಾಡದಿರುವಷ್ಟು ಸಮಯವು ಇನ್ನೂ ಅಷ್ಟೊಂದು ಆಪತ್ಕಾರಕವಾಗಿಲ್ಲ. ನಿಜವಾಗಿಯೂ, ಯಾರು ತ್ಯಾಗದ ಇಕ್ಕಟ್ಟಾದ ಹಾದಿಯನ್ನು ಕಾಪಾಡಿಕೊಳ್ಳುತ್ತಾರೋ ಈ ಹಿಂದೆ ಇಷ್ಟೊಂದು ಒಳ್ಳೇ ರೀತಿಯಲ್ಲಿ ಸಂರಕ್ಷಿಸಲ್ಪಟ್ಟಿದ್ದಿಲ್ಲ ಅಥವಾ ದೇವರ ರಕ್ಷಾಕವಚದಲ್ಲಿ ಪೂರ್ಣವಾಗಿ ಸಜ್ಜುಗೊಳಿಸಲ್ಪಟ್ಟಿರಲಿಲ್ಲ. ದೇವರ ಕೃಪಾಪೂರ್ಣ ಯೋಜನೆಗಳು ಬಹುಸ್ಪಷ್ಟವಾಗಿ ಪ್ರಕಟಗೊಂಡು (ಸಹಸ್ರಮಾನದ ಕಾಲದಲ್ಲಿ ಸತ್ಯಸಭೆಯನ್ನು ಭೂಮಿಯ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸಲು ಉಪಯೋಗಿಸುವುದಕ್ಕಾಗಿ) ವಿನಯಕ್ಕೆ ನಡೆಸುವ ಬದಲು ಅದ್ಭುತವಾದ ಈಡುಬಲಿಯುನ್ನು ಹೆಚ್ಚಾಗಿ ಮೆಚ್ಚಿಕೊಳ್ಳುವುದು, ಅದರ ಮೂಲಕ ಮರಣ ದಂಡನೆಯಿಂದ ಬಿಡುಗಡೆ ಸಾಧಿಸಲಾಗುತ್ತದೆ ಮತ್ತು ಮತ್ತು ದೈವಿಕ ಸ್ವಭಾವಕ್ಕೆ ಹಾಗೂ ಕ್ರಿಸ್ತನೊಂದಿಗಿನ ಸಹಭಾಗತ್ವಕ್ಕೆ ನಮ್ಮ ಕರೆಯನ್ನು ಭದ್ರಪಡಿಸುವುದು ಎಂಬ ಇವುಗಳು ಕೆಲವರ ಮೇಲೆ ವಿರೋಧ ಪರಿಣಾಮವನ್ನುಂಟು ಮಾಡುವಂತೆ ತೋರುತ್ತದೆ. ಅಂಥವರು ತಮ್ಮಲ್ಲಿರುವ ವ್ಯಕ್ತಿಗತವಾದ ಅನರ್ಹತೆಯನ್ನು ಕಾಣುವುದಿಲ್ಲ, ಮಾತ್ರವಲ್ಲದೆ ಕರ್ತನ ನಿಷ್ಕಳಂಕವಾದ ಪರಿಪೂರ್ಣತೆಯನ್ನು ಕಳೆದು ಕೊಳ್ಳುತ್ತಾರೆ. ತಾವು "ಫಲಪ್ರದವಲ್ಲದ ಸೇವಕರು" ಎಂದು ಗ್ರಹಿಸಿಕೊಳ್ಳುವ ಬದಲಾಗಿ ಅವರು ಸತ್ಯದ ಸಲುವಾಗಿನ ತಮ್ಮ ಸ್ವಂತ ಅಲ್ಪಸ್ವಲ್ಪ ಸ್ವಾರ್ಥ ತ್ಯಾಗಗಳಲ್ಲಿ ಏನಾದರೂ ಅದ್ಭುತವಾದುದನ್ನು – ನಮ್ಮ ಕರ್ತನು ಮಾಡಿದ್ದಕ್ಕೆ ಸಮವಾದುದ್ದನ್ನು – ಕಾಣುವಂತೆ ಕಂಡುಬರುತ್ತದೆ. ಮತ್ತು ಅವರು ಪರಿಶುದ್ಧ ಗ್ರಂಥಗಳು ತಿಳಿಯಪಡಿಸುವ ಯುಗಗಳ ಮಹಾ ಯೋಜನೆಗಳ ಅನುಷ್ಠಾನವನ್ನು ತರಲು ಅವರು ಅತ್ಯಗತ್ಯರೆಂದು ತಿಳಿದಿದ್ದಾರೆ. ಅಂಥವರು "ಶಿರಸ್ಸಾದ ಕ್ರಿಸ್ತನನ್ನು ಆತುಕೊಳ್ಳದೆ" ಮತ್ತು ಆತನ ವಿಮೋಚನೆಯ ಮಹಾ ಕಾರ್ಯವನ್ನು ಸರಿಯಾದ ರೀತಿಯಲ್ಲಿ ಗ್ರಹಿಸದೇ ಇರುವುದಕ್ಕಾಗಿ ಅಪರಾಧ ಮನೋಭಾವದಿಂದಿರುತ್ತಾರೆ (ಕೊಲೊಸ್ಸೆ 2:19). ಇವರುಗಳು 'ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರ ವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದವರಂತೆ (ಇಬ್ರಿಯ 10:29) ದೋಷಕ್ಕೆ ಒಳಗಾಗಿರುತ್ತಾರೆ. ದೇವರ ಕೃಪೆಯ ಉತ್ಸಾಹದ ಹೊರತಾಗಿಯೂ, ಅವರುಗಳು ಆದಾಮನ ದಂಡನೆಯಿಂದ ರಕ್ಷಿಸಲ್ಪಡುವ ಮತ್ತು ದೇವರೊಂದಿಗೆ ಸಂಪೂರ್ಣ ಸಮಾಧಾನ ಹೊಂದಬಹುದಾದ 'ಮಾರ್ಗ'ವಾದ – ಒಂದೇ

ಮಾರ್ಗವನ್ನು – ಆಕಾಶದ ಕೆಳಗೆ ಮನುಷ್ಯರೊಳಗೆ ನೀಡಲ್ಪಟ್ಟಿರುವ ಆ ಒಂದೇ ಹೆಸರನ್ನು ತಿರಸ್ಕರಿಸುತ್ತಾರೆ.

ಸಾಮ್ಯದಲ್ಲಿ ಅವರುಗಳು ಒಂದೇ 'ಕಟ್ಟಾಗಿ' ಪ್ರತಿನಿಧಿತರಾಗಿದ್ದು ಔತಣದ ಕಡೆಗೆ ಪ್ರಗತಿ ಹೊಂದಲು, ಅಥವಾ ಅದರ ಆಶೀರ್ವಾದಗಳ ಮತ್ತು ಸಂತೋಷದ ಬಗ್ಗೆ ಹೆಚ್ಚಿನ ಮೆಚ್ಚುಗೆಗೂ ಮುಂದುವರೆಯಲು ತಡೆಹೊಂದಿದ್ದಾರೆ; ಮತ್ತು ಅಂತಿಮವಾಗಿ ಬೆಳಕಿನಿಂದ ಪೂರ್ಣವಾಗಿ ಹೊರಗಿನ ಪ್ರಪಂಚದ ಕಾರ್ಗತ್ತಲಿಗೆ ಅವರು ಮಹಾಸಂಕಟದ ಸಮಯದ ಕ್ಲೇಶ ಮತ್ತು ಪೀಡಿಸುವಿಕೆಗೆ ಹೊರಹಾಕಲ್ಪಡುತ್ತಾರೆ. ಆದುದರಿಂದ, ಇವರುಗಳಿಗೆ ಈಗ ಬಿಚ್ಚಿಕೊಳ್ಳುತ್ತಿರುವ ಸತ್ಯವು, ನಮ್ಮ ಒಳಿತಿಗೆ ಮತ್ತು ಪ್ರಗತಿಗೆ ವಿನ್ಯಾಸಗೊಂಡಿರುವದು. ಅವರಿಗೆ ಮುಗ್ಗರಿಸುವ ಸಂದರ್ಭವಾಗಿದೆ, ಯಾಕೆಂದರೆ ಅವರುಗಳು ಅದನ್ನು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳಿಸುತ್ತಿಲ್ಲ. ಮತ್ತು ಇಸ್ರಾಯೇಲ್ಯರಂತೆ ಇದುವರೆಗೆ ದೊರೆತ ವಿಶೇಷವಾಗಿ ದೇವಕೃಪಾಪಾತ್ರರಾಗಿ ಹೆಮ್ಮೆಪಟ್ಟುಕೊಂಡು ತಾವು ನಿಜವಾಗಿಯೂ ಅಂತಹ ಕೃಪೆಗೆ ಅರ್ಹರಾಗಿದ್ದೇವೆಂದು, ದೇವರು ತನ್ನೆಲ್ಲಾ ಕೃಪೆಯಿಂದ ತಮ್ಮನ್ನು ಹೊರಹಾಕದಂತೆ, ದೇವರ ಯೋಜನೆಯಿಂದ ತಾವು ಬಿಡಲಾರದವರಾಗಿದ್ದೇವೆಂದು ತಿಳಿದುಕೊಂಡಿದ್ದಾರೆ. ಹೀಗಾಗಿ ಇದುವರೆಗೆ ಒಳ್ಳೇ ರೀತಿಯಲ್ಲಿ ನಡೆದುಕೊಂಡವರು, ಈಗ ನಮ್ರತೆ ಯಿಂದಿರುವಲ್ಲಿ ಸೋತು ಹೋಗುತ್ತಿದ್ದಾರೆ ಮತ್ತು ತಾವು ದೇವರ ಮುಂದೆ ತಮ್ಮ ಸ್ವಂತ ನೀತಿವಂತಿಕೆಯೊಡನೆ ನಿಲ್ಲಲು ಅರ್ಹರು, ಕ್ರಿಸ್ತನ ನೀತಿವಂತಿಕೆಯಿಂದ ಹೊದಿಸಿರುವ ವಿವಾಹದ ಪೋಷಾಕಿಲ್ಲದೆ ತಾವು ಔತಣದಲ್ಲಿ ಪಾಲು ತೆಗೆದುಕೊಳ್ಳಬಹುದು ಎಂದು ಭಾವಿಸಿರುತ್ತಾರೆ.

ಇದು ವಿಚಿತ್ರವಾಗಿ ದುಃಖದಾಯಕವಾಗಿದ್ದಿರ ಬಹುದು, ಪರಿಗಣಿಸುತ್ತಿರುವ ಈ ಸಾಮ್ಯದಲ್ಲಿನ ಪ್ರವಾದನೆಯ ಈ ವೈಶಿಷ್ಟ್ಯವು ನಮ್ಮ ಕಣ್ಣುಗಳ ಮುಂದೆ ನೆರವೇರುತ್ತಿವೆ ಮತ್ತು ನಾವು ಸುಗ್ಗಿಯಲ್ಲಿದ್ದೇವೆ ಎಂಬುದಕ್ಕೆ ಆಧಾರದ ಮಹಾ ಸರಪಣಿಯ ಮತ್ತೊಂದು ಕೊಂಡಿಯಾಗಿ ರಚಿತವಾಗುತ್ತಿದೆ. ಪ್ರಸ್ತುತ ಆತ್ಮೀಕ ದಯೆಯನ್ನು ಅನುಭವಿಸುತ್ತಿರುವ ಕೆಲವರು ಈ ರೀತಿಯಲ್ಲಿ ವಿವಾಹದ ಉಡುಪನ್ನು ಉಪೇಕ್ಷಿಸುತ್ತಿದ್ದಾರೆ ಮತ್ತು ಪಕ್ಕಕ್ಕೆ ಹಾಕಿದ್ದಾರೆ. ಇನ್ನೂ ಕ್ರಿಸ್ತನು ಕರ್ತನೆಂದು ಮಾತನಾಡುತ್ತಿದ್ದರೂ, ಅವರು ಆತನು ಕರ್ತನಾದ ಯೇಸುಕ್ರಿಸ್ತನ ಮುಖ್ಯತ್ವವನ್ನು ಪರಿಣಾಮಕತ್ವ ಶಕ್ತಿಯನ್ನು, ಅದರ ಫಲವಾಗಿ ಅವರು ವಿವಾಹಕ್ಕೆ ಆಹ್ವಾನಿಸಲ್ಪಡಲು ಅರ್ಹರಾಗಿ ಎಣಿಸಲ್ಪಟ್ಟದ್ದನ್ನು ಮರೆತು ಅದನ್ನು ಹೀನೈಸುವವರೂ, ಅಲ್ಲಗಳೆಯುವವರೂ ಆಗಿದ್ದಾರೆ (ರೋಮಾ. 14;9:5:2). ನಮಗೆ ವಿಮೋಚಕನ ಅಗತ್ಯವಿಲ್ಲವೆಂದು ಅವರು ಧೈರ್ಯದಿಂದ ಹೇಳುತ್ತಾರೆ; ಮತ್ತು ಪರಿಶುದ್ಧ ಗ್ರಂಥಗಳ ಬಗ್ಗೆ ಮಾರ್ಮಿಕವಾದ ವಿತಂಡ ವಾದಗಳಿಂದ ಅವರು ಈಡುಬಲಿಯಿಲ್ಲದೆ ತಾವು ಕುರಿಮಂದೆಗೆ ಮತ್ತೊಂದು ಮಾರ್ಗವಾಗಿ, ತಮ್ಮ ಸ್ವಂತ ನೀತಿವಂತಿಕೆಗಳಿಂದ ಸೇರಬಹುದೆಂದು ತಮ್ಮನ್ನೂ ಮತ್ತು ಇತರರನ್ನು ಮನದಟ್ಟುಮಾಡಿಕೊಳ್ಳುತ್ತಿದ್ದಾರೆ. ಇದನ್ನು ಪ್ರವಾದಿಯು 'ಅಶುದ್ಧವಾದ ಚಿಂದಿಬಟ್ಟೆ' ಎಂದು ಕರೆದಿದ್ದಾನೆ. ಕೆಲವರು ತಮಗೆ ಯಾವ ಪ್ರತಿಪಾದಕನ ಅಥವಾ ಈಡುಬಲಿಯ ಅವಶ್ಯಕತೆ ಇಲ್ಲ, ಆದರೆ ತಾವು ಮಾರ್ಪಡಿಸಲಾಗದಂಥ ಪರಲೋಕದ ಮಹಿಮೆಗೆ ದೇವರಿಂದ ಆಯಲ್ಪಟ್ಟವರಾಗಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ.

ಕ್ರಿಸ್ತನ ಈಡುಬಲಿಯ ತ್ಯಾಗವನ್ನು ನಿರಾಕರಿಸು ವುದರ ಮೂಲಕ ವಿವಾಹದ ಉಡುಪನ್ನು ತೆಗೆದುಹಾಕುವುದು 1878ರ ಬೇಸಿಗೆಯಲ್ಲಿ ಪ್ರಸ್ತುತ ಸತ್ಯದ ಬೆಳಕಿನಲ್ಲಿರುವವರಲ್ಲಿ ಮೊದಲಿಗೆ ತೋರಿಬಂತು. ಆ ಸಮಯದಿಂದ ಅದು ಅತಿಥಿಗಳ ಮೊಗಸಾಲೆಯ ಬೆಳಕನ್ನು ಅಂದರೆ ಸುಗ್ಗಿಯ ಬೆಳಕನ್ನು ಪ್ರವೇಶಿಸುವವರೆಲ್ಲರನ್ನೂ ಪರೀಕ್ಷಿಸುತ್ತಿದೆ. ಮದಲಿಂಗನ ನಿಜ ಪ್ರತ್ಯಕ್ಷತೆಯಲ್ಲಿಯೇ ಈ ತಪ್ಪು ತನ್ನ ಅವಕಾಶದ ಪ್ರಯೋಜನಕ್ಕೆ ಕಾಲೂರಿದೆ ಮತ್ತು ಕೆಲವರು ಅತ್ಯಗತ್ಯವಾದ ಮದುವೆಯ ಪೋಷಾಕನ್ನು ಪಕ್ಕಕ್ಕೆ ಎಸೆಯುವರು. ಇದು ಅತಿಥಿಗಳಲ್ಲಿ ಎಂಥಾಃ ಕೋಲಾಹಲವನ್ನುಂಟು ಮಾಡಿದೆ! ಎಂಥಾಃ ವಿಭಜನೇ! ಎಂಥಾಃ ಪರಿಶೋಧನೆ! ತಮ್ಮ ನಿಲುವಂಗಿಯನ್ನು ತೆಗೆದುಹಾಕುವವರು, ಬೇರೆಯವರೂ ಹಾಗೆಯೇ ಮಾಡಬೇಕೆಂದು ಕಾತುರರಾಗುತ್ತಾರೆ; ನಂಬಿಗಸ್ತರು ಆಕ್ಷೇಪಿಸುವಾಗ ಅವರುಗಳು ಸೆಣಸುತ್ತಾರೆ; ವಿಭಜನಾ ಕಾರ್ಯವು ಅತಿಥಿಯ ಕೋಣೆಯಲ್ಲಿಯೇ ಮುಂದುವರೆಯುತ್ತದೆ; ನಿಸ್ಸಂದೇಹವಾಗಿ ಇದು ಮದುವೆಯ ಕಡೆಯ ಘಳಿಗೆಯವರೆಗೆ ಮುಂದುವರೆಯುತ್ತದೆ.

ಅದೇ ಸಮಯದಲ್ಲಿ ಅದೃಶ್ಯನಾಗಿ ಪ್ರತ್ಯಕ್ಷನಾಗಿರುವ ಮದಲಿಂಗನು – ಅರಸನು ಆತನ ರಾತ್ರಿ ಭೋಜನವನ್ನು ಸವಿಯುವ ನಿಷ್ಠಾವಂತ ಅರ್ಹರನ್ನು ಗುರುತಿಸುತ್ತಾನೆ ಮತ್ತು ಸಾಮ್ಯವು ಮುಂತಿಳಿಸಿದಂತೆ ಈ ಅಂತಿಮ ಪರೀಕ್ಷೆಯನ್ನು ಅನುಮತಿಸುತ್ತಾನೆ. ತಮ್ಮ ಉಡುಪುಗಳನ್ನು ತೆಗೆದುಹಾಕಿದವರನ್ನು ಆತನು "ಸ್ನೇಹಿತರೇ (ಸಂಗಾತಿಗಳೇ), ವಿವಾಹದ ವಸ್ತ್ರ ಧರಿಸದೆ

ನೀವು ಇಲ್ಲಿ ಹೇಗೆ ಬಂದಿರಿ?" ಎಂದು ಪ್ರಶ್ನಿಸುತ್ತಾನೆ – ಇದು ವಿವಾಹದ ಪೋಷಾಕನ್ನು ಧರಿಸುವದಕ್ಕೆ ಆತನು ಉಚಿತವಾಗಿ ಒದಗಿಸುತ್ತಿರುವ ಕೃಪೆಯನ್ನು ಅನುಭವಿಸುವದಕ್ಕೆ ಅವಶ್ಯವಿರುವ ಷರತ್ತು ಎಂದು ಮೃದುವಾದ ಆದರೆ ಬಹಳ ಒತ್ತಾಯಪೂರ್ವಕವಾದ ಎಚ್ಚರಿಕೆಯಾಗಿದೆ. ಮತ್ತು ಕ್ರಿಸ್ತನ ಮರಣದ ಮೌಲ್ಯವನ್ನು ತಮ್ಮ ಈಡುಬಲಿಯ ಬೆಲೆಯೆಂದು ಈಗ ಅಲ್ಲಗಳೆಯುವವರಿಗೆ, ಅವರು ಪ್ರಸ್ತುತವಾದ ಈ ಬೆಳಕಿಗೆ, ಕರ್ತನ ಪ್ರಸನ್ನತೆಯ ತಿಳುವಳಿಕೆಗೆ ಮತ್ತು ಈಗ ಕಾಣುವ ದೇವರ ಇತರೆ ಆಳವಾದ ಸಂಗತಿಗಳಿಗೆ ಪ್ರವೇಶಿಸುವ ಸಮಯದಲ್ಲಿ ಈಗ ಸ್ಪಷ್ಟವಾಗಿ ಕಾಣುವಂತೆ ಆ ಉಡುಪುಗಳನ್ನು ಧರಿಸದೆ ಬಂದೆವೆಂದು ಹೇಳುವ ಯಾರೇ ಆಗಲಿ ಅವರಿಗೆ ನಾವು ಸವಾಲೊಡ್ಡುತ್ತೇವೆ. ಯಾರೂ ಎಂದೂ ಉಡುಪುಗಳನ್ನು ಧರಿಸದೆ ಪ್ರವೇಶಿಸಿರುವುದಿಲ್ಲ; ಇತರರು ದೇವರ ಆಳವಾದ ಸಂಗತಿಗಳನ್ನು ನೋಡಲಾರರು (1 ಕೊರಿಂಥ 2;7–14). ಈ ಸಾಮ್ಯದಲ್ಲಿ ಉಚಿತವಾಗಿ ಕಂಡುಬರುವಂತೆ, ಈಗಲೂ ಸಹ, ವಸ್ತ್ರವನ್ನು ನಿರಾಕರಿಸುವವರಿಗೆ ಈ ಪ್ರಶ್ನೆಯನ್ನು ಹಾಕುವಾಗ ಅವರು "ಭಾವೋದ್ವೇಗದಿಂದ ಮಾತು ಹೊರಡದವರಾಗುತ್ತಾರೆ". ಅವರು ವಸ್ತ್ರಗಳನ್ನು ಧರಿಸಿದ್ದಾಗ ಅವರಿಗೆ ಪ್ರವೇಶ ದೊರೆಯಿತು ಎಂಬುದನ್ನು ಅವರು ಅಲ್ಲಗಳೆಯಲಾರರು; ಆದರೆ, ಅವರುಅದನ್ನು ಒಪ್ಪಿಕೊಳ್ಳಲು ಇಷ್ಟಪಡುವುದಿಲ್ಲ.

"ನಂತರದಲ್ಲಿ ಅರಸನು ತನ್ನ ಸೇವಕರುಗಳಿಗೆ, ಅವನ ಕೈಕಾಲುಗಳನ್ನು ಕಟ್ಟಿ, ಮತ್ತು ಅವನನ್ನು ಹೊರಗೆ ಕತ್ತಲೆಗೆ ನೂಕಿರಿ" (ಮತ್ತಾಯ 22:13) ಎನ್ನುತ್ತಾನೆ. ಹೊರಗಿನ ಕತ್ತಲು ಅಂದರೆ ಅದು ಈ ಲೋಕದ ಬುದ್ಧಿವಂತರನ್ನು ಕವಿದಿರುವುದು, ಅದು ಮಾನವ ವಿವೇಚನೆಯ ಕತ್ತಲಾಗಿದ್ದು ದೇವರ ಮಾತುಗಳ ಮಾರ್ಗದರ್ಶನ ಹೊಂದಿರುವುದಿಲ್ಲ ಮತ್ತು ಆತನು ಬಹಿರಂಗಪಡಿಸುವ ಈಡುಬಲಿಯ ಮತ್ತು ಪುನರ್ವಶದ ಯೋಜನೆಗಳ ಚೌಕಟ್ಟಿನಲ್ಲಿರುವದಿಲ್ಲ. ಈ ರೀತಿಯಲ್ಲಿ ಕಟ್ಟಿಹಾಕುವುದು ಅಥವಾ ಅಂಕೆಯಲ್ಲಿಡುವುದು ಪ್ರತಿಷ್ಠೆ ಹೊಂದಿದವರ ಸಂಘದ ಎದುರು ಅವರನ್ನು ಉದಾಹರಣೆಯಾಗಿ ಮಾಡಲ್ಪಡುತ್ತದೆ ಮತ್ತು ನಿಜವಾದ ನಿಷ್ಠೆಯುಳ್ಳವರೆಲ್ಲರಿಗೆ ಆ ಉಡುಪಿನ ಅಗತ್ಯ ಮತ್ತು ಅದರ ಮೌಲ್ಯದ ಬಗ್ಗೆ ಅರಸನ ಅಭಿಪ್ರಾಯವನ್ನು ನೋಡಲು ಸಹಾಯ ಮಾಡುತ್ತದೆ. ಕಟ್ಟಿಹಾಕಬೇಕೆಂದು ನಿರ್ದೇಶಿಸಲ್ಪಟ್ಟ ಸೇವಕರುಗಳು ಆ ವಿಷಯದಲ್ಲಿ ಸತ್ಯವನ್ನು ಹೊಂದಿದವರು ಮತ್ತು ಅವರು ಅಂಥವರ ಪ್ರಭಾವವನ್ನು ಅಮೂಲ್ಯವಾದ ರಕ್ತದ ಮತ್ತು ಅದು ನಮಗಾಗಿ ಕೊಂಡುಕೊಂಡ ನೀತಿವಂತರ ಉಡುಪುಗಳ ಬೆಲೆಯ ಬಗ್ಗೆ ಪರಿಶುದ್ಧ ಗ್ರಂಥದ ಸಾಕ್ಷ್ಯಗಳಿಂದ ಕಟ್ಟಿಹಾಕಬಲ್ಲರು. ಪರಿಶುದ್ಧ ಗ್ರಂಥದ ಈ ವಾದಗಳ ವಿರುದ್ಧವಾದ ಹೋರಾಟದಲ್ಲಿ, ವಸ್ತ್ರವನ್ನು ತೆಗೆದುಹಾಕಿದವರು ತನ್ನ ಸ್ವಂತ ವಾದಗಳಿಂದಲೇ ಮತ್ತು ಪ್ರಯತ್ನಗಳಿಂದಲೇ ತಮ್ಮನ್ನು ಕತ್ತಲೆಯ ಹೊರಗೆ ಅಥವಾ ಹೊರಗಿನ ಕತ್ತಲೆಗೆ ಪಾತ್ರರನ್ನಾಗಿಸಿಕೊಳ್ಳುವಂತೆ ದೂಡಲ್ಪಡುತ್ತಾರೆ. ಅವರುಗಳಿಗೆ, ಪ್ರಪಂಚದಂತೆ. ಕ್ರಿಸ್ತನ ಶಿಲುಬೆಯು ಎಡವುವ ಬಂಡೆಯಾಗಿದೆ, ಮೂರ್ಖತನವಾಗಿದೆ; ಆದರೆ ನಂಬಿಗಸ್ತರಿಗೆ, ಪ್ರತಿಷ್ಠೆ ಹೊಂದಿದವರಿಗೆ ಅದು ಇನ್ನೂ ಸಹ ದೇವರ ಶಕ್ತಿಯೂ ಮತ್ತು ಜ್ಞಾನವೂ ಆಗಿದೆ".

ಆದರೆ ಸಾಮ್ಯದಲ್ಲಿರುವ ಕಟ್ಟು ಹಾಕಲ್ಪಟ್ಟು ಹೊರಗೆ ದೊಬ್ಬಿಸಿಕೊಂಡವರೆಲ್ಲರೂ ಮೊದಲಿಗೆ ಸುಗ್ಗಿಯ ಸತ್ಯದ ಬೆಳಕಿನಲ್ಲಿದ್ದಿರಬೇಕೆಂಬುದನ್ನು ಕಡೆಗಣಿಸುವಂತಿಲ್ಲ; ಆದ ಕಾರಣ, ಅವರ ಜವಾಬ್ದಾರಿ ಮತ್ತು ದಂಡ ಇವುಗಳು ಅಂಥಾಃ ದಯೆಯನ್ನು ಎಂದೂ ಹೊಂದವರಿಗಿಂತ ಹೆಚ್ಚಾಗಿದೆ. ಹೆಸರು ಮಾತ್ರದ ಸಭೆಯಲ್ಲಿ ಸಾವಿರಾರು ಜನರು ಅವರಲ್ಲಿರುವ ಪ್ರಖ್ಯಾತ ನಾಯಕರುಗಳನ್ನು ಅನುಸರಿಸುತ್ತಾರೆ. ಅಮೂಲ್ಯ ರಕ್ತದ ಪರಿಣಾಮಕತ್ವ ಶಕ್ತಿಯನ್ನು, ಪಾಪಿಗಳಿಗಾಗಿ ತೆತ್ತ ಈಡುಬಲಿಯ ಬೆಲೆಯನ್ನು ಅವರ ಬೋಧನೆಗಳನ್ನು ನಿರಾಕರಿಸುವರು ಎಂಬದು ಸಂಶಯಾತೀತ. ಅವರುಗಳು ಪೂರ್ಣ ಪ್ರಮಾಣದ ಹಂತದ ಲೆಕ್ಕಕ್ಕೆ ಎಣಿಸಲ್ಪಡುವುದಿಲ್ಲ, ಯಾಕೆಂದರೆ ಅವರುಗಳು ಸಾಕಷ್ಟು ಮಟ್ಟಿಗೆ ಆ ಬಗ್ಗೆ ಜ್ಞಾನೋದಯ ಹೊಂದಿಕೊಂಡಿಲ್ಲ.

ಕ್ರೈಸ್ತರೆಂದು ಬಹಿರಂಗವಾಗಿ ಹೇಳಿಕೊಳ್ಳುವ ಸಾವಿರಾರು ಜನರು ಕ್ರಿಸ್ತನನ್ನು ತಮ್ಮ ಈಡುಬಲಿ ಅಥವಾ ತಮ್ಮ ಬದಲಿ ಎಂಬುದನ್ನು ಎಂದೂ ನಂಬಿಲ್ಲ ಮತ್ತು ಆತನ ನೀತಿವಂತಿಕೆಯನ್ನು ಹೊದಿಸಿರುವ ವಸ್ತ್ರಗಳನ್ನು ಎಂದೂ ಧರಿಸಿಕೊಂಡಿಲ್ಲ. ನಿಜವಾಗಿಯೂ ಇವರುಗಳನ್ನು, ಈ ಸಾಮ್ಯದಲ್ಲಿ ಗಮನಿಸುವುದಿಲ್ಲ. ಈ ಸಾಮ್ಯವು ಕೇವಲ ಸೀಮಿತ ವರ್ಗಕ್ಕೆ ಉಲ್ಲೇಖಿತವಾಗಿದೆ. ಅವರೆಲ್ಲರೂ ಒಮ್ಮೆ ಈಡುಬಲಿಯನ್ನು ಸ್ಪಷ್ಟವಾಗಿ ಮೆಚ್ಚಿಕೊಂಡಿರುತ್ತಾರೆ, ಹಾಗೆ ಮೆಚ್ಚಿಕೊಳ್ಳುವಾಗ, ಅದು ಸುರಕ್ಷಿತಗೊಂಡ ಕೃಪೆಯಲ್ಲಿ ಅವರು ಔತಣದ ಮೊದಲು ಸುಗ್ಗಿಯ ವಿಶೇಷ ಬೆಳಕಿಗೆ, ಅರಸನ ಪ್ರವೇಶದ ಸಮಯಕ್ಕೆ ಪ್ರವೇಶಗೊಂಡಿದ್ದಾರೆ. ಒಮ್ಮೆ ಪರಿಜ್ಞಾನ ಹೊಂದಿದವರು, ದೇವರ ಒಳ್ಳೆಯ ಮಾತುಗಳನ್ನು, ಬರಲಿರುವ ಕಾಲದ ಬಲಪರಾಕ್ರಮಗಳನ್ನು ಸವಿದವರು, ದ್ರೋಹದ ಹಂತಕ್ಕೆ ಸಾಗುವ ಕೇವಲ ಒಂದು ಸಲಹೆಯ,

ಅನ್ಯಾಯದ, ವಿಪತ್ಕಾರಕ ಸಂಗತಿಗಳ ವಿರುದ್ಧ ಎಷ್ಟೋ ಜಾಗ್ರತೆಯಾಗಿರಬೇಕಲ್ಲವೇ (ಇಬ್ರಿಯ 10:26–31; 6:4–8).

ಈ ಸಾಮ್ಯಗಳನ್ನು ಪರಿಶೀಲಿಸುವಲ್ಲಿ, ಎಲ್ಲಾ ಬುದ್ಧಿವಂತ ಕನ್ಯೆಯರೂ ಈಗಾಗಲೇ ವಿವಾಹಕ್ಕೆ ಹೋಗಿದ್ದಾರೆ ಎಂಥಲೂ ಅತಿಥಿಗಳ ವಿಶೇಷ ಕೊಠಡಿ, ಅಂತಿಮ ಸಿದ್ಧತೆ, ಮತ್ತು ಪರೀಕ್ಷೆಯ ಮುನ್ನ ಬಾಗಿಲು ಮುಚ್ಚಲ್ಪಟ್ಟಿದೆ ಎಂಥಲೂ ತಪ್ಪಾಗಿ ಭಾವಿಸಬಾರದು. ಅವಕಾಶದ ಬಾಗಿಲು ಪ್ರತಿಷ್ಠೆಗೊಂಡವರಿಗೆ, ಕ್ರಿಸ್ತನ ನೀತಿವಂತಿಕೆಯೆಂಬ ವಿವಾಹದ ವಸ್ತ್ರವನ್ನು ನಂಬಿಕೆಯಿಂದ ಧರಿಸಿಕೊಂಡ ಎಲ್ಲರಿಗೂ ಇನ್ನೂ ತೆರೆಯಲ್ಪಟ್ಟಿದೆ; "ಇಗೋ, ಮದಲಿಂಗನು!" ಎಂಬ ಸಂದೇಶವು ಇನ್ನೂ ಮುಂದುವರೆದದೆ; ಬುದ್ಧಿವಂತ ಕನ್ಯೆಯರು ಇನ್ನೂ ಆತನನ್ನು ಭೇಟಿಯಾಗಲು, ವಿವಾಹಕ್ಕೆ ಪ್ರವೇಶಿಸಲು ಹೋಗುತ್ತಿದ್ದಾರೆ. ಬುದ್ಧಿಹೀನ ಕನ್ಯೆಯರು ತಮ್ಮ ಪಾತ್ರೆಯಲ್ಲಿ ಎಣ್ಣೆಯೊಡನೆ ಇನ್ನೂ ಹಿಂದಿರುಗಿ ಬಂದಿಲ್ಲ. ಆದರೆ ಅರಸನು ಒಳಗೆ ಬಂದಿರುವುದರಿದ (1878ರಿಂದ, ಇದು ನಮ್ಮ ಕರ್ತನು ಸಾಂಕೇತಿಕವಾಗಿ ಯೆಹೂದ್ಯರ ಅರಸನಾದದ್ದಕ್ಕೆ ಸಮಾನಾಂತರವಾಗಿದೆ – ಮತ್ತಾಯ21: 1–13), ಅತಿಥಿಗಳ ತನಿಖೆ ಮತ್ತು ಅವರ ವಿವಾಹ ವಸ್ತ್ರದ ಮೆಚ್ಚುಗೆಯ ಪರೀಕ್ಷೆ ಇವುಗಳು ಪ್ರಗತಿಯಲ್ಲಿವೆ. ಅದೇ ಸಮಯದಲ್ಲಿ ಹೆಚ್ಚಾದ ಬುದ್ಧಿವಂತ ಕನ್ಯೆಯರು ಇನ್ನೂ ಕರ್ತನ ಪ್ರತ್ಯಕ್ಷತೆಯ ಬಗ್ಗೆ ತಿಳಿದುಕೊಂಡೂ ಸಂತೋಷವಾಗಿ ಔತಣಕ್ಕೆ ಬರುತ್ತಿದ್ದಾರೆ, ಈಗಾಗಲೇ ಒಳಗೆ ಬಂದವರಲ್ಲಿ ಕೆಲವರು ಉಳುಕೊಳ್ಳಲು ಅನರ್ಹರೆಂದು ಸಾಬೀತುಪಡಿಸುತ್ತಿದ್ದಾರೆ, ಅವರ ಕೈಕಾಲುಗಳು ಕಟ್ಟಿ ಹಾಕಲ್ಪಟ್ಟಿವೆ ಅಥವಾ ಕಟ್ಟು ಹಾಕಲ್ಪಡುತ್ತಿವೆ ಮತ್ತು ಕರ್ತನ ಪ್ರತ್ಯಕ್ಷತೆಯ ಪ್ರಸ್ತುತ ಸತ್ಯದ ಬಗ್ಗೆ ಅವರ ಮೆಚ್ಚುಗೆ ಮತ್ತು ಗ್ರಹಣ ಶಕ್ತಿ ಮತ್ತು ಇಂದಿನ ಮತ್ತು ಮುಂದಿನ ಕಾರ್ಯಗಳು ತಪ್ಪಾದ ಕಾರಣಗಳಿಂದ, ತಪ್ಪಾದ ಆಧಾರ ವಚನಗಳಿಂದ ಹುಟ್ಟಿ ಹೆಚ್ಚು ಹೆಚ್ಚು ಕಾಂತಿಹೀನವಾಗಿ ಬೆಳೆಯಲು ಪ್ರಾರಂಭಿಸುತ್ತಿವೆ. ಅವುಗಳು ಕ್ರಮೇಣವಾಗಿ ಅಥವಾ ತ್ವರಿತವಾಗಿ, ಸ್ವಭಾವಕ್ಕನುಸಾರವಾಗಿ ಪ್ರಪಂಚದ ದೃಷ್ಟಿಕೋನದ, ಕಡೆಗೆ ಆಕರ್ಷಿತವಾಗುತ್ತಿದೆ. ಲೋಕದ ಬಾಹ್ಯ ಅಂಧಕಾರವು ಒಳಗಣ ಬೆಳಕಿಗಿಂತ ಭಿನ್ನವಾಗಿ ಕಂಡುಬರುವಾಗ ಅದು ಸರಿಯಾದ ರೀತಿಯಲ್ಲಿ ವಸ್ತ್ರ ಧರಿಸಿದ ಭಕ್ತರುಗಳಿಗೆ ಸುಲಭವಾಗಿ ನೋಡ ಸಾಧ್ಯವಾಗುತ್ತದೆ. ಮತ್ತು ನಿಸ್ಸಂದೇಹವಾಗಿ ಒಳಗೆ ಬಂದಿರುವ ಎಲ್ಲಾ ಕನ್ಯೆಯರನ್ನೂ ಈ ಪ್ರಸ್ತಾಪದ ಬಗ್ಗೆ ಪರೀಕ್ಷಿಸಬೇಕಾಗುತ್ತದೆ. ಈ ಪರೀಕ್ಷೆಯಲ್ಲಿ ಸಂತೋಷದಿಂದ ಮತ್ತು ಭಯವಿಲ್ಲದೆ ಎಲ್ಲರೂ ತಮ್ಮ ಹೃದಯಾಂತರಾಳದಿಂದ ಹೀಗೆ ಹಾಡಬಹುದಾಗಿದೆ :–

"My hope is built on nothing less
Than Jesus; blood and righteousness
I dare not trust the sweetest frame.
But wholly lean on Jesus' name.
On Christ, the solid rock I stand ;
All other ground is sinking sand"

ಯೇಸುವಿನ ರಕ್ತ ಮತ್ತು ನೀತಿವಂತಿಕೆಗಿಂತ
ಯಾವುದೇ ಕಡಿಮೆಯದರಲ್ಲಿ ನನ್ನ ನಿರೀಕ್ಷೆ ಕಟ್ಟಲ್ಪಟ್ಟಿಲ್ಲ.
ಸೊಗಸಾಗಿ ರಚನೆಗೊಂಡಿರುವವರಲ್ಲಿ ನಾನು ನಂಬಿಕೆಯಿಡಲು ಧೈರ್ಯಪಡಲಾರೆ.
ಆದರೆ ಸಂಪೂರ್ಣವಾಗಿ ಯೇಸುವಿನ ಹೆಸರಿನ ಮೇಲೆ ಆತುಕೊಳ್ಳುವೆ.
ಕ್ರಿಸ್ತನೆಂಬ ಬಲವಾದ ಬಂಡೆಯ ಮೇಲೆ ನಾನು ನಿಂತಿರುವೆ.
ಉಳಿದೆಲ್ಲಾ ನೆಲವು ಮುಳುಗುವ ಮರಳು.

ಮತ್ತು ಅಂಥವರು ಹಿಗ್ಗುತ್ತಾ ಹೀಗೆ ಹಾಡಬಹುದು:–

The Prince of my peace is now present,
The light from his face is on me.
O listen! Beloved, he speaketh:
' My peace I now give unto thee'
The cross well covers my sins;
The past is under the blood;
I am trusting in Jesus for all ;
My will is the will of my God"

ನನ್ನ ಸಮಾಧಾನದ ಪ್ರಭುವು ಈಗ ಪ್ರತ್ಯಕ್ಷನಿದ್ದಾನೆ.
ಆತನ ಮುಖ ಪ್ರಕಾಶವು ನನ್ನ ಮೇಲಿದೆ. ಪ್ರಿಯರೇ, ಆಲಿಸಿರಿ!
ಆತನು ನುಡಿಯುತ್ತಾನೆ: "ನನ್ನಲ್ಲಿರುವ ಶಾಂತಿಯನ್ನು ನಿನಗೆ ಕೊಡುತ್ತೇನೆ,
ಶಿಲುಬೆಯು ನನ್ನ ಪಾಪಗಳನ್ನೆಲ್ಲಾ ಮುಚ್ಚುತ್ತದೆ; ಗತಕಾಲದ್ದೆಲ್ಲವೂ ಆತನ ರಕ್ತದಡಿಯಲ್ಲಿದೆ;
ನಾನು ಎಲ್ಲದಕ್ಕೂ ಯೇಸುವಿನಲ್ಲಿ ಭರವಸವಿಡುವೆ;
ನನ್ನ ಚಿತ್ತವು ದೇವರ ಚಿತ್ತವೇ"

## ಉನ್ನತ ಕರೆಯ ಅಂತ್ಯವು ಮುಚ್ಚುವಂತ ಬಾಗಿಲಲ್ಲ

## The End of the High Calling is not the Closing of the Door

ಪರಿಶುದ್ಧ ಗ್ರಂಥಗಳು ಎಲ್ಲಾ ಕನ್ಯೆಯರಿಗೂ ವಿವಾಹಕ್ಕೆ ಹೋಗುವ ಬಾಗಿಲನ್ನು ಪ್ರವೇಶಿಸುವ ಅವಕಾಶವು ಉಂಟೆಂದೂ, ಎಲ್ಲಾ ಬುದ್ಧಿವಂತೆಯರೂ ಅಥವಾ ತಮ್ಮನ್ನು ಸಿದ್ಧಪಡಿಸಿಕೊಂಡವರು ಪ್ರವೇಶಿಸುವವರೆಗೂ ಅದನ್ನು ಮುಚ್ಚಲಾಗುವುದಿಲ್ಲ ಎಂದು ತಿಳಿಸುವುದಾದರೂ ಅದು ಯಾವಾಗ ಮುಚ್ಚಲ್ಪಡುತ್ತದೆಂಬುವ ಸರಿಯಾದ ದಿನಾಂಕವನ್ನು ನೀಡುವುದಿಲ್ಲ. ಹೇಗಾದರೂ ಎಲ್ಲಾ ಬುದ್ಧಿವಂತೆಯರು, ಸಿದ್ಧರಾದವರು ಒಳ ಹೋಗಿದ್ದಾರೆ.

'ತೆರೆದ ಬಾಗಿಲು' ಕೆಲವು ಷರತ್ತುಗಳೊಂದಿಗೆ ಮತ್ತು ಸವಲತ್ತುಗಳೊಂದಿಗೆ ಪ್ರವೇಶದ ಅವಕಾಶವನ್ನು ಸಾಂಕೇತಿಸುತ್ತದೆ; ಮುಚ್ಚಿದ ಬಾಗಿಲು ಅಂಥಾಃ ಸವಲತ್ತು ಅಥವಾ ಅವಕಾಶಗಳು ಮುಗಿದು ಹೋದುದ್ದನ್ನು ಪ್ರತಿನಿಧಿಸುತ್ತದೆ. ಕ್ರಿಸ್ತನ ವಿಶ್ವಾಸಿಗಳಿಗೆ ನಿರ್ಬಂಧಪಡಿಸಿದ ಶರತ್ತುಗಳೊಡನೆ ದಯಪಾಲಿಸಿರುವ ಸುವಾರ್ತಾ ಯುಗದ ಸೌಭಾಗ್ಯ, ಆಹ್ವಾನ ಅಥವಾ ಅವಕಾಶಗಳು, ಪರಲೋಕ ರಾಜ್ಯಕ್ಕೆ ಆತನೊಂದಿಗಿನ ಜೊತೆ ಬಾಧ್ಯಸ್ಥಿಕೆಗೆ, ಮತ್ತು ದೈವಿಕ ಸ್ವಭಾವದ ಪ್ರವೇಶಕ್ಕೆ ಅದು ಬಾಗಿಲಾಗಿದ್ದು ಅದರ ಮೂಲಕ ನಮಗೆ ನಾವು ನಿಂತಿರುವ ಈ ಕೃಪೆಗೆ (ದಯೆಗೆ) ಅಂದರೆ ದೇವರೊಂದಿಗೆ ಮಹಿಮೆಯಲ್ಲಿ ಪಾಲು ಹೊಂದುವ ಮಹಿಮೆಗೆ ಪ್ರವೇಶಾಧಿಕಾರವು ದೊರೆಯುತ್ತದೆ (ರೋಮಾ. 5:2). ಈ ಬಾಗಿಲು (ಅಂದರೆ ಅವಕಾಶ) ಇಡೀ ಯುಗದ ಕಾಲವೆಲ್ಲಾ ತೆರೆದುಕೊಂಡಿದ್ದು ಒಂದು ಕಾಲದಲ್ಲಿ ಮುಚ್ಚಲ್ಪಡುತ್ತದೆ. ಕನ್ಯೆಯರ ಸಾಮ್ಯದಲ್ಲಿನ ಬಾಗಿಲು ಈ ಮುಚ್ಚೋಣವನ್ನು ಈ ಯುಗದ ಅಂತ್ಯದಲ್ಲಿ ಅಂತಹ ಅವಕಾಶಗಳು, ಸವಲತ್ತು ಮುಗಿದು ಹೋಗುವುದನ್ನು ಗುರುತಿಸುತ್ತದೆ. ಕನ್ಯೆಯರ ಈ ಸಾಮ್ಯವು ಕೇವಲ ಆ ಸಮಯದಲ್ಲಿ ಜೀವಿಸುವ ಸತ್ಯಸಭೆಯ ಮಧ್ಯದಲ್ಲಿ ನಡೆಯುವ ಯುಗದ ಅಂತ್ಯದಲ್ಲಿನ ಘಟನೆಗಳನ್ನು ಚಿತ್ರಿಸುತ್ತದೆ. ಸಾಮ್ಯದ 'ಬಾಗಿಲು' ಅಂಥಹ ಕೆಲವೊಂದು ಸವಲತ್ತುಗಳನ್ನು, ನೆರವೇರಿಕೆಗಳನ್ನು ಮತ್ತು ಸುವಾರ್ತಾಯುಗದ ಅಂತಹ ಸವಲತ್ತುಗಳ ಗುರಿಯನ್ನು ಪ್ರತಿನಿಧಿಸುತ್ತದೆ. ಇವುಗಳು ಸುಗ್ಗಿಯ ಕಾಲದ ಬುದ್ಧಿವಂತ ಕನ್ಯೆಯರಿಗೆ ತೆರೆದುಕೊಳ್ಳುತ್ತವೆ. ಅಂತಹ ಎಲ್ಲಾ ವರ್ಗಗಳು ಈ ಸವಲತ್ತುಗಳನ್ನು ಪಡೆದುಕೊಂಡ ನಂತರ ಎಲ್ಲಾ ಅನುಕೂಲಗಳೂ ಸವಲತ್ತುಗಳು ಮುಗಿಯುವುದನ್ನು ಬಾಗಿಲು ಮುಚ್ಚಿಹೋಗುವುದು ಪ್ರತಿನಿಧಿಸುತ್ತದೆ. ಯಾಕೆಂದರೆ ಔತಣವು ಪೂರ್ಣವಾಗಿ ಸುವಾರ್ತೆಯ ಅನುಕೂಲತೆಗಳನ್ನು ಮತ್ತು ಅದು ಅಂತಹ ನೆರವೇರಿಕೆಗಳಿಗೆ ನಡೆಸುವ ಕೃಪೆಯನ್ನು. ವಾಗ್ದಾನಪಡಿಸಿದ ರಾಜ್ಯದ ಮಹಿಮೆಯನ್ನು ಪ್ರತಿನಿಧಿಸುವುದಾಗಿದೆ.

ಈ ಅವಕಾಶದ ಮತ್ತು ವಿಶೇಷ ಪ್ರಯೋಜನಗಳ ಬೇಗನೇ ಮುಚ್ಚಲಿರುವ 'ಬಾಗಿಲನ್ನು' ಪರಿಗಣಿಸಿರಿ. ನಮ್ಮ ಕರ್ತನು ಇದನ್ನು 'ಮಹಾದ್ವಾರ' ಎಂಬುದಾಗಿ ಕರೆದಿದ್ದಾನೆ ಮತ್ತು ಈ ಸುವಾರ್ತಾಯುಗದಲ್ಲಿ ಅದನ್ನು ಕಂಡುಕೊಳ್ಳುವುದೂ ಮತ್ತು ಅದನ್ನು ಪ್ರವೇಶಿಸುವುದು ಎರಡೂ ಕಷ್ಟಕರ ಎಂದು ಹೇಳಿದ್ದಾನೆ ಮತ್ತು ಪ್ರವೇಶಿಸುವದಕ್ಕೆ ಹೆಚ್ಚಿನ ಪ್ರಯಾಸಪಡಬೇಕೆಂದು ಬುದ್ಧಿ ಹೇಳಿದ್ದಾನೆ, ನಾವು ನಿತ್ಯಜೀವವನ್ನು ಮತ್ತು ದೇವರರಾಜ್ಯದ ಗೌರವಗಳನ್ನು ಹಂಚಿಕೊಂಡರೆ ಅದಕ್ಕೆ ಈ ಬಾಗಿಲೇ ಹೊರತು ಬೇರೆಯಾವ ಬಾಗಿಲೂ ನಡೆಸುವುದಿಲ್ಲ. ಆದುದರಿಂದ, ಆತನು "ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗುವುದಕ್ಕೆ ಹೆಣಗಾಡಿರಿ. ಬಹು ಜನ ಒಳಕ್ಕೆ ಹೋಗುವುದಕ್ಕೆ ನೋಡುವರು. ಆದರೆ ಅವರಿಂದಾಗುವುದಿಲ್ಲ. ಮನೇ ಯಜಮಾನನು ಎದ್ದು ಕದ ಹಾಕಿಕೊಂಡ ಮೇಲೆ ನೀವು ಹೊರಗೆ ನಿಂತುಕೊಂಡು ಕದ ತಟ್ಟಿ – ಸ್ವಾಮೀ, ನಮಗೆ ತೆರೆಯಿರಿ ಎಂದು ಹೇಳುವುದಕ್ಕೆ ತೊಡಗುವಾಗ ಅವನು – ನೀವು ಎಲ್ಲಿಯವರೋ, ನಿಮ್ಮ ಗುರುತು ನನಗಿಲ್ಲ ಅಂದಾನು" (ಲೂಕ 13 : 24–25) ಎಂದಿದ್ದಾನೆ. ಈ ಇಕ್ಕಟ್ಟಾದ ಹಾದಿ ನಾವು ಈಗಾಗಲೇ ಕಂಡುಕೊಂಡಂತೆ* ದೇವರ ಯೋಜನೆ ಮತ್ತು ಕಾರ್ಯದ ಆಸಕ್ತಿಯಲ್ಲಿ ಸ್ವಾರ್ಥತ್ಯಾಗದ ಮಾರ್ಗವಾಗಿದೆ. ಪ್ರಸ್ತುತ ಪರಿಸ್ಥಿತಿಗಳಿಗನುಸಾರವಾಗಿ ಸತ್ಯ ಹಾಗೂ ನೀತಿವಂತಿಕೆಯ ವಿರೋಧವಾದ ಈ ಲೋಕದ ಆತ್ಮನಿಂದ ಹಾದಿಯನ್ನು ಇಕ್ಕಟ್ಟಾಗಿ ಮಾಡಲಾಗಿದೆ. ಹೀಗಾಗಿ ಯಾರು ನಮ್ಮ ನಾಯಕನ ಮತ್ತು ಮುಂದೂತನ ಹೆಜ್ಜೆಜಾಡಿನಲ್ಲಿ ನಡೆಯುತ್ತಾರೋ ಅಂಥವರು ಹಾದಿಯನ್ನು ಇಕ್ಕಟ್ಟುಳ್ಳದ್ದಾಗಿ ಅಥವಾ ಕಷ್ಟಕರವಾದುದ್ದೆಂಬುದಾಗಿ ಕಂಡುಕೊಳ್ಳುತ್ತಾರೆ ಮತ್ತು ಉಪದ್ರವಗಳನ್ನು ಅನುಭವಿಸಲೇ ಬೇಕಾಗುತ್ತದೆ. ನಮ್ಮ ಕರ್ತನು ನಾವು ಆತನ ಹೆಜ್ಜೆಜಾಡಿನಲ್ಲಿ ನಡೆಯಬೇಕೆಂಬ ಮಾದರಿಯನ್ನು ಹಾಕಿಕೊಟ್ಟಿರುವಂತೆ, ಈ ಮಾರ್ಗದಲ್ಲಿ ನಡೆಯುವುದು

* (Vol. I, page 203)

ಆತನ ಪ್ರವೃತ್ತಿಗೆ ಅಥವಾ ಚೈತನ್ಯಕ್ಕೆ ಅವಿರೋಧ ಅನುಸರಣೆಯ ಅಭಿಪ್ರಾಯವನ್ನು ಸೂಚಿಸುತ್ತದೆಯಲ್ಲದೆ, ಆತನ ಸತ್ಯವನ್ನು ಎಲ್ಲಾ ಕಂಟಕಗಳಲ್ಲಿ ಆಸಕ್ತವಾದ, ಉತ್ಸಾಹಕರ ಉತ್ಕಂಠತೆಯೊಡನೆ ಪ್ರಸಿದ್ಧಿ ಪಡಿಸುವಿಕೆಯನ್ನು ತೋರಿಸುತ್ತದೆ. ಈ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವವರೆಲ್ಲರೂ ಆತನು ಮರಣ ಪರ್ಯಂತ ನಂಬಿಗಸ್ತನಾಗಿದ್ದಂತೆಯೇ ನಂಬಿಗಸ್ತರಾಗಿರುವರು, ಆತನ ಶ್ರಮೆಯಲ್ಲಿ ಸಹಭಾಗತ್ವವುಳ್ಳವರಾಗಿರುವರು ಮತ್ತು ಸೂಕ್ತ ಸಮಯದಲ್ಲಿ ವಿವಾಹದ ಔತಣದಲ್ಲಿನ ಆತನ ಮಹಿಮೆಯಲ್ಲಿ, ಆತನ ಪ್ರತ್ಯಕ್ಷತೆ ಮತ್ತು ರಾಜ್ಯದಲ್ಲಿ ಬಹಿರಂಗವಾಗಲಿರುವ ಆತನ ಮಹಿಮೆಯಲ್ಲಿ ಸಾಂಗತ್ಯವನ್ನು ಹೊಂದಿಕೊಳ್ಳುವರು (ಫಿಲಿಪ್ಪಿ 3:10; 1 ಪೇತ್ರ4 : 13).

ಅದರ ಭವ್ಯವಾದ ಸಮಾಪ್ತಿಯ ದೃಷ್ಟಿಕೋನದಲ್ಲಿ, ಸತ್ಯದ ಸಲುವಾಗಿ ಸ್ವಾರ್ಥ ತ್ಯಾಗದ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವ ಅವಕಾಶವು ಯಾವುದೇ ಸೃಷ್ಟಿಗೂ ಯಾವಾಗಲಾದರೂ ಒಮ್ಮೆ ದೊರೆಯುವ ಅತ್ಯಂತ ಭವ್ಯವಾದ ಸದಾವಕಾಶವಾಗಿದೆ. ಕ್ರಿಸ್ತನೊಡನೆ ಆತನನ್ನು ನಮ್ಮ ವಿಮೋಚಕನೆಂದು ಮೊದಲು ಗ್ರಹಿಸಿದ ನಂತರದಲ್ಲಿ ಆತನ ನಿಮಿತ್ತ ಶ್ರಮೆಯನ್ನನುಭವಿಸುವ ಭಾಗ್ಯವು ಈ ಕಾರಣದಿಂದ ಒಂದು ಬಾಗಿಲಾಗಿದೆ ಮತ್ತು ಅವಕಾಶದ ಏಕೈಕ ಬಾಗಿಲಾಗಿದೆ, ಇದರ ಮೂಲಕವಾಗಿ ಮದಲಿಂಗ ಮತ್ತು ಕ್ರಿಸ್ತನಲ್ಲಿ ಆತನ ಜೊತೆಬಾಧ್ಯಸ್ಥನು ತಲುಪಬಹುದಾದ ಮಹಿಮೆಯನ್ನು ಇದು ಅನುಸರಿಸುತ್ತದೆ.

ಈ ಬಾಗಿಲಿನ ಮುಚ್ಚುವಿಕೆಯನ್ನು ತೋರಿಸುವ ಮೂರು ವಿಧಾನಗಳಿವೆ; ಮೊದಲನೆಯದು, ದಿನಾಂಕದ ಬಗ್ಗೆ ಸತ್ಯವೇದದ ನಿಶ್ಚಿತವಾದ ಹೇಳಿಕೆಯ ಮೂಲಕ; ಎರಡನೆಯದು ಸತ್ಯದ ಬಗ್ಗೆ ಸಾರ್ವಜನಿಕ ಭಾವನೆಗಳು ಹಿಮ್ಮುಖವಾಗುವುದರ ಮೂಲಕ, ಅದರ ಸೇವೆಯಲ್ಲಿನ ನಿಷ್ಠೆ ಮತ್ತು ಉತ್ಕಂಠತೆಗಳು ಇನ್ನು ಮುಂದೆ ವಿರೋಧವನ್ನು ಸಂಧಿಸುವುದಿಲ್ಲ, ಮತ್ತು ಸತ್ಯದ ಸಲುವಾಗಿ ಕ್ರಿಸ್ತನೊಡನೆ ಶ್ರಮೆಯನ್ನನುಭವಿಸುವಾಗ (ರೋಮಾ. 8:17) ಇದು ಎಂದಿಗೂ ಸಾಧ್ಯವಾಗುವುದಿಲ್ಲ. ಅಥವಾ ಮೂರನೆಯದಾಗಿ, ಲೋಕದಲ್ಲಿ ದೊರೆಯುವ ಸಂಗತಿಗಳ ಅಂತಹ ಪರಿಸ್ಥಿತಿಗಳಿಂದ ಅಂತಹ ಸೇವೆಗೆ ಎಲ್ಲಾ ಅವಕಾಶಗಳೂ ಪರಿಣಾಮಕಾರಿಯಾಗಿ ಅಡ್ಡಗಟ್ಟುತ್ತವೆ ಮತ್ತು ಈ ರೀತಿಯಲ್ಲಿ ಅಭ್ಯರ್ಥಿಗಳಿಗೆ ಕಾರ್ಯದೊಳಕ್ಕೆ ಪ್ರವೇಶಿಸುವ, ಅದನ್ನು ಅಭಿವೃದ್ಧಿ ಪಡಿಸುವ, ತಮ್ಮ ಚಟುವಟಿಕೆ ಮತ್ತು ಸಹಿಷ್ಣುತೆಯ ಮೂಲಕ ತಮ್ಮ ಪ್ರೀತಿಯನ್ನು ಸಾಬೀತುಪಡಿಸುವ ಅವಕಾಶವಿರುವುದಿಲ್ಲ.

ಈ ಸುಗ್ಗಿಯ ಯಾವುದಾದರೂ ಸಮಯದಲ್ಲಿ ಅಥವಾ ಯುಗದ ಅಂತ್ಯದಲ್ಲಿ ಬಾಗಿಲು ಮುಚ್ಚಲ್ಪಡುವುದು ಎಂಬುದನ್ನು ನಮಗೆ ನಿಶ್ಚಿತವಾಗಿ ತಿಳಿಯಪಡಿಸಿದೆಯಾದರೂ, ಸತ್ಯವೇದವು ನಿಖರವಾದ ದಿನಾಂಕವನ್ನು ನೀಡುವುದಿಲ್ಲ. ಮಹಾಸಂಕಟದ ಸಮಯದ ನಂತರ ಸತ್ಯ ಮತ್ತು ನ್ಯಾಯದ ಪರವಾಗಿ ಸಾರ್ವಜನಿಕ ಭಾವನೆಗಳಲ್ಲಿ ಭವ್ಯವಾದ ಪರಿವರ್ತನೆ ಇರುವುದಾದರೂ ಸಂಗತಿಗಳ ಅಂತಹ ಪರಿಸ್ಥಿತಿಯು ಸುಗ್ಗಿಯವರೆಗೆ ಮತ್ತು ನಂತರದಲ್ಲಿ ಸುಗ್ಗಿಯು ಪೂರ್ಣವಾಗಿ ಮುಕ್ತಾಯವಾಗುವವರೆಗೂ ಲಭ್ಯವಾಗುವುದು ಎಂಬುದಕ್ಕೆ ನಮಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಆದರೆ ನಮಗೆ ಹಿಂದೆ ಹೆಸರಿಸಿದ ರೀತಿಯಲ್ಲಿ ಬಾಗಿಲು ಸಹಸ್ರಮಾನದ ದಿನವು ಬೇಧಿಸುವುದರೊಳಗೆ ಮುಚ್ಚಲ್ಪಡುತ್ತದೆ ಎಂಬ ಮಾಹಿತಿ ನಮಗುಂಟು. ಯಾವ ಮನುಷ್ಯನೂ ಕೆಲಸ ಮಾಡಲಾಗದ ಅಂಧಕಾರದ ರಾತ್ರಿಯ ಬಗ್ಗೆ ನಮಗೆ ಮುನ್ನೆಚ್ಚರಿಕೆ ನೀಡಲಾಗಿದೆ – "ಉದಯವು ಬರುತ್ತದೆ, ರಾತ್ರಿಯೂ ಬರುತ್ತದೆ" (ಯೆಶಾಯ 21:12. ಮತ್ತು ಎರಡನೆಯ ಸಂಪುಟ ಅಧ್ಯಾಯ viiiನ್ನೂ ನೋಡಿರಿ).

ನಮಗೆ ತೆರೆಯಲ್ಪಟ್ಟ ಇಕ್ಕಟ್ಟಾದ ಮಾರ್ಗವು ಈಗ ನಾವು ಕರ್ತನೊಡನೆ ಸಹಕರಿಸುವಂತಹ ಭಾಗ್ಯವೂ, ಸದವಕಾಶವೂ ಆಗಿದೆ. ಆಗ ಆತನ ನಮ್ರತೆಯ ಉತ್ಸಾಹವು, ದೇವರ ಬಗೆಗಿನ ಆತನ ಉತ್ಕಂಠತೆ ಮತ್ತು ನಿಷ್ಠೆಯು ಪ್ರಕಟಗೊಳ್ಳುತ್ತದೆ ಮತ್ತು ಆತನ ಸತ್ಯವು ಈ ಲೋಕದ ಅನುಕೂಲಗಳಿಗೆ ಬೆಲೆತೆತ್ತುವಂತೆ ಇರುತ್ತದೆ. ಆಗ ಆತನು ವೀರಾಗ್ರೇಸನಾಗಿ ಹೋರಾಡಿದ ಉದ್ದೇಶವು ಮತ್ತು ಆತನು ಮುಂದುವರಿಸಿದ ಸತ್ಯಗಳು ನಮಗೆ ಲೇಷ ಮಾತ್ರವೂ, ಜನಪ್ರಿಯವಲ್ಲದ್ದೂ ಎಂದು ಹೇಳುವಂತೆ ಮಾಡುತ್ತದೆ. ಅತನ ಹೆಸರನ್ನು ಗೌರವಿಸುವ ನಮ್ಮ ಸಾಹಸಗಳು, ನಮ್ಮ ಜೊತೆ ಮಾನವರನ್ನು ಸತ್ಯದಿಂದ ಆಶೀರ್ವದಿಸುವುದು, ನಮ್ಮ ಬೆಳಕು ಪ್ರಕಾಶಿಸಲು ಬಿಡುವುದು ನಮ್ಮ ಮೇಲೆ ನಿಂದನೆಯನ್ನು, ತಪ್ಪಾದ ನಿರೂಪಣೆಯನ್ನು ಮತ್ತು ಒಂದು ರೀತಿಯ ಉಪದ್ರವವನ್ನು ತರುತ್ತವೆ. ನಾವು ಕಂಡಂತೆ, ಇಕ್ಕಟ್ಟಾದ ಬಾಗಿಲು ತೆರೆದಿರುವುದಾದರೆ, ಆ ರೀತಿಯಲ್ಲಿ ಮರಣದ ಪರ್ಯಂತ ಯಾವುದೇ ಬೆಲೆತೆತ್ತು ಪ್ರಾಮಾಣಿಕರಾಗಿ ತ್ಯಾಗ ಮಾಡಿದವರ ಭಾಗ್ಯವು, ಎಲ್ಲಾ ಅಂತಹ

ಅವಕಾಶಗಳು ಆ ರೀತಿಯ ಸೇವೆಯ ಸಾಂಗತ್ಯಕ್ಕೆ ಮುಕ್ತಾಯವಾಗುವುದು ಮತ್ತು ಸಂಕಟಗಳು ಆ ಬಾಗಿಲನ್ನು ಮುಚ್ಚುವುದು, ಇಕ್ಕಟ್ಟಾದ ಹಾದಿಯನ್ನು ಭವಿಷ್ಯದ ಮಹಿಮೆಗೆ ಮತ್ತು ಜೊತೆ ಬಾಧ್ಯಸ್ಥಿಕೆಗೆ ಪ್ರತಿಬಂಧಿಸಲಾಗುವುದು. ಕ್ರಿಸ್ತನೊಡನೆ ನಮ್ಮ ಆಳ್ವಿಕೆಯು ಆತನ ಸೇವೆಯಲ್ಲಿ ನಾವು ತೋರುವ ಪ್ರಾಮಾಣಿಕತೆಗೆ ಶರತ್ತುಬದ್ಧವಾಗಿದೆ. ಈಗ ಅದು ಆತನೊಡನೆ ಶ್ರಮೆಯನ್ನನುಭವಿಸುವುದಾಗಿದೆ (ರೋಮಾ. 8:17; 6:8).

ಮತ್ತು ಕ್ರಿಸ್ತನೊಂದಿಗೆ ಬಾಧೆಯನ್ನನುಭವಿಸುವುದು, ಬಿದ್ದು ಹೋದ ಸ್ಥಿತಿಯಲ್ಲಿ ಎಲ್ಲರಿಗೂ ಸಾಮಾನ್ಯವಾದ ಬಾಧೆಯಲ್ಲವೆಂಬುದನ್ನು ನಾವು ನೋಡಿದ್ದೇವೆ. ಆದರೆ ಅಂಥಾಃ ಬಾಧೆಗಳು ಹೆಚ್ಚು ಕಡಿಮೆ ಕ್ರಿಸ್ತನ ಮಾದರಿಯನ್ನು ಅನುಸರಿಸುವವರಿಗೆ ಜನಪ್ರಿಯವಲ್ಲದ ಸತ್ಯಗಳನ್ನು ಬೆಂಬಲಿಸುವವರಿಗೆ ಮತ್ತು ಜನಪ್ರಿಯ ಅಸತ್ಯಗಳನ್ನು ಬಹಿರಂಗ ಮಾಡುವವರಿಗೆ ನೇರವಾದ ಫಲಿತಾಂಶವನ್ನು ನೀಡುತ್ತದೆ. ಕ್ರಿಸ್ತನ ಬಾಧೆಗೆ ಇಂಥವುಗಳೇ ಕಾರಣ; ಅಂಥವುಗಳೇ, ಆತನ ಹೆಜ್ಜೆಜಾಡಿನಲ್ಲಿ ನಡೆಯುವವರಿಗೆ ಒದಗಿ ಬರುವ ಹಿಂಸೆಗಳಿಗೂ, ಬಾಧೆಗಳಿಗೂ ಮತ್ತು ನಷ್ಟಗಳಿಗೂ ಕಾರಣವಾಗಿವೆ. ಅವರುಗಳು ಈಗ ಆತನ ಬಾಧೆಗಳಲ್ಲಿ ಸಾಂಗತ್ಯವನ್ನು ಹೊಂದಿದ್ದಾರೆ ಮತ್ತು ಅಂತ್ಯದಲ್ಲಿ ತತ್ವವಿಧಿಗಳಿಗೆ ಪ್ರಾಮಾಣಿಕರಾಗಿರುವವರಿಗೆ ದೊರೆಯುವ ಬಹುಮಾನದಲ್ಲಿ ಪಾಲುದಾರರಾಗುವರೆಂದು ಎಣಿಸಲ್ಪಡುತ್ತಾರೆ. ಇದು ಸುವಾರ್ತಾಯುಗದಾದ್ಯಂತ ಕ್ರಿಸ್ತನ ಸಿದ್ಧಾಂತಗಳನ್ನು ಬಿತ್ತಿ ಅದಕ್ಕೆ ನೀರುಣಿಸುವಲ್ಲಿ ಸ್ವಾರ್ಥತ್ಯಾಗದ ಶ್ರಮೆ ಮತ್ತು ನಿಂದನೆಯ ಸಹನೆ ಎಂಬ ಅರ್ಥವನ್ನು ನೀಡುವುದಾಗಿದೆ; ಮತ್ತು ಈಗ ಯುಗದ ಅಂತ್ಯದಲ್ಲಿ ಅದರ ಅರ್ಥ ಈಗ ಪ್ರಗತಿಯಲ್ಲಿರುವ ಸುಗ್ಗಿಯಲ್ಲಿ ಅದೇ ರೀತಿಯಾದ ಸ್ವಾಮಿನಿಷ್ಠೆ ಮತ್ತು ಸಹಿಸಿಕೊಳುವುದಾಗಿದೆ – ಪ್ರಾಣವನ್ನು ಅರ್ಪಿಸುವುದರಲ್ಲಿಯೂ, ಅದು ಸ್ವಾಮಿಯ ಸೇವೆಯಲ್ಲಿ ಮಾಡುವ ಕ್ರಮೇಣವಾದ ಕಾರ್ಯಗಳ ಪ್ರಕ್ರಿಯೆಯಲ್ಲಿ ಬೇಕಾಗಬಹುದಾದರೂ ನಿತ್ಯವೂ ಸಾಯುವುದು, ಅಥವಾ ಹತಸಾಕ್ಷಿಯ ಥಟ್ಟನೆ ಸಂಭವಿಸುವ ಮರಣಕ್ಕೆ ಒಮ್ಮಿಂದೊಮ್ಮೆಲೇ ತರುವುದಾಗಿದೆ.

ಪರಿಗ್ರಹಿತ ಕನ್ಯೆಯಾದ ಸಭೆಯು ಮದಲಗಿತ್ತಿ, ಕುರಿಮರಿಯ ವಧುವಾಗುತ್ತಾಳೆ. ಆಕೆಯು ಪಾಪರಹಿತವಾಗಿ ಮಾತ್ರವಲ್ಲ. ಆಕೆಯು ಪವಿತ್ರಳಾದರೂ, ನಿಷ್ಕಳಂಕಳೂ, ಯಾವುದೇ ಕಲೆ ಅಥವ ಸುಕ್ಕು ಇಲ್ಲದವಳೂ ಆಗಿರುತ್ತಾಳೆ (ಎಫೆಸ 5:27), ವಿಮೋಚನ ಪ್ರೀತಿಯ ಮಹಾ ಚಿಲುಮೆಯಲ್ಲಿ ಹಿಮಕ್ಕಿಂತಲೂ ಬೆಳ್ಳಗಾಗುತ್ತಾಳೆ. ಅದು ಆಕೆಯ ವಿಮೋಚಕನ ಅರ್ಹತೆಯಾಗಿದೆ. ಇದು ಯಾವುದೇ ನೆಲೆಯಲ್ಲಿಯೂ ಅರ್ಹರಾಗಿ ಬಾಳಿಕೆ ಬರುವ ಎಲ್ಲರಿಗೂ ಅಗತ್ಯವಾಗಿದೆ. ಆದರೆ, ಕುರಿಮರಿಯ ವಧುವಾಗಲು ಆಕೆಯು ಪರಿಶುದ್ಧಳಾದ ಕನ್ಯೆಯೂ ಆಗ ಬೇಕಾಗಿರುತ್ತಲ್ಲದೆ ಅದರೊಂದಿಗೆ ಪಾಪಭರಿತ ಸಂಬಂಧಗಳಿಂದ, ಲೋಕದ ಒನಪು ವಯ್ಯಾರಗಳಿಂದ ಮುಕ್ತಳಾಗಿರಬೇಕಲ್ಲದೆ ಅದಕ್ಕಿಂತಲೂ ಹೆಚ್ಚು, ಬಹಳಷ್ಟು ಹೆಚ್ಚಾಗಿರಲೇ ಬೇಕಾಗುತ್ತದೆ. ಆಕೆಯು ಕರ್ತನನ್ನು ಸಮೀಪವಾಗಿ ಹೋಲುವಂತಿರಬೇಕು, ಬಹು ನಿಕಟವಾಗಿ ಆತನ ಹೆಜ್ಜೆಜಾಡನ್ನು ಮತ್ತು ಆತನ ಸಮಾಲೋಚನೆಗಳನ್ನು ಅನುಸರಿಸಬೇಕು, ಈ ಕಾರಣಗಳಿಂದ ಆಕೆಯು ಬಾಧೆಯನ್ನನುಭವಿಸಬೇಕಾಗುತ್ತದೆ, ಮತ್ತು ಸತ್ಯದ ಮತ್ತು ನೀತಿವಂತಿಕೆಯ ಅದೇ ತತ್ವಗಳ ಸಲುವಾಗಿ ಆತನಂತೆ ಹತಸಾಕ್ಷಿಯೂ ಆಗಬಹುದು, ಆಕೆಯು ತನ್ನಲ್ಲಿ ಮದಲಿಂಗನಿಗಾಗಿ ವ್ಯಯಮಾಡುವಷ್ಟು ಪ್ರೀತಿ ಮತ್ತು ಆತನ ಹೆಸರು ಮತ್ತು ತತ್ವಗಳ ಬಗ್ಗೆ ದಣಿವಿಲ್ಲದ ಭಕ್ತಿ ಇದೆ ಎಂಬುದನ್ನು ಆದ ಕಾರಣ ಆತನ ಸಿದ್ಧಾಂತಗಳ ಬಗ್ಗೆ ವಿಧೇಯಳಾಗುವ ಸಲುವಾಗಿ ಲೋಕದ ನಿಂದನೆಗೂ, ತಿರಸ್ಕಾರಕ್ಕೂ ಸಿದ್ಧಳಿದ್ದಾಳೆಂಬುದನ್ನು ಸಾಬೀತು ಪಡಿಸಬೇಕು.

ಈ ಗುಣಲಕ್ಷಣವನ್ನು ಅಭಿವೃದ್ಧಿಪಡಿಸುವುದಕ್ಕೂ ಮತ್ತು ನಿರೂಪಿಸುವುದಕ್ಕೂ ಆಕೆಯನ್ನು ವಿಚಾರಣೆಗೊಳಪಡಿಸಿ ಪರೀಕ್ಷಿಸಬೇಕು. ಆಕೆಯ ಆತ್ಮವಿಶ್ವಾಸ, ಆಕೆಯ ಸಹನಾಶಕ್ತಿ, ಕೆಟ್ಟ ಮತ್ತು ಒಳಿತುಗಳಲ್ಲಿ ಕರ್ತನ ಬಗ್ಗೆ ಆಕೆಗಿರುವ ಸ್ವಾಮಿನಿಷ್ಠೆಯನ್ನು ಅಭಿವೃದ್ಧಿ ಪಡಿಸಬೇಕು ಮತ್ತು ಸಾಬೀತುಪಡಿಸಬೇಕು. ಆ ರೀತಿಯಲ್ಲಿ ಅಭಿವೃದ್ಧಿ ಹೊಂದಿದವರು ಮತ್ತು ಪರೀಕ್ಷಿಸಲ್ಪಟ್ಟವರು, ಮತ್ತು ಪರೀಕ್ಷೆಯ ಮೂಲಕ ಪ್ರಾಮಾಣಿಕರೆಂದು ರುಜುವಾತುಪಟ್ಟವರು ಮಾತ್ರವೇ ಸದಾಕಾಲ ಮದಲಗಿತ್ತಿಯೆಂದು, ಕರ್ತನೊಂದಿಗೆ ಜೊತೆ ಬಾಧ್ಯಸ್ತರೂ, ಎಲ್ಲವುಗಳಿಗೆ ವಾರಸುದಾರು ಎಂದು ಅಂಗೀಕರಿಸಲ್ಪಡುವರು. “ಕಷ್ಟವನ್ನು ಸಹಿಸಿಕೊಳ್ಳುವವನು ಧನ್ಯನು, ಅವನು ಪರಿಶೋಧಿತನಾದ ಮೇಲೆ ಜೀವವೆಂಬ ಜಯಮಾಲೆಯನ್ನು ಹೊಂದುವನು. ಸ್ವಾಮಿಯು ತನ್ನನ್ನು ಪ್ರೀತಿಸುವವರಿಗೆ ಇದನ್ನು ವಾಗ್ದಾನ ಮಾಡಿದ್ದಾನೆ” (ಯಾಕೋಬ 1:12) ಎಂದು ಬರೆದಿರುವಂತೆ ಅದನ್ನು ತೀಕ್ಷ್ಣವಾಗಿ, ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಹುದು, ನಮ್ಮ ನಿಷ್ಠೆಯ ಪರೀಕ್ಷೆಯು ಸಹ ಮದಲಿಂಗನಿಗೆ ತಮ್ಮ ಪ್ರೀತಿಯ ಆಳ

ಮತ್ತು ಶಕ್ತಿಯನ್ನು ತೋರಿಸುವಂತೆ ಒಂದು ಹೊಸ ಅವಕಾಶವೆಂಬಂತೆ ಮತ್ತು ಆತನ ಪ್ರೀತಿ ಮತ್ತು ಭರವಸೆಗೆ, ವಾಗ್ದಾನಪಡಿಸಿದ ಉನ್ನತಿಗೆ ಮತ್ತೊಂದು ಅರ್ಹತೆ ಎಂಬಂತೆ ಸಂತೋಷವಾಗಿ ಕೈಗೂಡಬೇಕು. ಬರಲಿರುವ ಮಹಿಮೆಯನ್ನು ಕ್ರಿಸ್ತನೊಂದಿಗೆ ಹಂಚಿಕೊಳ್ಳುವವರು ಕರೆಯಲ್ಪಟ್ಟವರು ಮತ್ತು ಅಂಗೀಕರಿಸಲ್ಪಟ್ಟವರು ಮಾತ್ರವಾಗಿರದೆ ಮರಣ ಪರ್ಯಂತ ಪ್ರಾಮಾಣಿಕರಾಗಿರಬೇಕು (ಪ್ರಕಟನೆ 17:14).

ಈ ರೀತಿಯಲ್ಲಿ ನಮ್ಮ ಕರ್ತನಾದ ಯೇಸುವಿನೊಡನೆ ಸುವಾರ್ತಾಯುಗದ ಕಾರ್ಯದಲ್ಲಿ ನಿಶ್ಚಯಪಡಿಸಿಕೊಳ್ಳುವ ಬಾಗಿಲು ರಾತ್ರಿ ಬರುವಾಗ ಮುಚ್ಚಲ್ಪಡುತ್ತದೆ. "ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸಮಾಡಲಾರರು" (ಯೋಹಾನ 9:4). ಯಾರು ಈ ಮೊದಲು ನಿಷ್ಠಾವಂತ ಸೇವೆಯಿಂದ ಅಗತ್ಯವಾದ ಗುಣಲಕ್ಷಣಗಳನ್ನು ಮತ್ತು ಕರ್ತನ ಮತ್ತು ಆತನ ಸತ್ಯದ ಬಗ್ಗೆ ಸಹಾನುಭೂತಿ, ಭಕ್ತಿ, ಪ್ರೀತಿ ಮತ್ತು ಉತ್ಕಂಠತೆಯನ್ನು ಬೆಳಸಿಕೊಂಡಿಲ್ಲವೋ ಅಂಥವರು ಈಗ ಹಾಗೆ ಮಾಡಲು ತಡವಾಗುವುದು (ಮತ್ತಾಯ 10:37; ಮಾರ್ಕ 8:38). ಸಾಮ್ಯದಲ್ಲಿ ಪ್ರತಿನಿಧಿಸಿರುವಂತೆ, ಅವರು ಆತನಿಗಾಗಿ ಬಾಧೆಪಡುವ ಮತ್ತು ಆ ರೀತಿಯಲ್ಲಿ ಆತನೊಂದಿಗೆ ಸಂತೋಷವಾಗಿ ರಾಜ್ಯಭಾರ ಮಾಡುವ ಮಹಾಭವ್ಯವಾದ ಅವಕಾಶವನ್ನು ಕಳಕೊಳ್ಳುವುದರ ಮೂಲಕ "ಮೂರ್ಖ ಕನ್ಯೆಯರು" ಎಂಬುದಾಗಿ ಸಾಬೀತುಪಡಿಸಿಕೊಂಡಿರುತ್ತಾರೆ. ಆ ವೇಳೆಗೆ, ಕರ್ತನಿಂದ ಸಭೆಯನ್ನು ರಚಿಸಿ ಪೂರ್ಣಗೊಳಿಸಲು ನೇಮಿಸಲ್ಪಟ್ಟ ಪೂರ್ಣಸಂಖ್ಯೆಯವರನ್ನು ಕರೆಯಲಾಗಿದ್ದು, ಆರಿಸಲ್ಪಟ್ಟು ಮತ್ತು ಪರೀಕ್ಷೆಯಿಂದ ಪ್ರಾಮಾಣಿಕರೆಂದು – ಆತನ ಮಗನ ಸ್ವಾರೂಪ್ಯವುಳ್ಳವರಾಗಿ ಸಾಬೀತುಗೊಳ್ಳುತ್ತಾರೆ (ರೋಮಾ. 8:29). ಸುಗ್ಗಿಯು ದಾಟಿ ಹೋಗುತ್ತದೆ, ಅನುಕೂಲಕರವಾದ ಬೇಸಿಗೆಯ ಸಮಯವು ಮುಕ್ತಾಯಗೊಳ್ಳುತ್ತದೆ, ಕೇವಲ ಹಣಜಿಗಳ ಸುಡುವಿಕೆ ಹೊಲವನ್ನು (ಮಾನವ ಜಾತಿಯ ಲೋಕವನ್ನು) ಸ್ವಚ್ಛಗೊಳಿಸುವುದು ಮತ್ತು ಅದನ್ನು ಸಹಸ್ರಮಾನದ ಇನ್ನೂ ವಿಸ್ತಾರವಾದ ಬಿತ್ತುವಿಕೆಗೆ ಸಿದ್ಧಪಡಿಸುವುದು ಉಳಿದುಕೊಳ್ಳುತ್ತದೆ.

ಈ ರಾತ್ರಿಯ ಮುಕ್ತಾಯವು ಸ್ಪಷ್ಟವಾಗಿ ಸತ್ಯವನ್ನು ಹರಡುವಂತೆ ಮಾಡುವ ಯಾವುದೇ ಮುಂದಿನ ದುಡಿಮೆಯನ್ನು ನಿಲ್ಲಿಸುತ್ತದೆ, ಇದನ್ನು ಸಾಮಾನ್ಯವಾಗಿ ಜನರು ತಪ್ಪಾಗಿ ತಿಳಿದುಕೊಂಡು, ಅದು ದೈವಿಕ ಮನಸ್ಸಿನ ಪೂರ್ವಭಾಯೆ ಮತ್ತು ಲೋಕಕ್ಕೆ ಬರಲಿರುವ ತೊಂದರೆಗಳ ಮತ್ತು ಅವುಗಳ ನಿಜವಾದ ಕಾರಣಗಳ ಬಹಿರಂಗಪಡಿಸುವಿಕೆಯಾಗಿದೆ ಎಂಬ ಅದರ ಸತ್ಯವಾದ ಬೆಳಕಿನಲ್ಲಿ ನೋಡುವ ಬದಲು ಬಹುಶಃ ಹೆಚ್ಚಾದ ಅರಾಜಕ ಸ್ಥಿತಿ, ಮತ್ತು ಆಗ ಪ್ರಚಲಿತವಾಗಿರುವ ಗೊಂದಲದ ಪರಿಸ್ಥಿತಿ ಇವುಗಳಿಗೆ ಕಾರಣರೆಂದು ಆರೋಪಿಸಲ್ಪಡುತ್ತಾರೆ. ರಾತ್ರಿಯ ಬರುವಿಕೆ ಮತ್ತು ಬಾಗಿಲು ಮುಚ್ಚುವಿಕೆ ತಕ್ಷಣದ್ದಾಗಿದೆ ಎಂದು ನಾವು ನಿರೀಕ್ಷಿಸಬಾರದು; ನಿಜವಾಗಿ ಹೇಳುವುದಾದರೆ ಅದು ಕ್ರಮೇಣವಾದುದು ಮತ್ತು ಸುಗ್ಗಿಯ ಕೆಲಸವನ್ನು ಮುಗಿಸುವಂಥಾದ್ದು ಆಗಿದೆ.

ಪ್ರಸ್ತುತ ಸಮಯವು, ಸಂಕಟದ ಬಿರುಗಾಳಿ ಬೀಸುವ ಮೊದಲು ದೇವರ ಸೇವಕರ ಹಣೆಯ ಮೇಲೆ ಮುದ್ರಿಸುವ ಸಮಯವಾಗಿದೆ (ಪ್ರಕಟನೆ7:2,3); ಮತ್ತು ಪ್ರತಿಯೊಬ್ಬ ಬುದ್ಧಿವಂತ ಕನ್ಯೆಯೂ ಪ್ರಸ್ತುತದಲ್ಲಿರುವ ಅವಕಾಶಗಳನ್ನು ಮೆಚ್ಚಿಕೊಳ್ಳಬೇಕು; ಪ್ರಸ್ತುತ ಸತ್ಯದಿಂದ ಆತನ ಸ್ವಂತ ಬೌದ್ಧಿಕ ಮುದ್ರೆಯನ್ನು ಹೊಂದುವದನ್ನು ಮತ್ತು ಸುಗ್ಗಿಯ ಕಾರ್ಯದಲ್ಲಿ ಗೋಧಿಯ ವರ್ಗದ ಇತರರನ್ನು ಮುದ್ರಿಸುವ ಕೆಲಸವು ಮತ್ತು ರಾತ್ರಿಯು ಬರುವುದರೊಳಗಾಗಿ, ಬಾಗಿಲು ಮುಚ್ಚುವುದರೊಳಗಾಗಿ ಅವರನ್ನು ಸುರಕ್ಷತೆಯ ಉಗ್ರಾಣಕ್ಕೆ ಒಂದುಗೂಡಿಸುವಂತೆ ತೊಡಗಿಸಿಕೊಳ್ಳುವುದನ್ನು ಮೆಚ್ಚಿಕೊಳ್ಳಲೇಬೇಕು.

ಪ್ರಸ್ತುತವಾದ ಅತ್ಯಂತ ಅನುಕೂಲಕರ ಅವಕಾಶವು ಸಂಕ್ಷಿಪ್ತವಾದುದು ಮತ್ತು ಅದು ಕೇವಲ ಇಪ್ಪತ್ತನಾಲ್ಕು ವರ್ಷಗಳ ಸುಗ್ಗಿಯ ಅವಧಿ ಬಾಕಿ ಅದೆ ಎಂಬುದನ್ನು ಪ್ರಕಟಿಸುತ್ತದೆ. ಅದರ ನಂತರ ನಾವು ಕೆಡುಕನ ಆಡಳಿತದ ಅಂತ್ಯವನ್ನು ಮತ್ತು ಭವ್ಯವಾದ ಸಹಸ್ರಮಾನದ ದಿನಕ್ಕೆ ಪ್ರವೇಶಿಸುವುದನ್ನು ಕಣ್ಣಾರೆ ಕಾಣುತ್ತೇವೆ. ಆ ಭವ್ಯವಾದ ದಿನದ ಮುಂಚೆ ಈ ಲೋಕದ ಮಾಹಾಯಾತನೆಯ ಗಾಢವಾದ ಅಂಧಕಾರಕ್ಕೆ ಸ್ಥಳ ದೊರೆಯಬೇಕು. ಭವ್ಯವಾದ ದಿನದ ಹಿಂದೆ ಮಹಾ ಗಾಢಾಂಧಕಾರವು ಸಮೀಪಿಸುತ್ತಿದೆ. "ಉದಯವು ಬರುತ್ತದೆ, ರಾತ್ರಿಯೂ ಬರುತ್ತದೆ" (ಯೆಶಾಯ 21:12) – ಅಂತಹ ಸಂಕಟವು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸಿದ್ದಿಲ್ಲ" (ದಾನಿಯೇಲ 12:1).

ಗಮನಿಸಿರಿ, ಈ ಬೆಳಕು ಬರುವಾಗ, ಕೊಯ್ಲುಗಾರರು ತಮ್ಮ ಕೆಲಸವನ್ನು ನಿಲ್ಲಿಸುವಾಗ, ಸುವಾರ್ತಾಯುಗದ ಈ ಅಂತಿಮ ಕಾರ್ಯವು ನೆರವೇರಿದೆ ಎಂಬುದು ಸಾಬೀತಾಗುತ್ತದೆ; ಆಯ್ಕೆಗೊಂಡ ಸಂಖ್ಯೆಯ ಕ್ರಿಸ್ತನ ವಧುವರ್ಗದವರೆಲ್ಲರಿಗೂ ಮುದ್ರೆಯು ಹಾಕಲ್ಪಟ್ಟಿದೆ ಮತ್ತು ಅವರುಗಳು ಈ ಲೋಕದಿಂದ ಪ್ರತ್ಯೇಕಿಸಿಸಲ್ಪಟ್ಟು ಉಗ್ರಾಣದ ಸ್ಥಿತಿಯಲ್ಲಿ ಒಂದು

ಗೂಡಿಸಲ್ಪಟ್ಟಿದ್ದಾರೆ (ಮತ್ತಾಯ 13:30). ದೇವರು ತನ್ನ ಕಾರ್ಯವನ್ನು ಮುಗಿಸದ ಹೊರತು ಮೊದಲು ಬೇರೆಯಾವುದೂ ಅದನ್ನು ಅಂತ್ಯಗೊಳಿಸಲು ಅನುಮತಿಸುವುದಿಲ್ಲ, ಆಗ ಎಲ್ಲಾ ಸತ್ಯ ಮತ್ತು ಪ್ರಾಮಾಣಿಕರಾದ ದೇವರ ಸೇವಕರುಗಳ ಹಣೆಗಳ ಮೇಲೆ ಮುದ್ರೆ ಹಾಕಲಾಗಿರುತ್ತದೆ. ಸುವಾರ್ತಾಯುಗದ ಕಾರ್ಯವು ಮುಗಿದಿರುತ್ತದೆ, ಬೇರೆ ಯಾರೂ ಆ ಕಾರ್ಯಕ್ಕೆ ಪ್ರವೇಶಿಸಲಾರರು ಮತ್ತು ಅದರ ಶ್ರೇಷ್ಟ ಬಹುಮಾನಗಳನ್ನು ಕೊಯ್ದುಕೊಳ್ಳಲಾರರು. ಆ ಬಾಗಿಲು ತೆರೆಯುವಾಗ ಪ್ರಾಮಾಣಿಕರಿಗೆ ಅಮೂಲ್ಯವೂ, ಉತ್ಕೃಷ್ಟವಾಗಿಯೂ ಇರುವ ಈ ವಾಗ್ದಾನಪಡಿಸಿದ ಬಹುಮಾನವು ದೊರೆಯುತ್ತದೆಂದು ಮುಂತಿಳಿಸಲಾಗಿದೆ (2 ಪೇತ್ರ 1 :4).

ಆದರೆ ನಾವು ಇವುಗಳನ್ನೆಲ್ಲಾ ನಂಬಿಗಸ್ತರಾದ ಕೂಡಲೇ ಅದರಿಂದ ಹೊಂದಿಕೊಳ್ಳಲಾಗದು, ಒಮ್ಮೆಗೇ ಆ ಬಹುಮಾನಗಳಿಗೆ ಪ್ರವೇಶಿಸಲಾಗದು, ಅಂಥವರಲ್ಲಿ ಕೆಲವರು ಅಂಧಕಾರದ ಸಂಕಟದ ದಿನಗಳವರೆಗೂ ಇನ್ನೂ ಜೀವಿಸಿರುವ ಸಾಧ್ಯತೆಗಳುಂಟು – ನಮ್ಮ ನಿರೀಕ್ಷೆಗಳು ಇದಕ್ಕೆ ವ್ಯತಿರಿಕ್ತವಾದವುಗಳಾಗಿವೆಯಾದರೂ "ಇದರಲ್ಲಿ ದೇವರ ಆಜ್ಞೆಗ್ಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿಬರುತ್ತದೆ". ಕೆಡುಕಿನ ಈ ದಿನದಲ್ಲಿ, ದೈತ್ಯಾಕಾರದ ತಪ್ಪುಗಳು ಬಹಳ ಧೈರ್ಯದಿಂದ ಮತ್ತು ಪ್ರತಿಭಟನೆಯಿಂದ ಹೊರಗೆ ತುಂಬಿರುವಾಗ, ಭಕ್ತರು, ದೇವರು ದಯಪಾಲಿಸಿದ ಸರ್ವಾಯುಧಗಳನ್ನು ಧರಿಸಿದವರಾಗಿ, ಸತ್ಯವನ್ನು ರಕ್ಷಿಸುತ್ತಾ ಮತ್ತು ತಪ್ಪುಗಳನ್ನು ಧೈರ್ಯದಿಂದ ಸ್ಪಷ್ಟವಾಗಿ ಮತ್ತು ನಿರ್ಭೀತರಾಗಿ ಪ್ರಸ್ತುತಿಪಡಿಸುವಲ್ಲಿ ಅವರು ಪ್ರೋತ್ಸಾಹಿಸಲ್ಪಟ್ಟಿದ್ದಾರೆ. ಜಯಶಾಲಿ ಗಳಾಗುವುದಕ್ಕೆ ಮಾಡಬೇಕಾದ್ದೆಲ್ಲವನ್ನೂ ಮಾಡಿ, ಸರ್ವಾಯುಧಗಳನ್ನು ಧರಿಸಿಕೊಂಡಾಗ, ಎಲ್ಲಾ ಸಂತರುಗಳ ಎಚ್ಚರಿಕೆಯ ಮತ್ತು ದೃಢತೆಯ ಪ್ರಾರ್ಥನೆಯೊಂದಿಗೆ ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯು ಸದಾ ರಕ್ಷಣೆಗೆ ಸಿದ್ಧವಾಗಿರುತ್ತದೆ. ಎಲ್ಲರಿಗೂ ತಾಳ್ಮೆ ಬೇಕಾಗುತ್ತದೆ, ಯಾಕೆಂದರೆ ದೇವರ ಚಿತ್ತವನ್ನು ನೆರವೇರಿಸಿದ ಮೇಲೆ ಅವರು ವಾಗ್ದಾನಗಳನ್ನು ಹೊಂದಿಕೊಳ್ಳಬಹುದು (ಪ್ರಕಟನೆ 14:12; ಎಫೆಸ 6:13; ಇಬ್ರಿಯ 10:36).

ದೇವರ ರಾಜ್ಯದಲ್ಲಿ ನಮ್ಮ ಕರ್ತನಾದ ಯೇಸುವಿನೊಂದಿಗೆ ಜೊತೆ ಬಾಧ್ಯಸ್ಥಿಕೆಗೆ ಮಹಾಕರೆಯು ಅಂತ್ಯಗೊಳ್ಳುವುದು. ಕನ್ಯೆಯರ ಸಾಮ್ಯದಲ್ಲಿರುವಂತೆ ಬಾಗಿಲನ್ನು ಮುಚ್ಚುವುದರಿಂದ ಅಲ್ಲ ಎಂಬುದನ್ನು ಸುಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಈ ಭಾಗ್ಯಕ್ಕೆ ಸರ್ವಸಾಧಾರಣವಾದ ಕರೆಯು 1881ರಲ್ಲಿ ಮುಕ್ತಾಯ ಗೊಂಡಿದ್ದರೂ. 'ಬಾಗಿಲು' ಇನ್ನೂ ತೆರೆದಿದೆ. ಈ ಕರೆಯು ವಿಮೋಚಕನಲ್ಲಿನ ಎಲ್ಲಾ ನ್ಯಾಯಬದ್ಧ ನಂಬಿಗಸ್ತರಿಗೆ ಆತನ ಹೆಜ್ಜೆಜಾಡನ್ನು ಮರಣದಪರ್ಯಂತ ಅನುಸರಿಸುವಂತೆ ದೇವರ ಸರ್ವಸಾಮಾನ್ಯವಾದ ಆಮಂತ್ರಣವಾಗಿದೆ. ಆ ರೀತಿಯಲ್ಲಿ ಅವರು ಆತನೊಂದಿಗೆ ಮಹಿಮೆಯ ರಾಜ್ಯದಲ್ಲಿ ಆಳುವ ತಮ್ಮ ಅರ್ಹತೆಯನ್ನು ರುಜುವಾತುಪಡಿಸಿಕೊಳ್ಳಬಹುದು. ಈ ಅನುಗ್ರಹವು ನಿಶ್ಚಿತವಾದ ಆರಂಭದ ಸಮಯವನ್ನು ಹೊಂದಿದೆ; ಕಾಯುತ್ತಿರುವ ಶಿಷ್ಯರನ್ನು ಕ್ರಿ.ಶ. 33ರ ಪಂಚಾಶತ್ತಮ ದಿನದಂದು ಅದಕ್ಕೆ ಸ್ವೀಕರಿಸಿ ಕೊಳ್ಳಲಾಯಿತು. ಈಗಾಗಲೇ ತೋರಿಸುವಂತೆ ಅಂತ್ಯಗೊಳ್ಳಲು ಅದಕ್ಕೆ ಒಂದು ನಿಶ್ಚಿತವಾದ ಸಮಯ ಅಂದರೆ 1881ರ ಅಕ್ಟೋಬರ್ ಆಗಿತ್ತು. (ಸಂಪುಟ II, ಅಧ್ಯಾಯ vii ನೋಡಿರಿ).

ಮತ್ತೊಂದೆಡೆಯಲ್ಲಿ, 'ಬಾಗಿಲು ಮುಚ್ಚುವಿಕೆ'ಯು ಮತ್ತಾಯ 25ರಲ್ಲಿ ಎಲ್ಲರಿಗೂ ಕರೆಯಲ್ಪಟ್ಟವರೂ ಸೇರಿದಂತೆ ತಮ್ಮ ನಿಷ್ಠಾವಂತ ಸೇವೆಯು ಮೂಲಕ ಆ ಬಹುಮಾನಕ್ಕೆ ಅರ್ಹರಾಗಿದ್ದೇವೆಂದು ಸಾಬೀತುಪಡಿಸುವ ಎಲ್ಲಾ ಅವಕಾಶಗಳ ಸಂಪೂರ್ಣವಾದ ಅಂತ್ಯ ಎಂದು ಗುರುತಿಸಲ್ಪಟ್ಟಿದೆ. ಸೇವೆಯ ಎಲ್ಲಾ ಅವಕಾಶಗಳು ಅಲ್ಲಿಗೆ, ಯಾರೂ ಕೆಲಸ ಮಾಡದ ರಾತ್ರಿಯಲ್ಲಿ ಮುಕ್ತಾಯಗೊಳ್ಳುತ್ತದೆ (ಯೋಹಾನ 9:4). ಆದುದರಿಂದ, ಈ ರೀತಿ, ನಮ್ಮ ಕರೆಯನ್ನು ಮತ್ತು ಆಯ್ಕೆಯನ್ನು ಖಚಿತಪಡಿಸುವಾಗ, ಕರೆ ಮತ್ತು ಆಹ್ವಾನವು ಮುಂದುವರೆಯುವುದು ನಿಂತುಹೋದಾಗ್ಯೂ ಬಾಗಿಲು ಅಥವಾ ಅವಕಾಶವು ಅಗತ್ಯವಾಗಿ ಮುಚ್ಚಿಹೋಗುವುದಿಲ್ಲ ಎಂದು ಪ್ರಕಟವಾಗಿದೆ. ಬಾಗಿಲು ತೆರೆದುಕೊಂಡಿರುವಾಗ, ಯಾವುದೇ ವಿಶ್ವಾಸಿಯು ಪ್ರವೇಶಿಸುವ ಆಕಾಂಕ್ಷೆ ಯುಳ್ಳವನಾಗಿದ್ದರೆ ಮತ್ತು ಷರತ್ತುಗಳಿಗೆ ಬದ್ಧನಾಗಲು ಸಿದ್ಧವಿದ್ದರೆ, ಸಾಮಾನ್ಯ ಕರೆ ಅಥವಾ ಪ್ರವೇಶಿಸಲು ಆಹ್ವಾನವು ಹೊರಡುವುದಿಲ್ಲವಾದರೂ ಆತನು ಇನ್ನೂ ಹಾಗೆ ಮಾಡಬಹುದಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ನಿಜ ಸಂಗತಿ ಏನೆಂದರೆ, ಸಾಮಾನ್ಯ ಕರೆಯು 1881ರಲ್ಲಿ ಮುಗಿದಿರುವುದಾದರೂ, ಶ್ರಮ ಮತ್ತು ತ್ಯಾಗದ ಬಾಗಿಲು ಮತ್ತು ಅವಕಾಶಗಳು ಇನ್ನೂ ಮುಚ್ಚಿಹೋಗಿರುವುದಿಲ್ಲ.

ಸುವಾರ್ತಾಯುಗವು ಕರೆಯುವ ಸಮಯವಾಗಿದೆ. ಮೊದಲಿಗೆ ಪಾಪಿಗಳಿಗೆ ಪಶ್ಚಾತ್ತಾಪದ ಮತ್ತು ವಿಮೋಚಕನಾದ ಕ್ರಿಸ್ತನ ಮೇಲೆ ವಿಶ್ವಾಸವಿಡುವ ಕರೆಯಾಗಿದೆ. ಎರಡನೆಯದು, ಕ್ರಿಸ್ತನ ರಾಜ್ಯದಲ್ಲಿ ಆತನೊಂದಿಗೆ ಆಳುವಂತೆ ಸಮರ್ಥರಾದವರಿಗೆ ಈಗ ಆತನ ಸ್ವಾರ್ಥತ್ಯಾಗದ ಆತನ ಹೆಜ್ಜೆಜಾಡಿನಲ್ಲಿ ಮರಣಪರ್ಯಂತ ನಡೆಯುವ ಷರತ್ತಿನ ಮೇಲೆ ನೀಡುವ ಕರೆಯಾಗಿದೆ – ಯಾಕೆಂದರೆ, ಇದು ದೇವರ ರಾಜ್ಯದ ಕಾರ್ಯ ಮತ್ತು ಗೌರವಗಳನ್ನು ಬರುವ ಸಹಸ್ರವಾನದಲ್ಲಿ ಸ್ವೀಕರಿಸುವ ಷರತ್ತಾಗಿದೆ. ಆದುದರಿಂದ, ಆಗ ಕರ್ತನು ಯುಗದ ಮುಕ್ತಾಯದ ಸಮಯವು ಸುಗ್ಗಿಯ ಕಾಲವಾಗಿದೆ ಎಂದು ಹೇಳುತ್ತಾನೆ, ಇದು ಸ್ಪಷ್ಟವಾಗಿ ಒಂದು ಮೂಲಸ್ವರೂಪದ ಬದಲಾವಣೆಯಾಗಿದೆ ಎಂಬುದನ್ನು ಸೂಚಿಸುತ್ತದೆ – ಬಿತ್ತುವುದರಿಂದ ಕೊಯ್ಯುವವರೆಗೆ, ಕರೆದವರನ್ನು ಪರೀಕ್ಷೆಗಾಗಿ ಕರೆಯುವುದು, ಹಾಗೂ ಕರೆಯಿಂದ ಪ್ರಾರಂಭವಾದ ಕೆಲಸವನ್ನು ಮುಕ್ತಾಯಗೊಳಿಸುವುದು.

ಸುವಾರ್ತಾಯುಗದ ಅಂತ್ಯದಲ್ಲಿ ಕಾರ್ಯಲಕ್ಷಣಗಳ ಬದಲಾವಣೆಯನ್ನು ಕುರಿತು ಒಂದು ದೃಷ್ಟಾಂತವನ್ನು ನಮ್ಮ ಕರ್ತನು 'ಬಲೆಯ ಸಾಮ್ಯ'ವನ್ನು ನೀಡಿದ್ದಾನೆ (ಮತ್ತಾಯ 13:47–50) – "ಪರಲೋಕ ರಾಜ್ಯವು ಒಂದು ಬಲೆಗೆ ಹೋಲಿಕೆಯಾಗಿದೆ. ಅದನ್ನು ಸಮುದ್ರದಲ್ಲಿ ಹಾಕಿ ಎಲ್ಲಾ ಜಾತಿಯ ಮೀನುಗಳನ್ನು ಹಿಡಿದರು. ಅದು ತುಂಬಿದ ಮೇಲೆ ಅದನ್ನು ದಡಕ್ಕೆ ಎಳೆದು ಕೂತುಕೊಂಡು ಒಳ್ಳೆಯ ಮೀನುಗಳನ್ನು ಪುಟ್ಟಿಯಲ್ಲಿ ತುಂಬಿಕೊಂಡು ಕೆಟ್ಟಮೀನುಗಳನ್ನು ಬಿಸಾಟುಬಿಟ್ಟರು. ಹಾಗೆಯೇ ಯುಗದ ಸಮಾಪ್ತಿಯಲ್ಲಿ ಆಗುವುದು" ("ಸುಗ್ಗಿ ಕಾಲ ಅಂದರೆಯುಗದ ಸಮಾಪ್ತಿ" – ಮತ್ತಾಯ13:39). ದೇವದೂತರುಗಳು (ಸಂದೇಶ ವಾಹಕರು, ದೇವರ ಸೇವಕರುಗಳು) ಮುಂದೆ ಬಂದು ಕೆಟ್ಟವರನ್ನು ನ್ಯಾಯವಂತರಿಂದ ಬೇರ್ಪಡಿಸುವರು, ಮತ್ತು ಅವರನ್ನು ಬೆಂಕಿಕೊಂಡದಲ್ಲಿ ಹಾಕುವರು. ಅಲ್ಲಿ ಗೋಳಾಟವೂ, ಕಟಕಟನೆ ಹಲ್ಲು ಕಡೆಯೋಣವೂ ಇರುವುದು" (ಮತ್ತಾಯ 13:50).

ಈ ಸಾಮ್ಯವು ನಾಮಾಂಕಿತ ಕ್ರೈಸ್ತ ಸಭೆಯನ್ನು, ಹೆಸರು ಮಾತ್ರದ ನಿರೀಕ್ಷಿತ ಕ್ರೈಸ್ತ ರಾಜ್ಯವನ್ನು ಪ್ರತಿನಿಧಿಸುತ್ತದೆ. ಅದು ಸಮುದ್ರಕ್ಕೆ (ಲೋಕಕ್ಕೆ) ಬಿಸಾಡಿದ ಬಲೆಯಂತಿದ್ದು ಅದರಲ್ಲಿ ಎಲ್ಲಾ ಜಾತಿಯ ಮೀನುಗಳು (ಮತ್ತಾಯ 4:19 – ಜನರು), (ನಿಜವಾದ ಕ್ರೈಸ್ತರು, ಅರ್ಧ ಮೋಸಪಟ್ಟ ಮತ್ತು ತಪ್ಪುದಾರಿಗೆ ಎಳೆಯಲ್ಪಟ್ಟ ಕ್ರೈಸ್ತರು, ಬಹಳ ಮಂದಿ ಕಪಟಿಗಳು) ಹಿಡಿಯಲ್ಪಟ್ಟರು; ಅದು ತುಂಬಿದಾಗ, (ದೇವರ ಸಮಯದ ಪೂರ್ಣತೆಯಲ್ಲಿ) ಅದನ್ನು ದಡಕ್ಕೆ ಎಳೆಯಲಾಯಿತು. ಅದು ಹೆಸರು ಮಾತ್ರ ಸಭೆಗೆ ಕೂಡಿಸಲ್ಪಟ್ಟ 'ಎಲ್ಲಾ ತರದವರೂ' ಬೇರೆ ಯಾವುದೇ ಕೆಲಸಕ್ಕೆ ಯೋಗ್ಯರಾಗಿರಬಹುದಾದರೂ ದೇವರರಾಜ್ಯಕ್ಕೆ ಅವರು ಯೋಗ್ಯರಲ್ಲ ಎಂಬುದನ್ನು ತೋರಿಸುತ್ತದೆ. ಯುಗದ ಅಂತ್ಯದಲ್ಲಿ, ಸುಗ್ಗಿಯ ಸಮಯದಲ್ಲಿ, ರಾಜ್ಯದಲ್ಲಿನ ಸ್ಥಾನಕ್ಕೆ ಕರೆಯುವಿಕೆಯು ದೇವರ ವ್ಯವಸ್ಥೆಯ ಮೇರೆಗೆ ಮುಕ್ತಾಯಗೊಳ್ಳುತ್ತದೆ ಎಂಬುದು ಈ ಸಾಮ್ಯದಲ್ಲಿ ಬಲೆಯನ್ನು ದಡಕ್ಕೆ ಎಳೆಯುವುದರಲ್ಲಿ ಪ್ರತಿನಿಧಿಸಿದೆ. ಮತ್ತು ಆಗ ಪ್ರತ್ಯೇಕವಾದ ಕಾರ್ಯವು ಬೆಸ್ತರಿಂದ ಪ್ರಾರಂಭಗೊಳ್ಳುವುದು – ಪ್ರತ್ಯೇಕಿಸುವುದು, ಬೇರ್ಪಡಿಸುವ ಕಾರ್ಯವು. ಅದು ಬಯಸಿದ ಬಗೆಯನ್ನು ಕೂಡಿಸುವುದು ಮತ್ತು ಬೇರೆಯವುಗಳನ್ನು ಕರೆದ ಭಾಗ್ಯಕ್ಕೆ ಅನರ್ಹವೆಂದು ತಿರಸ್ಕರಿಸುವುದೂ ಆಗಿದೆ. ಯಾಕೆಂದರೆ – "ಕರೆಯಲ್ಪಟ್ಟವರು ಬಹುಜನ, ಆಯಲ್ಪಟ್ಟವರು ಸ್ವಲ್ಪಜನ" (ಮತ್ತಾಯ22:14).

ಈ ಸಾಮ್ಯದಲ್ಲಿನ ಪ್ರತ್ಯೇಕತಾ ಕಾರ್ಯವು ಗೋಧಿ ಮತ್ತು ಹಣಜಿಯ ಸಾಮ್ಯದಲ್ಲಿರುವುದಕ್ಕೆ ಸಮನಾಗಿದೆ, ಅದು ನಮಗೆ ಬಿತ್ತುವುದರ (ಕರೆಯುವುದರ) ಸ್ಥಗಿತಗೊಳಿಸುವ ನಿರೀಕ್ಷೆಮಾಡುವುದನ್ನು ಮತ್ತು ಆ ಕಾರ್ಯಗಳಿಂದ ಕೊಯ್ಲಿಗೆ ಬದಲಾಯಿಸುವುದನ್ನು ಕಲಿಸಿಕೊಡುತ್ತದೆ. ಕರ್ತನ ಸೇವಕರುಗಳು ಆತನ ನಿರ್ದೇಶನದಲ್ಲಿ ಆ ರೀತಿಯಲ್ಲಿ ಕಾರ್ಯವನ್ನು ಬದಲಿಸುವರು. ಇವರು ಎರಡೂ ಸಾಮ್ಯಗಳಲ್ಲಿ ದೇವದೂತರುಗಳೆಂದು ಹೆಸರುಳ್ಳವರಾಗಿದ್ದಾರೆ, ಅವರುಗಳು ಆತನ ವಿಶೇಷ ಸಂದೇಶವಾಹಕರುಗಳು. ಅವರುಗಳು ಆತನ ನಿಷ್ಠಾವಂತ ಶಿಷ್ಯರುಗಳಾಗಿದ್ದು ಅವರು ಬಹುನಮ್ರತೆಯಿಂದ ನಡೆಯುವರು, ಮತ್ತು ಕರ್ತನ ಹತ್ತಿರವಿದ್ದು ಆತನ ಯೋಜನೆಗಳನ್ನು ಶ್ರದ್ಧೆಯಿಂದ ತಿಳಿಯಲು ಮತ್ತು ಆತನ ಕಾರ್ಯದಲ್ಲಿ ಸಹಕರಿಸಲು ಬಯಸುವವರಾಗಿದ್ದು ಅವರನ್ನು ಆತನ ಸಮಯದ ಮತ್ತು ಕಾಲದ ಗುಟ್ಟಗಳನ್ನು ಮರೆಮಾಡಿ ಅವರನ್ನು ಕತ್ತಲಲ್ಲಿ ಬಿಟ್ಟಿರುವುದಿಲ್ಲ. (ಮತ್ತಾಯ 13:11; 1 ಥೆಸ. 5:4; ಯೆರೆಮೀಯ 8: 7–12). ನಿಜವಾಗಿಯೂ, ಈ ಕೊಯ್ಲು ಮತ್ತು ಶೇಖರಿಸುವಿಕೆಯು ಸುಗ್ಗಿಯ ಸಮಯದಲ್ಲಿ ಜೀವಿಸುವವರಿಗೆ ಮಾತ್ರವೇ ಸಂಬಂಧಿಸಿವೆಯೇ ಹೊರತು ಆ ಹಿಂದೆ ಸತ್ತವರಿಗಾಗಿ ಅಲ್ಲ; ಅವರಲ್ಲಿ ಪ್ರತಿಯೊಬ್ಬರನ್ನೂ, ಆತನ ಜೀವಿತ ಅವಧಿಯನ್ನು ಪೂರೈಸುವಾಗ ಹೆಸರು ಹೊಂದಿದವರನ್ನು ಸರಿಯಾದ ಸ್ಥಾನದಲ್ಲಿ ಅಂದರೆ ಭವ್ಯವಾದ ಚಿಕ್ಕ ಹಿಂಡಿನ,

ಅನುರೂಪವಾದ ರಾಜ್ಯದ ಒಳಗೆ ಅಥವಾ ಹೊರಗೆ ಕಾಯುವಂತೆ ಪ್ರತ್ಯೇಕಿಸಲಾಗುವುದು (2 ತಿಮೋ. 4:8).

ಬಲೆಯು ಸಮುದ್ರದ ಎಲ್ಲಾ ಮೀನುಗಳನ್ನು ಹಿಡಿಯುವ ಉದ್ದೇಶ ಹೊಂದಿರಲಿಲ್ಲ. ಮಹಾಬೆಸ್ತನಾದ ನಮ್ಮ ಕರ್ತನು ಅದನ್ನು ನಿರ್ದಿಷ್ಟವಾದ ಸಂಖ್ಯೆಯ, ವಿಶೇಷ ಜಾತಿಯ ಮೀನುಗಳನ್ನು ಮಾತ್ರವೇ ಹಿಡಿಯುವಂತೆ ಅದನ್ನು ವಿನ್ಯಾಸಗೊಳಿಸಿದ್ದಾನೆ. ಅದರೊಂದಿಗೆ ಬೇರೆ ಅನೇಕ ಜಾತಿಯ ಮೀನುಗಳು ಸೇರಿಕೊಂಡರೆ ಚಿಂತಿಲ್ಲ. ಮತ್ತು ಬಯಸಿದ ವಿಶಿಷ್ಟ ಬಗೆಯವು ಪೂರ್ಣ ಸಂಖ್ಯೆಯಲ್ಲಿ ಬಲೆಯನ್ನು ಪ್ರವೇಶಿಸಿದ ನಂತರ ಬೇರ್ಪಡಿಸುವ ಕಾರ್ಯಕ್ಕಾಗಿ ದಡಕ್ಕೆ ತರಲು ಆದೇಶಿಸಲಾಗುವುದು. ಬಲೆಯನ್ನು ದಡಕ್ಕೆ ತರಲು ಆದೇಶಿಸಿದಾಗ, ಯುಗದ ಆದಿಯಲ್ಲಿ ಬಲೆಯನ್ನು ಸಮುದ್ರಕ್ಕೆ ಬಿಸಾಡುವ ಅಧಿಕಾರವನ್ನೂ ನೀಡಲಾಗಿರುತ್ತದೆ (ಮತ್ತಾಯ 28:19;24:14) ಅಂತ್ಯವನ್ನು ಸೂಚಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕ್ರಿಸ್ತನ ಜೊತೆ ಸೇವಕರಾಗಿ ಮುಂದುವರೆಯುವವರೆಲ್ಲರೂ ಆತನ ನಿದರ್ಶನಗಳಿಗೆ ಕಿವಿಗೊಡಬೇಕು ಮತ್ತು ಅವರು ಇನ್ನು ಮುಂದೆ ಸಾಮಾನ್ಯ ಮೀನುಗಾರಿಕೆಗೆ ತಮ್ಮ ಸಮಯವನ್ನು ನೀಡದೆ ಪ್ರಸ್ತುತ ಆಯ್ಕೆ ಮತ್ತು ಪ್ರತ್ಯೇಕಪಡಿಸುವ ಕೆಲಸವನ್ನು ಗಮನಿಸಬೇಕು. ಆಗ ಸತ್ಯವು ಕರೆಯುವಿಕೆಯ ಕಾರ್ಯಭಾರಕ್ಕೆ ತಕ್ಕಸಮಯ ವಾಗಿದ್ದಂತೆ, ಈಗ ಸತ್ಯವು ಪ್ರಸ್ತುತ ಸತ್ಯವಾಗಿ ಸುಗ್ಗಿಯ ಸತ್ಯವು ಪರೀಕ್ಷಿಸಲು ಮತ್ತು ಬೇರ್ಪಡಿಸಲು ಕರ್ತನ ಪಾರುಪತ್ಯವಾಗುತ್ತದೆ.

ಆದ್ದರಿಂದ, ಯಾವಾಗ, ಕರ್ತನ ಸೇವಕರು ಬಿತ್ತುವುದನ್ನು ನಿಲ್ಲಿಸಿ ಕೊಯ್ಯುವ ಕಾಲ ಸಮೀಪಿಸಿದೆಯೆಂದು, ಮೀನು ಹಿಡಿಯುವುದನ್ನು ನಿಲ್ಲಿಸಿ, ಮೀನುಗಳನ್ನು ಪ್ರತ್ಯೇಕಿಸಲು ಹೋಗುವರೋ, ಕರೆಯನ್ನು ನಿಲ್ಲಿಸಿ, ಈಗಾಗಲೇ ಕರೆಯಲ್ಪಟ್ಟಿದ್ದವರಿಗೆ ಈಗ ಯುಕ್ತವಾದ ಸುಗ್ಗಿಯ ಸಂದೇಶವನ್ನು ಬೋಧಿಸುವರೋ, ಅವರು ನಂಬಿಗಸ್ತರಾಗಿ, ಹರುಷದಿಂದ ಮತ್ತು ಪ್ರಾಮಾಣಿಕರಾಗಿ ವಿಧೇಯತೆಯನ್ನು ತೋರುವರು; ಅವರು ಕರ್ತನ ವಾಕ್ಯದ ಮೂಲಕ ಪ್ರಕಟಿಸಿರುವ ಆತನ ಸ್ವರವನ್ನು ಆಲಿಸುವವರಾಗಿದ್ದಾರೆ. ಆದ ಕಾರಣ, ಅಂಥವರಿಗೆ ಒಡೆಯನಿಂದ ಆತನ ಯುಗದ ಯೋಜನೆಯ ಬಗ್ಗೆ ತಿಳಿಸಲಾಗುವುದು, ಹಾಗಾಗಿ, ನಾವು ಜೀವಿಸುತ್ತಿರುವ ಸಮಯ ಮತ್ತು ಕಾಲದಲ್ಲಿ ಕತ್ತಲಿನಲ್ಲಿರುವುದಿಲ್ಲ, ಇನ್ನು ಮುಂದೆ ದೇವರ ರಾಜ್ಯದ ಒಳ್ಳೆಯ ಬೀಜವನ್ನು ಮಾನವನ ಲೋಕವೆಂಬ ಹೊಲದಲ್ಲಿ ಬಿತ್ತಲು ಮುಂದೆ ಹೋಗಬಾರದು. ಆದರೆ ನಂಬಿಗಸ್ತ ಮನೆಯವರಿಗೆ ತಕ್ಕ ಕಾಲದಲ್ಲಿ ಆಹಾರವನ್ನು ಒದಗಿಸಬೇಕು – ಅವರು ಕರ್ತನ ಮಕ್ಕಳೆಂದು ಹೇಳಿಕೊಳ್ಳುವವರ ಮಧ್ಯದಲ್ಲಿ ಹತ್ತಿರದಲ್ಲಿಯೇ ಬರಲಿರುವ ದೇವರ ರಾಜ್ಯದ ಸುವಾರ್ತಮಾನವನ್ನು ಹರಡಬೇಕು. ಅದು ಆಶೀರ್ವಾದ ಮಹಾ ಸಂತೋಷವನ್ನು ಎಲ್ಲಾ ಜನರಿಗೂ ತರುವುದಾಗಿದೆ.

ಮತ್ತು ಹೇಳಲು ಆಶ್ಚರ್ಯಕರವೆಂದರೆ, ದೇವರು ಪ್ರೀತಿಯಿಂದ ಒದಗಿಸಿದ ಈಡುಬಲಿಯಲ್ಲಿ, ಕ್ರಿಸ್ತನಿಂದ ಮತ್ತು ಕ್ರಿಸ್ತನ ಮೂಲಕವಾಗಿ ಮತ್ತು ಆತನ ಮಹಿಮೆಹೊಂದಿದ ಶರೀರದಿಂದ, ಸಭೆಯಿಂದ, ದೇವರ ರಾಜ್ಯದಿಂದ ಎಲ್ಲವುಗಳ ಪುನರ್‌ವಶಕ್ಕಾಗಿ ಒದಗುವ ಈ ಸಂದೇಶವು ಎಲ್ಲಾ ಪ್ರೀತಿಸುವ ಕ್ರೈಸ್ತ ಹೃದಯಗಳನ್ನು ಒಂದುಗೂಡಿಸುವುದು. ಅದು ಹೃದಯ ಅನ್ಯೋನ್ಯತೆಗೆ ಅಭಿವೃದ್ಧಿಹೊಂದಿ ನಿಜವಾದ ವರ್ಗದವರನ್ನು ಮಾತ್ರವೇ ಹೃದಯ ಅನ್ಯೋನ್ಯತೆಗೆ ಸೆಳೆಯುತ್ತದೆ. ಅವರನ್ನು ಪರೀಕ್ಷಿಸಿ ಹೆಸರು ಮಾತ್ರದವರಿಂದ ಪ್ರತ್ಯೇಕಿಸುವಂತೆ ಸಿದ್ಧಪಡಿಸುತ್ತದೆ.

ಸ್ವಲ್ಪದರಲ್ಲಿಯೇ, ಸುಗ್ಗಿಯು ಮುಕ್ತಾಯಗೊಳ್ಳುತ್ತದೆ ಮತ್ತು ಬಿತ್ತಿದವರು ಮತ್ತು ಕೊಯ್ದವರು ಒಟ್ಟಾಗಿ ಸಂತೋಷಿಸುತ್ತಾರೆ. ಈಗ ಕೊಯ್ಲುಗಾರರು ತಮ್ಮ ಕೆಲಸವನ್ನು ತ್ವರಿತಗೊಳಿಸಬೇಕು ಮತ್ತು ಅದರ ಮುಗಿಯುವಿಕೆ ಬಗ್ಗೆ ಹೆಚ್ಚು ಕಾಳಜಿಯುಳ್ಳವರಾಗಿ ಮುಖ್ಯಕೊಯ್ಲುಗಾರನಾದ ಸುಗ್ಗಿಯ ಕರ್ತನಿಗೆ ಆತನ ಸುಗ್ಗಿಗೆ ಹೆಚ್ಚು ಕೆಲಸಗಾರರನ್ನು ಕಳುಹಿಸುವಂತೆ ಪ್ರಾರ್ಥಿಸುವವರಾಗಬೇಕು. ಮುಂದಿನ ಯುಗದ (ಹಂಚಿಕೆಯ) ಕಾರ್ಯದ ಉಳುವವನು (ಮಹಾ ಸಂಕಟವನ್ನು ಮುಂತಿಳಿಸಲಾಗಿದೆ, ಅದು ಲೋಕವನ್ನು ಸಹಸ್ರಮಾನ ಬೀಜ ಬಿತ್ತುವಿಕೆಗೆ ಸಿದ್ಧಪಡಿಸುತ್ತದೆ) ಈ ಯುಗದ ಕಾರ್ಯದ ಕೊಯ್ಲುಗಾರನನ್ನು ಹಿಂದಿಕ್ಕಲು ಬರುವುದು ದೂರವಿಲ್ಲ – (ಆಮೋಸ 9: 13).

## ಇಸ್ರಾಯೇಲಿನ ಎಪ್ಪತ್ತನೆಯ ವಾರವು ಸುವಾರ್ತಾ ಕೃಪೆಯ ಮುಗಿಯುವಿಕೆಯ ಚಿತ್ರಣವಾಗಿದೆ

## Israel's Seventieth Week a Figure of the Close of Gospel Favour

ಇಸ್ರಾಯೇಲ್ಯರ "ಎಪ್ಪತ್ತನೆಯ ವಾರ"ವು, ಅವರ ಕೃಪೆಯ ಕಡೆಯ ಏಳು ವರ್ಷಗಳು ಅದರ ಪ್ರಾರಂಭದಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಸರಿಯಾದ ರೀತಿಯಲ್ಲಿ ಗುರುತಿಸಲ್ಪಟ್ಟಿದೆ ಎಂಬುದನ್ನು

ನೆನಪಿನಲ್ಲಿಟ್ಟುಕೊಳ್ಳಬೇಕು. ನಮಗೆ ಸುವಾರ್ತಾಯುಗದ ಅಂತ್ಯದಲ್ಲಿ ಸ್ಪಷ್ಟವಾಗಿ ಗೊತ್ತುಪಡಿಸಲ್ಪಟ್ಟ ದಿನಾಂಕಗಳನ್ನು ನೀಡುವ ಉದ್ದೇಶವು ಆತ್ಮೀಕ ಇಸ್ರಾಯೇಲ್ಯರ ಅನುಕೂಲಕ್ಕಾಗಿಯೇ ಎಂಬುದನ್ನು ನಾವು ನಂಬುತ್ತೇವೆ. ಆ ವಾರದ ಪ್ರಾರಂಭವು ಶಾರೀರಿಕ ಇಸ್ರಾಯೇಲ್ಯರಿಗೆ ಕ್ರಿ.ಶ. 29ರಲ್ಲಿ ಅವರ ಸುವಾರ್ತಾ ಪರೀಕ್ಷೆಗೆ ಎಂಬುದನ್ನು ನಾವು ನೋಡಿದ್ದೇವೆ. ಅದು ನಮ್ಮ ಕರ್ತನ ದೀಕ್ಷಾಸ್ನಾನ ಮತ್ತು ಮೆಸ್ಸೀಯನಾಗಿ ಯೋರ್ದಾನ್‌ನಲ್ಲಿ ಅಂಗೀಕಾರವಾದುದನ್ನು ಗುರುತಿಸುತ್ತದೆ. ಆಗ ಕೊಯ್ಲಿನ ಕಾರ್ಯವು ಪ್ರಾರಂಭವಾದಾಗ, ಅದಕ್ಕೆ ಸಮಾನಾಂತರವಾಗಿ ಇಲ್ಲಿ 1874ರಲ್ಲಿ ಸುಗ್ಗಿಯ ಪ್ರಾರಂಭದಲ್ಲಿ ಕರ್ತನ ಪ್ರಸನ್ನತೆಯ ಗುರುತಿಸಲ್ಪಟ್ಟಿತು.

ಆ ಒಡಂಬಡಿಕೆ ವಾರದ ಮಧ್ಯದಲ್ಲಿ ಕ್ರಿ.ಶ. 33ರಲ್ಲಿ ಇಸ್ರಾಯೇಲ್ಯರನ್ನು ಒಂದು ಪದ್ಧತಿ ಅಥವಾ ಕ್ರೈಸ್ತಸಭಾ ರಾಷ್ಟ್ರವೆಂಬುದನ್ನು ನಿರಾಕರಿಸಿದ ದಿನವಾಗಿದೆ ಮತ್ತು ಅದು ಶಿಲುಬೆಯ ಮೇಲೆ ನಮ್ಮ ಕರ್ತನು ಮರಣ ಹೊಂದಿದ್ದನ್ನು ಮತ್ತು ಆತನು ಮರಣ ಹೊಂದುವ ಸ್ವಲ್ಪ ದಿನಗಳ ಹಿಂದೆ "ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ" (ಮತ್ತಾಯ 23:38) ಎಂದು ಹೇಳಿದ ಮಾತುಗಳಿಂದ ಗುರುತಿಸಲ್ಪಟ್ಟಿದೆ. ಇಲ್ಲಿ, ಇದಕ್ಕೆ ಸಮಾನಾಂತರವಾದುದು, ಕೃಪೆಯ ನಿರಾಕರಣೆ ಮತ್ತು 1878ರಲ್ಲಿ ಕ್ರೈಸ್ತ ಪ್ರಪಂಚ ಅಥವಾ ಬಾಬೇಲ್ ಭಿನ್ನವರ್ಗಾವಲಂಬಿ ಪದ್ಧತಿಯ ಪತನವಾದುದೇ ಆಗಿದೆ.

ಇಸ್ರಾಯೇಲ್ಯರ ಒಡಂಬಡಿಕೆ ವಾರದ ಕಡೆಯ ಅರ್ಧ ಭಾಗವು (33 ರಿಂದ 36ರವರೆಗೆ ಮೂರುವರೆ ವರ್ಷಗಳು) ರಾಷ್ಟ್ರೀಯ ಅಥವಾ ವರ್ಗಾವಲಂಬಿಗಳ ಕೃಪಾಕಾಲವಲ್ಲ, ಆದರೆ ಅದು ವ್ಯಕ್ತಿಗತ ಕೃಪಾಕಾಲವಾಗಿದ್ದು ಇಸ್ರಾಯೇಲ್ಯರಿಗೆ (ಪೂರ್ವದಲ್ಲಿನ ಹೆಸರು ಮಾತ್ರದ ಸಭೆಯ ವಾಹಿನಿಯ ಮೂಲಕವಲ್ಲ, ಆದರೆ ವ್ಯಕ್ತಿಗತವಾಗಿ, ಅವರು ಅದನ್ನು ಸ್ವೀಕರಿಸುವವರಾದರೆ) ಎಲ್ಲಾ ಕೃಪೆಯೂ ಮತ್ತು ಅಬ್ರಹಾಮನ ಒಡಂಬಡಿಕೆಯ ವಿಶೇಷ ಸವಲತ್ತುಗಳಿಂದ ಎಪ್ಪತ್ತು ಸಾಂಕೇತಿಕ ವರ್ಷಗಳ ಅಂತ್ಯದವರೆಗೆ ಅವರ ಕೃಪೆಯ ಮಿತಿಯು ಕೊರ್ನೇಲ್ಯ ಮತ್ತು ಅನ್ಯಜನರಿಗೆ ಸಾಮಾನ್ಯವಾಗಿ ಕೃಪೆಯನ್ನು ಕಳುಹಿಸಿಕೊಡುವುದರಲ್ಲಿ ಗುರುತಿಸಲ್ಪಟ್ಟಿದೆ. ಹೀಗೆ ಇಲ್ಲಿ ಸಮಾನಾಂತರದಲ್ಲಿ: ಏಪ್ರಿಲ್ 1878 ರಿಂದ 3½ ವರ್ಷಗಳಲ್ಲಿ ಕ್ರೈಸ್ತ ಪ್ರಪಂಚದವರು ಎಂದು ಹೇಳಿಕೊಳ್ಳುವವರನ್ನು ಅಥವಾ ಬಾಬೇಲಿನವರು ಅಕ್ಟೋಬರ್ 1881ವರೆಗೆ ಕೃಪೆಯಿಂದ ತಿರಸ್ಕರಿಸಲಾಗಿದ್ದು, ಅದು ವ್ಯಕ್ತಿಗತ ನಂಬಿಗಸ್ತರಿಗೆ ಮಿತಿಯಾದ ಮಹಾಕರೆಯು ಮುಕ್ತಾಯದ ಅವಧಿಯಾಗಿದೆ. ಈ ರೀತಿಯಲ್ಲಿ ಸರ್ವಸಾಮಾನ್ಯವಾದ ಕರೆಯು ಸಮಾನಾಂತರವಾಗಿ (ಸುವಾರ್ತಾಯುಗದ ಅನುಗ್ರಹ) 1881ರ ಅಕ್ಟೋಬರ್ ದಿನಾಂಕದಲ್ಲಿ ಮುಗಿಯಿತು ಹೇಗೆ ಕ್ರಿ.ಶ. 36ರಲ್ಲಿ ಯೆಹೂದ್ಯರ ಕೃಪೆಯ ಅಂತ್ಯವನ್ನು ಕಂಡುಕೊಂಡಿತು ಆ ರೀತಿಯಂತೆಯೇ ಆಯಿತು.

ಯೆಹೂದ್ಯ ಕೃಪೆಯು ರಾಜ್ಯದ ಇಸ್ರಾಯೇಲ್ಯರಿಗೆ ಪ್ರತ್ಯೇಕವಾದ ಕೊಡುಗೆಯನ್ನೊಳಗೊಂಡಿತ್ತು – ಅಬ್ರಹಾಮನ ಸ್ವಾಭಾವಿಕ ಮಕ್ಕಳಿಗೆ ಧರ್ಮಶಾಸ್ತ್ರದ ಒಡಂಬಡಿಕೆಯ ನಿಯಮದಡಿಯಲ್ಲಿ ಅವರಿಗೆ ಕೊಡಲ್ಪಟ್ಟಿರುವ ಅನುಕೂಲತೆಗಳನ್ನೂ, ಅವಕಾಶಗಳನ್ನೂ ಪಡಕೊಳ್ಳಬೇಕೆಂಬ ಕರೆಯನ್ನೊಳಗೊಂಡಿತ್ತು. ಈ ಕರೆ, ಕೃಪೆ ಅಥವಾ ಸವಲತ್ತು ಅವರ ಒಡಂಬಡಿಕೆ ವಾರದ ಅಂತ್ಯದೊಂದಿಗೆ ಸಂಪೂರ್ಣವಾಗಿ ಮತ್ತು ಸದಾಕಾಲಕ್ಕೂ ಮುಗಿದುಹೋಯಿತು. ಸುವಾರ್ತಾ ಕೃಪೆಯು ಪ್ರತ್ಯೇಕವಾಗಿ ಕ್ರಿಸ್ತನ ವಿಶ್ವಾಸಿಗಳಿಗೆ ರಾಜ್ಯದ ಕೊಡುಗೆಯಾಗಿದೆ, "ಮಹಾಕರೆಯು", ಕೃಪಾ ಒಡಂಬಡಿಕೆಯಲ್ಲಿ ದೇವರೊಡನೆ ಸಂಧಾನ ಮಾಡಿಕೊಂಡ ಎಲ್ಲರಿಗೂ, ಹಾಗೆ ನೀಡಲ್ಪಟ್ಟಿರುವ ಎಲ್ಲಾ ಅವಕಾಶಗಳನ್ನೂ ತಮಗಾಗಿ ಹೊಂದಿಕೊಳ್ಳಬಹುದು ಮತ್ತು ಈ ರೀತಿಯಲ್ಲಿ ಅಬ್ರಹಾಮನ ಸಂತಾನದ ಸಂತಾನವಾಗಬಹುದು. ಅದು ಅವರ ವಿಮೋಚಕನಾದ ಕ್ರಿಸ್ತನೊಂದಿಗೆ ಆತನ ಸ್ವಾರ್ಥತ್ಯಾಗದ ಒಡಂಬಡಿಕೆಯಲ್ಲಿ ಸೇರಿಕೊಂಡು ಲೋಕವನ್ನು ಆಶೀರ್ವದಿಸುವುದು. ಇದು ಕ್ರಿಸ್ತನ ಬರಲಿರುವ ಕಾರ್ಯಗಳಲ್ಲಿ ಮತ್ತು ಮಹಿಮೆಯಲ್ಲಿ ಪಾಲು ತೆಗೆದುಕೊಳ್ಳುವ ಅವರ ಅರ್ಹತೆಯನ್ನು ರೂಪಿಸುವ ಪರೀಕ್ಷೆಯಾಗಿದೆ. ಈ ಕೃಪೆಯು, ಈ ಕರೆಯು ಅಥವಾ ಆಹ್ವಾನವು 1881ರ ಅಕ್ಟೋಬರ್ ತಿಂಗಳಲ್ಲಿ ಸಂಪೂರ್ಣವಾಗಿ, ಎಂದೆಂದಿಗೂ ಮುಗಿದು ಹೋಗಿರುವುದನ್ನು ನಾವು ಕಂಡಿದ್ದೇವೆ. ಇದು ಯೆಹೂದ್ಯ ಕರೆಯ ಅಥವಾ ಕೃಪೆಯ ಸಮಾನಾಂತರವಾದ ನಿರ್ದಿಷ್ಟ ಸಮಯದ ಅಂತ್ಯವಾಗಿದೆ.

ಯೆಹೂದ್ಯರ ಕೃಪೆ ಅಥವಾ ಕರೆಯನ್ನು ನಿಲ್ಲಿಸುವುದು ಮತ್ತೊಂದು ಸಾಮಾನ್ಯ ಕರೆಯನ್ನು ಅನುಸರಿಸಿತು ಎಂಬುದನ್ನು ಗಮನಿಸಿರಿ, ಅದು ಅವರನ್ನು ಮತ್ತು ಅವರ ಹಿಂದಿನ ಕೃಪೆಯನ್ನು ನಿರ್ಲಕ್ಷಿಸಿ, ಪರಂತು, ನಂತರದಲ್ಲಿ ವಿಶ್ವಾಸಿಗಳಾದವರನ್ನು ಯಾರನ್ನು ಬೇಕಾದರೂ ಸೇರಿಸಿಕೊಂಡಿತು. ಅವರು ವಿಶ್ವಾಸಿಗಳಾಗಿ ರಾಜ್ಯದ ಗೌರವದ ಆ ಲೋಕದಾದ್ಯಂತದ ಕರೆಗೆ

ಅರ್ಹರಾದರು. ಅವರ ಹಿಂದಿನ ಕೃಪೆಯನ್ನು ನಿಲ್ಲಿಸುವುದು ಎಂದರೆ ಅವರ ಹಿಂದಿನ ಕೃಪೆಯು ನಿಂತ ಮೇಲೆ ಯಾವುದಕ್ಕೂ ಅವರು ಕರೆಯಲ್ಪಡಲಿಲ್ಲವೇನೋ ಎಂಬಷ್ಟು ವಾಸ್ತವವಾಗಿದೆ. ನಂತರದಲ್ಲಿ ಅವರು ಕೇವಲ ಒಂದು ಕೆಳಗಣ ಕೃಪೆಗೆ ಕರೆಯಲ್ಪಟ್ಟರು ಎಂಬುದಕ್ಕೆ ಸಮನಾಗಿದೆ; ಆದರೆ ಅದು ಅಷ್ಟೊಂದು ಗಮನಿಸತಕ್ಕದ್ದಲ್ಲ, ಯಾಕೆಂದರೆ ಸಾಮಾನ್ಯವಾದ ಸುವಾರ್ತಾಕರೆಯು ಅವರನ್ನು ಹೊರತುಪಡಿಸದ ಅದೇ ಕರೆಯಾಗಿದ್ದು ಅದು ವಿಶಾಲವೂ, ಆಳವೂ ಆಗಿ ಎಲ್ಲಾ ದೇಶಗಳ ಕ್ರಿಸ್ತನ ಎಲ್ಲಾ ವಿಶ್ವಾಸಿಗಳಿಗೂ ಅನ್ವಯವಾಗು ವುದಾಯಿತು.

ಇಲ್ಲಿ 1881ರಲ್ಲಿ ಕರೆಯ ಅಥವಾ ಅನುಗ್ರಹದ ನಿಲ್ಲುವಿಕೆಯನ್ನು ಅನುಸರಿಸಿತು ಇಲ್ಲವೇ ನಿಜವಾಗಿ ಹೇಳುವುದಾದರೆ, ನಂಬಿಕೆ ಮತ್ತು ಇಚ್ಛಾಪೂರ್ವಕವಾದ ವಿಧೇಯತೆಯ (ಹೇಗೂ ಮರಣಪರ್ಯಂತದ ತ್ಯಾಗವಲ್ಲ) ಷರತ್ತುಗಳ ಮೇಲೆ ಆತುಕೊಂಡು ಸಹಸ್ರಮಾನ ಆಶೀರ್ವಾದಗಳಿಗಾಗಿ, ಕೃಪೆಗಾಗಿ ಸಮಗ್ರ ಲೋಕಕ್ಕೆ ಸಾಮಾನ್ಯ ಕರೆಯು ಆವರಿಸಿತು. ಆದಾಗ್ಯೂ ಇದು ಕಡಿಮೆ ಮಟ್ಟದ ಕರೆಯಾಗಿದೆ, ಮುಗಿದು ಹೋದದಕ್ಕಿಂತ ಕಡಿಮೆ ಕೃಪೆಯುಳ್ಳದ್ದು. ರಾಜ್ಯದ ಅಡಿಯಲ್ಲಿರುವ ಆಶೀರ್ವಾದಗಳನ್ನು ಅನುಭವಿಸುವ ಕರೆಯಾಗಿದ್ದರೂ, ರಾಜ್ಯ ವರ್ಗದ ಅಭಿಷೇಕಿಸಿದ ಭಾಗವಾಗಿ ಅಲ್ಲ. ಈ ಬದಲಾವಣೆ – ಮೇಲ್ಮಟ್ಟದ ಕೃಪೆಯ ಈ ನಿಲುಗಡೆ ಮತ್ತು ಕಡಿಮೆ ಕೃಪೆಯ ಪ್ರಾರಂಭ ಇವುಗಳನ್ನು ಪ್ರಸ್ತುತ ಸಮಯದಲ್ಲಿ ಗಮನಕ್ಕೆ ಬರುವುದಿಲ್ಲ. ಅದಕ್ಕೆ ನಿಜವಾದ ಕಾರಣವೆಂದರೆ, ರಾಜ್ಯದ ದೊಡ್ಡ ಬಹುಮಾನ ಮತ್ತು ದೈವಸ್ವಭಾವದಲ್ಲಿ ಪಾಲುದಾರರಾಗುವ ಕ್ರಿಸ್ತನೊಂದಿಗಿನ ಸಹಭಾಗತ್ವವು ಇವುಗಳ ಮೇಲಿನ ತನ್ನ ದೃಷ್ಟಿಯನ್ನು ಸಭೆಯು ಒಟ್ಟಾರೆಯಾಗಿ ಕಳೆದುಕೊಂಡಿದೆ. ಕಳೆದ ಅನೇಕ ಶತಮಾನಗಳಿಂದ ಕ್ರೈಸ್ತರು ಸಾಮಾನ್ಯವಾಗಿ ಹಿಡುಕೊಂಡಿರುವ ಬಹುಮಾನದ ಉನ್ನತವಾದ ಭಾವನೆ ಏನೆಂದರೆ, ಅವರ ಪುನರುತ್ಥಾನದಲ್ಲಿ ಅವರಿಗೆ ಸಮರ್ಪಕವಾದ ದೇಹವನ್ನು ನೀಡಲಾಗುವುದು ಮತ್ತು ಎಲ್ಲಾ ರೋಗಗಳಿಂದ, ದುಃಖಗಳಿಂದ ಮುಕ್ತಿಗೊಂಡು ದೇವರಕೃಪೆಯನ್ನು ಅನುಭವಿಸುವರು ಮತ್ತು ನಿತ್ಯಜೀವವನ್ನು ಹೊಂದಿಕೊಳ್ಳುವರು ಎಂಬುದೇ. ಈ ಭಾವನೆಯು ಸುವಾರ್ತಾಯುಗದ "ಉನ್ನತ ಕರೆಯ" ನಿಜವಾದ ಸೌಕರ್ಯಕ್ಕೆ ಕಡಿಮೆಯದಾಗಿದ್ದರೂ, ಇದು ನಿಜವಾಗಿಯೂ ಸಹಸ್ರಮಾನಯುಗದಲ್ಲಿ ಸರ್ವಸಾಮಾನ್ಯವಾಗಿ ಲೋಕಕ್ಕೆ ನೀಡಲಿರುವ ಆಶೀರ್ವದಿತ ಭಾಗ್ಯಗಳ ಸೊಗಸಾದ ವಿಚಾರವಾಗಿದೆ. ಅದರಲ್ಲಿ ಅನೇಕರು ಆಗ ವಿಧೇಯತೆಗೆ ಶರಣಾಗುವರು ಮತ್ತು ದೇವರೊಂದಿಗೆ ಸಾಮರಸ್ಯಕ್ಕೆ ಬರುವರು.

ನಿಜವಾದ ಸಂಗತಿಯೇನೆಂದರೆ, ಆಗ, ಸುವಾರ್ತಾ ಯುಗದ ಕರೆಯಲ್ಲಿನ ಉನ್ನತ ಮತ್ತು ಭವ್ಯವಾದ ಲಕ್ಷಣಗಳನ್ನು ಸ್ಪಷ್ಟವಾಗಿ ಮತ್ತು ವಿಶಿಷ್ಟವಾಗಿ ನೋಡುವವರು ಮಾತ್ರವೇ, ಈ ಕರೆಯನ್ನು ಪ್ರಕಟಿಸುವವರು ಅಥವಾ ವಿವರಿಸುವವರು ಈ ಸಮಯ ಮಿತಿಯು 1881ರ ಅಕ್ಟೋಬರ್‌ನಲ್ಲಿ ತಲುಪಿದೆ ಎಂದು ದೇವರವಾಕ್ಯದಿಂದ ತೋರಿಸಲ್ಪಡುವವರೇ ಆಗಿದ್ದಾರೆ. ಇತರರು, "ಕ್ರಿಸ್ತನಲ್ಲಿ ದೇವರ ಮಹಾಕರೆ"ಯ ಬಗ್ಗೆ ಅಪೋಸ್ತಲರ ವಾಕ್ಯವನ್ನು ಉಲ್ಲೇಖಿಸುವಾಗ, ನಿಜವಾಗಿಯೂ ಸಹಸ್ರಮಾನ ಯುಗದ ಕೆಳಗಿನ ಕರೆಯನ್ನು ವಿವರಿಸುತ್ತಾರೆ. ಆದುದರಿಂದ ಸರ್ವ ಸಾಮಾನ್ಯವಾದ ಸುವಾರ್ತಾಕರೆಯು, ನಿಜವಾದದ್ದು, ಮುಗಿದಿದೆ. ಯಾರೂ ಅದನ್ನು ವಿಸ್ತರಿಸಲಾರರು. ಕೆಲವರು ಅದನ್ನು ಅರ್ಥಮಾಡಿಕೊಳ್ಳದಿರುವುದರಿಂದ ಮತ್ತು ಅದನ್ನು ನೀಡಲಾಗದಿರುವುದರಿಂದ, ಮತ್ತೆ ಕೆಲವರು ಅದು ಅಂತ್ಯದಲ್ಲಿದೆ ಎಂದು ತಿಳಿದಿರುವರು.

ಆದರೆ, ಸರ್ವಸಾಮಾನ್ಯ 'ಕರೆಯು' (The General Call) ಸ್ಥಗಿತ ಗೊಂಡಿದ್ದರೂ 'ಬಾಗಿಲು' ಇನ್ನೂ ಮುಚ್ಚಿರುವುದಿಲ್ಲ. 'ಕರೆಯ' ಅಂತ್ಯವು ಮತ್ತು 'ಬಾಗಿಲು' ಮುಚ್ಚುವಿಕೆಯು ವಿಶಿಷ್ಟವಾದದ್ದು, ಮತ್ತು ಪ್ರತ್ಯೇಕವಾದದ್ದು. ಸರ್ವಸಾಮಾನ್ಯವಾದ ಕರೆಯು ಸ್ಥಗಿತಗೊಂಡ ಮೇಲೆ, ಬಾಗಿಲು ದೇವರ ರಾಜ್ಯದಲ್ಲಿ ಮಹಾ ಜೊತೆಬಾಧ್ಯಸ್ಥಿಕೆಯನ್ನು ಪಡೆಯುವ ಓಟವನ್ನು ಪ್ರವೇಶಿಸಲು ಕೆಲವರಿಗೆ ತೆರೆದಿರುತ್ತದೆ. ದೇವರು ತನ್ನ ಸಭೆಯೆಂಬ 'ಕ್ರಿಸ್ತನ ದೇಹ'ವನ್ನು ರಚಿಸಲು ಒಂದು ನಿಗಿದಿತ ಸಂಖ್ಯೆಯನ್ನು ಪೂರ್ವ ನಿರ್ಧಾರಪಡಿಸಿದ್ದಾನೆ. ಅದರಲ್ಲಿ ಬೇಕಾದುದಕ್ಕಿಂತ ಒಬ್ಬ ಸದಸ್ಯನೂ ಹೆಚ್ಚಾಗಿ ಇರುವುದಿಲ್ಲ, ಒಬ್ಬನು ಕಡಿಮೆಯಾಗಿಯೂ ಇರುವುದಿಲ್ಲ. (ಇದನ್ನು ಯಾಜಕ 21:17–23ರಲ್ಲಿ ಸಾಂಕೇತಿಕವಾಗಿ ಬೋಧಿಸಲಾಗಿದೆ). ಆತನು ಆ ಗೌರವಕ್ಕೆ ತಾನು ನಿರ್ಧರಿಸಿದ ಸಂಖ್ಯೆಗಿಂತ ಹೆಚ್ಚಾಗಿ ಯಾರನ್ನೂ ಕರೆಯುವುದಿಲ್ಲ, ಅಹ್ವಾನಿಸುವುದಿಲ್ಲ ಎಂಬುದು ಅದನ್ನು ಅನುಸರಿಸುತ್ತದೆ. ಅಕ್ಟೋಬರ್ 1881ರಲ್ಲಿ ಆತನ ವಾಕ್ಯವು ಈ ಪೂರ್ಣಸಂಖ್ಯೆಯು ತಲುಪಿದೆ ಎಂಬುದನ್ನು ತೋರಿಸುತ್ತದೆ. ಆದರೆ ಕೆಲವರು ಸರ್ವಸಾಮಾನ್ಯ ಕರೆಗೆ ಸ್ಪಂದಿಸಿರುವವರು ಮತ್ತು ಆತನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುವವರು ಆ ಬಹುಮಾನವನ್ನು ಪಡಕೊಳ್ಳುವ ಆತನ ಒಡಂಬಡಿಕೆ ಕಾಪಾಡಿಕೊಳ್ಳಲು ಸೋತುಹೋಗಬಹುದು. ಸರ್ವ

ಸಾಮಾನ್ಯಕರೆಯು ಸ್ಥಗಿತಗೊಂಡ ನಂತರವೂ ಬಾಗಿಲು ತೆರೆದೇ ಇರುವುದು. ಇದು ಓಟಕ್ಕೆ ಪ್ರವೇಶಿಸುವುದಕ್ಕೆ, ಸತ್ಯದ ಸೇವೆಯಲ್ಲಿ ಸ್ವಾರ್ಥತ್ಯಾಗ ಮಾಡುವುದಕ್ಕೆ ಮತ್ತು ಕೆಲವರು ಅನಂತರ ಅವರುಗಳು ಪರೀಕ್ಷೆಯ ಸಮಯದಲ್ಲಿ ಕರ್ತನ ನೀತಿವಂತಿಕೆಯ ವಸ್ತ್ರವನ್ನು ಬಿಚ್ಚಿಟ್ಟಿದ್ದಿರಬಹುದು; ಮತ್ತೂ ಕೆಲವರು ಸ್ವಾರ್ಥತ್ಯಾಗದ ಒಡಂಬಡಿಕೆಯನ್ನು ಮಾಡಿದ ಮೇಲೆ, ಪ್ರಸ್ತುತ ಲೋಕವನ್ನು ಪ್ರೀತಿಸುವವರಾಗಿ ಅದರ ಪಾಲನೆ ಮತ್ತು ಸುಖಾನುಭವಗಳಿಂದ ಹೆಚ್ಚು ಭರಿತರಾಗಿದ್ದು ತಮ್ಮ ಒಡಂಬಡಿಕೆಯ ಅಗತ್ಯತೆಗಳನ್ನು ಪೂರೈಸಲು ಸೋತುಹೋಗಿದ್ದಿರಬಹುದು, ಅಂತಹವರ ಆ ಸ್ಥಳಗಳನ್ನು ಆಕ್ರಮಿಸಿಕೊಳ್ಳುವಂತೆ ಅನುಮತಿಸುತ್ತದೆ,

ಪುನಃ ಗಮನಿಸಬೇಕಾದುದೆಂದರೆ, 1881ರಲ್ಲಿ ಉಂಟಾದ ಕರೆಯ ಅಂತ್ಯವು ಈಗಾಗಲೇ ಕರೆಯನ್ನು ಅಂಗೀಕರಿಸಿರುವ ಮತ್ತು ಕರ್ತನಿಂದ ಪ್ರತಿಷ್ಠೆ ಹೊಂದಿದ ಸಾವಿರಾರು ಸೇವಕರುಗಳ ಸೌಕರ್ಯಗಳ ಮಧ್ಯೆ ಯಾವುದೇ ರೀತಿಯಲ್ಲಿ ಪ್ರವೇಶಿಸುವುದಿಲ್ಲ. ಅದು ಒಳಗಿರುವ ಯಾರನ್ನೂ ಹೊರಹಾಕುವುದಿಲ್ಲ ಮತ್ತು ಯಾರೂ ಒಳಗೆ ಬರುವಂತಿಲ್ಲ ಎಂಬ ಅಭಿಪ್ರಾಯವನ್ನೂ ನೀಡುವುದಿಲ್ಲ; ಅದು ಕೇವಲ ದೇವರ ಸರ್ವಸಾಮಾನ್ಯ ಆಹ್ವಾನದ ನಿಲ್ಲಿಸುವಿಕೆಯಾಗಿದೆ.

ಸತ್ಯಸಂಗತಿಯೆಂದರೆ, ದೇವರು ತನ್ನನ್ನು ಪ್ರೀತಿಸುವವರಿಗಾಗಿ ಕಾದಿರಿಸಿಟ್ಟಿರುವ ಅಮೂಲ್ಯವೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳ ಬಗ್ಗೆ ನೀವು ಇತ್ತೀಚೆಗಷ್ಟೇ ಸ್ಪಷ್ಟ ಜ್ಞಾನವನ್ನು ನೀವು ಹೊಂದಿ ಕೊಂಡಿದ್ದಿರಬಹುದು. ಅದು ಮಹತ್ವದ ಮತ್ತು ಭವ್ಯವಾದ ಬಹುಮಾನ ಎಂದು ನೀವು ಅರ್ಥಮಾಡಿಕೊಳ್ಳುವದಕ್ಕೆ ಬಹಳ ಹಿಂದೆಯೇ ನಿಮ್ಮನ್ನು ಬಹುಮಾನಗಳಿಗೆ ಕರೆಯಲ್ಪಡಲಿಲ್ಲ ಮತ್ತು ಓಟಗಾರರಾಗಿ ಅಂಗೀಕರಿಸಲ್ಪಡುವುದಿಲ್ಲ ಎಂಬದಾಗಿ ಸಾಬೀತುಪಡಿಸುವುದಿಲ್ಲ. ನಿಜವೇನೆಂದರೆ, ಕರೆಯನ್ನು ಸ್ವೀಕರಿಸುವವರು ಯಾರೂ, ಮೊದಲಲ್ಲಿ ಮಾರ್ಗದ ಕಠಿಣತೆಯನ್ನು, ಇಕ್ಕಟ್ಟನ್ನು ಮತ್ತು ಮತ್ತೊಂದು ತುದಿಯಲ್ಲಿರುವ ಬಹುಮಾನದ ಭವ್ಯತೆಯನ್ನು ಗ್ರಹಿಸಿಕೊಳ್ಳುವಂತೆ ಪೂರ್ಣವಾಗಿ ಸಮರ್ಥರಲ್ಲ. ವಾಗ್ದಾನಗಳ ಬಗ್ಗೆ ನಮ್ಮ ಗ್ರಹಿಕೆಯ ಸ್ಪಷ್ಟತೆಯು ನಮಗೆ ನಮ್ಮನ್ನು ಕಾರ್ಯವೆಸಗುವ ಮತ್ತು ನಮ್ಮ ಪ್ರಸ್ತುತ ಅಡ್ಡಿ ಆತಂಕಗಳನ್ನು, ಪರೀಕ್ಷೆಗಳನ್ನು ಗೆದ್ದುಕೊಳ್ಳುವಂತೆ ಮಾಡುವ ದೇವರ ಶಕ್ತಿಯಾಗಿದೆ. ನಮಗೆ ಉತ್ಕೃಷ್ಟವಾಗಿಯೂ, ಅತೀವವಾದ ಮತ್ತು ಅಮೂಲ್ಯವಾಗಿಯೂ ಇರುವ ವಾಗ್ದಾನಗಳು ನಾವು ಪ್ರಾಮಾಣಿಕರು ಎಂದು ಸಾಬೀತುಪಡಿಸಿ ಮುಂದುವರೆಯುವಾಗ ಕ್ರಮೇಣವಾಗಿ ಪ್ರಕಟಗೊಳ್ಳುತ್ತವೆ. ಇವುಗಳಿಂದ, ಅವುಗಳು ತುಂಬಿಸುವ ಬಲ ಮತ್ತು ಧೈರ್ಯದಿಂದ ನಾವು ಆ ಬಹುಮಾನವನ್ನು ಗೆದ್ದುಕೊಳ್ಳವಂತೆ ಓಡಬಹುದಾಗಿದೆ (2 ಪೇತ್ರ 1:4).

ಬಹುಮಾನವನ್ನು ಪಡೆಯಲಿರುವ ವರ್ಗವು ಕರೆದವರು, ಆಯ್ಕೆಗೊಂಡವರು ಮಾತ್ರವಲ್ಲ, ನಂಬಿಗಸ್ತರೂ ಸಹ. ಸರ್ವಸಾಮಾನ್ಯವಾದ ಕರೆಯು ಸ್ಥಗಿತಗೊಂಡಿದ್ದರೂ, ಕರೆಯಲ್ಪಟ್ಟವರಲ್ಲಿನ ನಂಬಿಕೆಯ ಪರೀಕ್ಷೆಯು ಇನ್ನೂ ಮುಗಿದಿಲ್ಲ ಎಂಬುದು ವಿಶದವಾಗಿದೆ. ನಂಬಿಗಸ್ತರನ್ನು ಮುದ್ರೆಹಾಕಲಾಗಿದೆ ಮತ್ತು ತಮ್ಮ ಸ್ವಾರ್ಥತ್ಯಾಗದ ಒಡಂಬಡಿಕೆಗೆ ಅಪ್ರಮಾಣಿಕರಾದವರಿಂದ ಅವರನ್ನು ಪ್ರತ್ಯೇಕಿಸಲಾಗಿದೆ. ಮತ್ತು ಬುದ್ಧಿವಂತ ಕನ್ಯೆಯರನ್ನು ಮೂರ್ಖ ಕನ್ಯೆಯರಿಂದ ಪ್ರತ್ಯೇಕಿಸಲಾಗಿದೆ. ಅವರು ಓಡಿ ಲೋಕದ ಬಹುಮಾನಗಳನ್ನು ಗೌರವಗಳನ್ನು, ಸಂಪತ್ತು ಮುಂತಾದವುಗಳನ್ನು ಗೆದ್ದುಕೊಳ್ಳಬಹುದು ಮತ್ತು ಅದೇ ಸಮಯದಲ್ಲಿ ಮಹಿಮೆಯ, ಗೌರವದ ಮತ್ತು ನಿತ್ಯಜೀವದ ಮಹಾ ಬಹುಮಾನಕ್ಕಾಗಿಯೂ ಓಡಬಹುದು ಎಂಬುದನ್ನು ಅವರ ಅವಿವೇಕತನವು ಒಳಗೊಂಡಿದೆ ಎಂದು ಊಹಿಸಬಹುದಾಗಿದೆ. ಈ ಷರತ್ತುಗಳೇ ಅಂತಹ ಇಬ್ಬಗೆಯ ಕ್ರಮ ಅಸಾಧ್ಯವೆಂಬ ಅರ್ಥವನ್ನೂ ನೀಡುತ್ತದೆ. "ಎರಡು ಮನಸ್ಸುಳ್ಳವನು ತನ್ನ ನಡತೆಯಲ್ಲೆಲ್ಲಾ ಚಂಚಲನೂ ಆಗಿದ್ದಾನೆ. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ" (ಯಾಕೋಬ 1:8 ; ಮತ್ತಾಯ 6:24).

ಎಲ್ಲಾ ನಂಬಿಗಸ್ತ ಬುದ್ಧಿವಂತ ಕನ್ಯೆಯರು ಆ ರೀತಿಯಲ್ಲಿ ರುಜುವಾತು ಹೊಂದಿದ ಮೇಲೆ, ಕರ್ತನ ಸಂತೋಷವನ್ನು ಪ್ರವೇಶಿಸಿದ ಮೇಲೆ, ಆ ವರ್ಗದವರಾಗಬಹುದಾದ 'ಅವಕಾಶದ ಬಾಗಿಲು' ಮುಚ್ಚುತ್ತದೆ; ಬೇರೆ ಯಾರೂ ಪ್ರವೇಶಿಸಲಾಗದು. ಎಲ್ಲಾ ಬುದ್ಧಿವಂತೆಯರು ಒಳಹೊಕ್ಕಿದ ನಂತರದಲ್ಲಿ ಪೂರ್ವನಿರ್ಧಾರಿತ ಸಂಖ್ಯೆಯು ತುಂಬುತ್ತದೆ. ಆಗ ಮನೆ ಯಜಮಾನನು ಎದ್ದು ಬಾಗಿಲನ್ನು ಮುಚ್ಚುವನು (ಲೂಕ 13:24,25; ಮತ್ತಾಯ 25:10). ಆಗ ಅನೇಕರು ಸಂಗತಿಯನ್ನು ವಿಧವಿಧವಾಗಿ ನೋಡಲು ಪ್ರಾರಂಭಿಸುತ್ತಾರೆ – ಅವರು ಒಮ್ಮೆ ಮಾಡಿದ ತ್ಯಾಗಕ್ಕೆ ಅನುಭವಿಸಿದ ಯಾವ ಸವಲತ್ತುಗಳು ಮತ್ತು ಅವಕಾಶಗಳು ತಪ್ಪಿಹೋದವು ಎಂಬುದನ್ನು ನೋಡುತ್ತಾರೆ ಎಂದು ನಮ್ಮ ಕರ್ತನು ತಾನೇ ಹೇಳುತ್ತಾನೆ. ಆದರೆ ಅವರು ಪ್ರವೇಶವನ್ನು

ಬಯಸುವಾಗ, ಯಜಮಾನನು ಅವರಿಗೆ "ನಿಮ್ಮನ್ನು ನಾನು ನನ್ನ ವಧುಗಳನ್ನಾಗಿ ಮಾನ್ಯ ಮಾಡುವುದಿಲ್ಲ – ಆಕೆಯು ಪೂರ್ಣಗೊಂಡಿದ್ದಾಳೆ, ಆಕೆ ಒಬ್ಬಳನ್ನು ಮಾತ್ರವೇ ನಾನು ಹೊಂದಿಕೊಂಡಿದ್ದೇನೆ" ಎಂದು ಹೇಳುತ್ತಾನೆ. ಆದರೆ ದೇವರಿಗೆ ಸ್ತೋತ್ರ ! ಇತರೆ ಪರಿಶುದ್ಧ ವಚನಗಳು ಹೇಳುವಂತೆ ಆ ಬುದ್ಧಿಹೀನ ಕನ್ಯೆಯರು, ಮಹಾ ಕರೆಯಿಂದ ಆ ರೀತಿಯಾಗಿ ತಿರಸ್ಕರಿಸಲ್ಪಟ್ಟರೂ. ಅದಕ್ಕಾಗಿ ಪರೀಕ್ಷೆಯಲ್ಲಿರುವಾಗ ಅವರ ಗುಣಲಕ್ಷಣಗಳು ಅವರನ್ನು ಅನರ್ಹರೆಂಬುದಾಗಿ ಸಾಬೀತುಪಡಿಸಿರ ಬಹುದಾದಾಗ್ಯೂ ಅವರುಗಳಿಗೆ ಕರ್ತನ ಮನೆಯವರಂತೆ ನಮ್ರತೆಯ ಸ್ಥಾನದಲ್ಲಿರುವ ದಯೆ ದೊರೆಯುವುದು.

ಆದುದರಿಂದ, ಬಾಗಿಲು ಮುಚ್ಚುವ ಮೊದಲು, ನಿಷ್ಠಾವಂತ ನಂಬಿಗಸ್ತರ ಸಂಖ್ಯೆಯು ಪೂರ್ಣಗೊಳ್ಳುವ ಮುನ್ನ, ಪ್ರತಿಯೊಬ್ಬರೂ ತನ್ನ ಕರೆಯನ್ನೂ, ಆಯ್ಕೆಯನ್ನೂ ಖಚಿತಪಡಿಸಿಕೊಳ್ಳಲಿ. ಮತ್ತು ಈ ಅಂತ್ಯಕ್ಕೆ ನಾವು ದೇವರಿಗೆ ಈ ಅಮೂಲ್ಯ ವಾಗ್ದಾನಗಳ ಮತ್ತು ಈ ವಿವರವಾದ ಸಾಮ್ಯಗಳ ಮೂಲಕ ನಮ್ಮಲ್ಲಿ ಕಾರ್ಯವೆಸಗುವಂತೆ ಅದನ್ನು ಆತನ ಚಿತ್ತ ಮತ್ತು ಒಳ್ಳೆಯ ಸಂತೋಷಕ್ಕನುಸಾರ ಮಾಡುವಂತೆ ಶ್ರಮಿಸೋಣ.

ಆದರೆ, ಕೆಲವರು ಇನ್ನೂ ಹೇಳುವುದೇನೆಂದರೆ "ನಾನು 1881ರಲ್ಲಿ ನೀಡಿದ ಸಾಮಾನ್ಯಕರೆಯ ಮುಕ್ತಾಯಕ್ಕೂ ಮುನ್ನ ಒಬ್ಬನಲ್ಲ ಎಂದು ಭಯಪಡುತ್ತೇನೆ ಎಂದು. ಯಾಕೆಂದರೆ ಆಗ ನಾನು ದೇವರ ಆಳವಾದ ವಾಗ್ದತ್ತ ಸಂಗತಿಗಳ ಬಗ್ಗೆ ಸಂಪೂರ್ಣ ತಿಳುವಳಿಕೆ ಇಲ್ಲದವನಾಗಿದ್ದೆ. ಇದಕ್ಕೂ ಹೆಚ್ಚಾಗಿ, ನಾನು ದೇವರಿಗೆ ಪೂರ್ಣವಾಗಿ ಅಪರಿಚಿತನಾಗಿದ್ದೆ, ಆತನ ವೈರಿಯೂ ಆಗಿದ್ದೆ, ಆತನ ಸೇವೆ ಮಾಡುವ ಯಾವುದೇ ಒಡಂಬಡಿಕೆಗಳಿಂದಲೂ, ಅಂಥಾ ಬಯಕೆಗಳಿಂದಲೂ ದೂರವಿದ್ದೆ, ಇತ್ತೀಚೆಗೆ ಮಾತ್ರವೇ ನಾನು ದೇವರನ್ನು ತಿಳಿದುಕೊಂಡಿದ್ದೇನೆ. ಇತ್ತೀಚೆಗೆ ತಾನೇ ನಾನು ಕ್ರಿಸ್ತನ ನೊಗವನ್ನು ನನ್ನ ಮೇಲೆ ಹೊತ್ತುಕೊಂಡಿದ್ದೇನೆ, ಮತ್ತೂ ನಾನು ಈಗ ಕ್ರಿಸ್ತನೊಂದಿಗೆ ಶ್ರಮೆಪಡುವುದನ್ನು, ಆತನ ಸೇವೆಯಲ್ಲಿ ಸ್ವಾರ್ಥತ್ಯಾಗ ಮಾಡುವುದನ್ನು, ಅಂತಹ ಜೊತೆ–ತ್ಯಾಗಗಳನ್ನು ಆತನ ಸಹಸ್ರಮಾನದ ಭವ್ಯವಾದ ಕಾರ್ಯದಲ್ಲಿ ಆತನ ಜೊತೆ ಬಾಧ್ಯಸ್ಥನಾಗಲು ಮಾಡಲಾಗಿದೆ ಎಂಬುದನ್ನು ನಾನು ಇತ್ತೀಚಿಗಷ್ಟೇ ಕಲಿತುಕೊಂಡಿದ್ದೇನೆ" ಎಂದು ಅವರು ಇನ್ನೂ ಹೇಳಬಹುದು. ಈಗ ಆತನ ಈ ಮಹಿಮೆಗಳನ್ನು ಕಂಡಮೇಲೆ, ಈ ಅಮೂಲ್ಯವಾದ ಸಂಗತಿಗಳನ್ನು ಮೆಚ್ಚಿಕೊಂಡ ಮೇಲೆ ಮತ್ತು ನನ್ನನ್ನು ಆ ಅದ್ಭುತವಾದ ಬಹುಮಾನಕ್ಕಾಗಿ ಈ ಓಟ ಓಡಲು ಸಿದ್ಧಪಡಿಸಿಕೊಂಡ ಮೇಲೆ, ಅದು ನನಗೆ ತೆರೆದುಕೊಂಡಿಲ್ಲವೆಂದು ತೀರ್ಮಾನಿಸಬೇಕೋ? ಎಂದು ಪ್ರಶ್ನಿಸಬಹುದು. ನಾನು ದೇವರ ವ್ಯವಸ್ಥೆಯನ್ನು ಬದಲಿಸುವ ಬಗ್ಗೆ ಆಲೋಚಿಸುವುದಿಲ್ಲ ಮತ್ತು ದೇವರ ವಿವೇಕವು ನಿರ್ಧರಿಸಿದ ಮಿತಿಯನ್ನು ಮೀರಿ ಮತ್ತೊಂದನ್ನು ಸೇರಿಸುವಂತೆ ಕೇಳುವುದಿಲ್ಲ, ನಾನು ನನ್ನ ಅದೃಷ್ಟ ಹೀನತೆಯನ್ನು ತೀವ್ರವಾಗಿ ಅನುಭವಿಸುತ್ತೇನೆ ಎಂದು ಸಹ ಹೇಳಬಹುದು.

ಅಂಥವರಿಗೆ ನಮ್ಮ ಉತ್ತರವೆಂದರೆ – ಓಡಿರಿ, ನಿಮ್ಮ ಪ್ರಕರಣವು (ಪರಿಸ್ಥಿತಿಯು) ನಿಮಗೆ ಕಂಡು ಬರುವಷ್ಟು ಅಂಧಕಾರವಾದುದಲ್ಲ. "ಬಾಗಿಲು" ಇನ್ನೂ "ಮುಚ್ಚಲ್ಪಟ್ಟಿಲ್ಲ". ಬಾಗಿಲು ಮುಚ್ಚಿದಾಗ ಕರೆಯನ್ನು ಅಂಗೀಕರಿಸಿದವರೆಲ್ಲರೂ ತಮ್ಮ ಒಡಂಬಡಿಕೆಗೆ ನಿಷ್ಠೆಯಿಂದ ಇರುವುದಾಗಿ ಸಾಬೀತುಪಡಿಸಬೇಕು, ಹೆಚ್ಚು ಮಂದಿ ಇರಲಾರರು, ಆದರೆ ಅಷ್ಟೇ ಸಾಕು. ಮತ್ತೂ ನೆನಪಿನಲ್ಲಿಡಿ, ನಿಮ್ಮ ಗಮನಿಸುವಿಕೆ, ಮತ್ತು ಪರಿಶುದ್ಧ ಗ್ರಂಥಗಳು ಚೆನ್ನಾಗಿ ಸೂಚಿಸುವದೇನೆಂದರೆ ಕರೆಯನ್ನು ಅಂಗೀಕರಿಸಿದವರಲ್ಲಿ ಅನೇಕರಿದ್ದರೂ, ಕೆಲವರು ಮಾತ್ರವೇ ಆಯ್ಕೆಗೊಳ್ಳುವರು. ಯಾಕೆಂದರೆ ಕೆಲವರು ಮಾತ್ರವೇ ಪರೀಕ್ಷೆಯಲ್ಲಿರುವಾಗ ಅವರ ಒಡಂಬಡಿಕೆಗೆ ನಿಷ್ಠಾವಂತರೆಂದು ಸಾಬೀತುಗೊಳ್ಳುವರು. ಯಾಕೆಂದರೆ ಕರೆಯಲ್ಪಟ್ಟವರಲ್ಲಿ ಒಬ್ಬರ ನಂತರ ಒಬ್ಬರು ಅಪ್ರಮಾಣಿಕರು ಎಂದು ಸಾಬೀತಾಗುವುದರಿಂದ ಅವರ ಅವಕಾಶಗಳು, ಅವರ ಕಾರ್ಯದ ಸ್ಥಾನಗಳು ಮತ್ತು ಅವರ ಬಹುಮಾನದ ಕಿರೀಟವು ಬೇರೆಯವರಿಗೆ ವರ್ಗಾಯಿಸಲ್ಪಡುವುವು. ಕಾರ್ಯದ ಸ್ಥಾನಗಳಲ್ಲಿ ಒಂದು ಮತ್ತು ಬಹುಮಾನದ ಕಿರೀಟಗಳಲ್ಲಿ ಒಂದು ನಿಮಗೆ ವರ್ಗಾಯಿಸಬಹುದು, ಮತ್ತು ನಿಮ್ಮ ಹೆಸರನ್ನು ಕ್ರಿಸ್ತನ ವಧುವಿನ ಪರೀಕ್ಷಾರ್ಥದ (probationary) ಸದಸ್ಯರಾಗಿ ಜೀವಬಾಧ್ಯರ ಪಟ್ಟಿಯಲ್ಲಿ ಅನರ್ಹರಾಗಿ ಹೆಸರು ಅಳಿಸಲ್ಪಟ್ಟ ಸ್ಥಾನದಲ್ಲೂ ಬರೆಯಬಹುದು (ಪ್ರಕಟನೆ 3;5; ಇಬ್ರಿಯ 12:23).

ಈ ಅಮೂಲ್ಯವಾದ ವಾಗ್ದಾನಗಳನ್ನು ಮನಸ್ಸಿನಲ್ಲಿ ಬಿಗಿಯಾಗಿ ಹಿಡುಕೊಳ್ಳುವವರು ಮತ್ತು ಆತನ ದ್ರಾಕ್ಷೆತೋಟದಲ್ಲಿ ಕೆಲಸ ಮಾಡುವ ಬಯಕೆಯುಳ್ಳವರು ಇಂಥವರಿಗೆ ಅವರುಗಳು ಆತ್ಮನಿಂದ ಪಡೆಯಲ್ಪಟ್ಟವರು ಎಂಬ ಬಲವಾದ ಪ್ರಮಾಣವನ್ನು ಹೊಂದಿದ್ದಾರೆ.* ಏಕೆಂದರೆ ಮಾನವ ಮನಸ್ಸು, ನೀತಿ ನಿರ್ಣಯ

ಸಂಪುಟ I, ಪುಟ 226 ನೋಡಿರಿ ಇಂಗ್ಲೀಷ್‌ನಲ್ಲಿ, ಕನ್ನಡದಲ್ಲಿ ಪುಟ ...

ಹೊಂದಿದ ಮೇಲೆಯೂ, ದೇವರು ಪ್ರತಿಷ್ಠಿತರಾಗಿ, ಅಂಗೀಕರಿಸಲ್ಪಟ್ಟವರಿಗಾಗಿ ಉದ್ದೇಶಿತವಾದ ಆಳವಾದ ಸಂಗತಿಗಳನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗದು (1 ಕೊರಿಂಥ 2:6–16) ಮತ್ತೂ ದೇವರು ಮಹಾಪ್ರೀತಿಮಯನೂ, ನ್ಯಾಯವಂತನೂ ಆಗಿರುವುದರಿಂದ ಯಾರಲ್ಲೂ ಕೈಗೂಡದ ನಿರೀಕ್ಷೆಯನ್ನು ಯಾರ ಹೃದಯದಲ್ಲೂ ಅಧಿಕೃತಗೊಳಿಸುವುದಿಲ್ಲ. ಸತ್ಯದ ವಾಕ್ಯದಿಂದ ಆತ್ಮನಿಂದ ಹುಟ್ಟುವುದು ಎಂದರೆ ಅಂತಿಮವಾಗಿ ಆತ್ಮೀಕ ಸ್ಥಿತಿಗೆ ಜನಿಸುವುದು, ಅಲ್ಲದೇ ಆತ್ಮನಿಂದ ಹುಟ್ಟಿದವನು ತನ್ನನ್ನು ಅನರ್ಹನು ಎಂದು ಪ್ರಮಾಣಿಸವವರೆಗೆ – ಅಪನಂಬಿಗಸ್ತನು. “ಹಾಗಾದರೆ, ನಿಮ್ಮ ಧೈರ್ಯವನ್ನು ಬಿಟ್ಟು ಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲವುಂಟು" (ಇಬ್ರಿಯ 10:35).

## ಹನ್ನೊಂದನೆಯ ಘಂಟೆ (ಕಡೇ ಘಳಿಗೆ)

(ಮತ್ತಾಯ 20 : 1–16)

## The Eleventh Hour

(Matt. 20:1-16)

ಬಹುಶಃ ಈ ಸಾಮ್ಯವು ಈ ಸಮಯಕ್ಕೆ ಪಾಠವೊಂದನ್ನು ಕಲಿಸುವಂತೆ ವಿಶೇಷವಾಗಿ ಕೊಡಲ್ಪಟ್ಟಿದೆ. ಇಲ್ಲಿ ಕೂಲಿ ಆಳುಗಳು ದೇವರ ಪ್ರಾಮಾಣಿಕ, ಪ್ರತಿಷ್ಠೆ ಹೊಂದಿದ ಮಕ್ಕಳಾಗಿದ್ದಾರೆ. ಅವರು ಈ ಸುವಾರ್ತಾಯುಗದಲ್ಲೆಲ್ಲಾ – ಸಾಮ್ಯದ ದಿನದಲ್ಲೆಲ್ಲಾ – ತಮ್ಮ ಸಮಯ ಮತ್ತು ಶಕ್ತಿಯನ್ನು ನಿಷ್ಠಾಪೂರ್ವಕವಾಗಿ ಬಳಸುತ್ತಿದ್ದಾರೆ. ಅದು ತಮ್ಮ ಸೇವೆಗಾಗಿ ಅಲ್ಲ, ಧನಪಿಶಾಚಿಯ ಸೇವೆಗಾಗಿಯೂ ಅಲ್ಲ, ಆದರೆ ದೇವರ ಸೇವೆಗಾಗಿ. ಆದುದರಿಂದ ನಂಬಿಗಸ್ತರು ಮಾತ್ರವೇ ಇಲ್ಲಿ ಕೂಲಿ ಆಳುಗಳಾಗಿ ಪ್ರತಿನಿಧಿಸಲ್ಪಟ್ಟಿದ್ದಾರೆ, ಅವರೆಲ್ಲರೂ ಒಂದೇ ಕೂಲಿಯನ್ನು ಪಡಕೊಳ್ಳುವರು. ಪರಲೋಕದ ಗೌರವವನ್ನು ಈ ಸಾಮ್ಯದಲ್ಲಿ ‘ಪಾವಲಿ’ ಎಂಬುದಾಗಿ ಪ್ರತಿನಿಧಿಸಲ್ಪಟ್ಟಿದೆ.

ಕರೆಯ ಸಮಾನತೆ ಮತ್ತು ಕೂಲಿ ಆಳುಗಳ ಅಗತ್ಯತೆ ಇವುಗಳನ್ನು ನಾಲ್ಕು ಕರೆಗಳಲ್ಲಿ ಪ್ರತಿನಿಧಿಸಲಾಗಿದೆ. – ಮುಂಜಾನೆ, ಒಂಬತ್ತು ಘಂಟೆಗೆ, ಮಧ್ಯಾಹ್ನ ಮತು ಅಪರಾಹ್ನ ಮೂರು ಘಂಟೆಗೆ, ಆದಾಗ್ಯೂ ಕೂಲಿ ಏನಿರಬೇಕೆಂಬುದನ್ನು ಸರಿಯಾಗಿ ಮತ್ತು ಸ್ಪಷ್ಟವಾಗಿ ಪ್ರಾರಂಭದಲ್ಲಿಯೇ ತಿಳಿಸಲಾಗಿತ್ತು. ಮನೆ ಯಜಮಾನನು ಅವರಿಗೆ “ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ” ಎಂದು ಹೇಳಿ ದಿನಕ್ಕೆ ಒಂದು ಪಾವಲಿ ಎಂದು ಗೊತ್ತು ಮಾಡಿದ್ದನು. ಹೀಗೆ ರಾಜ್ಯದ ವಾಗ್ದಾನವನ್ನು ಆದಿಸಭೆಯುವರು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದರು. ಆದರೆ ನಂತರದಲ್ಲಿ ಮುಖ್ಯದೃಷ್ಟಿ ಕಳಕೊಂಡವರಾಗಿದ್ದು ಸ್ಪಷ್ಟವಾಗಿ ನಿರೂಪಿಸದೇ ಹೋದರು. ಕ್ರಿಸ್ತನ ಸಭೆಯ ಜೀವಿಸುವ ಸದಸ್ಯರುಗಳು ಈ ಸುವಾರ್ತಾಯುಗದ ಯಾವುದೇ ಸಮಯದಲ್ಲಿಯೂ ಆತನ ದ್ರಾಕ್ಷೆತೋಟದಲ್ಲಿ ಕೆಲಸ ಮಾಡುವವರಾಗಿದ್ದು ಎಲ್ಲಾ ಕೂಲಿ ಆಳುಗಳನ್ನು ಪ್ರತಿನಿಧಿಸುತ್ತಾರೆ. ಸಾಮ್ಯವು ಅದರ ನಿರ್ದಿಷ್ಟವಾದ ವೈಶಿಷ್ಟತೆಯಲ್ಲಿ, ಈ ಸೇವೆಯಲ್ಲಿ ದಿನದ ಕಾರ್ಯವು ಮುಗಿಯುತ್ತಾ ಬರುವ ಸಮಯದಲ್ಲಿ ಕಡೇ ಘಳಿಗೆಯಲ್ಲಿ (11ನೇ ಘಂಟೆಯಲ್ಲಿ – ಅಂದರೆ ಕೊನೆ ಘಂಟೆ) ಪ್ರವೇಶಿಸಿದವರ ಬಗ್ಗೆ ತಿಳಿಸುತ್ತದೆ. ಅವರುಗಳು ಕರ್ತನ ಸೇವೆಯಲ್ಲಿ ಆಸಕ್ತಿಯಿಂದ, ಆದರೆ ತಡವಾಗಿ ತೊಡಗಿಕೊಂಡವರನ್ನು ಪ್ರತಿನಿಧಿಸುತ್ತಾರೆ. ಆಗ ಸಾಮಾನ್ಯ ಕರೆಯು ಮುಗಿದಿರುತ್ತದೆ. ಅವರು “ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ, ಆದುದರಿಂದ, ನಾವು ಈ ಕರೆಯ ಮೂಲಕ ಕೆಲಸದಲ್ಲಿ ತೊಡಗಲು ತಡವಾಯಿತು” ಎಂದು ಹೇಳಿದರು.

ಕರ್ತನು ಅವಕಾಶದ ಬಾಗಿಲನ್ನು ಸೂಚಿಸುವವನಾಗಿ, ಆತನ ಸೇವೆಯಲ್ಲಿ, ಶ್ರಮೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅದು ಇನ್ನೂ ಮುಚ್ಚಿಲ್ಲ ಎಂದು ಹೇಳುತ್ತಾನೆ. ಅದರ ಮುಚ್ಚುವಿಕೆ ಕತ್ತಲೆ ಬರುವುದನ್ನು ಸೂಚಿಸುತ್ತದೆ. ಯಾಕೆಂದರೆ ಕತ್ತಲೆಯಲ್ಲಿ ಯಾರೂ ಕೆಲಸ ಮಾಡಲಾರರು, ಆದರೆ, ಇತರರನ್ನು ತನ್ನ ಸಾಮಾನ್ಯಕರೆಯ ಮೂಲಕ ಕೆಲಸಕ್ಕೆ ಗೊತ್ತುಪಡಿಸುವಲ್ಲಿ ಆತನು ‘ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ’ ಎಂದು ಹೇಳಿದನೇ ಹೊರತು ಆ ಪ್ರತಿಫಲ ಎಷ್ಟೆಂಬುದರ ಬಗ್ಗೆ ಆತನು ಏನನ್ನೂ ಹೇಳುವುದಿಲ್ಲ* ಮೊದಲಿಗೆ ಒಪ್ಪಿಕೊಂಡ ಕೂಲಿಯ ಒಂದು ಭಾಗವನ್ನು ಎಂದು ಮೊದಲಿಗೆ ಊಹಿಸಬಹುದು.

ಆದುದರಿಂದ, ಸುವಾರ್ತಾಯುಗದಲ್ಲಿ ನಮ್ಮ ಕರ್ತನು ಸಭೆಯಲ್ಲಿ ತಮ್ಮ ವಕ್ತಾರರ (ಅಂದರೆ ಇತರರಿಗಾಗಿ ಮಾತನಾಡುವ ಮುಖವಾಣಿ) ಮೂಲಕವಾಗಿ ನಿರಂತರವಾಗಿ ತನ್ನ ಎಲ್ಲಾ ನಂಬಿಗಸ್ತರನ್ನು ಆತನ ಸೇವೆಗೆ ಆಮಂತ್ರಿಸುವವನಾಗಿದ್ದಾನೆ, ಪೂರ್ಣ ಬಹುಮಾನ, ದೈವಿಕ ಸ್ವಭಾವ ಮತ್ತು ರಾಜ್ಯದ ಮಹಿಮೆ ಇವುಗಳನ್ನು ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಮತ್ತು ಮೊದಲೇ ಚೆನ್ನಾಗಿ ಅರ್ಥ ಮಾಡಿಕೊಳ್ಳಲಾಗಿದೆ. ಆದಾಗ್ಯೂ ಕಾಲದುದ್ದಕ್ಕೂ ಅದು

* ಅತ್ಯಂತ ಪುರಾತನವಾದ ಗ್ರೀಕ್ ಹಸ್ತಪ್ರತಿಗಳು ಮತ್ತು ನಿಯಾಟಿಕ್ ಹಾಗೂ ವ್ಯಾಟಿಕನ್ ಹಸ್ತಲಿಖಿತ ಪುಸ್ತಕಗಳಲ್ಲಿ ಮತ್ತಾಯ 20:7 "and whatsoever is right that ye receive" ಎಂಬ ಮಾತುಗಳನ್ನು ಬಿಟ್ಟುಬಿಡಲಾಗಿದೆ.

ಪುನರುಚ್ಚರಿಸಲ್ಪಟ್ಟರೂ ಸತ್ಯದಿಂದ ಬಹಳವಾಗಿ ಬಿದ್ದುಹೋದ ಪ್ರಯುಕ್ತ ಅಲ್ಲಿಂದೀಚೆಗೆ ಯಾರೂ ಅದನ್ನು ಅರ್ಥಮಾಡಿಕೊಂಡಿಲ್ಲ. ನಾವೀಗ ಸುವಾರ್ತಾಯುಗದ ಸೇವೆಯ ಅಂತ್ಯದ ದಿನಗಳಿಗೆ ಹನ್ನೊಂದನೆಯ ಘಂಟೆಗೆ (ಅಂತ್ಯ ಘಳಿಗೆಗೆ) ಬಂದಿದ್ದೇವೆ. ಈ ದಿನಕ್ಕೆ ಕೂಲಿ ಆಳುಗಳನ್ನು ಕರೆಯುವ ಸಮಯವೂ ದಾಟಿಹೋಗಿದೆ. ಹೀಗಿದ್ದಾಗ್ಯೂ, ಕೆಲವರು ನಿಂತುಕೊಂಡು "ನಮ್ಮನ್ನು ಯಾರೂ ಕೆಲಸಕ್ಕೆ ಕರೆದಿರುವುದಿಲ್ಲ", ನಮಗೆ ಕೆಲಸದ ವಾಗ್ದಾನ ದೊರೆಯಲಿಲ್ಲ, ನಮಗೆ ಕೆಲಸ ಸಿಕ್ಕರೂ ಪ್ರತಿಫಲದ ಬಗ್ಗೆ ಗೊತ್ತಿಲ್ಲ ಎಂದು ತೋಡಿಕೊಳ್ಳುತ್ತಾರೆ; ಕರೆಯು ಸ್ಥಗಿತಗೊಂಡಿದೆ, ದಿನದ ಕಾರ್ಯಗಳು ಹೆಚ್ಚು ಕಡಿಮೆ ಮುಗಿದುಹೋಗಿದೆ. ನಾವಲ್ಲದೆ ಇನ್ನೂ ಬಹಳಷ್ಟು ಕೆಲಸಗಾರರಿದ್ದಾರೆ. ಆದರೆ ಇದಕ್ಕೆ ಯಜಮಾನನು "ನೀವು ಸಹಾ ನನ್ನ ದ್ರಾಕ್ಷೇ ತೋಟಕ್ಕೆ ಹೋಗಿರಿ; ನಾನು ಏನನ್ನೂ ವಾಗ್ದಾನ ಮಾಡುವುದಿಲ್ಲ, ಸರ್ವಸಾಮಾನ್ಯ ಕರೆಯು ಮುಗಿದದೆ, ಸ್ವಲ್ಪವೇ ಸಮಯವಿದೆ, ಕೆಲಸದ ಸಮಯವು ಮುಗಿಯುವ ಹಂತದಲ್ಲಿದೆ, ರಾತ್ರಿಯು ಬರುತ್ತದೆ ಆಗ ಯಾರೂ ಕೆಲಸ ಮಾಡಲಾರರು, ಆದರೆ ಒಳಗೆ ಹೋಗಿರಿ, ನಿಮ್ಮ ಪ್ರೀತಿಯನ್ನೂ, ಉತ್ಸಾಹವನ್ನೂ ತೋರಿಸಿರಿ ಮತ್ತು ಬಹುಮಾನವನ್ನು ನನ್ನ ಉದಾರತೆಗೆ ಬಿಡಿರಿ" ಎಂಬ ಮಾತುಗಳನ್ನು ಆತನ ವಕ್ತಾರರಾದ ನಮ್ಮ ಮೂಲಕ ಹೇಳಿಸುತ್ತಾನೆ.

ನಾವು ಇದೆಲ್ಲಾದಕ್ಕೂ ಹೇಳಬಹುದಾದ ಒಂದೇ ಭರವಸೆಯೆಂದರೆ, "ನಮ್ಮ ಒಡೆಯನಿಗಾಗಿ ದುಡಿದವನು, ಆತನು ಕೇಳುವುದಕ್ಕಿಂತ, ನಿರೀಕ್ಷಿಸುವುದಕ್ಕಿಂತ ಹೆಚ್ಚಾಗಿ ಪಡೆಯದೇ ಇರುವವನು ಇದುವರೆಗೆ ಯಾರೂ ಇಲ್ಲ" ಎಂಬುದಾಗಿ ಮಾತ್ರವೇ ಹೇಳುವುದು. ಆಗ ಕೆಲಸ ಮಾಡುವವರಲ್ಲಿ ಕೆಲವರು ನಿಷ್ಠಾವಂತರಾಗಿ ದುಡಿಯಲಾಗದೆ ಬಿಟ್ಟುಹೋಗುವರು. ಆಗ, ಅಂಥವರಿಗಾಗಿ ತೆಗೆದಿಟ್ಟ ಬಹುಮಾನ ಮತ್ತು ಕಿರೀಟವನ್ನು ನಂಬಿಗಸ್ತಿಕೆಯಿಂದ ಮತ್ತು ಸ್ವಾರ್ಥತ್ಯಾಗದಿಂದ ಆತನ ಕೆಲಸಕ್ಕೆ ಮತ್ತು ಬಹುಮಾನಕ್ಕೆ ಅರ್ಹರೆಂದು ಸಾಬೀತುಪಡಿಸುವ ಇತರರಿಗೆ ನೀಡಲಾಗುವುದು.

ಹೀಗೆ, ನಂತರದಲ್ಲಿ ಯಾರಾದರೂ ಇತ್ತೀಚಿಗೆ ನಮ್ಮ ಕರ್ತನ ಬಗ್ಗೆ ತಿಳಿದು ಮತ್ತು ಆತನನ್ನು ಪ್ರೀತಿಸುತ್ತಾರೋ, ಮತ್ತು ಆತನ ಸತ್ಯದ ಸೇವೆ ಮಾಡುವ ಆಕಾಂಕ್ಷೆಯನ್ನು ತೋರುತ್ತಾರೆಯೋ ಅಂತಹವರನ್ನು 1881ರಲ್ಲಿ ಸಾಮಾನ್ಯಕರೆಯು ಮುಗಿದಿರುವುದರಿಂದ ನಿರುತ್ಸಾಹಗೊಳ್ಳುವುದು ಬೇಡ. ನಾವು ನಮ್ಮ ಮುಂದಿರುವ ತ್ಯಾಗದ ಮತ್ತು ಸೇವೆಯ ಅವಕಾಶದ ಬಾಗಿಲು ತೆರೆದಿರುವುದನ್ನು ನೋಡುವವರಾದರೆ ಒಳಕ್ಕೆ ಹೋಗಿರಿ, ಆದರೆ ತ್ವರಿತವಾಗಿ ಪ್ರವೇಶಿಸಿರಿ. ಯಾಕೆಂದರೆ, ಕತ್ತಲೆಯ ರಾತ್ರಿ ಮತ್ತು ಸತ್ಯಕ್ಕೆ ತೀಕ್ಷ್ಣವಾದ ವಿರೋಧ ನಮ್ಮ ಮೇಲೆ ದೀರ್ಘಕಾಲದಿಂದ ಇರುವುದು ಮತ್ತು ನಾವು ಸೇವೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅದು ಅಡ್ಡಿಪಡಿಸುತ್ತದೆ. "ಬೆಳಿಗ್ಗೆಯು ಬರುತ್ತದೆ, ರಾತ್ರಿ ಸಹಾ. ರಾತ್ರಿಯು ಬರುವಾಗ ಯಾರೊಬ್ಬರೂ ಕೆಲಸ ಮಾಡಲಾರರು. ಆಗ ಅದು ನಿಜವಾಗಿರುವಾಗ, – 'ಬಾಗಿಲು ಮುಚ್ಚಿದೆ' ಮತ್ತು ಎಲ್ಲಾ ಬುದ್ಧಿವಂತ ಕನ್ಯೆಯರು ಒಳಪ್ರವೇಶಿಸಿದ್ದಾರೆ ಮತ್ತು ಅವರುಗಳೆಲ್ಲರೂ ಸಾಬೀತುಪಡಿಸಿದ್ದಾರೆ ಮತ್ತು ಎಲ್ಲಾ ಖಾಲಿ ಸ್ಥಾನಗಳು ಅಂಗೀಕಾರಾರ್ಹವಾಗಿ ತುಂಬಲ್ಪಟ್ಟಿದೆ ಎಂಬುದನ್ನು ನೀವು ತಿಳಿಯಬಹುದು. ದೇವರ ಎಲ್ಲಾ ವಿಶೇಷ ಸೇವಕರುಗಳಿಗೆ ಆ ಸಮಯದಲ್ಲಿ ಹಣೆಯ ಮೇಲೆ ಮುದ್ರಿಸಿರಲಾಗುವುದು (ದೇವರ ಯೋಜನೆಯ ಬೌದ್ಧಿಕ ಮೆಚ್ಚುಗೆಯನ್ನು ನೀಡಲಾಗುವುದು) ಚತುರ್ದಿಕ್ಕಿನ ಗಾಳಿಯನ್ನು ಬಿಡುಗಡೆ ಮಾಡಲಾಗುವುದು (ಪ್ರಕಟನೆ 7:1–3). ಆಗ ಸಂಕಷ್ಟದ ಮಹಾ ಸುಂಟರಗಾಳಿಯು ಉತ್ಪತ್ತಿಯಾಗುವುದು. ಅದರ ಮಧ್ಯದಲ್ಲಿ ಎಲೀಯ ವರ್ಗದ ಉಳಿಕೆಯವರು ಬದಲಾಗುವರು ಮತ್ತು ದೇವರರಾಜ್ಯದ ಮಹಿಮೆಗೆ ಎತ್ತಲ್ಪಡುವರು.

ದೇವರೊಂದಿಗೆ ಆತನನ್ನು ಮೊದಲಿಗೆ ಮತ್ತು ಮುಖ್ಯವಾಗಿ ಸೇವೆ ಮಾಡುತ್ತೇವೆಂಬ ಒಡಂಬಡಿಕೆ ಮಾಡಿಕೊಂಡವರಿಗೆ, ಮತ್ತು ಯಾರು ಆತನ ಕಾರ್ಯಕ್ಕಾಗಿ ಸಮಯ ಮತ್ತು ಭಾವನೆಗಳೊಂದಿಗೆ ಹೆಣಗಾಡುವುದನ್ನು ನಿರ್ಲಕ್ಷಿಸಿ, ದ್ರವ್ಯಾನುಕೂಲತೆಗಳ ಬಗ್ಗೆ, ಲೋಕವು ಕೊಡುವ ಕ್ಷಣಿಕ ಸಂತೋಷಗಳ ಬಗ್ಗೆ ಆಲೋಚಿಸುವವರಿಗೆ ಇಲ್ಲಿ ಎಂಥಾಃ ಪಾಠವಿದೆಯಲ್ಲವೆ! ಕರ್ತನು "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" ಎಂತಲೂ "ಜಯಶಾಲಿಗೆ (ತನ್ನಲ್ಲಿ ತಾನೇ ಈ ಲೋಕದ ಆತ್ಮನನ್ನು ಗೆಲ್ಲುವವನು) ಹೀಗೆ ಶುಭವಸ್ತ್ರವನ್ನು ಹೊದಿಸುವರು. ಜೀವಬಾಧ್ಯರ ಪಟ್ಟಿಯಿಂದ ನಾನು ಅವನ ಹೆಸರನ್ನು ಅಳಿಸಿಬಿಡುವುದೇ ಇಲ್ಲ, ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ, ಆತನ ದೂತರ ಮುಂದೆಯೂ ಒಪ್ಪುವೆನು" ಮತ್ತು "ನಿನಗಿರುವುದನ್ನು ಹಿಡುಕೊಂಡಿರು; ನಿನ್ನ ಜಯಮಾಲೆಯನ್ನು ಯಾರೂ ಅಪಹರಿಸಬಾರದು" (ಪ್ರಕಟನೆ 2:10; 3:5,11) ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತಾನೆ.

* * * * * * *

## LET US GO FORTH –

(Heb 13: 13)

"Silent like men in solemn haste
Girded wayfarers of the waste,
We pass out at the world's wide gate
Turning our back on its state;
We press along the narrow road
That leads to life, to bliss, to God

" We cannot and we would not stay;
We dread the snares that throng the way
We fling aside the weight and sin
Resolved the victory to win;
We know the peril, but our eyes
Rest on the splendor of the prize

"No idling now, no wasteful sleep,
From Christian toil our limbs to keep
No shrinking from the desperate fight
No thought of yielding or of flight
No love of present gain or ease
No seeking man or self to please

"No sorrow for the loss of fame;
No dread of scandal on our name;
No terror for the World's sharp scorn;
No wish that taunting to return;
No hatred can to hatred move;
And enmity but kindles love

" No sigh for laughter left behind,
Or pleasures scattered to the wind
No looking back on Sodom's plains;
No listening still to Babel's strains ;
No tears for Egypt's song and smile;
No thirsting for its flowing Nile.

"What though with weariness oppressed?
'Tis but a little and we rest
This throbbing heart and burning brain
Will soon be calm and cool again;
Night is far spent and morn is near
Morn of cloudless and the clear

"'Tis but a little and we come
To our reward, our crown, our home !
Another year, or more or less,
And we have crossed the wilderness;
Finished the toil, the rest begun,
The battle fought, the triumph won !

- **H Bonar**

## ನಾವು ಹೊರಟು ಹೋಗೋಣ

ಇಬ್ರಿಯ 13:13

ಮೌನವಾಗಿ ಘನಗಂಭೀರವಾದ ಮನುಷ್ಯರಂತೆ ತ್ವರೆಪಡುತ್ತಾ,
ನಿರುಪಯುಕ್ತ ದಾರಿಹೋಕರಿಂದ ಸುತ್ತುವರೆದವರಾಗಿ
ನಾವು ಲೋಕದ ವಿಶಾಲ ದ್ವಾರದಲ್ಲಿ ಹಾದುಹೋಗುತ್ತೇವೆ.
ಅದರ ಎಲ್ಲಾಸ್ಥಿತಿಗಳಿಗೂ ಬೆನ್ನು ಹಾಕಿ;
ನಾವು ಇಕ್ಕಟ್ಟಿನ ದಾರಿಯಲ್ಲಿ ಮುನ್ನುಗ್ಗುತ್ತೇವೆ,
ಅದು ಜೀವಕ್ಕೂ, ಆಶೀರ್ವಾದಕ್ಕೂ, ದೇವರ ಬಳಿಗೂ
ಸಾಗಿಸುತ್ತದೆ.

ನಮಗೆ ಇಲ್ಲಿರಲು ಸಾಧ್ಯವಿಲ್ಲ ನಾವು ಇರುವುದೂ ಇಲ್ಲ,
ದಾರಿಯನ್ನು ಮುತ್ತಿಕೊಳ್ಳುವ ಜನಸಂದಣಿಯ ಪಾಶಕ್ಕೆ
ಅಂಜುತ್ತೇವೆ
ಪಾಪದ ಹೊರೆಯನ್ನು ಒತ್ತಟ್ಟಿಗೆ ತಳ್ಳುತ್ತೇವೆ,
ಜಯಗಳಿಸಲು ದೃಢಸಂಕಲ್ಪ ಮಾಡಿಕೊಂಡಿದ್ದೇವೆ
ಗಂಡಾಂತರಗಳವೆ ಎಂದು ನಮಗೆ ಗೊತ್ತು, ಆದರೆ
ನಮ್ಮ ಕಂಗಳು ಬಹುಮಾನದ ವೈಭವದಲ್ಲಿ ನೆಲೆಸಿದೆ.

ಈ ಕಾಲಹರಣ ಮಾಡುವುದು ಬೇಡ, ವ್ಯರ್ಥವಾದ ನಿದ್ರೆ ಬೇಡ,
ಕ್ರಿಸ್ತೀಯ ಪರಿಶ್ರಮದಿಂದ ನಮ್ಮ ಅಂಗಗಳನ್ನು ಪಾಲಿಸಲಿ,
ಅಪಾಯಕರ ಹೋರಾಟದಿಂದ ಹಿಂದೆ ಸರಿಯುವುದು ಬೇಡ,
ಸೋಲುವ ಅಥವಾ ಪಲಾಯನಗೈವ ಆಲೋಚನೆ ಬೇಡ,
ಈಗಿನ ಲಾಭಕ್ಕಾಗಲೀ ಅಥವಾ ವಿಶ್ರಾಂತಿಗಾಗಲೀ ಆಸೆ ಬೇಡ,
ಮನುಷ್ಯರನ್ನಾಗಲೀ, ತನ್ನನ್ನಾಗಲೀ ಮೆಚ್ಚಿಸಲು ಪ್ರಯತ್ನ
ಬೇಡ

ಪ್ರಖ್ಯಾತಿಯ ನಷ್ಟಕ್ಕೆ ದುಃಖ ಬೇಡ
ನಮ್ಮ ಹೆಸರಿನ ಅಪನಿಂದೆಗೆ ಭಯ ಬೇಡ
ಲೋಕದ ತೀಕ್ಷ್ಣ ತಿರಸ್ಕಾರಕ್ಕೆ ಭೀತಿ ಬೇಡ
ಹಿಂತಿರುಗಲು ಮೂದಲಿಸುವ ಮಾತಿಗೆ ಇಚ್ಛಿಸಬೇಡ
ದ್ವೇಷವನ್ನು ದ್ವೇಷಕ್ಕೆ ನಡೆಸುವುದು ಬೇಡ.
ವೈರತ್ವವು ಪ್ರೀತಿಯನ್ನು ಹೊತ್ತಿಸುತ್ತದೆ.

ನಗೆಯನ್ನು ತೊರೆದೆವೆಂಬ ನಿಟ್ಟುಸುರಿಲ್ಲ,
ಅಥವಾ ಸಂತೋಷವು ಗಾಳಿಯಲ್ಲಿ
ಚೆದುರಿಹೋಯಿತೆಂಬುದಿಲ್ಲ,
ಸೋದೋಮಿನ ಬಯಲನ್ನು ಹಿಂತಿರುಗಿ ನೋಡುವುದು ಬೇಡ,
ಬಾಬೇಲಿನ ಪ್ರಯಾಸವನ್ನು ಇನ್ನು ಆಲಿಸುವುದು ಬೇಡ,
ಐಗುಪ್ತದ ಹಾಡಿಗೂ ಮುಗುಳ್ನಗೆಗೂ ಕಣ್ಣೀರು ಬೇಡ,
ಹರಿವ ನೈಲಿನ ನೀರಿಗಾಗಿ ಬಾಯಾರಿಕೆಯಿಲ್ಲ.

ಬಳಲಿಕೆಯಿಂದ ಶೋಷಣೆಗೊಳಗಿರುವೆಯಾ?
ಸ್ವಲ್ಪ ಕಾಲ ಮಾತ್ರ. ಅನಂತರ ವಿಶ್ರಾಂತಿ ಸಿಗುವುದು,
ಚಡಪಡಿಸುವ ಹೃದಯ ದಹಿಸುವ ಮೆದುಳು,
ಶೀಘ್ರದಲ್ಲಿಯೇ ಶಾಂತವಾಗುವದು, ತಂಪಾಗುವುದು,
ರಾತ್ರಿಯು ಬಹಳ ಸಂದಿದೆ, ಹಗಲು ಸಮೀಪಿಸುತ್ತಿದೆ,
ಮೋಡವಿಲ್ಲದ ನಿರ್ಮಲವಾದ ಮುಂಜಾವು.

ಸ್ವಲ್ಪ ಸಮಯವಷ್ಟೇ ನಾವು ನಮ್ಮ
ಪ್ರತಿಫಲಕ್ಕೂ ನಮ್ಮ ಕಿರೀಟಕ್ಕೂ ನಮ್ಮ ಮನೆಗೂ ಬರುವೆವು
ಮತ್ತೊಂದು ವರ್ಷದ ಹೆಚ್ಚು ಅಥವಾ ಕಡಿಮೆ,
ನಾವು ಅರಣ್ಯವನ್ನು ದಾಟಿರುವೆವು,
ಪರಿಶ್ರಮವನ್ನು ಮುಗಿಸಿರುವೆವು, ವಿಶ್ರಾಂತಿಯು
ಪ್ರಾರಂಭವಾಗಿದೆ, ಯುದ್ಧವನ್ನು ಹೋರಾಡಿದ್ದೇವೆ,
ಗೆದ್ದುಕೊಂಡು ಜಯಶೀಲರಾಗಿದ್ದೇವೆ.

– **ಹೆಚ್. ಬೋನರ್**